# ಹಿಮ ತಬ್ಬಿದ ನೇಪಾಳ

ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ

**ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ**

ಎಸ್.ಕೆ. ಸಿದ್ದಣ್ಣ ಕಟ್ಟಡ, ಕಾಳಿದಾಸನಗರ,

ಸಿರಾ, ತುಮಕೂರು ಜಿಲ್ಲೆ

Hima Tabbida Nepala - experiences of Nepal Tour by Dr.Chikkanna Yennekatte, Professor and Ph.D Guide, GFGC, Sira, Tumkur Dits. Published by Gadinada Janapada Samparkabhivruddhi Prathistana, Kalidasanagara, Sira.

ಮೊದಲ ಮುದ್ರಣ: 2013

ಪುಟ : 132

ಬೆಲೆ : **ರೂ.80-00**

ಹಕ್ಕುಗಳು : ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ

ಪ್ರಕಾಶಕರು : ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ
ಎಸ್.ಕೆ.ಸಿದ್ದಣ್ಣ ಬಿಲ್ಡಿಂಗ್, ಕಾಳಿದಾಸನಗರ
ಸಿರಾ-572137, ತುಮಕೂರು ಜಿಲ್ಲೆ
ದೂ.9945975509

# ಪ್ರಕಟಣೆಯ ಹಿರಿಮೆ

ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ (ಪ್ರ.), ಜಾನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಶೋಧನೆ, ಪ್ರಕಟಣೆಗಾಗಿ ಮೀಸಲಾದ ಸಂಸ್ಥೆ. ಕಳೆದ ಹದಿನೇಳು ವರ್ಷಗಳಿಂದಲೂ ಜನಪದ ಕಲೆ, ಕಲಾವಿದರ ಸಂಪರ್ಕ, ಕಲಾ ಪ್ರದರ್ಶನ, ಕಾರ್ಯವನ್ನು ನಿರಂತರವಾಗಿ ಮಾಡಿಕೊಂಡು ಬರಲಾಗುತ್ತಿದೆ. ಮೂವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವ ಈ ಸಂಸ್ಥೆ ದಶಮಾನೋತ್ಸವವನ್ನು ಆಚರಿಸಿ ಅದರ ನೆನಪಿನಲ್ಲಿ ಹಿರಿಯ ಕಲಾವಿದರಿಗೆ ಗಡಿನಾಡ ಜಾನಪದ ಸಂಪನ್ನ ಹೆಸರಿನ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಈ ಕೇಂದ್ರದ ಕೆಲವು ಪ್ರಕಟಣೆಗಳು ಕರ್ನಾಟಕ ಜಾನಪದ ಅಕಾಡೆಮಿಯಂಥ ಪ್ರತಿಷ್ಠಿತ ಪ್ರಶಸ್ತಿ ಪುರಸ್ಕಾರಗಳಿಗೂ ಒಳಗಾಗಿರುವುದು ಈ ಕೇಂದ್ರದ ಹಿರಿಮೆಯನ್ನು ತೋರುತ್ತದೆ. ಬಹು ಮಾಧ್ಯಮಗಳ ಬೆನ್ನು ಹತ್ತುತ್ತಿರುವ ಈ ದಿನಗಳಲ್ಲಿ ನೆಲಮೂಲ ಸಂಸ್ಕೃತಿಯ ಕಲೆ, ಕಲಾವಿದರು ಮೂಲೆಗುಂಪಾಗುತ್ತಿರುವುದು ವಿಷಾದದ ಸಂಗತಿ. ಅದೂ ನಮ್ಮ ಸಂಸ್ಕೃತಿಯ ವಕ್ತಾರರಿಗೆ. ಇಂತಹ ಶೋಚನೀಯ ಬದುಕು ಬರಬಾರದಿತ್ತು. ಇದು ಪ್ರಜ್ಞಾವಂತರಾದ ಎಲ್ಲರೂ ಯೋಚಿಸುವ ಸಂಗತಿ. ತಮ್ಮ ಇತಿಮಿತಿಯ ಒಳಗೂ ಜಾನಪದ ಕೆಲಸವನ್ನು ಮಾಡುತ್ತಾ ಕಲಾವಿದರಿಗೆ ಒತ್ತಾಸೆಯಾಗಿರುವ ಈ ಜಾನಪದ ಕೇಂದ್ರದ ಕೆಲಸ ಎಲ್ಲರೂ ಸ್ಮರಿಸುವಂತಹದ್ದು.

ಇದರ ಪ್ರಕಟಣೆಯ ಗರಿಗೆ ಪ್ರವಾಸ ಕಥನವೊಂದು ಸೇರುತ್ತಿರುವುದು ಹೆಮ್ಮೆಯ ಸಂಗತಿ. ಭಾರತದ ಅವಿಭಾಜ್ಯ ಅಂಗವಾಗಿ ದಟ್ಟ ಧಾರ್ಮಿಕ ನೆಲೆಯಾಗಿ ಅಪೂರ್ವ ಪುರಾಣ, ಜಾನಪದ ಸಂಸ್ಕೃತಿ ಹೊಂದಿರುವ ನೇಪಾಳ ಕುರಿತ ಈ ಗ್ರಂಥ ಪ್ರವಾಸ ಕಥನಗಳ ಸಾಲಿಗೊಂದು ಅಪೂರ್ವ ಸೇರ್ಪಡೆ. ಇದು ನಮ್ಮ ಕೇಂದ್ರದಿಂದ ಆಗುತ್ತಿರುವುದು ಹೆಮ್ಮೆಯ ಸಂಗತಿ. ಈ ಹಿರಿಮೆಗಾಗಿ ಲೇಖಕ ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ ಅವರನ್ನು ಅಭಿನಂದಿಸುತ್ತೇನೆ.

*ಕಾನೂನು, ಸಂಸದೀಯ ವ್ಯವಹಾರ*
*ಮತ್ತು ಪಶುಸಂಗೋಪನಾ ಸಚಿವರು*
*ಕರ್ನಾಟಕ ಸರ್ಕಾರ*

***ಟಿ.ಬಿ.ಜಯಚಂದ್ರ,***
*ಗೌ|| ಅಧ್ಯಕ್ಷರು, ಗಡಿನಾಡ ಜಾನಪದ ಸಂಪರ್ಕ*
*ಅಧ್ಯಯನ ಕೇಂದ್ರ ಪ್ರತಿಷ್ಠಾನ, ಸಿರಾ*

# ಮುನ್ನುಡಿ

ನೆನಪು ಬಾಳಿನ ಬುತ್ತಿ, ಅನುಭವಗಳ ಅಕ್ಷಯನಿಧಿ. ಜೀವನಯಾತ್ರೆ ಬೇಸರವಾದಾಗ, ಜೀವನದಲ್ಲಿ ನವೀನತೆ ಮೊಳೆಯದೆ ಮಂಕು ಕವಿದಾಗ, ಜೀವನದಲ್ಲಿ ಬಿಸಿಲಿನ ಬೇಗೆ ಹೆಚ್ಚಿ ಬಳಲಿದಾಗ, ಹಾದಿಯ ಬಳಿ ದಟ್ಟವಾಗಿ ಬೆಳೆದ ಮರಗಳ ತಣ್ಣೆಳಲಿನ ತಂಪಿನಲ್ಲಿ, ಆಕಾಶದೆತ್ತರಕ್ಕೆ ಬೆಳೆದ ಹಿಮಾಲಯದ ಹಿಮ ಕಣಿವೆಗಳಲ್ಲಿ ತಿರುಗಾಡುತ್ತಾ, ನದಿಗಳ ಮಂಜುಳ ನಾದವನ್ನು ಆಲಿಸುತ್ತಾ, ಶಕ್ತಿದೇವತೆಗಳ ತೀರ್ಥಕ್ಷೇತ್ರಗಳನ್ನು ನೆನಪಿಸಿಕೊಳ್ಳುತ್ತಾ, ಆ ಬುತ್ತಿಯನ್ನು ಬಿಚ್ಚಿ ಉಣಬಹುದು, ತಣಿಯಬಹುದು ಹಾಗೂ ದಣಿವಾರಿಸಿಕೊಳ್ಳ ಬಹುದು. ಇಂತಹ ಅತ್ಯುತ್ತಮ ಬುತ್ತಿಯನ್ನು ಡಾ|| ಚಿಕ್ಕಣ್ಣ ಯಣ್ಣೆಕಟ್ಟೆಯವರು ನಮಗೆ 'ಹಿಮ ತಬ್ಬಿದ ನೇಪಾಳ' ಎಂಬ ಕೃತಿಯ ಮೂಲಕ ನೀಡಿದ್ದಾರೆ.

ಡಾ|| ಚಿಕ್ಕಣ್ಣನವರು ಸರಳ ಸ್ವಭಾವದ ಸ್ನೇಹಜೀವಿ. ನಿಷ್ಕಪಟ ಹಾಗೂ ಕುತೂಹಲ ದೃಷ್ಟಿಯಿಂದ ಪ್ರಪಂಚವನ್ನು ನೋಡುವ ಇವರ ಸ್ವಭಾವವೇ ಈ ಕೃತಿ ರಚನೆಗೆ ಅಕ್ಷಯ ಆಕರವಾಗಿದೆ. ಪುಸ್ತಕಕ್ಕೆ ಇಟ್ಟಿರುವ ಹೆಸರು 'ಹಿಮ ತಬ್ಬಿದ ನೇಪಾಳ' ಸೂಕ್ತವಾಗಿದೆ. ನೇಪಾಳ ಹಿಮಾಲಯದಾಚೆಯ ಕಣಿವೆ ರಾಷ್ಟ್ರ. ಅತಿ ಹೆಚ್ಚು ಪರ್ವತಗಳನ್ನು ಹೊಂದಿರುವ ನೇಪಾಳದ ಪ್ರಕೃತಿ ಸೌಂದರ್ಯ ಆಕರ್ಷಕ. ಬಿಸಿಲು ಬಿದ್ದೊಡನೆ ಹಿಮಗಡ್ಡೆ ಕರಗಿ ನೀರಾಗಿ ನದಿಗಳನ್ನು ಸೇರುವ ದೃಶ್ಯ ರಮಣೀಯ.

ನೇಪಾಳದ ತ್ರಿಭುವನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾಲೂರಿದ ಕ್ಷಣದಿಂದ ಕಠ್ಮಂಡುವಿನ ಪಶುಪತಿನಾಥ ಶಿವಾಲಯ, ಬುಡಾ ನೀಲಕಂಠ, ಜಲನಾರಾಯಣ, ಭಗವತಿ, ವಿಂಧ್ಯಾವಾಸಿನಿ, ಮನಕಾಮನ ಮೊದಲಾದ ಶಕ್ತಿದೇವತೆಗಳ ತೀರ್ಥಕ್ಷೇತ್ರಗಳು, ಮೌಂಟ್ ಎವರೆಸ್ಟ್, ಕಾಂಚನ್‌ಜುಂಗಾ, ಧವಳಗಿರಿ, ಅನ್ನಪೂರ್ಣ ಮೊದಲಾದ ಪರ್ವತ ಶ್ರೇಣಿಗಳವರೆಗೆ ನೀಡಿರುವ ಚಿತ್ರಣ ಅತ್ಯುತ್ತಮವಾಗಿದೆ. ಪೋಖ್ರಾ, ನಗರ್‌ಕೋಟ್, ಭಕ್ತಾಪುರ, ಕಠ್ಮಂಡುವಿನ ಕ್ಯಾಸಿನೋ ಮುಂತಾದ ಸ್ಥಳಗಳ ಬಗ್ಗೆ ನೀಡಿರುವ ವಿವರಣೆ ಕಣ್ಣಿಗೆ ಕಟ್ಟುವಂತಿದೆ.

ಪುಟ್ಟ ಪುಟ್ಟ ಶೀರ್ಷಿಕೆಗಳಲ್ಲಿ ನೀಡಿರುವ ಪ್ರವಾಸಾನುಭವದ ನೆನಪುಗಳ ಮೂಲಕ ಮತ್ತೊಮ್ಮೆ ಪ್ರಯಾಣದ ಹಿತಾನುಭವವನ್ನು ಡಾ॥ ಚಿಕ್ಕಣ್ಣನವರು ಮೂಡಿಸಿದ್ದಾರೆ. ಈ ಪುಟ್ಟ ಕೃತಿ ನೇಪಾಳವು ಭಾರತದ ಜೊತೆ ಮೂರು ಕಡೆ ಗಡಿಯನ್ನು ಹಂಚಿಕೊಂಡಿರುವುದು ಮಾತ್ರವಲ್ಲ, ಸಾಂಸ್ಕೃತಿಕವಾಗಿ ಬೆರೆತುಕೊಂಡಿರುವ ಅದೂ ಬಹಳಷ್ಟು ಕಡೆ ಕರ್ನಾಟಕದಲ್ಲಿನ ಆಚರಣೆಗಳಂತಿರುವ ಹೊಸ ಒಳನೋಟವನ್ನು ನೀಡುತ್ತದೆ.

ನೇಪಾಳದ ವಿವಿಧ ದೇವಸ್ಥಾನಗಳ ಬಗೆಗಿರುವ ಐತಿಹ್ಯ ಮತ್ತು ಪೌರಾಣಿಕ ಹಿನ್ನೆಲೆ, ಅವುಗಳ ಸಾಹಿತ್ಯದ ವಿವರಗಳನ್ನು (ಬೇಂದ್ರೆಯವರ ಮೇಘದೂತ) ಕೊಟ್ಟಿರುವುದು ಕೃತಿಯ ಮೌಲ್ಯವನ್ನು ಇನ್ನಷ್ಟು ಹೆಚ್ಚಿಸಿದೆ. ಅಲ್ಪಕಾಲದ ಪ್ರವಾಸದ ನೆಪದಲ್ಲಿ ಶ್ರೀಮಂತ ಸಾಂಸ್ಕೃತಿಕ ಹಿನ್ನೆಲೆಯನ್ನು ಪರಿಚಯಿಸುವಲ್ಲಿ ಡಾ॥ ಚಿಕ್ಕಣ್ಣನವರಲ್ಲಿನ ಸೂಕ್ಷ್ಮಮತಿ ಗ್ರಾಹಿತ್ವ, ಸಂಶೋಧನಾ ಪ್ರವೃತ್ತಿ ಮತ್ತು ಚಿಕಿತ್ಸಕ ಮನೋದೃಷ್ಟಿಯು ಕೃತಿಯನ್ನು ಅನನ್ಯವಾಗಿಸಿದೆ.

'ಹಿಮತಬ್ಬಿದ ನೇಪಾಳ' ಬರೀ ಪ್ರವಾಸ ದಿನಚರಿಯಾಗಿಲ್ಲ. ಲೇಖಕರು ನೋಡಿದ ಎಲ್ಲಾ ಸ್ಥಳಗಳನ್ನು, ಆ ದೇಶದ ನೆಲದ ಸಂಸ್ಕೃತಿಯನ್ನು, ಜನರ ಜೀವನ ಶೈಲಿ ಮತ್ತು ಸಾಹಸ ಮನೋಭಾವವನ್ನು ಹಾಗೂ ದೇಶದ ರೋಚಕ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸಿ, ಈ ಕೃತಿಯನ್ನು ಒಂದು ಶ್ರೇಷ್ಠ ಸಾಂಸ್ಕೃತಿಕ ಪಠ್ಯವಾಗಿ ರೂಪಿಸಿದ್ದಾರೆ.

ಈ ಕೃತಿಯಲ್ಲಿ ಲೇಖಕರ ನವುರಾದ ಹಾಸ್ಯವು ಯಥೋಚಿತವಾಗಿ ಬೆರೆತುಕೊಂಡು ಓದುಗರನ್ನು ತಣಿಸುತ್ತದೆ. ಜೀವನವೆಂದರೆ 'ದೇಶ ಸುತ್ತಬೇಕು, ಕೋಶ ಓದಬೇಕು' ಎನ್ನುವ ಗುಟ್ಟನ್ನು ರಟ್ಟುಮಾಡಿದ್ದಾರೆ. ಈ ಕೃತಿಯನ್ನು ಓದಿದ ಮೇಲೆ ನೇಪಾಳ ದೇಶ ನೋಡಲೇಬೇಕು ಎನ್ನುವ ತುಮುಲ ಓದುಗರಲ್ಲಿ ಮೂಡುತ್ತದೆ.

'ಸೂರ್ಯ ಅಸ್ತ್ ಅಸ್ತ್, ನೇಪಾಳ್ ಮಸ್ತ್ ಮಸ್ತ್'

ಇಂತಹ ಅನೇಕ ಪುಸ್ತಕಗಳನ್ನು ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆಯವರು ಸಾರಸ್ವತ ಲೋಕಕ್ಕೆ ನೀಡಲಿ ಎಂದು ಹಾರೈಸುತ್ತೇನೆ.

**ಪ್ರೊ. ಜಯಪ್ರಕಾಶ್**
ಅಧ್ಯಕ್ಷರು
ತುಮಕೂರು ವಿಶ್ವವಿದ್ಯಾನಿಲಯ ಕಾಲೇಜು
ಅಧ್ಯಾಪಕರ ಸಂಘ (TUCTA)

# ಇದು ಭಾಗ್ಯ

ನೇಪಾಳ - ಈ ವಿದೇಶ ಪ್ರವಾಸ ಒಂದು ಯೋಗಾಯೋಗ. ಅಖಿಲ ಭಾರತ ವಿಶ್ವವಿದ್ಯಾಲಯ ಮತ್ತು ಕಾಲೇಜು ಅಧ್ಯಾಪಕರ ಒಕ್ಕೂಟ - 2012 ನೇ ಡಿಸೆಂಬರ್ 15-17 ರವರೆಗೆ ವಾರಣಾಸಿಯಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣ ನಮ್ಮೀ ಪ್ರವಾಸಕ್ಕೆ ಮುನ್ನುಡಿ ಬರೆಯಿತು. ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಅವಕಾಶವಾದುದರಿಂದ ಈ ಸಂದರ್ಭವನ್ನು ಬಳಸಿಕೊಂಡು ನೇಪಾಳವನ್ನು ನೋಡಬಹುದೆಂದು ತುಮಕೂರು ವಿಶ್ವವಿದ್ಯಾನಿಲಯದ ಅಧ್ಯಾಪಕರ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ತುಮಕೂರಿನ ಯೂನಿಯನ್ ಕ್ರಿಶ್ಚಿಯನ್ ಕಾಲೇಜಿನ ಪ್ರಾಧ್ಯಾಪಕರೂ ಆದ ಪ್ರೊ|| ಜಯಪ್ರಕಾಶ್ ಅವರು ಉತ್ತರ ಭಾರತದೊಂದಿಗೆ, ಕಣಿವೆ ದೇಶ ನೇಪಾಳದ ಈ ಪ್ರವಾಸ ಯೋಜನೆಯನ್ನು ಸಿದ್ಧಪಡಿಸಿದರು. ಬಾಂಬೆಯ ನಮನಾ ಪ್ರವಾಸೋದ್ಯಮ ಸಂಸ್ಥೆ, ಸ್ಪೈಸ್ ಜೆಟ್ ವಿಮಾನಯಾನದ ಸೌಕರ್ಯ ಒದಗಿಸಿಕೊಟ್ಟಿತು. ಹೀಗಾಗಿ ನಮ್ಮ ನೇಪಾಳ, ಉತ್ತರ ಭಾರತಗಳ ತಿರುಗಾಟ ಪೂರಾ ಸ್ಪೈಸ್‌ಜೆಟ್ ವಿಮಾನವೇ ಆದುದರಿಂದ ನೇಪಾಳ, ಹಿಮಾಲಯ, ಅಲ್ಲಿಯ ಮೌಂಟನ್ ಹತ್ತಿರದಿಂದ ನೋಡಲು ಸಾಧ್ಯವಾಯಿತು. ಒಟ್ಟಂದದಲ್ಲಿ ಭಗವಾನ್ ಬುದ್ಧ ಹುಟ್ಟಿದ ಕಪಿಲವಸ್ತುವಿನಿಂದ ಜ್ಞಾನೋದಯದ ಗಯೆ, ಜ್ಞಾನಧಾರೆಯನ್ನು ಮೊದಲಿಗೆ ಹಂಚಿದ ಸಾರನಾಥದವರೆಗೆ ಕಾಶಿಯ ವಿಶ್ವನಾಥನ ಗುಡಿಯಿಂದ ಕಠ್ಮಂಡುವಿನ ಪಶುಪತಿನಾಥ ಶಿವಾಲಯದವರೆಗೆ, ರಾಮಾಯಣದ ಸೀತೆಯ ಜನ್ಮಸ್ಥಳ ನೇಪಾಳದ ಮಿಥಿಲೆಯಿಂದ ಸೀತೆ ಭೂಗರ್ಭ ಸೇರಿದ ಉತ್ತರ ಪ್ರದೇಶದ ಸೀತಾಮಡುವಿನವರೆಗೆ ಹಿಮಾಲಯದಾಚೆಗಿನ ಹಿಮಕಣಿವೆಗಳಲ್ಲಿ ತಿರುಗಾಡಿದ ಈ ಅನುಭವ ಇದೆಯಲ್ಲಾ ಅದು ರೋಚಕವಾದುದು. ಕಾಳಿದಾಸನ ಮೇಘ ಸಂದೇಶದ ವರ್ಣನೆ, ನಾಗವರ್ಮನ ಆಚ್ಛೋದ ಸರೋವರ, ರನ್ನ ಕವಿಯ ವೈಶಂಪಾಯನ ಕೊಳದ ಪರಿಕಲ್ಪನೆಯ ನಿಜವಾದ ಅನುಭವವಾದದ್ದು ನೇಪಾಳದ ಫೆವೋ ಸರೋವರ, ಅನ್ನಪೂರ್ಣ, ಮನಕಾಮನ, ನಗರ್ ಕೋಟ್

ಕಣಿವೆಗಳಲ್ಲಿ. ಈ ಅನುಭವಗಳನ್ನು ಸ್ಥಳೀಯ ಸಂಸ್ಕೃತಿಗಳೊಂದಿಗೆ ಕಟ್ಟಿಕೊಟ್ಟಿದ್ದೇನೆ. ಜೊತೆಗಿಷ್ಟು ನೇಪಾಳದ ಇತಿಹಾಸವನ್ನೂ ಹೇಳಿದ್ದೇನೆ. ಪ್ರಪಂಚದ ಏಕೈಕ ಹಿಂದೂ ರಾಷ್ಟ್ರವಾಗಿ ನೇಪಾಳ, ಅಲ್ಲಿನ ದೈವ, ಆರಾಧನೆ, ಬಲಿ, ಬುದ್ಧ - ಶಿವನ ಸಮಾನ ಸ್ವೀಕಾರ, ಸೌಹಾರ್ದತೆಯನ್ನು ಪುಟ್ಟದಾಗಿ ವಿವರಿಸಿದ್ದೇನೆ. ನೇಪಾಳದ ನಿಸರ್ಗ ಸೌಂದರ್ಯ, ಪ್ರವಾಸಿಗರ ಆಕ್ರಮಣ, ದೇಶೀಯ ಬಡತನ, ಅವಿದ್ಯಾವಂತಿಕೆ, ಗುಡ್ಡ-ಕಣಿವೆ, ಕಂದರಗಳ ಬದುಕಿನ ನಡುವೆಯೂ ನೇಪಾಳಿಗರ ಮೋಜು, ಕುಡಿತ ಇವುಗಳನ್ನು ಕಿರುನೋಟದ ಪರಿಧಿಗೆ ತಂದಿದ್ದೇನೆ.

ಇವುಗಳ ಗ್ರಹಿಕೆಗೆ ಒತ್ತಾಸರೆಯಾದ ಸ್ಥಳೀಯ ಬ್ರೋಚರ್, ಮಾರ್ಗದರ್ಶಿಗಳ ನಿರೂಪಣೆಯೊಂದಿಗೆ ನಮ್ಮ ಖಾಯಂ ಗೈಡ್ ಅರ್ಜುನ್ ಪಾಂಡೆ, ಅಡಿಗೆ ತಂಡದ ಕುಂದಾಪುರದ ಮೂಕೇಶ್, ವ್ಯವಸ್ಥಾಪಕ ನಾರಾಯಣ್ ಇವರ ವಿವರಣೆಯನ್ನು ಇಲ್ಲಿ ಬಳಸಿಕೊಂಡಿದ್ದೇನೆ. ಹಾಗಾಗಿ ಈ ಎಲ್ಲರನ್ನೂ ಮರೆಯದೇ ನೆನೆಯುತ್ತೇನೆ.

ಇದೊಂದು ಪ್ರವಾಸ ಕಥನ. ಅವಧಿ ಕಿರಿದು, ನೋಟ ವಿಸ್ತೀರ್ಣ. ನೋಡಿದ, ಅನುಭವಿಸಿದ ಸಂಗತಿಯನ್ನು ಪುಟ್ಟ ಪುಟ್ಟ ಶೀರ್ಷಿಕೆಯಲ್ಲಿ ನೀಡಿದ್ದೇನೆ. ಹೀಗಾಗಿ ಇದೊಂದು ಪ್ರವಾಸದ ದಿನಚರಿಯಾಗದೆ ಸಂಶೋಧನೆಯ ದೀರ್ಘಾವಧಿ ವಿಧಿವಿಧಾನವೂ ಆಗದೆ ನೋಡಿದ ಸ್ಥಳ ಹಾಗೂ ಆ ನೆಲದ ಸಂಸ್ಕೃತಿಯ ಹಿನ್ನೆಲೆ, ಚರಿತ್ರೆಯನ್ನು ಕಿರಿದಾಗಿ ಪರಿಚಯಿಸಿದ್ದೇನೆ, ಕಂಡ ಅನುಭವ ಅನಿಸಿಕೆಗಳೊಂದಿಗೆ.

ಈ ಬರಹದ ಅವಧಿ ಕಡಿಮೆಯಾದರೂ ಹಸ್ತಪ್ರತಿ ಓದಿದ ಡಾ|| ಡಿ.ಜಿ. ರಮೇಶ್, ಡಾ||ಅಂಕನಹಳ್ಳಿ ಪಾರ್ಥ, ಶ್ರೀ ಜಿ.ಇಂದ್ರಕುಮಾರ್ ಈ ಕೃತಿಯು ಒಂದು ಸಾಂಸ್ಕೃತಿಕ ಪಠ್ಯವಾಗಿ ಹೇಗೆ ರೂಪಗೊಂಡಿದೆ. ವಾಚಕ, ಪ್ರವಾಸೋದ್ಯಮ ಹಾಗೂ ಚಾರಿತ್ರಿಕವಾಗಿಯೂ ಮಹತ್ವವಾಗಿಸಬಲ್ಲ ಕಡೆ ಸೂಚನೆ ನೀಡಿದ್ದಾರೆ. ಅವರ ಆಯ್ದ ಸಲಹೆಗಳನ್ನು ಗೌರವದಿಂದ ಸ್ವೀಕರಿಸಿದ್ದೇನೆ.

ಇಂಥದೊಂದು ಅಪೂರ್ವ ಅವಕಾಶವನ್ನು ಒದಗಿಸಿಕೊಟ್ಟು ನಮ್ಮ ಪ್ರವಾಸದೊಳಗೆ ಒಂದಾಗಿದ್ದ ಪ್ರೊ|| ಜಯಪ್ರಕಾಶ್ ಅವರ ಮುನ್ನುಡಿ, ಈ ಸಂದರ್ಭಕ್ಕೆ ಹೆಚ್ಚು ಪ್ರಸ್ತುತ ಅನಿಸಿತು. ಬರೆದಿದ್ದಾರೆ. ಅವರಿಗೆ ಕೃತಜ್ಞತೆಗಳು. ಪ್ರವಾಸದ ಒಡನಾಡಿಯಾಗಿ ಕೊನೆತನಕ ಲವಲವಿಕೆಯಿಂದ ಸಹಕರಿಸಿದ ಪ್ರೊ|| ಕೆ.ಸಿ. ನಾಗರಾಜ್, ಪ್ರೊ|| ರುದ್ರಮುನಿ, ಪ್ರೊ|| ಮೋಹನ್‌ಕುಮಾರ್, ಡಾ|| ಸದಾಶಿವಯ್ಯ, ಪ್ರೊ|| ಪೂರ್ಣಾದೇವಿ, ಪ್ರೊ||ಬಿ.ಎಸ್.ಮಂಜುಳ, ಪ್ರೊ|| ಶೈಲಕುಮಾರಿ, ಪ್ರೊ|| ಮಮತ, ಪ್ರೊ|| ದಸ್ತಗೀರ್,

ಪ್ರೊ||ದಕ್ಷಿಣಾಮೂರ್ತಿ, ಪ್ರೊ|| ಜಗದಾಂಬ ಇವರುಗಳು ಒಂದುಗೂಡಿದ ತನಕ್ಕೆ ನಾನು ಋಣಿ. ಪರೀಕ್ಷೆ ಕೆಲಸದ ನಡುವೆಯೂ, ಬಿಡುವು ಮಾಡಿಕೊಟ್ಟ ತುಮಕೂರು ವಿಶ್ವವಿದ್ಯಾನಿಲಯ ಹಾಗೂ ಕರ್ನಾಟಕ ಸರ್ಕಾರದ ಕಾಲೇಜು ಶಿಕ್ಷಣ ಇಲಾಖೆಗೆ ನಾನು ಆಭಾರಿಯಾಗಿದ್ದೇನೆ. ಪುಸ್ತಕ ಪ್ರಕಟಿಸಿದ ಗಡಿನಾಡ ಜಾನಪದ ಸಂಪರ್ಕಾಧ್ಯಯನ ಕೇಂದ್ರ ಮತ್ತು ಅದರ ಅಧ್ಯಕ್ಷರಾದ ಮಾನ್ಯ ಟಿ.ಬಿ. ಜಯಚಂದ್ರ ಅವರಿಗೆ ನಮ್ಮ ಕೃತಜ್ಞತೆಗಳು. ಇಂಥದೊಂದು ಭಾಗ್ಯದ ಕೆಲಸದಲ್ಲಿ ಸಹಕರಿಸಿದ ಸಂಗಾತಿ ಶಾಂತಶ್ರೀ, ಮಕ್ಕಳಾದ ಅಕ್ಷತ್ ಯಣ್ಣೆಕಟ್ಟೆ, ಯಶಸ್ವಿನಿ ಯಣ್ಣೆಕಟ್ಟೆ ಅವರಿಗೆ ನನ್ನ ನೆನಕೆಗಳು.

**ಡಾ. ಚಿಕ್ಕಣ್ಣ ಯಣ್ಣೆಕಟ್ಟೆ**
ಕನ್ನಡ ಪ್ರಾಧ್ಯಾಪಕ ಹಾಗೂ
ಪಿಎಚ್‌ಡಿ ಮಾರ್ಗದರ್ಶಿ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾ

# ಪರಿವಿಡಿ


1. ನೋಡಬೇಕಾದ ನೇಪಾಳ ........ 1
2. ನೇಪಾಳದ ನೆಲದಲ್ಲಿ ಕಾಲೂರಿದ ಆ ಕ್ಷಣ ........ 7
3. ಪಶುಪತಿಯ ಧಾಮ ........ 13
4. ನೇಪಾಳದ ಕಣಿವೆಗಳಲ್ಲಿ ........ 21
5. ಮನಕಾಮನ ಕಣಿವೆ ಎಂಬ ಬಲಿಪೀಠ ........ 28
6. ಮನಕಾಮನೆ ಅಲ್ಲದಿದ್ದರೂ ಮನಮೋಹಿನಿ ........ 33
7. ಪೋಖ್ರಾ ಎಂಬ ಸುಂದರ ನಗರ ........ 42
8. ಫೆವಾ ಸರೋವರದ ತೆಪ್ಪೋತ್ಸವ ........ 53
9. ಕಠ್ಮಂಡು ಒಳಗೊಂದು ಸುತ್ತು ........ 62
10. ಕ್ಯಾಸಿನೋ ಎಂಬ ಜೂಜಿನ ಅಂಗಳ: ........ 65
11. ಸಿದ್ಧಾರ್ಥನ ಲುಂಬಿನಿ ........ 72
12. ಬುದ್ಧ ಹುಟ್ಟಿದ ನೆಲದಲ್ಲಿ ........ 81
13. ಬುದ್ಧನ ಸಾರನಾಥ ........ 86
14. ಭಕ್ತಾಪುರ ಎಂಬ ದೇವಾಲಯಗಳ ಊರು ........ 92
15. ನಗರ್‌ಕೋಟ್ ಎಂಬ ಹಿಮಕಣಿವೆ ........ 97
16. ನೇಪಾಳಿ ರುದ್ರಾಕ್ಷಿ ನಾಡೆಲ್ಲಾ ತುಂಬೈತೆ ........ 103
17. ಜನಕ್‌ಪುರದಿಂದ ಸೀತಾಮಡುವಿನತ್ತ ........ 107
18. ಸಾಹಸಿ ಶೆರ್ಪಾಗಳು ........ 114
19. ನೇಪಾಳದ ಚರಿತ್ರೆ - ಆರಂಭ ರೋಚಕ ಅಂತ್ಯ ರಕ್ತಸಿಕ್ತ ........ 116
20. ಹಿನ್ನೋಟ ........ 121

೧

# ನೋಡಬೇಕಾದ ನೇಪಾಳ

ಪರ್ವತಗಳ ರಾಷ್ಟ್ರ ನೇಪಾಳ, ಸುಂದರ ಪ್ರವಾಸಿ ತಾಣವೂ ಹೌದು. ಪ್ರಪಂಚದ ಅತಿ ಎತ್ತರದ ಪರ್ವತಗಳು, ತೀಕ್ಷ್ಣವಾದ ಕಣಿವೆ, ಮಂಜು ಕರಗುವ ಜಲಧಾರೆ, ತಡೆದು ತಡೆದು ಹರಿಯುವ ನದಿಗಳು, ದಟ್ಟ ಕಾಡು, ಕಸ್ತೂರಿ ಮೃಗದಂಥ ಅಪೂರ್ವ ಪ್ರಾಣಿಸಂಕುಲ ಈ ನೆಲದ ವಿಶೇಷ. ವಾಲ್ಮೀಕಿ ಮಹರ್ಷಿಯ ನೆಲೆ, ರಾಮಾಯಣದ ಮಹಾಮಾತೆ ಸೀತೆಯ ಜನ್ಮಭೂಮಿ. ಜನಕಪುರ, ಮಿಥಿಲಾನಗರ ಎಂದೂ ಹೆಸರುವಾಸಿ. ಜಗತ್ತಿಗೆ ಅಹಿಂಸೆಯನ್ನು ಬೋಧಿಸಿದ, ಆಸೆಯ ಆಚೆಗಿನ ಬದುಕೇ ಶ್ರೇಷ್ಠ ಎಂದು ಸಾರಿದ, ಆಸೆಯೇ ದುಃಖಕ್ಕೆ ಕಾರಣ ಎಂದು ಹೇಳಿದ ಭಗವಾನ್ ಬುದ್ಧನ ನೆಲೆ ಈ ಕಪಿಲವಸ್ತು, ಲುಂಬಿನಿ ಪ್ರಮುಖ ಪ್ರವಾಸಿ ನೆಲೆಗಳು. ಮಹಾಭಾರತದ ರಾಜಸೂಯ ಯಾಗದ ಕುದುರೆಯೊಂದಿಗೆ ಅರ್ಜುನ ನೇಪಾಳದ ಭೂ ಪಾಲನ್ನು ಗೆದ್ದು ಅಪಾರ ಸಂಪತ್ತನ್ನು ಹಸ್ತಿನಾವತಿಗೆ ತಂದನೆಂಬ ಪೌರಾಣಿಕ ಹಿನ್ನೆಲೆ. ಭಗವಾನ್ ಶಂಕರನ ಪವಿತ್ರ ನೆಲೆ, ಋಷಿಮುನಿಗಳ ತಪೋಭೂಮಿ. ಪಶುಪತಿನಾಥ, ಸ್ವಯಂಭುನಾಥ, ಮುಕ್ತಿನಾಥ, ಬುಡಾ ನೀಲಕಂಠ, ಜಲನಾರಾಯಣರುಗಳ ಪುಣ್ಯಧಾಮ. ಭಗವತಿ, ಮನಕಾಮನ, ವಿಂಧ್ಯವಾಸಿನಿ ಮೊದಲಾದ ಶಕ್ತಿದೇವತೆಗಳ ಪವಿತ್ರ ತೀರ್ಥಕ್ಷೇತ್ರ. ಮೌಂಟ್ ಎವರೆಸ್ಟ್, ಕಾಂಚನಜುಂಗಾ, ಧವಳಗಿರಿ, ಅನ್ನಪೂರ್ಣ ಮೊದಲಾದ ಪರ್ವತಗಳ ದೇಶ. ಪ್ರಪಂಚದ ಅತಿ ಎತ್ತರದ ಮೊದಲ ಎಂಟು ಪರ್ವತಗಳು ನೇಪಾಳದ ಗಡಿ ನೆಲದೊಳಗೆ ಎದ್ದು ನಿಂತಿವೆ. ಕೋಶಿಯಾ, ತ್ರಿಶೂಲಿ, ಗಂಡಕಿ, ಕರ್ಣಾಲಿ ಮೊದಲಾದ ನದಿಗಳು ನೈಸರ್ಗಿಕ ಮಳೆ, ನಂತರ ಹಿಮ ಕರಗಿಯೇ ಸದಾ ಹರಿಯುತ್ತವೆ. ಇಂದಿಗೂ ಸ್ವಾತಂತ್ರ್ಯ ದಿನಾಚರಣೆ ಎಂಬ ಹೆಸರನ್ನೇ ಕೇಳದ, ಆಚರಿಸದ ಏಕೈಕ ರಾಷ್ಟ್ರ. ರಾಜಪ್ರಭುತ್ವ ಅಳಿದು ಪ್ರಜಾಪ್ರಭುತ್ವದ ಮಾವೋವಾದಿ ಸರ್ಕಾರವಿರುವ ರಾಷ್ಟ್ರ. ಒಟ್ಟು 147181 ಕಿ.ಮೀ. ವಿಸ್ತೀರ್ಣದ ನೇಪಾಳ ದೇಶ, ವ್ಯಾಪ್ತಿಯಲ್ಲಿ ಚಿಕ್ಕ ರಾಷ್ಟ್ರವಾದರೂ ವಿಶ್ವದ ಏಕೈಕ

ಹಿಂದೂ ರಾಷ್ಟ್ರವೆಂಬ ಹಿರಿಮೆಗೆ ಪಾತ್ರವಾಗಿದೆ. ಆರ್ಯರು, ಮಂಗೋಲಿಯನ್ನರು ಪರಸ್ಪರ ಭಾವೈಕ್ಯತೆಯಿಂದ ಬದುಕುವ ಈ ನೆಲ ಪಶುಪತಿ, ಬುದ್ಧ ಇಬ್ಬರನ್ನೂ ಸಮಾನವಾಗಿ ಕಾಣುವ, ಆರಾಧಿಸುವ ಭಾವನಾತ್ಮಕವಾಗಿ ಹಿಂದೂ-ಬೌದ್ಧರ ಪುಣ್ಯನೆಲೆ. ಇಲ್ಲಿನ ಪಶುಪತಿ ಲೋಕಪ್ರಸಿದ್ಧನು. ಅಂತೆಯೇ ಬುದ್ಧನೂ ಕೂಡ. ಇಲ್ಲಿನ ಕಪಿಲವಸ್ತುವಿನ ಸಮೀಪದ ಲುಂಬಿನಿಯಲ್ಲಿ ಜನಿಸಿದ ಸಿದ್ಧಾರ್ಥ ಜಗತ್ತಿಗೆ ಶಾಂತಿ, ಸತ್ಯ, ತ್ಯಾಗದ ಪ್ರತೀಕವಾಗಿ ಮಹಾಬೆಳಕಾಗಿ ಲೋಕವಿಖ್ಯಾತನಾಗಿದ್ದಾನೆ.

ಇಲ್ಲಿ ಬುದ್ಧನನ್ನು ನಾರಾಯಣನ ಒಂಬತ್ತನೇ ಅವತಾರ ಎಂದೇ ನಂಬಿ ಆರಾಧಿಸುತ್ತಾರೆ. ಇಲ್ಲಿನ ಪಶುಪತಿನಾಥನ ದೇವಾಲಯದಲ್ಲಿ ಇಂದಿಗೂ ವರ್ಷಕ್ಕೊಮ್ಮೆ ಪಶುಪತಿ-ಶಿವನಿಗೆ ಬುದ್ಧನ ವೇಷ ಹಾಕಿ ಬೌದ್ಧರ ಪದ್ಧತಿಯ ಅನುಸಾರ ಆರಾಧಿಸಲಾಗುತ್ತದೆ. ಈ ಉತ್ಸವವನ್ನು ಒಂದು ರಾಷ್ಟ್ರೀಯ ಹಬ್ಬವಾಗಿ ಒಟ್ಟು ನೇಪಾಳ ರಾಷ್ಟ್ರ ಆಚರಿಸುವುದು ಧರ್ಮ ಸಮನ್ವಯದ ಸೂಚಕವಾಗಿದೆ.

ಪೂರ್ವದಲ್ಲಿನ ಮೆಚಿ ನದಿಯಿಂದ ಪಶ್ಚಿಮದ ಮಹಾಕಾಲಿ ನದಿಯ ತನಕ ವಿಸ್ತಾರವಾಗಿರುವ ನೇಪಾಳ ರಾಷ್ಟ್ರ 26 ಮಿಲಿಯನ್ ಅಂದರೆ 2 ಕೋಟಿ 60 ಲಕ್ಷ ಜನಸಂಖ್ಯೆ ಹೊಂದಿದೆ. ಜನಾಂಗಿಕವಾಗಿ ಆರ್ಯರು (ಹಿಂದೂಗಳು), ವೈಶ್ಯರು, ಕ್ಷತ್ರಿಯರು, ಶೂದ್ರರು, ಮಗರ್ ಮೂಲನಿವಾಸಿಗಳಾದ ಜಿರೇಲ್, ಸುರೇಲ್, ಧಾಮೀ, ಧನುವಾರ್, ಮಬ್ರೀ, ರಾವುಟೆ ಈ ಬಗೆಯ ಅಲ್ಪಸಂಖ್ಯಾತರು, ಗೂರ್ಖಾ ಜನರಂಥ ಸಮರ್ಥ ಸೇನಾನಿಗಳು, ಶೆರ್ಪಾಗಳಂಥ ಅಪ್ರತಿಮ ಸಾಹಸಿಗಳು ಈ ನೆಲದ ಶಕ್ತಿ, ಸಾಮರ್ಥ್ಯ, ತ್ಯಾಗ, ಬಲಿದಾನಕ್ಕೆ ಸದಾ ಸ್ಫೂರ್ತಿಯಾಗಿದ್ದಾರೆ. ಪ್ರಪಂಚದ ಅತ್ಯಂತ ಎತ್ತರದ ಮೌಂಟ್ ಎವರೆಸ್ಟ್ ಶಿಖರವನ್ನು ಪ್ರಪ್ರಥಮವಾಗಿ ಏರಿದ ತೇನ್‌ಸಿಂಗ್ ಶೆರ್ಪಾ ಈ ನೆಲದವನು ಎಂಬುದು ಹೆಮ್ಮೆ ಪಡುವ ಸಂಗತಿ.

ನೇಪಾಳ ದೇಶದಲ್ಲಿ 122 ಮೌಖಿಕ ಭಾಷೆಯನ್ನು ಆಡುವ ಜನರಿದ್ದು ಇದನ್ನು ಬಹುಜಾತಿಯ, ಬಹು ಭಾಷಿಕ ನೆಲೆಗಳ ರಾಷ್ಟ್ರ ಎಂದು ಕರೆಯಲಾಗುವುದು. ನೆವಾರಿ, ಮೈಥಿಲೀ, ಶೆರ್ಪಾ, ರಾಯಿ, ಲಿಂಬೂ, ಭೋಜ್‌ಪುರಿ, ತಮಾಂಗ್, ಮಗರ್ ಈ ಬಗೆಯ ಜನಾಂಗಿಕ ಹಿನ್ನೆಲೆಯವರು. ಅವರ ಜಾತಿ ಹೆಸರಿನ ಭಾಷೆಯನ್ನೇ ಆಡುವ ಪದ್ಧತಿ ಇಂದಿಗೂ ಇದೆ. ಇವೆಲ್ಲಾ ಮೌಖಿಕ ಭಾಷೆಗಳು ಮಾತ್ರ. ಬರವಣಿಗೆಗೆ ದೇವನಾಗರಿ ಲಿಪಿಯನ್ನು ಬಳಸುತ್ತಾರೆ. ಇದು ನೇಪಾಳದ ರಾಷ್ಟ್ರೀಯ ಭಾಷೆಯಾಗಿದೆ.

ಆದರೂ ಹಿಂದಿ, ಉರ್ದು, ಪಾರ್ಸಿ ಭಾಷೆಗಳನ್ನು ಮಾತನಾಡುತ್ತಾರೆ. ಇಲ್ಲಿ ಹಿಂದಿ ಮತ್ತು ನೇಪಾಳಿಯನ್ನು ದೇವನಾಗರಿ ಲಿಪಿಯಲ್ಲಿ ಬರೆಯುವುದು ಪದ್ಧತಿಯಾಗಿದೆ. ಹೀಗಾಗಿಯೇ ನೇಪಾಳಿ ಭಾಷೆ ಭಾರತೀಯರಿಗೆ ಹತ್ತಿರವಾಗುತ್ತದೆ ಮಾತ್ರವಲ್ಲ ಉತ್ತರ ಭಾರತದ ಹಲವು ರಾಜ್ಯಗಳ ಜನರಿಗೆ ಸಂಪರ್ಕ ಸಾಧನವಾಗಿ, ವ್ಯಾಪಾರ-ವಹಿವಾಟಿಗೆ ಸಹಕಾರಿಯಾಗಿದೆ. ಪ್ರವಾಸೋದ್ಯಮದ ಮೇಲೆ ದೇಶದ ಬದುಕು ನಿಂತಿದೆ. ಪ್ರವಾಸೋದ್ಯಮವೇ ಇವರಿಗೆ ಜೀವನಾಡಿ.

ಶೇ.80 ರಷ್ಟು ಜನರು ವ್ಯಾಪಾರ, ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಕಸುಬನ್ನು ಅವಲಂಬಿಸಿದ್ದಾರೆ. ಶೇ.90 ಹಿಂದೂಗಳು, ಶೇ.5 ರಷ್ಟು ಬೌದ್ಧರು, ಶೇ.3 ರಷ್ಟು ಮುಸ್ಲಿಮರು, ಶೇ.1 ರಷ್ಟು ಕ್ರೈಸ್ತರು ನೆಲೆಸಿದ್ದಾರೆ. ವಿರಳವಾಗಿ ಪರ್ಷಿಯನ್ನರೂ ಇದ್ದಾರೆ. ಪ್ರಜಾಪ್ರಭುತ್ವವಾದಿ ಸರ್ಕಾರ ಇಂದಿನ ನೇಪಾಳವನ್ನು ಆಳುತ್ತಿದೆ. ಹಿಮಾಲಿ ಪ್ರದೇಶ, ಪಹಾಡಿ ಪ್ರದೇಶ, ತರಾಯಿ ಪ್ರದೇಶ ಎಂದು ಮೂರು ವಿಭಾಗಗಳಲ್ಲಿ 75 ಜಿಲ್ಲೆಗಳನ್ನು ಹೊಂದಿದೆ. ಇಲ್ಲೆಲ್ಲಾ ಜಿಲ್ಲಾಧಿಕಾರಿಗಳಿದ್ದಾರೆ. ಪ್ರಸ್ತುತ ಸರ್ಕಾರದಲ್ಲಿ 205 ಸಂಸದೀಯ ಕ್ಷೇತ್ರಗಳನ್ನು ಒಳಗೊಂಡಿದ್ದು ಪ್ರಧಾನಿ ದೇಶದ ಮುಖ್ಯಸ್ಥನಾಗಿದ್ದಾನೆ. ಕಠ್ಮಂಡು ಈ ದೇಶದ ರಾಜಧಾನಿಯಾಗಿದೆ.

ಭಾರತ ಮತ್ತು ಚೀನಾ ದೇಶದ ಬಲಬದಿಯ ಹಿಮಾಲಯದ ಸೆರಗಿನಲ್ಲಿ ಸೌತೇಕಾಯಿ ಅಡ್ಡವಿಟ್ಟಂತಿರುವ ನೇಪಾಳ ದೇಶ ಹಿಮಾಲಿ, ಪಹಾಲಿ, ತರಾಯಿ ಪ್ರದೇಶ ಎಂಬ ವಲಯಗಳಲ್ಲಿ ಇಲ್ಲಿನ ಪ್ರಾದೇಶಿಕತೆ ವಿಭಾಗವಾಗಿದೆ. ಈ ಒಂದೊಂದು ಪ್ರದೇಶವೂ ಒಂದೊಂದು ವೈಶಿಷ್ಟ್ಯತೆಯನ್ನು ಹೊಂದಿದೆ.

ಹಿಮಾಲಿ ಪ್ರದೇಶ ಹೆಚ್ಚು ಕಣಿವೆಗಳಿಂದ ಕೂಡಿದ, ಸಮುದ್ರ ಮಟ್ಟಕ್ಕಿಂತ 10 ಸಾವಿರ ಅಡಿ ಎತ್ತರದಲ್ಲಿದೆ. ಪ್ರಪಂಚದ ಅತಿ ದೊಡ್ಡ 14 ಪರ್ವತಗಳಲ್ಲಿ 8 ಪರ್ವತ ಶಿಖರಗಳು ಹಿಮಾಲಿ ಪ್ರದೇಶದಲ್ಲಿವೆ. ಮೌಂಟ್ ಎವರೆಸ್ಟ್, ಕಾಂಚನಜಂಗಾ, ಲ್ಹೋತ್ಸೆ, ಧವಳಗಿರಿ, ಅನ್ನಪೂರ್ಣ, ಮಕಾಲು, ಚೊಓಯು, ಮನಾಸ್ಲು ಮೊದಲಾದ ಉತ್ತರದ ಮೌಂಟ್ ಎವರೆಸ್ಟ್ ಶಿಖರಗಳು ಹಿಮಾಲಿ ಪ್ರದೇಶದ ವ್ಯಾಪ್ತಿಯಲ್ಲಿದ್ದು ಇಲ್ಲಿ ಕಸ್ತೂರಿಮೃಗ, ಹಿಮಕರಡಿ, ಆಮೆ ಮೊದಲಾದ ಜಾನುವಾರುಗಳು ವಾಸಿಸುತ್ತವೆ.

ತರಾಯಿ ಪ್ರದೇಶ ನೇಪಾಳ ದೇಶಕ್ಕೆ ಆಹಾರ ಒದಗಿಸುವ ಪ್ರಮುಖ ಸಾಗುವಳಿ ಭೂ ಪ್ರದೇಶ. ಕೋಶಿ, ಗಂಡಕಿ, ಕರ್ಣಾಲಿ ಮೊದಲಾದ ಪ್ರಮುಖ ನದಿಗಳು ಈ

ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತವೆ. ಮುಖ್ಯವಾಗಿ ಭಾರತದ ಗಡಿಗೆ ಒತ್ತಿಕೊಂಡಿರುವ ಈ ಭಾಗ ಭಾರತ-ನೇಪಾಳದ ವ್ಯಾಪಾರ ವಿನಿಮಯ ಪ್ರದೇಶವೂ ಹೌದು. ಭತ್ತ, ಜೋಳ, ಆಲೂಗಡ್ಡೆ, ಸಾಸಿವೆ, ತರಕಾರಿ ಬೆಳೆಯುವ ಪ್ರದೇಶವಾಗಿದೆ. ಇದೂ ಸಹ ಸಮುದ್ರ ಮಟ್ಟಕ್ಕಿಂತ 3000 ಅಡಿಗಳ ಎತ್ತರದಲ್ಲಿದೆ. ವಿರಾಟನಗರ, ವೀರ್‌ಗಂಜ್, ಬೈರ್‌ಹವಾ, ನೇಪಾಳ್‌ಗಂಜ್ ಮೊದಲಾದ ಸ್ಥಳಗಳು ಉತ್ತರ ಭಾರತದೊಂದಿಗೆ ವಿನಿಮಯ ಸಾಧಿಸಿದೆ.

ಪಹಾಡಿ ಪ್ರದೇಶ ಎಂದು ಕರೆಯುವ ಈ ವಲಯ ಪರ್ವತ-ಭೂ ಪ್ರದೇಶದ ಸಮ್ಮಿಶ್ರ ನೆಲ. ಆದರೂ ಕಣಿವೆಗಳೇ ಅಧಿಕ. ಸಮುದ್ರ ಮಟ್ಟಕ್ಕಿಂತ 10 ಸಾವಿರ ಅಡಿಗಳಷ್ಟು ಎತ್ತರದಲ್ಲಿದೆ. ಪುಟ್ಟಪುಟ್ಟ ಕೆರೆ, ಜಲಾಶಯ ಈ ಭಾಗದಲ್ಲಿ ಕಂಡುಬರುತ್ತವೆ. ಸಣ್ಣ ಹಿಡುವಳಿ ಈ ಪ್ರದೇಶದಲ್ಲಿ ವ್ಯಾಪಕವಾಗಿದೆ. ಪಹಾಡಿ ಪ್ರದೇಶ ಎಂದೇ ಕರೆಯಲ್ಪಡುವ ಈ ಪ್ರದೇಶದಲ್ಲಿಯೇ ನೇಪಾಳದ ರಾಜಧಾನಿ ಕಠ್ಮಂಡು ಬರುತ್ತದೆ. ಭಕ್ತಾಪುರ, ಲಲಿತಪುರ, ಪ್ರಸಿದ್ಧ ಗಿರಿಧಾಮ ನಗರ್‌ಕೋಟ್ ಇದೇ ವಲಯಕ್ಕೆ ಸೇರಿದೆ.

ನೇಪಾಳದಲ್ಲಿ ಪ್ರಮುಖ ಬೆಳೆ ಭತ್ತ. ವಿರಳವಾಗಿ ಕಬ್ಬು, ಗೋಧಿ ಬೆಳೆಯುತ್ತಾರೆ. ಮೂರು ಬೀಜಗಳುಳ್ಳ ಶೇಂಗಾವನ್ನು ಹೆಚ್ಚಾಗಿ ಬೆಳೆಯುತ್ತಾರೆ. ಕಣಿವೆ, ರಸ್ತೆ ಬದಿ, ಇಳಿಜಾರು, ಸಮತಟ್ಟು ಇಲ್ಲೆಲ್ಲಾ ಹೆಚ್ಚಾಗಿ ಸಾಸಿವೆಯನ್ನು ಬೆಳೆಯುತ್ತಾರೆ. ನೇಪಾಳದ ಎಲ್ಲೆಡೆಯೂ ಮೂಲಂಗಿ, ಪಾಲಕ್, ಕೋಸು, ಸೊಪ್ಪು, ತರಕಾರಿಯನ್ನು ಯಥೇಚ್ಛವಾಗಿ ಬೆಳೆಯುತ್ತಾರೆ. ಒಂದು ಅಡಿ ಉದ್ದ, ದಪ್ಪನೆಯ ಮೂಲಂಗಿ ಇಲ್ಲಿ ವಿಶೇಷ. ಸಾಸಿವೆಯ ಎಣ್ಣೆಯನ್ನು ಅಡಿಗೆಗೆ ವ್ಯಾಪಕವಾಗಿ ಬಳಸುತ್ತಾರೆ. ಭಾರತದ ವಿಶೇಷವಾಗಿ ಬಿಹಾರ ಮತ್ತು ಉತ್ತರಾಖಂಡ ರಾಜ್ಯಗಳ ಗಡಿಗೆ ತಾಗಿಕೊಂಡು 1700 ಕಿ.ಮೀ. ಉದ್ದದ ಗಡಿ ಭೂ ಪ್ರದೇಶವಾಗಿದೆ. ಭಾರತದ ಗೋರಖ್‌ಪುರ ವಿದೇಶೀ ವಸ್ತುಗಳ ಸಾಗಾಣಿಕೆಯ ಪ್ರಮುಖ ನೆಲೆಯೂ ಆಗಿದೆ. ಇಲ್ಲಿಂದ ರೈಲುಗಳ ಸಂಪರ್ಕ ಆರಂಭವಾಗುತ್ತದೆ. ಸೊನಾಲಿ ಭಾರತ-ನೇಪಾಳದ ಚೆಕ್‌ಪೋಸ್ಟ್ ಇರುವ ಸ್ಥಳ. ನೇಪಾಳದ ಸೀಮೆ ಇಲ್ಲಿಂದಲೇ ಆರಂಭ. ನೇಪಾಳದ ಪೋಖ್ರಾ ಅತ್ಯಂತ ಸುಂದರ, ವಿರಳ ಜನಸಂಖ್ಯೆಯುಳ್ಳ ಹಾಗೂ ಶಿಖರಗಳು-ಸರೋವರಗಳ ನಗರ. ಗಡಿ ಪ್ರದೇಶದಿಂದ 325 ಕಿ.ಮೀ. ದೂರವಿದೆ. ಹಿಮಾಲಯ ಪರ್ವತದ ತಪ್ಪಲುಗಳನ್ನು ಹಾದು ಇಲ್ಲಿಗೆ ಬರಬೇಕಾಗಿರುತ್ತದೆ. ಸಾಮಾನ್ಯವಾಗಿ ಭಾರತದಿಂದ ರಸ್ತೆ ಮಾರ್ಗದಲ್ಲಿ ನೇಪಾಳಕ್ಕೆ ಬರುವವರು ಪೋಖ್ರಾ ಮಾರ್ಗವಾಗಿಯೇ ಬಂದು ನಂತರ ಕಠ್ಮಂಡು ಮೊದಲಾದ ಕಡೆ ಹೋಗುತ್ತಾರೆ. ಬುದ್ಧನ

ಜನ್ಮಭೂಮಿ ಕಪಿಲವಸ್ತು, ಲುಂಬಿನಿವನ, ನೇಪಾಳದ ವೀರಭೂಮಿ ಗೂರ್ಖಾರ ನೆಲೆ, ಗೂರ್ಖಾ ಜಿಲ್ಲೆ ಇಲ್ಲಿಗೆ ಸಮೀಪ. ಶಿಖರಗಳ ವೀಕ್ಷಣೆ, ಪರ್ವತಾರೋಹಣ ಪೋಖ್ರಾದಿಂದಲೇ ಆರಂಭವಾಗುತ್ತವೆ.

ನೇಪಾಳಿಗರು ಸಂಸ್ಕೃತಿಪ್ರಿಯರು. ಪರಂಪರೆಯೊಂದಿಗೆ ಅಚಲವಾದ ವಿಶ್ವಾಸ, ಗೌರವ. ಅದಕ್ಕೆ ಪೂರಕವಾಗಿ ಕಳೆದ ಸಂಸ್ಕೃತಿ, ಐತಿಹಾಸಿಕ ಪರಂಪರೆಯ ಪಳೆಯುಳಿಕೆಯಂತೆ ಹಲವಾರು ಮ್ಯೂಸಿಯಂ ಕಂಡುಬರುತ್ತವೆ. ಅಂಥವುಗಳಲ್ಲಿ ಕಠ್ಮಂಡುವಿನ ದಿ ತ್ರಿಭುವನ್ ಮ್ಯೂಸಿಯಂ, ಮಹೇಂದ್ರ ಮ್ಯೂಸಿಯಂ, ದಿ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರ್ (ಸ್ವಯಂನಾಥ ಬುದ್ಧನ ಸ್ತೂಪದ ಬಲಬದಿ), ದಿ ನ್ಯಾಷನಲ್ ಆರ್ಟ್ಸ್ ಭಕ್ತಾಪುರ, ದಿ ನ್ಯಾಷನಲ್ ವುಡ್ ವರ್ಕಿಂಗ್ ಮ್ಯೂಸಿಯಂ, ಭಕ್ತಾಪುರ, ಗೂರ್ಖಾ ಮೆಮೋರಿಯಲ್ ಮ್ಯೂಸಿಯಂ ಪೋಖ್ರಾ, ಲುಂಬಿನಿ ಮ್ಯೂಸಿಯಂ, ಬುದ್ಧನ ಲುಂಬಿನಿವನಂ, ನ್ಯಾಷನಲ್ ಲೈಬ್ರರಿ ಪಾಟಕ್ ಈ ಮೊದಲಾದವುಗಳು ನೇಪಾಳದ ಸಂಸ್ಕೃತಿಯ ಚಿತ್ತಾರವಾಗಿವೆ. ನಗರ್‌ಕೋಟ್, ಕಕನಿ, ದಮನ್, ಅನ್ನಪೂರ್ಣ, ಮನಕಾಮನ ಮೊದಲಾದ ಕಣಿವೆ ಪ್ರದೇಶಗಳು ಹಿತಮಿತವಾಗಿ ಚಳಿಯ ನಡುವೆಯೂ ಹಿಮ ತಬ್ಬಿರುವ ಭೂ-ಬೆಟ್ಟಗಳ ರೋಚಕ ದೃಶ್ಯಾವಳಿಗಳು. ಇಲ್ಲಿಗೆ ವಿಮಾನದ ಸೌಲಭ್ಯಗಳೂ ಇವೆ. ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಆಕರ್ಷಿಸುವ ರಾಯಲ್ ಚಿತ್‌ವನ ರಾಷ್ಟ್ರೀಯ ಉದ್ಯಾನವನ ವರ್ಲ್ಡ್ ಹೆರಿಟೇಜ್‌ನ ಮಾನ್ಯತೆ ಪಡೆದಿದೆ. ಭಾರತದ ಬಿಹಾರದಲ್ಲಿ 'ವಾಲ್ಮೀಕಿ ಹುಲಿಗಳ ಅಭಯಾರಣ್ಯ' ಎಂದು ಕರೆದರೆ ಇದೇ ಮುಂದುವರಿದು ನೇಪಾಳದಲ್ಲಿ 'ಚಿತ್‌ವನ'ವಾಗಿದೆ. 932 ಕಿ.ಮೀ. ವಿಸ್ತೀರ್ಣದ ಈ ಅರಣ್ಯ ಪ್ರವಾಸಿಗರಿಗೆ ಆನೆಸವಾರಿ, ಬುಡಕಟ್ಟು ಸಾಂಸ್ಕೃತಿಕ ಮೇಳ ಮೊದಲಾದ ಕಾರ್ಯಕ್ರಮಗಳಿಂದ ಗಮನ ಸೆಳೆಯುತ್ತದೆ. ಇದಲ್ಲದೆ ನೇಪಾಳದಲ್ಲಿ 16 ಸಂರಕ್ಷಿತ ಅರಣ್ಯಗಳಿವೆ. ಇವುಗಳಲ್ಲಿ ಬುದ್ಧ ಹುಟ್ಟಿದ ಲುಂಬಿನಿ ವನವೂ ಒಂದಾಗಿದೆ.

ಮೂಲನಿವಾಸಿಗಳು ಮತ್ತು ಬುಡಕಟ್ಟು ಜನಾಂಗವೇ ಅಧಿಕವಾಗಿ ವಾಸಿಸುವ ನೇಪಾಳದಲ್ಲಿ ತನ್ನ ನೆಲಮೂಲ ಪರಂಪರಾಗತ ಸಂಸ್ಕೃತಿಯನ್ನು ಬಿಟ್ಟಿಲ್ಲ. ಈ ಬುಡಕಟ್ಟು ಜನ ನವಿಲು ಕುಣಿತ, ಕರಡಿಮೇಳ, ತಮಟೆ ನೃತ್ಯ, ಕೋಲುಮೇಳ, ಬೇಟೆಯ ವಿವಿಧ ದೃಶ್ಯಭಂಗಿಗಳನ್ನು ಮನರಂಜನೆಯಾಗಿ ಮಾಡಿಕೊಂಡಿದ್ದಾರೆ. ವನ್ಯಧಾಮ ಹಾಗೂ ಸಫಾರಿಗೆ ಹೋದವರಿಗೆ ಕೇಳಿದರೆ ಈ ಬುಡಕಟ್ಟು ಸಂಸ್ಕೃತಿಯ ಕಲೆ ಅನಾವರಣ ಮಾಡುತ್ತಾರೆ. ನಾವು ಕಠ್ಮಂಡುವಿನ ಕ್ಯಾಸಿನೋ ಕ್ಲಬ್‌ನಲ್ಲಿ ಈ ಬಗೆಯ ಸಮೂಹ ನೃತ್ಯದ ಒಂದೆರಡು

ದೃಶ್ಯಗಳನ್ನು ವೀಕ್ಷಿಸಿದೆವು. ನೇಪಾಳದಲ್ಲಿ ರೂಪಾಯಿಗಳ ಲೆಕ್ಕಾಚಾರದಲ್ಲಿ ವಿನಿಮಯ ನಡೆಯುತ್ತಿದ್ದು, ಭಾರತದ 100 ರೂ.ಗಳು ನೇಪಾಳದ 162 ಕ್ಕೆ ಸಮ. ಆದರೂ ಆಟೋ, ಸಣ್ಣಪುಟ್ಟ ಸಾಮಾನು ಖರೀದಿ ಹಾಗೂ ಮೊಬೈಲ್ ಕರೆನ್ಸಿ ವಿನಿಮಯಗಳ ಸಂದರ್ಭದಲ್ಲಿ ಭಾರತದ ಕರೆನ್ಸಿಗೆ ಖಚಿತವಾಗಿ ವಿನಿಮಯವಾಗದೆ, ವ್ಯಾವಹಾರಿಕವಾಗಿ ಯಾಮಾರಿಸುವ ವ್ಯಾಪಾರಿ ಬುದ್ಧಿಯನ್ನು ನಾನು ಶೇಂಗಾ ಖರೀದಿಸುವಾಗ, ಫೋನ್ ಮಾಡುವ ಸಂದರ್ಭದಲ್ಲಿ ಎದುರಿಸಬೇಕಾಯಿತು. ಕೇಳಿದರೂ ನಯವಾಗಿ ಮುಂದೆ ಹೋಗುವ ಬೀದಿ ವ್ಯಾಪಾರಿಗಳು ಜೋರು ಮಾಡುವುದೂ ಇದೆ.

ಹಿಮಾಲಯದ ಕಣಿವೆಗೆ ಅಂಟಿಕೊಂಡಂತೆ ಪೂರ್ವ-ಪಶ್ಚಿಮ, ದಕ್ಷಿಣ ಮೂರೂ ಕಡೆಗೆ ಭಾರತದೊಂದಿಗೆ ಆತುಕೊಂಡು, ಉತ್ತರಕ್ಕೆ ಚೀನಾ ದೇಶದೊಂದಿಗೆ ಗಡಿ ಹಂಚಿಕೊಂಡಿದೆ. ಭಾರತ, ಬರ್ಮಾ, ಚೀನಾ ದೇಶಗಳ ಗಡಿಗೆ ಬಳ್ಳಿಯಲ್ಲಿ ಮಲಗಿರುವ ಸೌತೇಕಾಯಿಯಂತೆ ದಕ್ಷಿಣ-ಉತ್ತರೋತ್ತರವಾಗಿ ನೇಪಾಳದ ಭೂಗೋಳ ಚೆಲ್ಲಿಕೊಂಡಿದೆ.

೨

# ನೇಪಾಳದ ನೆಲದಲ್ಲಿ ಕಾಲೂರಿದ ಆ ಕ್ಷಣ

ದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಅಪರಾಹ್ನ 3.45 ಗಂಟೆಗೆ ಹೊರಟ ಸ್ಪೇಸ್‌ಜೆಟ್ ವಿಮಾನ, ಮೊದಲು ನಿಧಾನವಾಗಿ ನಂತರ ತನ್ನೆಲ್ಲಾ ವೇಗ ಹೆಚ್ಚಿಸಿಕೊಂಡು ಉತ್ತರೋತ್ತರವಾಗಿ ಹಾರುತ್ತಿತ್ತು. ದೆಹಲಿ ಬಿಟ್ಟ ಅರ್ಧ ತಾಸಿನ ಒಳಗೆ ಪರ್ವತಗಳ ಸಾಲು ಸಾಲು ಎದುರಾದವು. ವಿಮಾನದ ಕಿಟಕಿಯಿಂದ ನೋಡಿದರೆ ಹೊರಗಿನ ದೃಶ್ಯ ರೋಮಾಂಚನಕಾರಿಯಾಗಿತ್ತು. ನಿಸರ್ಗ ನಿರ್ಮಿತ ಪರ್ವತಗಳ ಮಾಲೆ ಮಾಲೆ, ಈ ಪರ್ವತಗಳ ನಡುನಡುವೆ ವಿಮಾನ ಹಾರುತ್ತಿದ್ದಾಗ ಕೆಳಗಿನ ಕಣಿವೆಗಳು, ಜಲಪಾತಗಳು, ಕಂಡೂ ಕಾಣದಂತೆ ಪ್ರಕೃತಿಯಲ್ಲಿ ಲೀನವಾಗಿದ್ದವು. ಒಮ್ಮೊಮ್ಮೆ ಸೂರ್ಯ ತನ್ನ ಹಿಮದ ರಾಶಿಯಿಂದ ಕಣ್ಣರಳಿಸಿ ಹೊಂಗಿರಣ ಬೀರಿದಾಗ ಹಿಮವೆಲ್ಲಾ ಬಂಗಾರ ಪರ್ವತದ ರೂಪ ತಾಳುತ್ತಿತ್ತು. ನಮ್ಮಲ್ಲಿದ್ದ ಕೆಲವರಿಗೆ ಅದೊಂದು ಸಾಗರ, ಕೆರೆ, ನೀರಿನ ಜಲಧಾರೆಯಂತೆ ಕಂಡರೆ ಅನುಭವಿಗಳು ಕಣಿವೆ ನೆಲದಲ್ಲಿ ಅದೆಲ್ಲಿಯ ಸಾಗರ! ಪ್ರಪಂಚದ ಮ್ಯಾಪ್ ಓದಿಕೊಳ್ಳಬೇಕೆಂದು ಪ್ರೊಫೆಸರ್‌ಗಳಿಗೊಂದು ತೀಕ್ಷ್ಣಮಾತು. ಬರುಬರುತ್ತಾ ವಿಮಾನ ನೆಲಮುಗಿಲಿನ ನಡುವಿನ ಅಂತರ ಗುರುತಾಗುವಂತೆ ತನ್ನ ಎತ್ತರವನ್ನು ತಗ್ಗಿಸಿಕೊಳ್ಳುತ್ತಿತ್ತು. ವಿಮಾನದೊಳಗಿನ ಗಗನಸಖಿ ಮೆಲುಧ್ವನಿಯಲ್ಲಿ ಮಾತನಾಡುತ್ತಿದ್ದಳು. ಮೊದಲು ಹಿಂದಿಯಲ್ಲಿ ಹೇಳಿದಾಗ ಅತ್ತ ಹರಿಯದ ನನ್ನ ಲಕ್ಷ್ಯ ಇಂಗ್ಲೀಷ್‌ನಲ್ಲಿ ಹೇಳುವಾಗ ಅತ್ತ ತಿರುಗಿತು. ಕೆಲವೇ ನಿಮಿಷಗಳಲ್ಲಿ ವಿಮಾನ ನೇಪಾಳದ ತ್ರಿಭುವನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಯಲಿದೆ ಎಂದು ಹೇಳಿದಳು. ಲ್ಯಾಂಡಿಂಗ್ ಆಗುತ್ತದೆ, ಸೊಂಟ ಪಟ್ಟಿ ಕಟ್ಟಿಕೊಳ್ಳಿ ಎಂಬ ಸಣ್ಣ ಸಲಹೆಯೂ ಅದೇ ಗಗನಸಖಿಯಿಂದ ಬಂತು. ಎರಡು ಗಂಟೆಯ ಹವಾನಿಯಂತ್ರಿತ ವಾತಾವರಣದಿಂದ ಬಿಡುಗಡೆ ಹೊಂದಲು ನನ್ನ ಮನ ತುಡಿಯುತ್ತಿತ್ತು. ವಿಮಾನ ತನ್ನ ವೇಗವನ್ನು ತಗ್ಗಿಸುತ್ತಾ ಎತ್ತರದಿಂದ ಕೆಳಮುಖವಾಗಿ ಇನ್ನೂ ಕೆಳಕ್ಕೆ ಕೆಳಕ್ಕೆ ಇಳಿಯುತ್ತಾ



ಕಠ್ಮಂಡುವಿನ ತ್ರಿಭುವನ್ ವಿಮಾನನಿಲ್ದಾಣ

ನಿಧಾನವಾಗಿ ನೆಲ, ನೆಲದ ಮೇಲಿನ ಜನ, ಮಾನವ ನಿರ್ಮಿತ ಕಾಂಕ್ರೀಟ್ ಕಾಡು ಹಂತಹಂತವಾಗಿ ಸ್ಪಷ್ಟವಾಗತೊಡಗಿತು. ವಿಮಾನದ ವೇಗ ತೀವ್ರವಾಗಿ ತಗ್ಗಿ, ಚಕ್ರ ನೆಲಮುಟ್ಟಿ ಸ್ವಲ್ಪ ದೂರ ರೈಲಿನ ಮಾದರಿಯಲ್ಲಿ ಚಲಿಸಿ ನಿಂತುಕೊಂಡಿತು. ಗಗನ ಸಖಿ ಮತ್ತೆ ಮೆಲುಧ್ವನಿಯಲ್ಲಿ 'ನಿಮ್ಮ ಪ್ರಯಾಣ ಸುಖಕರವಾದುದಕ್ಕೆ ಧನ್ಯವಾದಗಳು' ಎಂದು ಉಲಿಯುತ್ತಿದ್ದಳು.

ಕೆಲ ನಿಮಿಷಗಳ ತರುವಾಯ ವಿಮಾನದ ಬಾಗಿಲುಗಳು ತೆರೆದುಕೊಂಡವು. ತುಸು ದೂರದಲ್ಲಿ ತ್ರಿಭುವನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಎಂಬ ನಾಮಫಲಕ ದೇವನಾಗರಿ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಎದ್ದು ಕಾಣುತ್ತಿತ್ತು. ನಾವೆಲ್ಲರೂ ಲಗುಬಗೆಯಿಂದ ವಿಮಾನದಿಂದ ಕೆಳಗಿಳಿದೆವು. ವಿಮಾನ ನಿಲ್ದಾಣದ ಒಂದು ಬದಿಯಲ್ಲಿ ನಿಂತು ನಮ್ಮ ಲಗೇಜಿಗಾಗಿ ಕಾಯ್ದೆವು. ಹತ್ತು ನಿಮಿಷಗಳಲ್ಲೇ ಒಂದೊಂದಾಗಿ ತಿರುಗು ಟ್ರಾಲಿಯಲ್ಲಿ ನಮ್ಮ ನಮ್ಮ ಲಗೇಜು ನಮ್ಮ ಬಳಿ ಬಂದವು. ಅವುಗಳನ್ನು ಎತ್ತಿಕೊಂಡು ಟ್ರಾಲಿಗಳಲ್ಲಿ ತುಂಬಿ ತಳ್ಳಿಕೊಂಡು ವಿದೇಶೀ ಪ್ರಯಾಣದ ವಿಧಿ ವಿಧಾನಗಳನ್ನು ನಮ್ಮ ನಮ್ಮ ಪಾಸ್‌ಪೋರ್ಟ್‌ಗಳೊಂದಿಗೆ ಕೌಂಟರ್‌ನಲ್ಲಿ ಆಗಮನದ ಮುದ್ರೆ ಒತ್ತಿಸಿಕೊಂಡು ವಿಮಾನ ನಿಲ್ದಾಣದ ಹೊರಗೆ ಬಂದೆವು.

9ನೇ ಡಿಸೆಂಬರ್ 2012 ನೇ ಭಾನುವಾರ ಸಂಜೆ 5.40 ಗಂಟೆಗೆ ನಾವು ನೇಪಾಳ ರಾಷ್ಟ್ರದ ರಾಜಧಾನಿ ಕಠ್ಮಂಡು ನೆಲದಲ್ಲಿ ನಡೆದಾಡಿದಾಗ ಎಲ್ಲೆಲ್ಲೂ ಪರದೇಶಿತನವೇ. ಮೊಬೈಲ್‌ಗಳೆಲ್ಲವೂ ತಮ್ಮ ಸಂಪರ್ಕ ಕಳೆದುಕೊಂಡವು. ನನ್ನ ಮೊಬೈಲ್‌ನಲ್ಲಿದ್ದ ಕರೆನ್ಸಿ

ಮಾಯವಾಗಿ ಜೀರೋ ಬ್ಯಾಲೆನ್ಸ್ ಆಗುವ ಮುಂಚೆ ಶಿವಮೊಗ್ಗ ಮತ್ತು ಬಾಗಲಕೋಟೆಗಳಿಂದ ಕನಕಜಯಂತಿ ಸಮಾರಂಭದ ವಿಶೇಷ ಉಪನ್ಯಾಸಕ್ಕೆ ಆಹ್ವಾನ ಬಂದವು. ನಾನೀಗ ನೇಪಾಳದಲ್ಲಿರುವ ಸಂಗತಿ ತಿಳಿಸಿ ಫೋನಿಡುವ ಕ್ಷಣಕ್ಕೆ ನನ್ನ ಮೊಬೈಲ್ ಬ್ಯಾಲೆನ್ಸ್ ಜೀರೋ ಆಗಿ ಫೋನ್ ಬಂದಾಯಿತು. ಟವರ್ ಇಲ್ಲದಿರುವ ಕಾರಣ ನಮ್ಮ ತಂಡದವರ ಫೋನೆಲ್ಲಾ ಕಟ್ಟಾಗಿ ನನ್ನದೊಂದು ಸಂಪರ್ಕ ಸಾಧಿಸಿದ್ದು ಎಲ್ಲರಿಗೂ ಕ್ಷಣಹೊತ್ತು ಖುಷಿ ತರಿಸಿದರೂ ಅದು ಮುಂದುವರಿಯಲಿಲ್ಲ. ನನ್ನ ಮೊಬೈಲಿನ ಸಂಪರ್ಕವೂ ನಿಂತುಹೋಯಿತು.

ನಾವು ವಿಮಾನನಿಲ್ದಾಣದಿಂದ ಹೊರಬರುವಷ್ಟರಲ್ಲಿಯೇ ನಮಗಾಗಿ ಕಾದಿರಿಸಿದ್ದ ಏರ್‌ಬಸ್ ಬಂದಿತು. ವಿಮಾನ ನಿಲ್ದಾಣಕ್ಕೆ ಸಮೀಪದಲ್ಲಿಯೇ ಇರುವ ಹೋಟೆಲ್ ಮಹಾರಾಜ ಪ್ಯಾಲೇಸ್ ನಲ್ಲಿ ನಮಗೆ ವಸತಿ ವ್ಯವಸ್ಥೆ ಮಾಡಲಾಗಿತ್ತು. ಮಹಾರಾಜ ಪ್ಯಾಲೇಸ್ ಎಂದು ಕರೆದುಕೊಂಡರೂ ಅರಮನೆಯ ಯಾವುದೇ ಲಕ್ಷಣಗಳಿಲ್ಲದ ಆದರೂ ವಿಲಾಸಿ ಸೌಕರ್ಯಕ್ಕೇನೂ ಕಡಿಮೆಯಿರದ ಹೋಟೆಲ್ ಅದು. ದಿನಪೂರ್ತಿ ಬಿಸಿನೀರು, ಹವಾನಿಯಂತ್ರಿತ ಕೊಠಡಿ, ಬೆಚ್ಚನೆಯ ಎರಡೆರಡು ರಗ್ಗು, ಟವೆಲ್, ಸ್ವಚ್ಛತೆ ಕಾಯ್ದುಕೊಂಡ ಟಾಯ್ಲೆಟ್, ಬಾತ್‌ರೂಮ್, ಫೋನ್, ಟಿವಿ... ತುಂಬಾ ಸೊಗಸು, ಅಷ್ಟೇ ಮೋಹಕ. ಕಠ್ಮಂಡುವಿನ ಪ್ರವೇಶದ್ವಾರದಂತಿರುವ ಮಹಾರಾಜ ಪ್ಯಾಲೇಸ್ ಪಶುಪತಿನಾಥ ದೇವಾಲಯಕ್ಕೆ ಪೂರ್ವಾಭಿಮುಖವಾಗಿ 5 ನಿಮಿಷಗಳ ನಡಿಗೆಯ ಹಾದಿ. ಬಲಬದಿಗೆ ಹನುಮ ಮಂದಿರ. ಇಲ್ಲಿಂದ ಉತ್ತರಕ್ಕೆ ನೇಪಾಳ ವಿಶ್ವವಿದ್ಯಾಲಯ, ಆಸ್ಪತ್ರೆ, ಮ್ಯೂಸಿಯಂ, ಅರಮನೆ, ಪಾಸ್‌ಪೋರ್ಟ್ ಆಫೀಸ್, ಎಡಬದಿಗೆ ಪಾರ್ಲಿಮೆಂಟ್ ಹೌಸ್ ಎಲ್ಲವೂ ಕಾಲುನಡಿಗೆಯ ಹಾದಿ. ಇಂಥ ಮಹಾರಾಜ ಪ್ಯಾಲೇಸ್‌ನಲ್ಲಿ ನಮ್ಮ ವಸತಿ. ಐದು ರಾತ್ರಿಗಳನ್ನು ಇಲ್ಲಿಯೇ ಕಳೆದೆವು. ಈ ಪ್ಯಾಲೇಸ್‌ಗೆ ಹೊಂದಿಕೊಂಡಂತೆ ನೆಲಹಾಸಿನಲ್ಲಿ ವಿಶಾಲ ಸಭಾಮಂಟಪ, ಅದಕ್ಕೆ ಹೊಂದಿಕೊಂಡಂತೆ ಊಟದ ಮನೆ, ಅಡಿಗೆ ಕೋಣೆ ಇವೆ. ಹೊರಭಾಗ ಪೂರ್ಣ ಶಾಪಿಂಗ್ ಕಾಂಪ್ಲೆಕ್ಸ್ ಆಗಿ ಮಾರ್ಪಟ್ಟಿದೆ. ಯಾವಾಗಲೂ busy, ಅಷ್ಟೇ neat ಆಗಿದೆ.

ನಮ್ಮ ಪ್ರವಾಸಿ ಏಜೆನ್ಸಿಯವರು ಶ್ರೀ ಮುಖೇಶ್ ಎಂಬ ಕುಂದಾಪುರದವರು ಅಡಿಗೆಗೆ ಶಿಪ್ಪೇಶ್ ಹಿರಿಯೂರು, ನಾರಾಯಣ್ ಬೆಂಗಳೂರು ಇಬ್ಬರು ಸಹಾಯಕರನ್ನು ಒದಗಿಸಿದ್ದರು. ನಾವು ರಾತ್ರಿ ತಂಗುವ ಕಡೆಗೆಲ್ಲಾ ಇವರದೂ ಯಾತ್ರೆ. ಅಲ್ಲೆಲ್ಲಾ ಬಿಸಿಬಿಸಿ ರುಚಿಕಟ್ಟಾದ ಕರಾವಳಿ ಅಡಿಗೆ ಸಿದ್ಧತೆ. ಈ ವ್ಯವಸ್ಥೆ ನಮ್ಮ ಅರ್ಧ ತಿಂಗಳ

ಪ್ರವಾಸದುದದ್ದಕ್ಕೂ ಯಾರೊಬ್ಬರ ಆರೋಗ್ಯದಲ್ಲಿ ಯಾವುದೇ ಏರುಪೇರು ಕಾಣಲಿಲ್ಲ, ಚೆನ್ನಾಗಿತ್ತು.

ನಮ್ಮ ಬಸ್‌ನಿಂದ ಲಗೇಜನ್ನು ಇಳಿಸುವ, ನಮ್ಮ ನಮ್ಮ ರೂಮ್‌ಗಳಿಗೆ ತಲುಪಿಸುವ ಜವಾಬ್ದಾರಿಯನ್ನು ಲಾಡ್ಜಿನ ಹುಡುಗರೇ ನೋಡಿಕೊಂಡರು. ನಮ್ಮ ಪ್ರವಾಸಿ ತಂಡದ ನಾಯಕ ಪ್ರೊ॥ ಜಯಪ್ರಕಾಶ್ ಅರ್ಧ ಗಂಟೆಯ ಒಳಗೆ ನಮಗೆಲ್ಲಾ ರೂಮ್ ವಿತರಿಸುವ, ಲಗೇಜ್ ತಲುಪಿಸುವ ವ್ಯವಸ್ಥೆ ಮಾಡಿದರು. ಹೋಟೆಲ್‌ನ ರಿಸೆಪ್ಷನಿಸ್ಟ್ ನಮ್ಮೊಂದಿಗೆ ಲಗುಬಗೆಯಿಂದ ವರ್ತಿಸಿ, ಇಲ್ಲಿ ಐದು ರಾತ್ರಿ ಕಳೆಯಬೇಕಾದ, ನೋಡಬೇಕಾದ ಸ್ಥಳಗಳ ವಿವರ ನೀಡಿದರು.

ಪ್ರೊ॥ ಕೆ.ಸಿ.ನಾಗರಾಜ್ ಇವರು ನಿವೃತ್ತ ಕನ್ನಡ ಪ್ರಾಧ್ಯಾಪಕರು. ತುಮಕೂರಿನ ಶ್ರೀ ಸಿದ್ಧಗಂಗಾ ಕಾಲೇಜಿನಲ್ಲಿ ಸುದೀರ್ಘ ಕಾರ್ಯನಿರ್ವಹಣೆಯ ತರುವಾಯ ಸದ್ಯ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇವರು ನನ್ನ ಪ್ರವಾಸದ ಪೂರ್ಣ ದಿವಸಗಳ ರೂಮ್‌ಮೇಟ್. ಮುಂದೆ ಇವರನ್ನು ಕೆಸಿಎನ್ ಎಂದೇ ಕರೆಯುತ್ತಾ ಹೋಗುವುದರಿಂದ ಇವರ ಕುರಿತ ಒಂದು ಸಣ್ಣ ಪರಿಚಯವಷ್ಟೇ.

ಸಿರಾದಿಂದ ನೇಪಾಳದವರೆಗಿನ ಒಂದು ಹಗಲಿನ ದೀರ್ಘ ವಿಮಾನ ಪಯಣದ ಹಾದಿಯ ಹಿನ್ನೆಲೆಯಲ್ಲಿ ಕೊಂಚ ವಿಶ್ರಾಂತಿಯ ಅಗತ್ಯವೂ ಇತ್ತು. ರೂಂ ನಂ.221 ರಲ್ಲಿ ತಂಗಿ, ಸೂಟ್‌ಕೇಸ್ ಬಿಚ್ಚಿ, ಬಟ್ಟೆ ಬದಲಿಸಿಕೊಳ್ಳುವ ವೇಳೆಗೆ ಬಿಸಿಬಿಸಿ ಕಾಫಿ ಬಂದಿತು. ರೂಮ್‌ಬಾಯ್ ಕಾಫಿ ಎಂದು ಬೆಂಗಳೂರು ಸ್ಟೈಲ್‌ನಲ್ಲೇ ಕೂಗಿದ. ಕೆಸಿಎನ್ ಬಾಗಿಲು ತೆಗೆದು ಎರಡು ಲೋಟ ಕಾಫಿ ತೆಗೆದುಕೊಂಡರು. ಕಾಫಿ ಬೆಂಗಳೂರಿನ ಸವಿಯಿತ್ತು. ದೆಹಲಿ ವಿಮಾನ ನಿಲ್ದಾಣಗಳಲ್ಲಿ ಕುಡಿದ ಕಾಫಿಗೂ, ಈ ಕಾಫಿಗೂ ತುಂಬಾನೇ ವ್ಯತ್ಯಾಸ. ಈ ಬಗೆಗಿನ ಚರ್ಚೆಯಲ್ಲಿ ಇದು ಕಾಮತ್ ಹೋಟೆಲ್‌ನವರದು, ಅವರದು ಎಲ್ಲ ಕಡೆಯೂ ಒಂದೇ ರುಚಿ ಎಂದು ಪ್ರೊ॥ ಕೆಸಿಎನ್ ಹೇಳಿದರು. ಬಿಸಿಬಿಸಿ ಸ್ನಾನ, ಟಿವಿ ರಿಮೋಟ್ ಹಿಡಿದು ಚಾನಲ್ ಬದಲಿಸುತ್ತಾ ಹೋದೆ. ಕನ್ನಡದ ಒಂದೇ ಒಂದು ಚಾನಲ್ ಇಲ್ಲ. ತಮಿಳು, ತೆಲುಗು, ಹಿಂದಿ ನೇಪಾಳಿ ಚಾನಲ್‌ಗಳು. ತೆಲುಗು ಚಾನಲ್ ಹಾಕಿಕೊಂಡು ಕೊಂಚ ಸಮಯ ನೋಡಿದೆವು.

ಒಂಬತ್ತು ಗಂಟೆ, ಬನ್ನಿ ಊಟಕ್ಕೆ ಎಂದು ಜೆಪಿ ಬಾಗಿಲು ಬಡಿದು ಕರೆದು ಕೊಠಡಿಯ ವ್ಯವಸ್ಥೆ ಹೊಂದಾಣಿಕೆ ಕುರಿತು ಪರಿಶೀಲಿಸಿದರು. ಎಲ್ಲಾ ಓಕೆ, ಚಳಿ ಏಕೆ ಎಂಬ ಏಕೈಕ



ಕಠ್ಮಂಡುವಿನ ಹೋಟೆಲ್ ಮಹಾರಾಜ ಪ್ಯಾಲೇಸ್

ಸಮಸ್ಯೆ ಕುರಿತು ಸಲ್ಲಾಪ ನಡೆಸಿ ಕೆಳಗಿನ ಭೋಜನಾಲಯದಲ್ಲಿನ ಊಟದ ಮನೆಗೆ ಬಂದರೆ ನಮ್ಮ ತಂಡದವರ ತರಾವರಿ ಅವತಾರ ನೋಡಬೇಕಿತ್ತು. ಕಾಲಿಗೆ ಸಾಕ್ಸ್, ಕೈಗೆ ಗ್ಲೌಸ್, ಸ್ವೆಟರ್, ಟೋಪಿ, ಮೇಲೊಂದು ಶಾಲು - ಆ ಕ್ಷಣ ನಮ್ಮವರನ್ನೇ ಗುರುತಿಸುವುದು ಕಷ್ಟಕರವಾಗಿತ್ತು.

ಊಟಕ್ಕೆ ಮೊದಲು ಬಿಸಿಬಿಸಿ ನೀರು, ಚಪಾತಿ, ಅನ್ನ-ಹುಳಿ, ತಿಳಿಸಾರು, ಹಪ್ಪಳ, ಉಪ್ಪಿನಕಾಯಿ, ಕೆನೆಗಟ್ಟಿದ ಕೊರೆವ ಮೊಸರು. ಇದು ದೂರದ ಹಾದಿಯ ಪಯಣದ ಆಯಾಸ, ಹಸಿವನ್ನು ಏಕಕಾಲದಲ್ಲೇ ದೂರವಾಗಿಸಿದವು. ಊಟ ಮುಗಿಸಿ ಸ್ವಲ್ಪ ದೂರ ತಿರುಗಾಡುವುದು ನನ್ನ ಅಭ್ಯಾಸ. ಅಂತೆಯೇ ನೇಪಾಳದ ಮೊದಲ ರಾತ್ರಿಯ ಊಟದ ತರುವಾಯ ನಾವು ಉಳಿದುಕೊಂಡಿದ್ದ ಮಹಾರಾಜ ಪ್ಯಾಲೇಸ್‌ನಿಂದ ಅಳುಕುತ್ತಲೇ ಹೊರಗೆ ಕಾಲಿಟ್ಟೆ. ಹೊಸ ಜಾಗ, ತಪ್ಪಿಸಿಕೊಂಡೇನೆಂಬ ಭಯ. ಆತಂಕ, ಕುತೂಹಲದ ನಡುವೆ ಕೆಳ ರಸ್ತೆಯಲ್ಲಿಯೇ ಸ್ವಲ್ಪ ದೂರ ನಡೆದೆ. ಬರುತ್ತಿದ್ದ ಪ್ರವಾಸಿಗರು, ವಾಹನಗಳು, ಅವರನ್ನು ಮುತ್ತಿಕೊಂಡು ಲಾಡ್ಜ್‌ಗೆ ಆಹ್ವಾನಿಸುವ, ವಾಹನ ಏರ್ಪಾಡಿನ ಇಲ್ಲವೇ ಗೈಡ್‌ಗಳ ಪರಿಪರಿ ಕಿರಿಕಿರಿ ಇವುಗಳ ನಡುವೆ ತೆರೆದ ಬಟ್ಟೆ ಅಂಗಡಿ, ವೈನ್‌ಶಾಪ್, ಹೋಟೆಲ್ ಹಗಲಿಗಿಂತಲೂ ಜೋರಾಗಿಯೇ ಇತ್ತು. ವ್ಯತ್ಯಾಸ ಸೂರ್ಯನಿಲ್ಲದ ರಾತ್ರಿ. ಚಂದ್ರ ಮತ್ತು ವಿದ್ಯುತ್ ಆ ಕೊರತೆಯನ್ನು ತುಂಬಿತ್ತು. ಕತ್ತಲೆ, ಅಪರೂಪದ ಸಂಜೆ, ಅಪರಿಚಿತ ಸ್ಥಳ, ಆತಂಕ-ಆಯಾಸಗಳ ನಡುವೆ ನಮ್ಮ ರೂಮಿಗೆ ಹಿಂತಿರುಗಿದೆ. ನಮ್ಮ ಕೆಸಿಎನ್ ಸಿಗರೇಟು ಸೇದುತ್ತ ತೆಲುಗು ಸಿನಿಮಾ ನೋಡುತ್ತಿದ್ದರು. ಚಳಿ ವಿಪರೀತವಿದೆ ಎಂದು ಎರಡು ರಗ್ಗುಗಳ ಹೊದಿಕೆಯನ್ನು ಸರಿಪಡಿಸಿಕೊಳ್ಳುತ್ತಲೇ ಕಾಲಿಗೆ ಸಾಕ್ಸ್ ಹಾಕಿಕೊಂಡು ಮಲಗಿ ಎಂದು ಸಲಹೆ ನೀಡಿದರು.

ಮೆತ್ತನೆಯ ಹಾಸಿಗೆ, ಅದಕ್ಕೆ ಅಂಟಿಸಿದಂತೆ ಮಡಿಸಿ ಹಾಸಿಗೆಗೆ ಸಿಕ್ಕಿಸಿದ್ದ ರಗ್ಗಿನ ಒಳಗೆ ಎರಡೂ ಕಾಲು ತೂರಿಸಿ, ಕವರ್ ಮಾಡಿಕೊಂಡಂತೆ ಮಲಗಿದೆ. ದೀಪ ಹಾಗೆಯೇ ಉರಿಯುತ್ತಿತ್ತು. ಹೊರಗಡೆ ವಾಹನ, ಜನಗಳ ಓಡಾಟದ ಸದ್ದು ನಿದ್ದೆ ಬರುವಷ್ಟು ಕಾಲ ಕೇಳಿಸುತ್ತಲೇ ಇತ್ತು.

ಪ್ರಾತಃಕಾಲ ಆರು ಗಂಟೆಗೆ ಕಾಫಿ ಎಂದು ಬಾಗಿಲು ಬಡಿದರು. ನಿತ್ಯ ಐದು ಗಂಟೆಗೆ ಏಳುತ್ತಿದ್ದ ನನಗೆ ಆ ದಿನ ಬೆಳಗು ಬೆಳಗಾಗಿ ಕಾಣಲಿಲ್ಲ. 'ಕಾಫಿ ಕುಡಿಯಿರಿ, ಬೇಗ ರೆಡಿಯಾಗಿ. ಪಶುಪತಿ ದೇವಸ್ಥಾನಕ್ಕೆ ಹೋಗಬೇಕು' ಎಂದು ಕೆಸಿಎನ್ ಹಿಂದಿನ ರಾತ್ರಿ ಜೆಪಿ ಅವರು ನೀಡಿದ್ದ ಸೂಚನೆಯನ್ನು ನೆನಪಿಸಿದರು. ಕಷ್ಟಪಡುತ್ತಲೇ ಎದ್ದು ಕಾಫಿ ಕುಡಿದು ಬೇಗ ಬೇಗ ಸಿದ್ಧವಾದೆವು.

೩

# ಪಶುಪತಿಯ ಧಾಮ

ಮುಂಜಾನೆ 7.30 ಕ್ಕೆ ಉಪಹಾರ ಮುಗಿಸಿದೆವು. ಪ್ರೊ|| ಜಯಪ್ರಕಾಶ್ 'ಬನ್ನಿ ಬನ್ನಿ' ಎಂದು ದಕ್ಷಿಣಾಭಿಮುಖವಾಗಿ ಬಿರಬಿರನೆ ಹೆಜ್ಜೆ ಹಾಕಿದರು. ನಾವೂ ಅವರನ್ನು ಅನುಸರಿಸಿದೆವು. ನೇಪಾಳದ ಪ್ರಧಾನ ರಸ್ತೆಯನ್ನು ದಾಟಿ, ಪೂರ್ವಕ್ಕೆ 100 ಮೀ. ನಡಿಗೆ. ಅಲ್ಲಿಯೇ ಹನುಮಾನ್ ಮಂದಿರ. ಹನುಮಾನ್ ಮಂದಿರ-ಪಶುಪತಿ ನಾಥ ದೇವಾಲಯಗಳನ್ನು ಭಾಗಮತಿ ನದಿ ಬೇರ್ಪಡಿಸಿದೆ. ಪೂರ್ವದಿಂದ ಪಶ್ಚಿಮದ ಕಡೆಗೆ ಜಿನುಗುತ್ತಾ ಸಣ್ಣಗೆ ಹರಿಯುವ ಭಾಗಮತಿ ಮತ್ತು ವಿಷ್ಣುಮತಿ ನದಿಗಳ ಸಂಗಮವೂ ಆಗಿದೆ. ನಗರದ ಒಳಭಾಗದಲ್ಲೇ ದೇವಸ್ಥಾನಗಳ ಸಂಕೀರ್ಣ, ವ್ಯಾಪಾರಿ ಸ್ಥಳವಾದುದರಿಂದ ಭಾಗಮತಿ ತುಂಬಾನೇ ಕೊಳಕಾಗಿದೆ.  ಸೂರ್ಯ ಘಾಟ್, ಗೌರಿ ಘಾಟ್ ಹೀಗೆ ವರ್ಗೀಕರಣ ಮಾಡಿಕೊಂಡಿರುವ ಭಾಗಮತಿ ನದಿಯ ಭಾಗಗಳಲ್ಲಿ ಹೆಣ ಸುಡುವುದು ಸಾಮಾನ್ಯ ಕ್ರಿಯೆ. ಹನುಮ ಮಂದಿರ, ಶ್ರೀರಾಮರ ದೇವಾಲಯ, ನವಗ್ರಹ ಮಂದಿರ, ಪುಟ್ಟಪುಟ್ಟ ಶಿವಲಿಂಗಗಳ ಮಂದಿರ, ಆ ಮಂದಿರದ ಹೊರಗಡೆ ನೂರರಷ್ಟು ಜನ ಕುಳಿತಿದ್ದರು. ಜನಗಳೆಲ್ಲರೂ ಕೈಯಲ್ಲಿ ಅಕ್ಕಿಯ ಕಾಳುಗಳನ್ನು ಹಿಡಿದಿದ್ದರು. ಮಧ್ಯೆ ಕುರ್ಚಿಯ ಮೇಲೆ ಒಬ್ಬ ದಢೂತಿ ವ್ಯಕ್ತಿ ಕುಳಿತಿದ್ದರು. ಅವರು ಅರ್ಧ ಬೋಳಿಸಿದ ತಲೆ ಹಿಂದಕ್ಕೆ ಬಾಚಿ ಸಣ್ಣ ಗಂಟು ಹಾಕಿ ಕಟ್ಟಿದ ತಲೆಕೂದಲ ಗಂಟು ಹಾಕಿದ್ದರು. ಆ ಮಾಸದಲ್ಲಿ ದಿವಂಗತರಾದವರಿಗೆ ಪಿಂಡದಾನ, ಅರ್ಘ್ಯ ಕೊಡುವ ಸಂಪ್ರದಾಯವಿದೆ. ಇದು ಪ್ರತಿನಿತ್ಯ ಪ್ರಾತಃಕಾಲ ಒಂಬತ್ತು ಗಂಟೆಯ ತನಕ ಹೀಗೆಯೇ ನಡೆಯುತ್ತಿರುತ್ತದೆ ಎಂದು ಗೈಡ್ ಪಾಂಡೆ ವಿವರಿಸಿದರು.

ನೇಪಾಳದ ಒಂದು ಮುಖ್ಯ ಸಂಪ್ರದಾಯ ಪಿಂಡಪ್ರಧಾನ ಹಾಗೂ ಹಿರಿಯರಿಗೆ ಅರ್ಘ್ಯ ಕೊಡುವುದು. ಇದು ನದಿಯ ದಡ, ದೇವಸ್ಥಾನದ ಬಳಿ, ಅಂಗಳದ ಬದಿ ಎಲ್ಲೆಡೆ ಸಾಮಾನ್ಯವಾಗಿ ಕಂಡುಬರುವ ದೃಶ್ಯವಾಗಿದೆ. ಜೊತೆಗೆ ಹಿರಿಯರ ಹೆಸರಲ್ಲಿ




ಪಶುಪತಿನಾಥನ ಆಲಯ

ಹೋಮ, ಹವನಗಳು ನಡೆಯುತ್ತಿರುತ್ತವೆ.

ಹನುಮ ಮಂದಿರ ಸೂರ್ಯ ಘಾಟ್ ದಾಟಿ ಮುಂದೆ ಬಂದರೆ ಭಾಗಮತಿ ನದಿ, ಇದರ ಎಡಬದಿಗೆ ನದಿಯೊಳಗೆ ಹೆಣಗಳನ್ನು ಸುಡುವ ಗೂಡಿನಾಕೃತಿಯ ಕುರ್ಚುಗಳನ್ನು ಕಟ್ಟಿದ್ದಾರೆ. ಈ ತರಹದ ಹತ್ತಾರು ಹೆಣ ಸುಡುವ ಸ್ಥಳಗಳು ಭಾಗಮತಿ ನದಿಯ ಉದ್ದಕ್ಕೂ ಕಾಣಬಹುದು. ಇದರ ಬಲಬದಿಗೆ ಹೊಂದಿಕೊಂಡಂತೆ ಜಗತ್ಪ್ರಸಿದ್ಧ ಪಶುಪತಿನಾಥ ದೇವಾಲಯ ಸಂಕೀರ್ಣವಿದೆ.

ಭಾಗಮತಿ ನೀರಿಲ್ಲದ ಕೊಳಕು ಚರಂಡಿಯಂತೆ ನನಗೆ ಕಾಣಿಸಿತು. ಇದರ ದಡದಲ್ಲಿ ಹೆಣ ಸುಡುತ್ತಿರುವ, ಚಿತೆಯೇರಲು ಬಿಳಿ ಬಟ್ಟೆ ಹೊದ್ದು ಕಾಯುತ್ತಿರುವ ಹೆಣಗಳ ಕ್ಯೂ, ಅರ್ಧ ಸುಟ್ಟು ಹೆಣವನ್ನು ಉರಿಯುತ್ತಿರುವ ಕಟ್ಟಿಗೆ ಸಮೇತ ನದಿಗೆ ತಳ್ಳಿ ಇನ್ನೊಂದು ಶವ ಸುಡಲು ಕಟ್ಟಿಗೆ ಸಿದ್ಧಮಾಡುವ ದೃಶ್ಯ ಕ್ರೂರವಾಗಿತ್ತು. ಮೈತುಂಬಾ ವಿಭೂತಿ ಬಳಿದುಕೊಂಡು, ತಲೆತುಂಬಾ ತಿರಿಜಟೆಯ ಅರೆಬೆತ್ತಲೆ ಅಘೋರಿಗಳ ನಿರ್ಲಿಪ್ತ ನೋಟ, ಕುಳಿತ ಭಂಗಿ ಭಯಾನಕವಾಗಿತ್ತು. ಇವರು ಭಾಗಮತಿ ಮತ್ತು ಪಶುಪತಿನಾಥ ದೇವಸ್ಥಾನದ ನಡುವೆ ಕುಳಿತೇ ಇರುತ್ತಾರೆ. ಹೆಣವನ್ನು ತಿಂದು ಬದುಕುವ ಈ ಅಘೋರಿಗಳ ಬಗೆಗೆ ನಮ್ಮ ಗೈಡ್ ತರಾವರಿ ಕಥೆ ಹೇಳುತ್ತಾ ಹೋದ.



**ಪಶುಪತಿನಾಥ ದೇವಾಲಯದ ಹಿಂಭಾಗದ ಸ್ಮಶಾನ**

ಪಶುಪತಿನಾಥ ದೇವಾಲಯ ವಿಶಾಲವಾಗಿದೆ. ಪ್ರಾಂಗಣದ ನಡುಭಾಗದಲ್ಲಿ ಪ್ರಧಾನ ದೇವಾಲಯವಿದೆ. ಪಗೋಡ ಶೈಲಿಯಲ್ಲಿ ನಿರ್ಮಿಸಲ್ಪಟ್ಟಿರುವ ಇದು ಎರಡು ಮಹಲುಗಳನ್ನು ಹೊಂದಿದೆ. ಪಶುಪತಿ ಎಂದರೆ ಶಿವ. ಈ ಶಿವಮಂದಿರ ಜಗತ್ತಿನಲ್ಲೇ ಅತ್ಯಂತ ಶ್ರೇಷ್ಠವಾದ ಪುಣ್ಯಕ್ಷೇತ್ರ ಎಂಬ ಭಾವನೆ ಕಠ್ಮಂಡುವಿನಲ್ಲಿದೆ. ಈ ಮಂದಿರಕ್ಕೆ ನಾಲ್ಕು ದಿಕ್ಕಿನಲ್ಲಿ ನಾಲ್ಕು ದ್ವಾರಗಳಿವೆ. ಇವುಗಳ ದ್ವಾರಬಾಗಿಲಿಗೆ ಬೆಳ್ಳಿ, ತಾಮ್ರದ ತಗಡುಗಳನ್ನು ಚಿತ್ರ ಬಿಡಿಸಿದ ವಿನ್ಯಾಸದಲ್ಲಿ ಅಂಟಿಸಲಾಗಿದೆ. ಪಶುಪತಿನಾಥನ ದರ್ಶನ ಮಾಡುವ ಭಕ್ತರು ಇಲ್ಲಿನ ಪ್ರಮುಖ ದ್ವಾರವಾದ ಪಶ್ಚಿಮದ ಕಡೆಯಿಂದ ಪ್ರವೇಶಿಸುತ್ತಾರೆ. ಇದು ಬಜಾರಕ್ಕೆ ಹೊಂದಿಕೊಂಡಿದೆ.

ಪಶುಪತಿನಾಥ ದೇವಾಲಯದ ಪಶ್ಚಿಮ ಭಾಗಕ್ಕೆ ಬೃಹತ್ ಪ್ರಮಾಣದ ನಂದಿಯ ವಿಗ್ರಹ ಆಕರ್ಷಕವಾಗಿದೆ. ಇದನ್ನು ಹಾದು ಮುಂದೆ ಬಂದರೆ ಬೃಹತ್ತಾದ ದೇವಾಲಯ. ದೇವಾಲಯ ಎರಡು ಮಾಳಿಗೆಯ ಚೌಕಾಕಾರದಲ್ಲಿದೆ. ಪಗೋಡ ಶೈಲಿಯಲ್ಲಿ ನಿರ್ಮಿತವಾಗಿರುವ ಪಶುಪತಿ ಮಂದಿರವನ್ನು ಕ್ರಿ.ಶ.1775-1777 ರಲ್ಲಿ ನೇಪಾಳವನ್ನು ಆಳಿದ ಶಾಹರಾಜ ಪ್ರತಾಪ ಸಿಂಗ್ ಶಾಹ ನಿರ್ಮಿಸಿದನೆಂದು ಹೇಳಲಾಗುತ್ತಿದೆ. ನೇಪಾಳದ ಪ್ರತಿಯೊಬ್ಬ ಪ್ರಧಾನಿಯೂ ಈ ದೇವಾಲಯ ದ್ವಾರಗಳಿಗೆ ಚಿನ್ನದ ತಗಡು, ಅಲಂಕಾರ ವಿನ್ಯಾಸ ಮೊದಲಾದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ನೇಪಾಳದಲ್ಲಿಯೇ ಹೆಚ್ಚು ವಿಶಾಲವೂ

ಹೆಚ್ಚು ಶಿವಲಿಂಗಗಳು, ನಂದಿ ವಿಗ್ರಹಗಳು, ಲಿಚ್ಛವಿ ರಾಜರುಗಳ ಕಾಲದ ವೈವಿಧ್ಯ ಶಿಲ್ಪಗಳ ಕೆತ್ತನೆಯ ಕೆಲಸಗಳನ್ನು ಇಲ್ಲಿ ಕಾಣಬಹುದು. ನೇಪಾಳದಲ್ಲಿ ಪಶುಪತಿನಾಥ ಹೆಚ್ಚು ಜನಪ್ರಿಯ ದೈವ. ನೇಪಾಳಿಗರ ಆಸೆ, ಭಾಷೆ, ಆಣೆ-ಪ್ರಮಾಣಗಳೆಲ್ಲವೂ ಭಗವಾನ್ ಪಶುಪತಿನಾಥನ ಹೆಸರಿನಲ್ಲೇ ನಡೆಯುತ್ತವೆ. ಪಶುಪತಿನಾಥ ದೇವಾಲಯಗಳ ಸಂಕೀರ್ಣದ ಹಲವು ಮಾಡುಗಳ ನಡುವೆ ನೆಲೆಸಿದ್ದಾನೆ. ನಂದಿಮಂಟಪ ದಾಟಿ ಒಳಗೆ ಕಾಲಿರಿಸಿದರೆ ವಾಸುಕಿ, ಲಾಲ್ ಗಣೇಶ್, ಮೃಗೇಶ್ವರ, ವಿರೂಪಾಕ್ಷ, ಸರಸ್ವತಿ, ಸಂತಾನೇಶ್ವರ, ಮಹಾದೇವ, ಶೀತಲಾಮಾತಾ ಈ ದೇವರುಗಳನ್ನು ಕಾಣಬಹುದು. ಮುಂದೆ ಪೂರ್ವದ ಕಡೆ ಪಶುಪತಿನಾಥನ ಗರ್ಭಗುಡಿ ಬಾಗಿಲುಗಳಿಗೆ ಚಿನ್ನದ-ಬೆಳ್ಳಿಯ ಲೋಹದ ತಗಡುಗಳನ್ನು ಹೊದಿಸಿದ್ದು ಅವುಗಳ ಮೇಲೆ ಬಿಡಿಸಿರುವ ಹೂ ಬಳ್ಳಿಯ ವಿನ್ಯಾಸ ಆಕರ್ಷಕವಾಗಿದೆ. ಪಶುಪತಿನಾಥನ ನೆಲೆ ಪುರಾತನ ಕಾಲದ ಚೌಕಾಕೃತಿಯ ನಾಲ್ಕು ಬಾಗಿಲುಗಳುಳ್ಳ ಪುಟ್ಟ ಮಂಟಪ. ಇದರ ಮಧ್ಯದಲ್ಲಿ ಐದು ಅಡಿ ಎತ್ತರದ ಕಪ್ಪುಶಿಲೆ. ಇದನ್ನು ಲಿಂಗಾಕೃತಿಯಲ್ಲಿ ರೂಪಿಸಲಾಗಿದೆ. ಇದೇ ಕಲ್ಲಿನಲ್ಲಿ ನಾಲ್ಕು ಮುಖ ಹಾಗೂ ಲಿಂಗದ ಮೇಲ್ಭಾಗ ಹೀಗೆ ಐದು ಶಿವನ ವಿವಿಧ ಆಕೃತಿಗಳನ್ನು ಕೆತ್ತಲಾಗಿದೆ. ಇವುಗಳಿಗೆ ಪೂರ್ವಮುಖದ ಭಾಗವನ್ನು ತತ್ಪುರುಷ ಶಿವಲಿಂಗ, ಪಶ್ಚಿಮದ ಭಾಗವನ್ನು ಸದ್ಯೋಜಾತ ಶಿವಲಿಂಗ, ಉತ್ತರದ ಮುಖಭಾವಕ್ಕೆ ಅರ್ಧನಾರೀಶ್ವರ, ದಕ್ಷಿಣದ ಕಡೆಯ ಮುಖಭಾವಕ್ಕೆ ಅಘೋರಶಿವಲಿಂಗ ಎಂದೂ ಇದೇ ಶಿಲೆಯ ತಲೆಯ ಭಾಗವನ್ನೂ ಈಶಾನ್ಯ ಮುಖಲಿಂಗ ಎಂದು ಕರೆಯುತ್ತಾರೆ. ಇದಕ್ಕೆ 'ನಿರಾಕಾರ ಶಿವಲಿಂಗ' ಎಂತಲೂ ಕರೆಯುತ್ತಾರೆ. ಈ ಐದು ಮುಖಭಾವದ ಲಿಂಗರೂಪಿ ಶಿಲೆಯ ಒಂದೊಂದು ರೂಪದಲ್ಲೂ ಬಲಗೈಲಿ ರುದ್ರಾಕ್ಷಿಸರ, ಎಡಗೈಲಿ ಕಮಂಡಲ ಹಿಡಿದಿರುವ ಶಿವರೂಪದ ಶಿಲ್ಪವಿದೆ. ಈ ಐದು ರೂಪಗಳ ಐದೂ ಲಿಂಗಗಳಿಗೆ ಮುಖಭಾಗಕ್ಕೆ ಬಂಗಾರದ ಹೊದಿಕೆ, ತಲೆಯ ಭಾಗಕ್ಕೆ ಬೆಳ್ಳಿಯ ಕಿರೀಟ, ಕಣ್ಣಿಗೆ ಪ್ರತ್ಯೇಕವಾಗಿ ಚಿನ್ನದ ಕಣ್ಣುಗಳನ್ನು ಜೋಡಿಸಿ ಅಲಂಕರಿಸಿದ್ದಾರೆ.

ಪಶುಪತಿನಾಥನ ಅರ್ಚಕರು ಕರ್ನಾಟಕ ಮೂಲದವರು. ಇಲ್ಲಿನ ಶೈವ ಮಠದ ಗುರುಗಳಂತೆಯೇ ವೇಷಭೂಷಣ. ಇವರಿಗೆ ಸಹಾಯಕರಾಗಿ ನೇಪಾಳದ 'ಭಂಡಾರಿ' ಜನರು ಗರ್ಭಗುಡಿಯ ಹೊರಗೆ ನಿಂತು ಪೂಜಾ ಸಾಮಗ್ರಿ ಒದಗಿಸುವಲ್ಲಿ ನೆರವಾಗುತ್ತಾರೆ.

ನಾವು ಬೆಳಗಿನ 9 ಗಂಟೆಯಿಂದ 1 ಗಂಟೆಯವರೆಗೆ ದೇವಾಲಯದ ಪ್ರಾಂಗಣದಲ್ಲಿಯೇ ಇದ್ದೆವು. ನಾವು ಹೋದ ಸಂದರ್ಭ ಅಷ್ಟೇನೂ busy ಅನ್ನಿಸಲಿಲ್ಲ. ಭಕ್ತರು ಸಹಜವಾಗಿಯೇ

ಬರುವುದು, ಪೂಜೆ ಸಲ್ಲಿಸಿ ಹೊರಡುವುದು ಮಾಡುತ್ತಿದ್ದರು. ನಮ್ಮ ಶೈವಮಠಗಳ ಸ್ವಾಮೀಜಿಗಳ ತರಹದಲ್ಲಿ ಕಾವಿ ಧರಿಸಿದ್ದ ನಾಲ್ಕು ಜನ ಅರ್ಚಕರು ಮಂತ್ರಗಳನ್ನು ಪಠಿಸುತ್ತಾ ಪೂಜೆ ನೆರವೇರಿಸುತ್ತಿದ್ದರು. ನಾವು ಕನ್ನಡದಲ್ಲಿಯೇ ಅವರ ಸಮೀಪದಲ್ಲಿ ನಿಂತು ಮಾತನಾಡಿಕೊಂಡರೂ, ಅರ್ಚಕರು ನಮ್ಮ ಕಡೆ ಕಣ್ಣೆತ್ತಿಯೂ ನೋಡಲಿಲ್ಲ. ರುದ್ರಾಭಿಷೇಕ ಮಾಡಿಸಬೇಕೆಂಬ ಅತಿ ಉತ್ಸಾಹದಲ್ಲಿದ್ದ ನಮ್ಮ ತಂಡದ ಪ್ರೊ॥ ರುದ್ರಮುನಿ ಮತ್ತು ಡಾ.ಸದಾಶಿವಯ್ಯ ಅವರಿಗೆ ಅಂದು ಸಾಧ್ಯವಾಗಲಿಲ್ಲ. ಮರುದಿವಸ ನಸುಕಿನ 5 ಗಂಟೆಗೆ ಹೋಗಿ ಅಭಿಷೇಕ ನೆರವೇರಿಸಿ ಬಂದ ಪರಿಯನ್ನು, ಚಳಿಯ ಅನುಭವದೊಂದಿಗೆ ನಂತರ ಹಂಚಿಕೊಂಡರು.

ಪಶುಪತಿನಾಥ ಮಂದಿರದ ಪಶ್ಚಿಮಭಾಗದಲ್ಲಿ ಭೈರವನ ಗುಡಿಯಿದೆ. ದೇವಾಲಯದ ಹೊರಾಂಗಣಕ್ಕೆ ಹೊಂದಿಕೊಂಡಿರುವ ಒಂದು ಪುಟ್ಟ ಮಂಟಪ. ಇಲ್ಲಿ ಬೃಹತ್ ಭೈರವನ ಮೂರ್ತಿಯನ್ನು ತಗಡಿನಲ್ಲಿ ಕಡೆದು, ಮರದ ಹಲಗೆಗೆ ಅಳವಡಿಸಿದ್ದಾರೆ. ವಿಗ್ರಹ ಭಯಾನಕವಾಗಿದ್ದು ಕರ್ನಾಟಕದ ಶಕ್ತಿದೇವತೆಗಳ 'ಸೋಮ' ಎಂಬ ಭಂಟನ ಮಾದರಿಯಲ್ಲಿದೆ. ಅದೇ ಬಾಯಿ, ಕೋರೆಹಲ್ಲು, ನಾಲಿಗೆ ಚಾಚಿದ ರೂಪ. ಇದನ್ನು ರೈತನ ತರಹದ ಗಂಡ-ಹೆಂಡತಿಯರಿಬ್ಬರೂ ನಿಂತು ಪೂಜೆ ಮಾಡುತ್ತಾರೆ. ನಿರ್ದಿಷ್ಟವಾದ ಪೂಜಾ ಪರಿಕರವೂ ಇಲ್ಲ. ಒಂದು ಪ್ಲಾಸ್ಟಿಕ್ ಚೀಲದಲ್ಲಿ ಹೂವು, ಭಸ್ಮ ಇಟ್ಟುಕೊಂಡಿದ್ದಾರೆ. ದೇವತೆಯ ವಿಗ್ರಹ ಮಾತ್ರ ಭೈರವನ ಆಕೃತಿ ಮೀರಿ ಭಯಾನಕವಾಗಿದೆ. ಈ ಮಂದಿರದ ಪಶ್ಚಿಮದ ಹೊರಾಂಗಣದಲ್ಲಿ ಯಜ್ಞಶಾಲೆಯಿದೆ. ಇದರಲ್ಲಿ ಒಂದು ಭಾಗ ಅಟ್ಟಣಿಕೆಯ



ಪಶುಪತಿನಾಥ ದೇವಾಲಯದ ಪ್ರವೇಶದ್ವಾರ

ಆಕೃತಿಯಲ್ಲಿ ನಿರ್ಮಿಸಲಾಗಿದೆ. ಅಟ್ಟದ ಮೇಲೆ ಒಬ್ಬ ಅರ್ಚಕ ಬೃಹತ್ ಕೋಶವನ್ನು ಪಠನ ಮಾಡುತ್ತಿರುತ್ತಾನೆ. ಕೆಳಗಡೆ ಎದುರುಬದುರಾಗಿ ಕುಳಿತು ಇತರೆ ಇಬ್ಬರು ಶ್ಲೋಕ ಪಠನೆ ಮಾಡುವುದು, ಎದುರಿಗೆ ಅಗ್ನಿ ಕುಂಡ, ಹವನ-ಹೋಮ ಕಾರ್ಯ ಸದಾ ನಡೆಯುತ್ತಿರುತ್ತದೆ. ಪೂರ್ವದ ಬಾಗಿಲಿನಿಂದ ಹೊರಗೆ ಬರಬಹುದು. ಇದು ಭಾಗಮತಿ ನದಿ ದಂಡೆಗೆ ಬರುತ್ತದೆ. ಇಲ್ಲಿ ಆರ್ಯಘಾಟ್ ಹೆಣ ಸುಡುವ ಪ್ರಮುಖ ಸ್ಮಶಾನ.


ಒಂದು ಕಡೆ ಸುಡುವ ಹೆಣಗಳ ಸಾಲು, ಅದರ ಹಿಂದೆ ಸುಡಲು ಸಿದ್ಧವಾಗಿ ಬಿಳಿಬಟ್ಟೆ ಹೊದ್ದು ಕಾಯುತ್ತಿರುವ ಹೆಣಗಳ ಸರದಿ ಸಾಲು, ಸಂಬಂಧಿಗಳ ಆಕ್ರಂದನ, ಅರ್ಧ ಬೆಂದ ಹೆಣಗಳ ಚಿತೆಗಳನ್ನೇ ನದಿಗೆ ತಳ್ಳಿ ಇನ್ನೊಂದು ಹೆಣ ಸುಡಲು ಅಣಿ ಮಾಡುತ್ತಿರುವ ಅಮಾನವೀಯ ಚಿತ್ರ. ಅರ್ಧ ಬೆಂದು, ಛಿದ್ರಗೊಂಡ ಹೆಣಗಳ ರುಂಡ-ಮುಂಡ, ಅಂಗಾಂಗಗಳು, ಕಟ್ಟಿಗೆ, ಶವದ ಬಟ್ಟೆ ಇವುಗಳ ಜೊತೆಗೆ ವ್ಯಾಪಾರಸ್ಥರು, ಪ್ರವಾಸಿಗರು ಬಿಸುಟ ಕಾಗದದ ಚೂರು, ಪ್ಲಾಸ್ಟಿಕ್, ಹೂವು ಈ ಎಲ್ಲವೂ ಸೇರಿ ಕೊಳೆತ ನೀರನ್ನೇ ಸಾವಿನ ಸೂತಕಕ್ಕೆ ಪರಿಹಾರ ಎಂಬಂತೆ ಬೊಗಸೆಯಲ್ಲಿ ತುಂಬಿ ಮೈಮೇಲೆ ಹಾಕಿಕೊಳ್ಳುವ ರೀತಿ ಒಂದು ಕ್ಷಣ ಮೈ ಜುಮ್ಮೆನಿಸುತ್ತದೆ. ಸಾವಿನಾಚೆಯ ಸ್ವರ್ಗದ ಭ್ರಮೆ, ಅದರ ಅನುಕರಣೆಯ ಅನಾರೋಗ್ಯಕರ ನಡಾವಳಿ, ನಾಗರೀಕತೆಯ ನಡುವೆಯೂ ನಾವೆಷ್ಟು ಕುಬ್ಜರಾಗುತ್ತಿದ್ದೇವೆ! ಇವರ ಮುಂದೆ ನಮ್ಮ ಹಳ್ಳಿಗಾಡಿನ, ಬುಡಕಟ್ಟು ಸಂಸ್ಕೃತಿಯ ಶವಸಂಸ್ಕಾರ ನಿಜಕ್ಕೂ ಚೊಕ್ಕ.

## ಪಶುಪತಿಯ ಹಿನ್ನೆಲೆ:

ಪಶುಪತಿನಾಥ ಸ್ವಯಂ ಶಿವರೂಪ. ಕಠ್ಮಂಡುವಿನಲ್ಲಿ ಪಶುಪತಿನಾಥ ನೆಲೆಗೊಂಡ ಬಗೆಗೆ ಒಂದು ಐತಿಹ್ಯವಿದೆ. ಈಗಿರುವ ಭಾಗಮತಿ ದಂಡೆಯ ಮೇಲೆ ಶಿವನ ಕೈಲಾಸ ಸ್ವರೂಪದ ಒಡ್ಡೋಲಗವಿತ್ತೆಂದೂ, ಇಲ್ಲಿ ಶಿವಗಣಗಳು ಇದ್ದರೆಂಬ ನಂಬಿಕೆ. ಇವರು ಶಿವನನ್ನು ತೀವ್ರ ಭಾವುಕ, ಉನ್ಮತ್ತ ಸ್ಥಿತಿಯಲ್ಲಿ ಪೂಜಿಸುತ್ತಾ ಒಂದು ಬಗೆಯ ಪೈಶಾಚಿಕ ವರ್ತನೆಯನ್ನು ತೋರುತ್ತಿದ್ದರು. ಈ ಬಗೆಯ ನಡಾವಳಿಯಿಂದ ಶಿವನು ಜಿಗುಪ್ಸೆಗೊಂಡು ದೈವರೂಪವನ್ನು ಬಿಟ್ಟು ಜಿಂಕೆಯ ರೂಪವನ್ನು ಧರಿಸಿದನು. ಹೀಗೆ ಶಿವನು ಜಿಂಕೆಯ ರೂಪವನ್ನು ಧರಿಸಿರುವ ಸಂಗತಿಯನ್ನು ಅರಿತ ಅದೇ ದೇವಗಣ, ಬ್ರಹ್ಮ, ವಿಷ್ಣು, ದೇವೇಂದ್ರರೊಡಗೂಡಿ ಜಿಂಕೆಯ ರೂಪದ ಶಿವನ ಬಳಿಗೆ ಬಂದರು. ಆಗ ಜಿಂಕೆಯ ರೂಪದ ಶಿವನು ಭಾಗಮತಿ ನದಿಯ ಪೂರ್ವ ದಿಕ್ಕಿನಲ್ಲಿ ಚಿಗುರು ಹುಲ್ಲನ್ನು ಮೇಯುತ್ತಿತ್ತು.

ಇದೇ ಶಿವನ ವೇಷಾಂತರ ಎಂದು ಬಗೆದ ದೇವಗಣ ಶಿವನನ್ನು ತನ್ನ ಸ್ವಸ್ಥಾನಕ್ಕೆ ಬರುವಂತೆ ಪರಿಪರಿಯಾಗಿ ಪ್ರಾರ್ಥಿಸುತ್ತಾರೆ. ಆದರೆ ಶಿವನು ತಾನು ದೇವಗಣಗಳೂ ಸೇರಿದಂತೆ ಭಕ್ತರ ಉಗ್ರಭಕ್ತಿ, ಅಂಧಾನುಕರಣೆಗಳಿಂದ ನೊಂದಿದ್ದು ತಿರುಗಿ ಶಿವರೂಪ ಧರಿಸಿ ಮೂಲಸ್ಥಾನಕ್ಕೆ ಬರುವುದಿಲ್ಲ ಎಂದು ಖಚಿತವಾಗಿ ಹೇಳುತ್ತಾನೆ. ಇದರಿಂದ ಆತಂಕಗೊಂಡ ದೇವಗಣ ಆ ಜಿಂಕೆಯ ಎರಡೂ ಕೋಡುಗಳನ್ನು ಹಿಡಿದುಕೊಂಡು ತಾವು ಶಿವರೂಪದಲ್ಲೇ ಕೈಲಾಸ ಸ್ಥಳಕ್ಕೆ ಬರಲೇಬೇಕೆಂದು ಒತ್ತಾಯಿಸುತ್ತಾರೆ. ದೇವಗಣಗಳ ಜಗ್ಗಾಟದಲ್ಲಿ ಜಿಂಕೆಯ ಕೊಂಬು ಮುರಿದು ನೆಲಕ್ಕೆ ಬೀಳುತ್ತದೆ. ಜಿಂಕೆ ಮಾಯವಾಗುತ್ತದೆ. ಆ ಕೋಡು ಮುರಿದು ಬಿದ್ದು ನೆಲ ಸೇರಿತು.

ಶಿವನನ್ನು ಸ್ವಸ್ಥಾನಕ್ಕೆ ಕರೆತರುವ ಯತ್ನ ವಿಫಲವಾದ ಬಳಿಕ ಶಿವಗಣ ಬೇಸರದಿಂದ ಹಿಂತಿರುಗಿತು. ಜಿಂಕೆ ರೂಪದ ಶಿವನ ಕೋಡು ಮುರಿದು ನೆಲ ಸೇರಿತು. ದೇವಗಣ ತಮ್ಮ ಪಾಡಿಗೆ ತಾವು ಹಿಂತಿರುಗಿ ದೈನಂದಿನ ಕಾರ್ಯಗಳಲ್ಲಿ ಮಗ್ನವಾಯಿತು. ಕಾಲಾನುಕಾಲಕ್ಕೆ ಭಾಗಮತಿ ತೀರದ ಹುಲ್ಲುಗಾವಲಿನಲ್ಲಿ ಒಂದು ಆಶ್ಚರ್ಯಕರ ಬೆಳವಣಿಗೆ ನಡೆಯುತ್ತದೆ. ಆ ಭಾಗದಲ್ಲಿ ಗೋಪಾಲಕರು ದನಗಳನ್ನು ಮೇಯಿಸಿಕೊಂಡು ಹಾಲು, ಮೊಸರಿನ ವ್ಯಾಪಾರದಲ್ಲಿ ತೊಡಗಿದ್ದರು. ಈ ಹಿಂದೆ ಜಿಂಕೆಯ ಕೊಂಬು ಮುರಿದು ಬಿದ್ದು ನೆಲ ಸೇರಿದ್ದ ಸ್ಥಳ ಮೃಗಸ್ಥಳ ಎಂದು ಹೆಸರಾಯಿತು. ಈ ಸ್ಥಳದಲ್ಲಿ ಹಸುವೊಂದು ನಿತ್ಯವೂ ತನ್ನ ಕೆಚ್ಚಲಿನಿಂದ ಹಾಲನ್ನು ಹರಿಸುತ್ತದೆ. ಮನುಷ್ಯರೂ ಇಲ್ಲದ ಪ್ರಾಣಿ ಪಕ್ಷಿಗಳೂ ಇಲ್ಲದ ಈ ಸ್ಥಳದಲ್ಲಿ ಹಸು ಹಾಲು ಕರೆಯುವುದು, ಅದೂ ತನ್ನ ನಾಲ್ಕೂ ಮೊಲೆಗಳ ತೊಟ್ಟಿನಿಂದ ಧಾರಾಕಾರವಾಗಿ, ತನ್ಮಯತೆಯಿಂದ ಹಾಲು ಸುರಿಸುತ್ತಿರುವ ದೃಶ್ಯವನ್ನು ಆ ಗೋಪಾಲಕ ತದೇಕಚಿತ್ತದಿಂದ ಗಮನಿಸುತ್ತಾನೆ. ಗಾಬರಿಯ ಜೊತೆಗೆ ಆತಂಕವೂ ಆಗುತ್ತದೆ. ಆತನು ತನ್ನ ಹಸು ಆ ಮೃಗಸ್ಥಳದ ಕಡೆ ಹೋಗದಂತೆ ತಡೆದರೂ ಆತನಿಗೆ ಅರಿವಿಲ್ಲದಂತೆ ಹಾಲು ಕರೆಯುವ ಹಸುವಿನ ವರ್ತನೆ ದೈನಂದಿನ ವರ್ತನೆಯಾಗುತ್ತದೆ. ಇದರಿಂದ ಮತ್ತಷ್ಟು ಗಾಬರಿಗೊಂಡ ಗೋಪಾಲಕ ಈ ಹಸುವಿನ ವರ್ತನೆಯನ್ನು ಜನರೊಂದಿಗೆ ಹೇಳಿಕೊಳ್ಳುತ್ತಾನೆ. ಗೋಪಾಲಕನ ಈ ಮಾತು ಕೇಳಿದ ಜನ ಕುತೂಹಲದಿಂದ ಹಸುವಿನ ವರ್ತನೆಯನ್ನು ಗಮನಿಸುತ್ತಾರೆ. ಹುಲ್ಲುಗಾವಲಿನಲ್ಲಿ ತನ್ನ ಪಾಡಿಗೆ ತಾನು ಮೇಯ್ದು ಆ ಹಸು ಮಧ್ಯಾಹ್ನದ ವೇಳೆಗೆ ತನ್ನ ಎಂದಿನ ಸ್ಥಳದಲ್ಲಿ ನೆಲಕ್ಕೆ ಹಾಲು ಸುರಿಸುವ ವರ್ತನೆಯನ್ನು ಕಣ್ಣಾರೆ ಕಾಣುತ್ತಾರೆ. ಆಗ ಇದೊಂದು ಚೋದ್ಯವೆಂದು ಹಸು ಹಾಲು ಕರೆಯುತ್ತಿರುವ ಸ್ಥಳವನ್ನು ತೋಡುತ್ತಾರೆ. ಸ್ವಲ್ಪ ನೆಲವನ್ನು



ತೋಡಿ ನೋಡಿದರೆ ಕೆಳಗೆ ಬೃಹತ್ ಶಿವಲಿಂಗವೊಂದು ಕಂಡುಬರುತ್ತದೆ. ಇದೇನೆಂದು ವಿಚಾರಿಸಲಾಗಿ ಶಿವನ ಜಿಂಕೆ ರೂಪದ ಕೋಡು ತನ್ನ ಮುರಿದುಬಿದ್ದು ಶಿವಲಿಂಗವಾಗಿ ಭೂಗರ್ಭ ಸೇರಿರುವನೆಂದು ತಿಳಿಯುತ್ತದೆ. ಮೊದಲು ಜಿಂಕೆಯ ರೂಪ, ನಂತರ ಹಸು ಇದಕ್ಕೆ ಹಾಲೂಡಿ ಬೆಳೆಸಿದ ಕಾರಣದಿಂದ ನೆಲದಲ್ಲಿ ಒಡಮೂಡಿದ ಶಿವಲಿಂಗವೇ ಪಶುಪತಿನಾಥ ಎಂದು ಕರೆದು ಪೂಜಿಸಲಾರಂಭಿಸಿದರು. ಅಂದಿನ ಭಾಗಮತಿ ತೀರದ ಈ ಹುಲ್ಲುಗಾವಲು ಇಂದಿನ ಕಠ್ಮಂಡುವಿನ ಹೃದಯಭಾಗದ ಪಶುಪತಿನಾಥನ ಕ್ಷೇತ್ರ ಎಂದೂ ಈ ಪಶುಪತಿನಾಥನ ಪಂಚಮುಖದ ಶಿವ, ಲಿಂಗಾವತಾರ ಎಂದು ಹೇಳಲಾಗುತ್ತದೆ. ದೇವಾಲಯದ ಆವರಣದಲ್ಲಿ ರುದ್ರಾಕ್ಷಿ ಅಂಗಡಿಗಳಲ್ಲಿ ಕನ್ನಡ ಮಾತನಾಡುವವರು ವಿರಳವಾಗಿ ಕಂಡುಬರುತ್ತಾರೆ. ಕನ್ನಡಿಗರನ್ನು ಮದ್ರಾಸಿಗಳೆಂದು ಭಾವಿಸಿ ಸಂಬೋಧಿಸುವುದು ಇಲ್ಲಿನ ವಾಡಿಕೆಯೂ ಆಗಿದೆ.

ಪಶುಪತಿನಾಥ ದೇವಾಲಯದ ಹೊರಾಂಗಣದಲ್ಲಿ ದನಗಳು ಗುಂಪು ಗುಂಪಾಗಿವೆ. ಅವುಗಳಿಗೆ ಆಹಾರವಾಗಿ ಭಕ್ತರು ಪುರಿ, ಗೋಧಿ, ಅಕ್ಕಿ, ಬಾಳೆಹಣ್ಣು ನೀಡುತ್ತಾರೆ. ಕಲ್ಲು ರೂಪದ ಪಶುಪತಿನಾಥ ಅತ್ತ ನಡೆದಾಡುವ, ಆಹಾರಕ್ಕಾಗಿ ಮನುಷ್ಯರೊಂದಿಗೆ ಸ್ನೇಹ ಬಯಸುವ ಜೀವಂತ ಪಶುಪಕ್ಷಿಗಳು ಇತ್ತ. ಇದು ಪಶುಪತಿನಾಥನ ಆಲಯದ ಚಿತ್ರ. ಹೊರಗೆ ಗೋವುಗಳೊಂದಿಗೆ ಹಿಂಡುಹಿಂಡಾಗಿ ಗೋಧಿ, ಅಕ್ಕಿ ಚೂರುಗಳನ್ನು ಕುಕ್ಕುತ್ತ ಗರಿಬಿಚ್ಚಿ ಕುಣಿಯುವ ರಾಶಿ ರಾಶಿ ಪಾರಿವಾಳಗಳ ನೋಟ ಬಲು ಚೆಂದ. ಪಾರಿವಾಳದಾಟ ಇನ್ನೂ ಚೆಂದ. ಸಾವು, ಸಂಸ್ಕಾರ, ಭಕ್ತಿಭಾವಗಳ ಭಾವುಕ ನೆಲೆಯ ಆಚೆಗೂ ಸೊಗಸು.

೪

# ನೇಪಾಳದ ಕಣಿವೆಗಳಲ್ಲಿ

ಈ ದಿನ ಬೆಳಗು ಬೆಳಕಾಗಿ ಕಾಣಲಿಲ್ಲ. ಕಾಫಿ ತಂದ ಹುಡುಗ ಚುರುಕಾಗಿ ಬಾಗಿಲು ಬಡಿಯುತ್ತಿದ್ದ. ನನ್ನ ಜೊತೆ ವಾಸಿ ಪ್ರೊ.ಕೆ.ಸಿ. ನಾಗರಾಜ್ ಬಾಗಿಲು ತೆರೆದು ಎರಡು ಲೋಟ ಕಾಫಿ ತೆಗೆದುಕೊಂಡರು. ನನ್ನನ್ನು ಏಳುವಂತೆ ತಿಳಿಸಿ, ಬೇಗ ಸ್ನಾನ ಮುಗಿಸಿ, 'ಈ ದಿನ ಮನಕಾಮನ ದೇವಾಲಯಕ್ಕೆ ಹೋಗುತ್ತಾರಂತೆ' ಅಂದರು. ಸುರಿಯುತ್ತಿದ್ದ ಹಿಮ, ಕೊರೆಯುತ್ತಿದ್ದ ಚಳಿ. ಎರಡು ರಗ್ಗು, ಸ್ವೆಟರ್, ಟೋಪಿ ಹಾಕಿದರೂ ಅವೆಲ್ಲವೂ ಲೆಕ್ಕಕ್ಕೆ ಇಟ್ಟುಕೊಳ್ಳದ ಹಿಮರಾಜ ಸ್ಪೀಡಾಗಿ, ಅತಿ ಸ್ಪೀಡಾಗಿ ಆಕ್ರಮಣ ಮಾಡುತ್ತಲೇ ಇದ್ದ. ಹಾಗಾಗಿಯೇ ನಾನು ಈ ಬೆಳಗು ಬೆಳಕಾಗಿ ಕಾಣಲಿಲ್ಲ ಎಂದು ಕರೆದದ್ದು. ನಿತ್ಯ ಪ್ರಾತಃಕಾಲ 5 ಗಂಟೆಗೆ ಏಳುವುದು ನನ್ನ ಬಹುದಿನಗಳ ದಿನಚರಿ. ಒಂದಿಷ್ಟು ವಾಕ್, ಸ್ನಾನ, ಬೆಳಗಿನ ಪತ್ರಿಕೆ ಓದು ಈ ಎಲ್ಲವನ್ನೂ ನಿರೀಕ್ಷಿಸಿದ್ದ ನನಗೆ ನೇಪಾಳದ ಹವೆಯಿಂದ ಒಂದೂ ಬೇಡದಾಯಿತು. ಪ್ರೊ||ಕೆ.ಸಿ.ಎನ್ ಅವರ ಒತ್ತಾಯಕ್ಕೆ ಮಣಿದು ಕಾಫಿ ಕುಡಿದೆ. ಮೊದಲು ಬೇಡ ಎಂದ ನನಗೆ ಕಾಫಿ ಒಂದು ವಿಧದ ಟಾನಿಕ್ ಆದಂತಾಯಿತು. ಕಾಫಿ ಕುಡಿದ ಮೇಲೆ ಮತ್ತೆ ಮಲಗಬೇಕೆಂಬ ಮನಸ್ಸಿದ್ದರೂ ಭಾವನೆ ಬದಲಾಯಿತು. ಈ ವೇಳೆಗೆ ಪ್ರೊ||ಕೆ.ಸಿ.ಎನ್ ಸ್ನಾನ ಮುಗಿಸಿ, ಈ ದಿನದ ಪ್ರವಾಸದ ಪುಟ್ಟ ಕಿಟ್ಟನ್ನು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ನಾನು ಆತುರಾತುರವಾಗಿ ಸ್ನಾನ ಮುಗಿಸಿದೆ. ಲಗೇಜು ಸಿದ್ಧಪಡಿಸಿಕೊಂಡು ಕಿಟಕಿಯ ಪರದೆ ಸರಿಸಿ ಗಾಜಿನ ಮೂಲಕ ಹೊರಗಡೆ ಇಣುಕಿದೆ. ಹೊರಗಿನ ವಾತಾವರಣ ಹಿಮಗಡ್ಡೆಯಲ್ಲಿ ತೇಲಿ ಹೋದಂತೆ, ಇಡೀ ರಸ್ತೆ ಬೆಳ್ಳಿ ಹಲಗೆಯಂತೆ, ಪಕ್ಕದಲ್ಲಿದ್ದ ರುದ್ರಾಕ್ಷಿ ಮರ ಬಿಳಿಯ ಬಟ್ಟೆ ಹೊದ್ದು ನಿಂತ ಭವ್ಯರೂಪದ ದಿಬ್ಬದಂತೆ, ಇಳಿಬಿದ್ದ ಕೋಟೆ ಮುಗಿಲಿನಂತೆ, ಶ್ವೇತ ಕನ್ಯೆಯಂತೆ ಹಲವು ವೈವಿಧ್ಯ ಭಾವ ಹಲವು ರೂಪಗಳಲ್ಲಿ ಕಾಣತೊಡಗಿತ್ತು. ಜನಗಳ ಮಾತು, ಸಣ್ಣ-ಪುಟ್ಟ ಹಕ್ಕಿಗಳ ಇಂಚರ ವಿರಳವಾಗಿ ಕೇಳುತ್ತಿತ್ತು.



ನೇಪಾಳದ ಕಣಿವೆಗಳು

ತಮ್ಮ ಲಗೇಜುಗಳೊಂದಿಗೆ ಮಹಾರಾಜ ಹೋಟೆಲ್‌ನ ತಳಭಾಗದಲ್ಲಿ ನಮ್ಮ ಸಹ ಪ್ರಯಾಣಿಕರು ಪ್ರೊ|| ಜಯಪ್ರಕಾಶ್ ಅವರೊಂದಿಗೆ ಉಪಹಾರ ಸೇವಿಸುತ್ತಿದ್ದರು. ಆ ದಿನ ಉಪ್ಪಿಟ್ಟು, ಕೇಸರಿಬಾತ್ ಬಿಸಿಬಿಸಿಯಾಗಿ ಹಬೆಯಾಡುತ್ತಿತ್ತು. ಉಪಹಾರ ಮುಗಿಸಿ ನಮಗಾಗಿ ಸಿದ್ಧವಾಗಿದ್ದ ವಾಹನದಲ್ಲಿ ಕುಳಿತೆವು. ನಮ್ಮ ಹದಿಮೂರು ಜನರ ತಂಡದೊಂದಿಗೆ ಕೇರಳದಿಂದ ಬಂದಿದ್ದ ಏಳು ಜನರ ಪ್ರವಾಸಿ ತಂಡದವರೂ ನಮ್ಮ ವಾಹನದಲ್ಲಿ ಕುಳಿತುಕೊಂಡರು.

ನಮ್ಮ ತಂಡದ ಗೈಡ್ ಅರ್ಜುನ್ ಪಾಂಡೆ ಪರಸ್ಪರ ಪರಿಚಯ ಮಾಡಿಕೊಟ್ಟರು. ನಮ್ಮ ವಾಹನ ಚಾಲಕ ಶರ್ಪಾ ಚಾಗ್‌ತಾನ್‌ನದು ಚಿಕ್ಕ ಆಕೃತಿ, 12-15ರ ವಯಸ್ಸಿನ ಹುಡುಗನ ಹಾಗೆ ಕಾಣುತ್ತಿದ್ದ. ನಾನು ಆತನೊಂದಿಗೆ ಮಾತನಾಡಬೇಕು. ಈ ಮೂಲಕ ಮಾಹಿತಿಗೆ ಅನುಕೂಲ ಆಗಬಹುದು ಅಂದುಕೊಂಡೆ, ಪ್ರಯತ್ನಿಸಿದೆ. ಜಪ್ಪಯ್ಯ ಅಂದರೂ ಆತ ಬಾಯಿ ಬಿಡುತ್ತಿಲ್ಲ. ಬಾಯಿ ತುಂಬಾ ಗುಟ್ಕಾ ತುಂಬಿಕೊಂಡ ಪರಿ ಒಂದಾದರೆ, ನೇಪಾಳಿ ಭಾಷೆ ಹೊರತುಪಡಿಸಿದರೆ ಬೇರೆಯ ಭಾಷೆಯೊಂದಿದೆ ಎಂಬುದೇ ಆತನಿಗೆ ತಿಳಿಯದು. ನಾವು ಮಾತನಾಡಿದರೆ ಆತನು ಕೈಸನ್ನೆ, ಬಾಯಿಸನ್ನೆಯಿಂದ ನಮ್ಮೊಂದಿಗೆ ವರ್ತಿಸುತ್ತಿದ್ದ. ಆದರೂ ತುಂಬಾ ಒಳ್ಳೆಯ ಮನುಷ್ಯ. ನಿಗದಿತ ಸಮಯ-ಸಂದರ್ಭ, ಬೇಕುಬೇಕಾದ ಕಡೆಯಲ್ಲೆಲ್ಲಾ ಬೇಸರ ಮಾಡಿಕೊಳ್ಳದೆ ಬಸ್ ನಿಲ್ಲಿಸುತ್ತಿದ್ದ. ಊಟ-ತಿಂಡಿಗಳಲ್ಲಿ ಮಕ್ಕಳ ರೀತಿ ಮೂರ್‍ನಾಲ್ಕು ತುತ್ತು. ತುಂಬಾ ಮಿತಾಹಾರಿ ಆದರೆ ಬಾಯಿ

ತುಂಬಾ ಗುಟ್ಕಾ ಸದಾ ಇರಲೇಬೇಕು. ಒಂದು ಅರ್ಥದಲ್ಲಿ ಚಾಂಗ್ ಗುಟ್ಕಾಮ್ಯಾನ್. ನಾವು ತ್ರಿಭುವನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿದ ಕ್ಷಣದಿಂದ ನೇಪಾಳದಲ್ಲಿ ಇರುವ ತನಕ ನೇಪಾಳದ ಸುತ್ತೆಲ್ಲಾ ತಿರುಗಾಡಿಸಿ, ಮತ್ತೆ ವಿಮಾನ ಹತ್ತಿಸುವತನಕ ಈತನೇ ನಮಗೆ ಸಾರಥಿ. ಸಾರಥಿ ಎಂದರೆ ಸಾರಥಿಯೇ! ಒಂದಿಷ್ಟೂ ಬೇಸರ ಪಡದ, ತಟಸ್ಥ, ನಿರ್ಲಿಪ್ತ ಭಾವದ, ಮೂಕಸಂವೇದನೆಯ ವ್ಯಕ್ತಿ. ಕರೆದಾಗ ಬರುವ, ತುಸು ಮುಂಚೆಯೇ ಬರುವ, ಅಡ್ಡ, ಬದಲು, ತಳುಕಿನ ಮಾತು, ದಾರಿತಪ್ಪಿಸುವ, ಪಲಾಯನವಾದಿ ಚಾಲಕರ ಕಿಲಾಡಿತನಕ್ಕೆ ಹೊರತಾದವನು ಈ ಮೀಸೆ ಮೂಡದ ಹುಡುಗ! ಆದರೂ ಗಿರಿ-ಕಂದರ, ಭಯಾನಕ ಕಣಿವೆ, ನೀರ ಜಲಧಾರೆ, ಝರಿ, ಕಿಕ್ಕಿರಿದ ಜನಸಂದಣಿ, ತಿರುವು, ಇಕ್ಕಟ್ಟಾದ ಸಂದಿಗಳಲ್ಲೂ ಒಂದಿಷ್ಟೂ ತೊಂದರೆಯಾಗದಂತೆ, ತೊಂದರೆ ಕೊಡದೆ ವಾಹನ ಚಲಾಯಿಸಿದ ರೀತಿ ನಿಜಕ್ಕೂ ಆತನ ದೈಹಿಕ ಸಾಮರ್ಥ್ಯವನ್ನು ಮೀರಿದ್ದು, ಗೌರವಕ್ಕೆ ಕಾರಣವೂ ಹೌದು. ನೇಪಾಳದಲ್ಲಿ ಶೆರ್ಪಾ ಅಂತ ಒಂದು ಬುಡಕಟ್ಟು ಜನಾಂಗವಿದೆ. ಇವರನ್ನು ಕುರಿತು ಮುಂದೆ ಹೇಳುತ್ತೇನೆ.

## ಕಠ್ಮಂಡುವಿನ ಆಚೆ:

ಬೆಳಗಿನ 7.00 ಗಂಟೆ, ನಮ್ಮ 21 ಜನರ ತಂಡದ ವಾಹನ ನಮ್ಮ ವಸತಿಗೃಹ ಮಹಾರಾಜ ಪ್ಯಾಲೇಸ್‌ನಿಂದ ಹೊರಟು ನೇಪಾಳದ ರಾಜಬೀದಿ ಹಾದು ನೇಪಾಳದ ಹೊರವಲಯಕ್ಕೆ ಬಂತು. ತುಸು ದೂರದಿಂದಲೇ ಆರಂಭವಾಗುವ ಗಿರಿಕಂದರ, ಹಿಮಾಲಯದ ಕಣಿವೆ, ವಾಹನ ಕುಲುಕುತ್ತಲೇ ಕಠ್ಮಂಡು ಎಂಬ ನಗರ ಕೇಂದ್ರವನ್ನು ಬಿಟ್ಟು ಕಣಿವೆಯನ್ನು ಏರ ತೊಡಗಿತು. ನಗರದ ನೆತ್ತಿಯನ್ನು ಹತ್ತಿ ಅದರಾಚೆಗಿನ ಪರ್ವತಗಳ ಅಂಚಿಗೆ ತಲುಪಿ, ಕಲ್ಲು ಪೊಟರೆ, ರಸ್ತೆಯ ತಿರುವುಗಳಲ್ಲಿ ತೆವಳತೊಡಗಿತು. ರಸ್ತೆಯ ಎಡಬದಿಗೆ ಭಾರೀ ಪರ್ವತ ಶ್ರೇಣಿ, ಬಲಬದಿಗೆ ಕಂದರ, ಅಲ್ಲಲ್ಲೇ ಪ್ರತಾಪ ಕಣಿವೆಯಿಂದ ಹಿಮದ ರಾಶಿ ಕರಗಿ ಇಳಿಯುತ್ತಿದ್ದ ಜಲಪಾತ, ಅವುಗಳ ಸಂಗಮಿಸಿದ ತಾಣದಲ್ಲಿನ ಭೋರ್ಗರೆತ, ಗಿರಿಶಿಖರಗಳಿಗೆ ಅಪ್ಪಳಿಸಿ ಹರಿಯುತ್ತಿದ್ದ ಪ್ರತಿಧ್ವನಿ. ಒಮ್ಮೊಮ್ಮೆ ಭಯಾನಕ ತಿರುವುಗಳನ್ನು ದಾಟುತ್ತಾ ನಮ್ಮ ವಾಹನ ನಿರ್ಭಿಡೆಯಿಂದ ಸಾಗುತ್ತಿತ್ತು. ಕಠ್ಮಂಡುವಿನಿಂದ ಗೂರ್ಖಾ ರಾಜ್ಯದ ಮನಕಾಮನ ಬೆಟ್ಟಕ್ಕೆ ಇರುವ ದೂರ 106 ಕಿ.ಮೀ. ಆದರೆ ಈ ಪ್ರಯಾಣಕ್ಕೆ ನಮಗೆ ತೆಗೆದುಕೊಂಡ ಸಮಯ ಬರೋಬ್ಬರಿ 5 ಗಂಟೆಗಳು. ಇಷ್ಟೊಂದು ಎತ್ತರದ ಕಷ್ಟದ ರಸ್ತೆಯನ್ನು ಇಳಿದು, ಹತ್ತಿ, ಸುತ್ತಿ ಬರಲು ಈ ಸಮಯ ಕಡಿಮೆಯೇ! ವಾಹನದ ಕಂಡೀಷನ್, ಚಾಲಕನ ನೈಪುಣ್ಯತೆಗಳಿಂದ ಪ್ರಯಾಣ

ಪ್ರಯಾಸದಾಯಕವಾದರೂ ಸುಖಕರ ಅಲ್ಲವೇ ಎಂದು ನನ್ನ ಜೊತೆಗಿದ್ದ ಪ್ರೊ||ಕೆ.ಸಿ.ಎನ್ ಮುಗುಳ್ನಗೆಯಿಂದಲೇ ಹೇಳುತ್ತಾ ಹೋದರು. ಅಡಿಕೆ ಬಣ್ಣದ ತುಂಬು ತೋಳಿನ ಸ್ವೆಟರ್, ತಲೆತುಂಬಿಕೊಂಡು ಕುತ್ತಿಗೆ ಬಳಸಿ ಮುಖ-ಮೂಗು ಮಾತ್ರ ತೋರಿಸುತ್ತಿದ್ದ ಮಂಕಿ ಟೋಪಿಯಲ್ಲಿಯೂ ಪ್ರೊ||ಕೆ.ಸಿ.ಎನ್ ಮುಗುಳ್ನಗೆ ಮಾತ್ರ ಆ ಕ್ಷಣದಲ್ಲೂ ಆಕರ್ಷಕವಾಗಿಯೇ ತೋರುತ್ತಿತ್ತು.

ದೂರ ಸಾಗಿದಷ್ಟೂ ಕೊನೆಗೊಳ್ಳದ ಮಂಜು ಚೆಲ್ಲಿದ ಹಾದಿಯಲ್ಲಿ ಕ್ರಮಿಸುತ್ತಿದ್ದೆವು. ಉಪ್ಪಿನ ಹರಳಿನಂತೆ ಅಥವಾ ಇಬ್ಬನಿಯ ಹನಿಯ ಮೇಲೆ ಬೀಳುವ ಎಳೆಬಿಸಿಲಿನ ತರಹವೇ ಬೆಟ್ಟ, ನದಿ, ಕಾಡು, ಮರ, ಗುಡ್ಡ, ನೀರು, ರಸ್ತೆ ಇಡೀ ಪ್ರಕೃತಿಯೇ ಕಾಣತೊಡಗಿತು. ಸತತ ಮೂರು ಗಂಟೆಯ ಪಯಣದ ನಡುವೆ ಚಲಿಸುವ ಗುಡ್ಡಗಾಡೂ ನಮ್ಮೊಂದಿಗೆ ಪಯಣಿಸುವ ಅನುಭವ. ಮಧ್ಯೆಮಧ್ಯೆ ಒಂದೋ ಎರಡೋ, ಇನ್ನೊಂದೆಡೆ ಹತ್ತೆಂಟು ಮನೆಗಳು. ಮನೆಗಳೆಂದರೆ ಪ್ರತಾಪದ ಕಣಿವೆಯ ಕವಲಿನ ಮನೆಗಳು, ಜೋಪಡಿ ಅಂದರೂ ಸರಿಯೇ. ಅಲ್ಲಿಯೇ ಆರೇಳು ಅಡಿಯ ಪುಟ್ಟ ಪುಟ್ಟ ಮಡಿಯ ಹೊಲ-ಗದ್ದೆಗಳು. ಅವುಗಳಲ್ಲಿ ಸಾಸಿವೆ, ಪಾಲಕ್, ಮೂಲಂಗಿ, ಸೊಪ್ಪಿನ ತರಕಾರಿ. ಇಳಿಜಾರಿನ ಹರಿಯುವ ನೀರಿನ ಒಡ್ಡುಗಳಲ್ಲಿ ಗೊನೆ ಹಿಡಿದು ಬಾಗಿರುತ್ತಿದ್ದ ಬಾಳೆಯ ಗಿಡ-ತೋಟ. ಅಲ್ಲೋ ಇಲ್ಲೋ ಕಣ್ಣಿಗೆ ಬೀಳುತ್ತಿದ್ದ ಕಿತ್ತಲೆ ಹಣ್ಣಿನ ಗಿಡ, ಇಣುಕಿ ಮಾಯವಾಗುತ್ತಿದ್ದ ಒಮ್ಮೊಮ್ಮೆ ಇದು ಒಂದು ನಿಸರ್ಗ ಸಹಜ ಕ್ರಿಯೆಯಂತೆ ಕಾಮಕೇಳಿಯಲ್ಲಿ ತೊಡಗಿರುತ್ತಿದ್ದ ಕಾಡುಕೋಳಿ, ಒಂಟಿಯಾಗಿ ಅಥವಾ ಹಿಂಡಿನೊಂದಿಗೆ ರಸ್ತೆಯುದ್ದಕ್ಕೂ ಅಡ್ಡಾಡುತ್ತಿದ್ದ ದೇಶೀ ತಳಿಯ ಕೆಂಪು ಬಾಸಿಂಗದ ಆಕರ್ಷಕ ಕೋಳಿಹುಂಜ, ಹೇಂಟೆಗಳು ಭಾರತದ ಪ್ರಕೃತಿಯ ಅವಿಭಾಜ್ಯ ಅಂಗವೆಂಬಂತೆ ವಲಸೆ ಬಂದ ಪ್ರಾಣಿಸಂಕುಲದಂತೆ ಕಾಣುತ್ತಿದ್ದವು.



ಕಣಿವೆ ದಾರಿಯ ಹಾದಿಯ ನಡುವೆ ತಡೆದು ನಿಲ್ಲಿಸಿದ ಹಳ್ಳಿ ಮಾಲಿಕಾ. ಮಾಲಿಕಾ ಕಠ್ಮಂಡು-ಮನಕಾಮನ ತೀರ್ಥ ಕ್ಷೇತ್ರದ ನಡುವಿನ ಹಳ್ಳಿ. ರಸ್ತೆಗೆ ಅಡ್ಡಲಾಗಿ ಅತ್ತಕಡೆ ಇತ್ತಕಡೆ ಎರಡು ಭಾಗವಾಗಿ ಒಂದಿಷ್ಟು ಮನೆಗಳು ರಚನೆಗೊಂಡಿವೆ. ಇಲ್ಲಿನ ಮನೆಗಳಲ್ಲಿ ಕೆಲವು ಆಧುನಿಕ ಮಾದರಿಯ ರೂಪ ಪಡೆದಿವೆ. ಕೆಂಪು ಹೆಂಚಿನ ಆರೇಳು ಮನೆ, ತೆಂಗಿನ ಸೋಗೆ ತರಹದ ದೇಶೀ ಮರದ ಎಲೆಗಳಿಂದ ನಿರ್ಮಿಸಿದ ಪರ್ಣಕುಟೀರದ ಮಾದರಿಯ ಆರೇಳು ಮನೆಗಳು ಇಲ್ಲಿವೆ. ಮನಕಾಮನ ಹೋಟೆಲ್, ಅನ್ನಪೂರ್ಣ ವಸತಿ ನಿಲಯ, ಬ್ಯಾಂಕ್, ಅಂಚೆ ಕಛೇರಿಗಳಿವೆ. ರಸ್ತೆ ಬದಿಗೆ, ಸಾರ್ವಜನಿಕ ಸ್ಥಳಕ್ಕೆ ಹೊಂದಿಕೊಂಡಂತೆ ತರಕಾರಿ, ದಿನಸಿ ಅಂಗಡಿಗಳ ಸಾಲು ತರಕಾರಿ, ದಿನಸಿ ಮೊದಲಾದ ನಿತ್ಯದ ಆಹಾರ ಪದಾರ್ಥಗಳ ಅಂಗಡಿ ಸಾಲು ರಸ್ತೆ ಬದಿಗೆ ಇವೆ. ಮೇಲೊಂದು ತಾರಪಾಲ್ ಹಾಕಿ ಅದನ್ನು ಭದ್ರವಾಗಿ ಕಟ್ಟಿ ಬಿಸಿಲು-ಮಳೆ-ಗಾಳಿಯಿಂದ ರಕ್ಷಿಸಿದೆ. ಅದರ ಕೆಳಗೆ ಕಂಪಾರ್ಟ್‌ಮೆಂಟ್ ಮಾದರಿಯ ಆರೇಳು ಅಂಗಡಿಗಳು. ಪುಟ್ಟ ಪುಟ್ಟ ಪೊಟ್ಟಣಗಳಲ್ಲಿ ಅಕ್ಕಿ, ತೊಗರಿ, ಕಡಲೆ, ಹೆಸರು, ಬಟಾಣಿ ಕಾಳುಗಳು, ಬೇಳೆಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಪ್ಯಾಕ್ (ಒಂದೆರಡು ಕೆಜಿ ಪ್ರಮಾಣದಲ್ಲಿ) ಮಾಡಿರುತ್ತಾರೆ. ಇದರ ಪಕ್ಕದಲ್ಲಿ ಕೋಸು, ಮೂಲಂಗಿ, ಗೆಣಸು, ಆಲೂಗಡ್ಡೆ, ಬದನೆ ತರಕಾರಿಯ ಜೋಡಣೆ ಮೇಲೆ ತೂಗುಹಾಕಿರುವ ಒಣಮೀನಿನ ಗುಚ್ಛ. ಒಣಗಿದ ತೆಂಗಿನ ಗರಿ ಕಡ್ಡಿಗೆ ಚುಚ್ಚಿದ 20-30 ಒಣಮೀನುಗಳನ್ನು ಗೋಲಾಕೃತಿಯ ಗೊಂಚಲು ಮಾಡಿ ಇಲ್ಲಿನ ಅಂಗಡಿಗಳಲ್ಲಿ ತಗಲಿಹಾಕಿರುತ್ತಾರೆ. ಒಂದೊಂದು ಗುಚ್ಛದ ಮೀನಿನ ಬೆಲೆ 65 ರಿಂದ 80 ರೂ. ಇರುತ್ತದೆ.

ನಮ್ಮ ಬಸ್ಸು ನಿಂತ ಕೂಡಲೇ ನಮ್ಮ ಗೈಡ್ ಅರ್ಜುನ್ ಪಾಂಡೆ ಅರ್ಧ ಗಂಟೆಯೊಳಗೆ ಟಾಯ್ಲೆಟ್, ಕಾಫಿ ಮುಗಿಸಿಕೊಂಡು ಬರಬೇಕೆಂದು, ಇಲ್ಲಿಂದ ಮನಕಾಮನ ದೇವಾಲಯ 40 ಕಿ.ಮೀ. ಆದರೂ ಎರಡು ಗಂಟೆಯ ಪಯಣ ಎಂದು ಸೂಚನೆ ನೀಡಿದನು.

ಎಲ್ಲರೂ ಲಗುಬಗೆಯಿಂದ ಇಳಿದೆವು. ಕೆಲವರು ಉಪಹಾರ ಗೃಹ ಹೊಕ್ಕರೆ ನಾನು ಹಾಗೂ ಪ್ರೊ|| ಮೋಹನ್‌ಕುಮಾರ್ ಮಾಲಿಕಾಹಳ್ಳಿಯ ಪಶ್ಚಿಮಕ್ಕಿದ್ದ ಹೊರಾಂಗಣಕ್ಕೆ ಬಂದೆವು, ಪಶ್ಚಿಮಕ್ಕೆ ಉತ್ತರದ ಕಣಿವೆ. ಅದರ ಕೆಳಕ್ಕೆ ಆಳವಾದ ಪ್ರಪಾತ, ಒಂದಿಷ್ಟು ಬಯಲು, ಸಮತಟ್ಟಾಗಿಯೇ ಇತ್ತು. ಹೆಚ್ಚೆಂದರೆ 10 ಎಕರೆ ಭೂಪ್ರದೇಶ ವ್ಯವಸಾಯ ಭೂಮಿ. ನಮ್ಮ ಕಡೆಯ ಸೊಪ್ಪು, ತರಕಾರಿ ಮಾದರಿಯ ಪುಟ್ಟ ಪುಟ್ಟ ಮಡಿಗಳು. ಅಲ್ಲೇ ಭತ್ತವನ್ನು ಬೆಳೆಯಲಾಗಿತ್ತು. ಭತ್ತದ ಪೈರನ್ನು ಕತ್ತರಿಸಿ ಪುಟ್ಟ ಪುಟ್ಟ ಬಣವೆಯಾಗಿ

ಒಟ್ಟಲಾಗಿತ್ತು. ಬಣವೆ ಎಂದರೆ ನಮ್ಮ ಕಡೆಯ ಹುಲ್ಲುಮೆದೆಗೆ ಹೋಲಿಸಲಾಗದು. ಹತ್ತು ಹದಿನೈದು ಹೊರೆಯಷ್ಟೇ. ನಾನು ಈ ಭತ್ತದ ಒಂದೆರಡು ಕಡ್ಡಿಯನ್ನು ಕಿತ್ತು ನೋಡಿದೆ. ನಮ್ಮ ಕಡೆಯ ಬಯಲು ಪ್ರದೇಶದಲ್ಲಿ ಕಡಿಮೆ ಮಳೆ ಆಶ್ರಯದಲ್ಲಿ ಬೆಳೆಯುವ ಪುಣಜಿ ಭತ್ತ ಅಥವಾ ದೊಡ್ಡಿ ಭತ್ತ ಅಂತಾರಲ್ಲ ಅದೇ ಮಾದರಿ. ಬಣವೆ ಇನ್ನೂ ಸಾಗಿಸಿರಲಿಲ್ಲ. ಆಗಲೇ ಇನ್ನೊಂದು ಫಸಲಿಗೆ ಗದ್ದೆ ಉಳುಮೆಯಾಗಿ ಮತ್ತೊಂದು ಬಿತ್ತನೆಗೆ ಸಿದ್ಧವಾಗಿತ್ತು. ಅಲ್ಲೆಲ್ಲಾ ಸುತ್ತಾಡುವಾಗಲೇ ಪುಟ್ಟ ಪುಟ್ಟ ಮೂವರು ಮಕ್ಕಳು ಓಡಿಬಂದರು. ಪರಿಚಿತರಂತೆ ನಮ್ಮ ಸಮೀಪಕ್ಕೆ ಬಂದು ನಿಂತರು. ಮಾತಿಲ್ಲ, ಕಥೆಯಿಲ್ಲ ನಗುವಿನಲ್ಲೇ ಎಲ್ಲವನ್ನೂ ಹೇಳಿದಂತಿತ್ತು. ಸುಂದರವಾದ ಮುಖ ಆಕೃತಿ ಆದರೂ ಅವರು ಹಾಕಿಕೊಂಡಿದ್ದ ಕೊಳಕಾದ ಬಟ್ಟೆ ತಿರಿಗಟ್ಟಿದ ತಲೆಕೂದಲು, ಸ್ನಾನ ಮಾಡದ ಮೈ ಇವು ಆ ಮಕ್ಕಳ ಪೋಷಕರ ಆರ್ಥಿಕ ಸ್ಥಿತಿಗತಿಯನ್ನು ಹೇಳುತ್ತಿತ್ತು. ಒಂದಿಷ್ಟು ಕಾಸು ಕೊಟ್ಟೆವು. ಖುಷಿಯಿಂದಲೇ ತೆಗೆದುಕೊಂಡರು. ನಮ್ಮ ಪ್ರೊ||ಮೋಹನ್ ಕುಮಾರ್ ನನ್ನೊಂದಿಗೆ ಆ ಮಕ್ಕಳನ್ನು ನಿಲ್ಲಿಸಿ ಒಂದೆರಡು ಫೋಟೋ ತೆಗೆದರು. ಮಕ್ಕಳು ಆನಂದಿಸಿದರು. ನಾವು ಅಲ್ಲಿಂದ ಹೊರಟಾಗ ಮಕ್ಕಳು ಹರ್ಷದಿಂದಲೇ ಕೈ ಬೀಸಿ ಟಾಟಾ ಹೇಳಿದರು.

ಸಮಯ ಅರ್ಧಗಂಟೆ ಕಳೆದಿತ್ತು. ಆದರೂ ನಮ್ಮ ತಂಡದ ಸದಸ್ಯರೂ ಕಾಫಿ ಕುಡಿದು ಬಸ್ಸಿನ ಹತ್ತಿರ ಬಂದಿರಲಿಲ್ಲ. ಮೆಡಿಕಲ್ ಶಾಪ್, ಹಣ್ಣಿನ ಅಂಗಡಿ, ಹೀಗೆ ಚೆಲ್ಲಿಕೊಂಡಿದ್ದರು. ನಾನು ಪ್ರೊ|| ಕೆ.ಸಿ.ಎನ್ ಜೊತೆಗೂಡಿ ಮತ್ತೊಂದು ರೌಂಡ್ ಅಂಗಡಿ ಬದಿಯಲ್ಲಿ ತಿರುಗಾಡಿದೆವು. ನಾಲ್ಕೈದು ಹುಡುಗರು ಒಂದು ಕೈಯಲ್ಲಿ ಹಸಿಮೀನಿನ ಗುಚ್ಛವನ್ನು ಹಿಡಿದು ಮಾರುತ್ತಿದ್ದರು. ಒಂದು ಕಟ್ಟಿನಲ್ಲಿ 40-50 ಚಿಕ್ಕ ಚಿಕ್ಕ ಮೀನುಗಳು ಇರುತ್ತಿದ್ದವು. ಅವು ಆಗ ತಾನೇ ಹಿಡಿದ ಅರೆಬರೆ ಜೀವದ ಕೊರಮ ಜಾತಿಯ ಮೀನುಗಳು, ಈ ಜೀವಂತ ಮೀನುಗಳನ್ನು ಒಂದು ಕಡ್ಡಿಗೆ ಒಂದರ ಪಕ್ಕದಲ್ಲಿ ಒಂದರಂತೆ ಸಿಕ್ಕಿಸಿ ಅದನ್ನು ಕೊಕ್ಕೆ ಆಕೃತಿಯಲ್ಲಿ ಹಿಡಿದು ದಾರಿ ಬದಿ ನಿಂತು ಮಾರಾಟ ಮಾಡುತ್ತಿದ್ದರು. ಬೆಲೆ ಒಣಮೀನಿಗೆ ಹೋಲಿಸಿದರೆ ತುಸು ಕಡಿಮೆ ಎನಿಸುತ್ತಿತ್ತು. ಒಂದು ಕಿಲೋ ತೂಕದ ಒಂದು ಕಟ್ಟಿಗೆ ನೇಪಾಳಿ ರೂಪಾಯಿಗಳಲ್ಲಿ 125-140 ರೂ. ಬೆಲೆಗೆ ಚೌಕಾಸಿ, ಕೊಸರಾಟ ನಡೆದು ಕೊನೆಗೆ ಮೀನನ್ನು ಖರೀದಿಸುತ್ತಾರೆ.

ನಮ್ಮ ಅರ್ಜುನ ಪಾಂಡೆ ರಭಸವಾಗಿ ವಾಹನವೇರಿದನು. ಅವರನ್ನು ಅನುಸರಿಸಿ ನಮ್ಮ ನಾಯಕ ಪ್ರೊ|| ಜಯಪ್ರಕಾಶ್ ಬೇಗ ಬೇಗ ಬಂದು ಬಸ್ಸಿನಲ್ಲಿ ಕುಳಿತುಕೊಳ್ಳುವಂತೆ

ಹೇಳುತ್ತಾ ಇದ್ದರು. ಅರ್ಜುನ್ ಪಾಂಡೆ ಇಲ್ಲಿಂದ ಎರಡು ಗಂಟೆಯ ಹಾದಿ, ಕಡಿದಾದ ರಸ್ತೆ ಪ್ರಯಾಣದ ಅಲರ್ಜಿಯುಳ್ಳವರಿಗೊಂದಿಷ್ಟು ಮಾಹಿತಿ ನೀಡಿ ಯಥಾಪ್ರಕಾರ ಒಂದಷ್ಟು ಜೋಕ್ಸ್ ಹೇಳಿ ಕುಳಿತುಕೊಂಡರು. ವಾಹನ ನಿಧಾನವಾಗಿ ತೆವಳುತ್ತ ವೇಗ ಹೆಚ್ಚಿಸಿಕೊಂಡಿತು. ಪಯಣದ ಮಧ್ಯೆ ಬಿಡುವು ಇದ್ದುದರಿಂದ ಮಾರ್ಗ ಕಠಿಣವೂ ಆಗಲಿಲ್ಲ. ದೂರ ಬಲು ದೂರ ಅನ್ನಿಸಲಿಲ್ಲ. ಅದೇ ಕುರುಚಲು ಮರ, ಎತ್ತರದ ಕಣಿವೆ. ನಡುನಡುವೆ ಕೊರಕಲು, ಜಲಧಾರೆ ಬಲಬದಿಗೆ ಇಳಿಜಾರು, ಭಯಾನಕ ಕಣಿವೆ. ತಳದಲ್ಲೊಂದಿಷ್ಟು ನೀರಿನ ಹರಿವು. ಹಿಮಕಲ್ಲು ಕರಗಿಯೋ, ಜಲದ ಹರಿವೋ ಅಂತೂ ಸಣ್ಣಗೆ ತಣ್ಣಗೆ ಪೂರ್ವದಿಂದ ಪಶ್ಚಿಮಾಭಿಮುಖವಾಗಿ ಒಂದು ಜಲಧಾರೆಯ ಓಟ ನಮ್ಮ ಪ್ರಯಾಣದ ಉದ್ದಕ್ಕೂ ನಮ್ಮನ್ನು ಅನುಸರಿಸಿಕೊಂಡೋ ಅಥವಾ ಅದನ್ನು ನಾವು ಅನುಸರಿಸಿಯೋ ಅಂತೂ ಮುಂದುವರಿದೆವು.



ಭಕ್ತಾಪುರದ ಕೃಷಿನಿರತ ನೀರೆಯರು

೫

# ಮನಕಾಮನ ಕಣಿವೆ ಎಂಬ ಬಲಿಪೀಠ

ಮಧ್ಯಾಹ್ನ 12.30 ರ ಸಮಯ. ಚುಮುಚುಮು ಬಿಸಿಲು, ನೆಡು ನೆತ್ತಿಯ ಮೇಲೆ ಶುಭ್ರವಾಗಿಯೇ ಕಣ್ಣು ಬಿಡುತ್ತಿತ್ತು. ಹಿಮರಾಜನ ವಕ್ರದೃಷ್ಟಿ ಕಡಿಮೆಯಾದಂತಿಲ್ಲ. ಮನಕಾಮನ ಪರಿಸರ ತುಂಬಾ ಸುಂದರವಾಗಿದೆ. ದಟ್ಟ ಗೊಂಡಾರಣ್ಯ, ಕುರುಚಲು ಕಾಡು, ಬೆಟ್ಟವನ್ನು ನಡುವೆ ಸೀಳಿ ಎರಡು ಭಾಗ ಮಾಡಿದಂತೆ ತ್ರಿಶೂಲಿ ನದಿ ಹರಿಯುತ್ತಿದೆ. ನೆಲಮಟ್ಟದಲ್ಲಿ ತುಂಬಾ ಆಳಕ್ಕಿಳಿದಂತೆ ಸುಮಾರು 250 ಮೀ. ಅಗಲವಿದೆ. ಹಿಮರಾಶಿ, ಹಿಮಕಲ್ಲುಗಳು ಕರಗಿ ನೀರಾಗಿ ಮಳೆಯ ನೀರು ಸಂಗ್ರಹಗೊಂಡು ಅಂತೂ ಸದಾ ಹರಿಯುವ ಹಾಲು ಬಿಳುಪಿನ ಜಲಧಾರೆ, ಕೆಂಪು ಕಲ್ಲುಸಕ್ಕರೆಯಂತಹ ಮರಳು, ನುಣುಪಾದ ವೈವಿಧ್ಯ ರೂಪ ತಾಳಿರುವ ಮೋಹಕ ಸಣ್ಣ ದೊಡ್ಡ ಕಲ್ಲುಗಳು, ಅದರ ನೋಟ, ಸ್ಪರ್ಶ ಎರಡೂ ಹಿತ. ತ್ರಿಶೂಲಿನದಿಯಿಂದ ಪೂರ್ವಕ್ಕೆ 1324 ಮೀ. ಎತ್ತರದಲ್ಲಿ ದಕ್ಷಿಣ ನೇಪಾಳದ ಪ್ರಸಿದ್ಧ ನಗರ ಗೂರ್ಖಾ ಜಿಲ್ಲೆ. ಇಲ್ಲಿಂದ 12 ಕಿ.ಮೀ. ದೂರದಲ್ಲಿದೆ.



ಮನಕಾಮನ ಕಣಿವೆಯ ಕೇಬಲ್ ಕಾರ್

ಇದು ಹಿಮಾಲಯ ಹಾಗೂ ಅನ್ನಪೂರ್ಣ ಮೌಂಟ್ ಎವರೆಸ್ಟ್ ರೇಂಜಿಗೆ ಒಳಪಟ್ಟಿದೆ. ಹಿಮಾಲಯ ಪರ್ವತದ ಎತ್ತರ ಕಣಿವೆಯು ಇಲ್ಲಿಂದ ಆರಂಭ. ಸಾಹಸ ಯಾತ್ರಾರ್ಥಿಗಳು, ಅಭ್ಯಾಸಿಗರು. ಹಿಮಾಲಯ, ಗೌರಿಶಂಕರ, ಅನ್ನಪೂರ್ಣ ಟ್ರೆಕ್ಕಿಂಗ್, ಪ್ಯಾರಾಗ್ಲೈಡಿಂಗ್ ಪಯಣ ಆರಂಭಿಸುವ ಸ್ಥಳ. ಇಲ್ಲಿಂದ ಎತ್ತರಕ್ಕೆ ಅತಿ ಕಡಿದಾದ ಹಸಿರು ಹುಲ್ಲು, ಕುರುಚಲು ಗಿಡ-ಮರ, ಬಂಡೆಗಳ ಪರ್ವತ. ನೆಲ ಮಟ್ಟಕ್ಕೆ 1324 ಮೀ. ದೂರ. ಕಾಲು ನಡಿಗೆ ಅಸಾಧ್ಯ. ಅದಕ್ಕೆಂದೇ ದೇವಾಲಯದ ವತಿಯಿಂದಲೇ ಕೇಬಲ್ ಕಾರ್ ವ್ಯವಸ್ಥೆ ಮಾಡಿದ್ದಾರೆ. ಪ್ರತಿ 6 ನಿಮಿಷಕ್ಕೆ ಒಂದರಂತೆ ಸುಮಾರು 60 ಕೇಬಲ್ ಕಾರುಗಳು ಗಂಟೆಗೆ ಸರಾಸರಿ 600 ಜನರನ್ನು ಕೆಳಹಂತದಿಂದ ಮನಕಾಮನ ದೇವಸ್ಥಾನದ ಪರ್ವತದ ಮೇಲಕ್ಕೆ ತಲುಪಿಸುತ್ತಾರೆ. ಒಂದು ಕೇಬಲ್ ಕಾರಿನಲ್ಲಿ ಸರಾಸರಿ 6 ಜನರಂತೆ ಕರೆದೊಯ್ಯುವ ಈ ಮನಕಾಮನ ದೇವಿಯ ಪ್ರಯಾಣದ ಸಮಯ ಕೇವಲ 15 ನಿಮಿಷ. ನೇಪಾಳಿ ರೂಪಾಯಿಗಳ ಲೆಕ್ಕದಲ್ಲಿ 250 ರೂ. ನೀಡಿ ಟಿಕೆಟ್ ಕೊಂಡರೆ ಒಮ್ಮೆಗೆ ಮನಕಾಮನ ಪರ್ವತ ತಲುಪಿ ದೇವಿಗೆ ಪೂಜೆ ಸಲ್ಲಿಸಿ, ಸಂಜೆಯೊಳಗೆ ಯಾವಾಗಲಾದರೂ ಹಿಂತಿರುಗಿ ಬರಬಹುದು. ಕೇಬಲ್ ಕಾರಿನ ಟಿಕೆಟ್ ಕೊಳ್ಳುವ ಪ್ರಯಾಣಿಕರ ಸಾಲು ಉದ್ದವಾಗಿರುತ್ತದೆ. ಪ್ರವಾಸಿಗರಂತೆ ಸ್ಥಳೀಯ ಭಕ್ತರು, ಹರಕೆ ಒಪ್ಪಿಸುವವರು, ಮಂಡೆ, ಮಡೆ, ಎಲೆಪೂಜೆ, ಬಾನ ಹೀಗೆ ಹರಕೆಯ ಸ್ವರೂಪ ಇಲ್ಲಿ ವೈವಿಧ್ಯವಾಗಿದೆ. ನಮ್ಮ ಪ್ರಯಾಣದ ಸರದಿಯ ಸಾಲಿನಲ್ಲಿ ನಿಂತವರು ಬಹುತೇಕರು ಕೈಯಲ್ಲಿ ಒಂದೊಂದು ಕೋಳಿ ಹುಂಜವನ್ನು ಹಿಡಿದು ನಿಂತಿದ್ದರು. ಹಾಗೆ ನಿಂತವರಲ್ಲಿ ನನಗೆ ವಿಶೇಷವಾಗಿ ಕಂಡದ್ದು ಒಂದು ನವ ವಿವಾಹಿತ ಜೋಡಿ. ಹುಡುಗ ಮಟ್ಟಸ್ಥನಾಗಿದ್ದು 20-23 ವಯೋಮಿತಿ. ಬಾದಾಮಿಯ ಬಣ್ಣ, ಕೋಟು, ಟೈ, ಬೂಟು ಧರಿಸಿ ಕೈಯಲ್ಲೊಂದು ಕೆಂಪನೆಯ ಬಾಸಿಂಗದ ಆಕರ್ಷಕ ಕೋಳಿ ಹುಂಜವನ್ನು ಹಿಡಿದುಕೊಂಡು ನಿಂತಿದ್ದನು. ಅವನ ತಲೆಯ ಮೇಲೆ ನೇಪಾಳಿಯ ಗೌರವ ಪ್ರತೀಕ-ಪ್ರತಿಷ್ಠೆಯ ಟೋಪಿ ಇರಲಿಲ್ಲ. ಆತನನ್ನು ಒತ್ತಿಕೊಂಡು ಒಂದಿಷ್ಟೂ ಸಂದಿ ಬಿಡದೆ ಸಾಲು ಮುಂದುವರಿದಂತೆಲ್ಲಾ ಜೊತೆಜೊತೆಯಲ್ಲೇ ಹೆಜ್ಜೆಯ ಮೇಲೆ ಹೆಜ್ಜೆ ಹಾಕುತ್ತಿದ್ದ ಚೆಲುವು ಸಲ್ಲುವ ಮೋಹಕ ರೂಪಸಿ, ಬಲಗೈಯಲ್ಲಿ ಆರತಿ ತಟ್ಟೆಯನ್ನು ಒಪ್ಪವಾಗಿ ಹಿಡಿದು ಕೊಂಡು ಎಡಭುಜಕ್ಕೆ ಒಂದು ಲ್ಯಾಪ್‌ಟಾಪ್ ನೇತುಹಾಕಿಕೊಂಡು ನಿಂತಿದ್ದಳು. ನೀಳವಾದ ಮೂಗು, ಹಾಲುಗೆನ್ನೆ, ಒಂದಿಷ್ಟೆ ತುಟಿಬಣ್ಣ, ಕಂಡೂ ಕಾಣದಂತಿದ್ದ ಹಣೆಬೊಟ್ಟು ಈ ಎಲ್ಲವೂ ಮೋಹಕವೇ. ಆಧುನಿಕ ವಿನ್ಯಾಸದ ಈ ತಾರುಣ್ಯ ಮಾಸದ ತರುಣಿ. ನಾನು ಚೆಲುವೆ ಎಂದು ಕರೆಯಲು ಕಾರಣ ನಾವು ನೇಪಾಳಿ ಹೆಣ್ಣುಗಳನ್ನು ಕುತೂಹಲದಿಂದಲೇ ನೋಡುತ್ತಿದ್ದೆವು. ನಮ್ಮ

ಪ್ರವಾಸದ ಕಾಲದಲ್ಲಿ ಎದುರಾಗುತ್ತಿದ್ದ ನೇಪಾಳಿ ಹುಡುಗಿಯರನ್ನು ಕುರಿತು ನಮ್ಮ ತಂಡದ ಹಿರಿಯ ಪ್ರೊ॥ ರುದ್ರಮುನಿ 'ನೋಡು ಚಿಕ್ಕಣ್ಣ ಎಷ್ಟು ಚೆಂದಾಕಿದ್ದಾರೆ' ಎಂದು ವರ್ಣಿಸುತ್ತಿದ್ದರೆ ಪ್ರೊ॥ ಮಹಮದ್ ದಸ್ತಗೀರ್ 'ಹೇ ಮೂಗೇ ಇಲ್ಲದ ಇವರೆಂಥ ಚೆಲುವೆಯರು?' ಎಂದು ಅವರ ಮೂಗಿನ ಬಗೆಗೇ ಹಂಗಿಸುತ್ತಿದ್ದರು.

ಇಂಥವರ ನಡುವೆ ಈ ನವ ಜೋಡಿ ಚೆಲುವೆ ಒಂದಿಷ್ಟು ಭಿನ್ನವಾಗಿ ಸೌಂದರ್ಯ ತುಂಬಿ ಶೋಭಿಸುತ್ತಿದ್ದರು. ಹೊರನೋಟಕ್ಕೆ ಉತ್ತಮ ವಿದ್ಯಾವಂತಿಕೆಯ ನಾಗರಿಕ ಹಿನ್ನೆಲೆಯುಳ್ಳ  ಈ ನವ ಜೋಡಿಗಳು ಕೋಳಿಹುಂಜ - ಆರತಿಯೊಂದಿಗೆ ಮನಕಾಮನ ಬೆಟ್ಟ ಹತ್ತಲು ಸರದಿಯ ಸಾಲಿನಲ್ಲಿ ನಿಂತಿರುವುದು ನನಗೆ ನಂಬಿಕೆ ಮತ್ತು ನಂಬಿಕೆಗೆ ತಕ್ಕ ಆಚರಣೆ ಮಾನವನ ಸಹಜ ಗುಣ. ಭಾವನಾತ್ಮಕ ರೂಪರೇಷೆಗಳ ಒಟ್ಟು ಮೊತ್ತ ಎಂಬ ಮಾನವಶಾಸ್ತ್ರಜ್ಞ ವಿಲಿಯಂ ಪಾಟಕ್ ಅವರ ವ್ಯಾಖ್ಯಾನ ಅರ್ಥವಾಯಿತು. ಇದು ಮನಕಾಮನ ದೇವಿಯ  ಭಕ್ತರು ತೋರುತ್ತಿದ್ದ ಧಾರ್ಮಿಕ ಶ್ರದ್ಧೆಯಲ್ಲಿ ಎದ್ದು ಕಾಣುತ್ತಿತ್ತು.

ಕೇಬಲ್ ಕಾರು ಏರಲು ಟಿಕೆಟ್ ಖರೀದಿ, ನಂತರ ಟ್ರ್ಯಾಲಿ ಹತ್ತುವ ಜನರ ಕ್ಯೂ ಒಂದು ಸಾವಿರ ಅಂದಾಜಿನ ವ್ಯಾಪ್ತಿಯಲ್ಲಿತ್ತು. ಮುಕ್ಕಾಲು ಗಂಟೆಯ ನಮ್ಮ ಸರದಿ. ಸರದಿಯ ಸಾಲಿನಲ್ಲಿದ್ದ ಭಕ್ತರ ಕೈಚೀಲದೊಳಗೆ ಕೊರಗುಟ್ಟುತ್ತಲೋ ಕಾಲು, ದೇಹ ಚೀಲದ ಒಳಗೆ ಅವಿತಿಟ್ಟುಕೊಂಡು ತಲೆಯೆತ್ತಿ ಮನುಷ್ಯರ ದೊಂಬರಾಟವನ್ನೋ ಅಥವಾ ಹಸಿದೊಡಲ ತುಂಬುವ ಕಾತರಕ್ಕೋ ಹವಣಿಸುತ್ತಿದ್ದ ಕೋಳಿಹುಂಜಗಳು, ಹೋತಗಳು ನಮ್ಮ ಜೊತೆ ಅವೂ ಸರತಿ ಸಾಲಿಗೆ ಕಾತರಿಸುತ್ತಿದ್ದವು. ಇಲ್ಲಿನ ವಿಶೇಷ ಕೋಣ, ಮೇಕೆ ಈ ಬಗೆಯ ದೊಡ್ಡ ದೊಡ್ಡ ಪ್ರಾಣಿಗಳನ್ನು ಪ್ರತ್ಯೇಕ ಕೇಬಲ್ ಕಾರಿನಲ್ಲಿ ಕಳಿಸುವ ಪದ್ಧತಿ ಇದೆ. ಹಾಗೆಯೇ ಬಲಿಯಾದ ರಕ್ತಸಿಕ್ತ ಪ್ರಾಣಿಗಳ ಮುಂಡ ಇಲ್ಲದ ರುಂಡ ಭಾಗಗಳನ್ನು ಹೊತ್ತು ತರುವ ಕೇಬಲ್‌ಗಳು ಪ್ರತ್ಯೇಕವಾಗಿಯೇ ಇವೆ. ಕೇಬಲ್ ಕಾರು ನಮ್ಮ ತಂಡವನ್ನು ಮೂರು ಭಾಗವನ್ನಾಗಿಸಿತು.

ನಾನು ಪ್ರೊ॥ ಮೋಹನ್, ಪ್ರೊ॥ ನಾಗರಾಜ್, ಪ್ರೊ॥ ದಕ್ಷಿಣಾಮೂರ್ತಿ ಮಾತ್ರ ಒಂದು ಟ್ರ್ಯಾಲಿಯಲ್ಲಿದ್ದು ನಮ್ಮೊಂದಿಗೆ ಕೆಲವು ವಿದೇಶೀ ಯುವಕ-ಯುವತಿಯರೂ ಇದ್ದರೂ ನಾವು ಒಂದು ಅರ್ಥದಲ್ಲಿ ವಿದೇಶಿಗರೆ! ಟ್ರ್ಯಾಲಿ ತೂಗುತ್ತ ಕಣಿವೆಗಳ ಎತ್ತರ-ತಗ್ಗಿಗೆ ಅನುಗುಣವಾಗಿ ಏರುತ್ತ, ಕುಗ್ಗುತ್ತ ಹನ್ನೆರಡು ಗಂಟೆಯ ಸುಮಾರಿಗೆ ಮನಕಾಮನ ಬೆಟ್ಟದ ನಟ್ಟನಡುವೆ ಇಳಿಸಿತು. ಟ್ರಾಲಿಯಿಂದ ಇಳಿದು ಮತ್ತೆ ಅರ್ಧ ಫರ್ಲಾಂಗ್



ಮನಕಾಮನ ಕಣಿವೆ ದೇಗುಲ

ದೂರ ನಡೆದು ಅಲ್ಲಿ ಎತ್ತರವಾದ ಕಣಿವೆ ಏರಿ ಮನಕಾಮನ ದೇವಾಲಯದ ಆವರಣ ತಲುಪಿದೆವು. ಬೆಟ್ಟದ ಸೋಪಾನ ಭಾಗವನ್ನು ಕಡಿದು ಮೆಟ್ಟಿಲು ನಿರ್ಮಿಸಿದ್ದಾರೆ. ಅಕ್ಕಪಕ್ಕ ಹಣ್ಣು, ತರಕಾರಿ, ಬಣ್ಣದ ವಸ್ತು, ಪೂಜಾ ಪರಿಕರ, ತಿಂಡಿ-ಊಟದ ಹೋಟೆಲ್, ಕುರಿ-ಕೋಳಿಗಳ ವ್ಯಾಪಾರ ಭರ್ಜರಿಯಾಗಿಯೇ ಇತ್ತು. ನಡುನಡುವೆ ಹಸಿರು ಹಿಡಿದ ಮರಗಳಲ್ಲಿ ಹಳದಿ ಚೆಂಡಿನಂತೆ ನೇತಾಡುತ್ತಿದ್ದ ಕಿತ್ತಲೆ ಹಣ್ಣಿನ ಗಿಡ, ಬಯಲು ಸೀಮೆಯ ನಮಗೆ ಕುತೂಹಲಕರವಾಗಿತ್ತು. ಒಂದು ಬಗೆಯ ಹೊಸ ನೋಟವೂ ಆಗಿತ್ತು.

ಚುಮುಚುಮು ಚಳಿ, ಸಣ್ಣ ಹಿಮ ಮಿಶ್ರಿತ ಗಾಳಿ, ಒಂದೊಂದೇ ಮೆಟ್ಟಿಲೇರಿ ಮನಕಾಮನ ದೇವಿಯ ಸನ್ನಿಧಿಗೆ ಬಂದೆವು. ವಿಸ್ತಾರವಾದ ಹಿಮಾಲಯದ ತಪ್ಪಲು. ಅದರ ಮೇಲೆ ಮನಕಾಮನ ಗುಡಿ. ಗುಡಿ ಎಂದರೆ ಸಾಧಾರಣವೇ. ಚೌಕಾಕಾರದ ವಾಸ್ತು ಮೇಲೇಳುತ್ತಿದ್ದಂತೆ ಫಿರಂಗಿ ಆಕೃತಿಯನ್ನು ಪಡೆಯುತ್ತದೆ. ಅದರ ಬುಡಕ್ಕೆ ಅಂಟಿಕೊಂಡಂತಿರುವ ಬೇವಿನಮರ, ಮರದ ತೀರು, ದಿಮ್ಮಿಗಳಿಂದ ವಿನ್ಯಾಸಗೊಳಿಸಿದ ಗೋಪುರ, 15 ಅಡಿ ಎತ್ತರವಿದೆ. ದೇವಿ ವಿಗ್ರಹ ಕಂಚಿನಿಂದ ತಯಾರಿಸಿದ ಕಲ್ಲಿಗೆ ಹೊದಿಸಿದ ತಗಡು ಮಾದರಿ. ಗುಡಿಯ ಎದುರಿಗೆ ಪ್ರಾಣಿಬಲಿಯ ವಧಾಸ್ತಂಭ. ನಾನು, ಪ್ರೊ॥ ದಸ್ತಗೀರ್, ಪ್ರೊ॥ ಮೋಹನ್ ದೇವಾಲಯದ ಅಂಗಳಕ್ಕೆ ಬಂದೆವು.

ಪ್ರೊ||ಜಯಪ್ರಕಾಶ್ ಅವರೊಂದಿಗೆ ದೇವಿ ದರ್ಶನಕ್ಕೆ ಸಾಲುಗಟ್ಟಿ ನಿಂತಿದ್ದ ಕ್ಯೂನಲ್ಲಿ ನಮ್ಮವರೂ ನಿಂತಿದ್ದರು. ಪ್ರೊ|| ಶೈಲಕುಮಾರಿ, ದೇವಾಲಯದ ಪ್ರಾಂಗಣದ ಹೊರಭಾಗ ದೇವಾಲಯದ ಎಡಬದಿಗೆ ನಿಂತಿದ್ದರು. ಆ ಕ್ಯೂ ನೋಡುತ್ತಿದ್ದಾಗಲೇ ದೇವಿದರ್ಶನ ಕಷ್ಟವಾಗಬಹುದೆಂದು ಭಾವಿಸಿರುವಾಗ ಬಲವಾದ ಒಂದು ಕೋಣವನ್ನು ಇಬ್ಬರು ಬಲಾಢ್ಯರು ಎಳೆದುಕೊಂಡು ಬಂದರು. ಪೂಜಾರಿ ತೀರ್ಥ ತಂದು ಆ ಕೋಣದ ತಲೆಯ ಮೇಲೆ ಹಾಕಿ ಒಂದು ಪತ್ರೆ ಇಟ್ಟ. ಇನ್ನೊಬ್ಬ ವ್ಯಕ್ತಿ ನೋಡುನೋಡುತ್ತಿದ್ದ ಹಾಗೆಯೇ ಕೋಣವನ್ನು ಒಂದೆರಡು ಏಟಿಗೆ ಕತ್ತರಿಸಿದ. ಆತ ಕಡಿದ ರಭಸಕ್ಕೆ ಕತ್ತು ಅರ್ಧ ಮಾರು ಚಿಮ್ಮಿಬಂದಿತು. ರಕ್ತ ನಮ್ಮ ಪಾದದವರೆಗೂ ಸಿಡಿಯಿತು. ರುಂಡ-ಮುಂಡ ಬೇರೆ ಬೇರೆಯಾಗಿ ಕೋಣ ಐದು ನಿಮಿಷಗಳ ಕಾಲ ನಾಲ್ಕು ಕಾಲುಗಳನ್ನು ಜಾಡಿಸಿ ಜಾಡಿಸಿ ತನ್ನ ಕೋಪದ ಅಸಹಾಯಕತೆಯನ್ನು ತೋರಿಸಿತು. ರಕ್ತದ ಮಡುವಿನಲ್ಲಿ ಕೆಲವೇ ನಿಮಿಷಗಳಲ್ಲಿ ಕೋಣ ತನ್ನೆಲ್ಲ ಶಕ್ತಿ ಕಳೆದುಕೊಂಡು, ದೇವಿಗೆ ಪೂರ್ಣವಾಗಿ ಶರಣಾಯಿತು. ನಾಲ್ಕು ಜನ ಬಂದು ತಲಾ ಒಂದೊಂದು ಕಾಲು ಹಿಡಿದು ಕೋಣವನ್ನು ದೇವಾಲಯದ ಹಿಂಭಾಗದಲ್ಲಿ ನಿರ್ಮಿಸಿರುವ ವಧೆ ಮಾಡಿದ ಪ್ರಾಣಿಗಳ ಸಂಗ್ರಹದ ಸ್ಥಳಕ್ಕೆ ಕೊಂಡೊಯ್ದರು.

ನಾನು ಚೇಳೂರು, ಚೇಳೂರ ಹಟ್ಟಿ, ಇರಕಸಂದ್ರ ಈ ಗ್ರಾಮಗಳಲ್ಲಿ ನಡೆಯುತ್ತಿದ್ದ ದೊಡ್ಡ ಮಾರಿ ಜಾತ್ರೆಯಲ್ಲಿ ಕೋಣವನ್ನು ಕಡಿಯುವುದನ್ನು ನೋಡಿದ್ದೆ. ದೇವರ ಮೆರವಣಿಗೆ, ಉತ್ಸವ ಇವುಗಳ ನಡುವೆ ಮೆರವಣಿಗೆ ದೇವಿಯ ಮೂಲಗುಡಿಯ ಬಳಿಗೆ ಬರುವಾಗ ಬೆಳಗಿನ ಜಾವ 4 ಗಂಟೆಯಾಗುತ್ತಿತ್ತು. ನಿದ್ರೆಯ ಮಂಪರು, ಜನಗಳ ತಳ್ಳಾಟ, ಕೂಗು, ಸಿಳ್ಳೆಗಳ ನಡುವೆ ಕೋಣಬಲಿ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಆದರೆ ಮನಕಾಮನ ಎಂಬ ಈ ವಿದೇಶೀ ನೆಲದಲ್ಲಿ ನಮ್ಮೂರ ಮಾರಿ ಜಾತ್ರೆಯನ್ನು ಕಂಡದ್ದು ನನಗೆ ವಿಶೇಷ ಅನ್ನಿಸಿತು. ಹೋತ, ಕೋಳಿಗಳ ಮಾರಣಹೋಮ ನಿರಂತರವಾಗಿ ಸಾಗುತ್ತಿತ್ತು. ಕೊಂದೆವೆಂಬ ದೊಡ್ಡಸ್ತಿಕೆ. ಸಾಯುತ್ತೇವೆಂಬ ಕೋಪತಾಪ ಒಂದಿಷ್ಟೂ ಕಾಣಲಿಲ್ಲ. 'ಅಂದಂದೆ ಹುಟ್ಟಿತ್ತು ಅಂದಂದೆ ಸತ್ತಿತ್ತು ಕೊಂದವರುಳಿವರೆ?' ಆ ಕ್ಷಣದಲ್ಲಿ ನನ್ನಲ್ಲಿ ಪಶ್ಚಾತ್ತಾಪದ ಭಾವ ಮೂಡಿಸಿತು. ಮನಕಾಮನೆಯ ದರ್ಶನಕ್ಕೆ ಹೋಗಬೇಕೆಂಬ ಭಾವ ಬದಲಾಯಿತು. ಮೊದಲು ಅಲ್ಲಿಂದ ಆಚೆಗೆ ಹೋದರೆ ವಾಸಿ ಎಂಬ ವಾತಾವರಣ. ನನ್ನಂತೆ ಪ್ರೊ|| ದಸ್ತಗೀರ್, ಪ್ರೊ|| ಮೋಹನ್, ಪ್ರೊ|| ಶೈಲಕುಮಾರಿ ಅವರಿಗೂ ಅನ್ನಿಸಿ ದೇವಾಲಯದ ಪ್ರಾಂಗಣದಿಂದ ಹೊರಗೆ ಬಂದೆವು. ಹೊರಾಂಗಣದ ಕಟ್ಟೆಯ ಮೇಲೆ ಕುಳಿತು ಕಿತ್ತಲೆಹಣ್ಣುಗಳ ತಿನ್ನುತ್ತಾ ಹಿಮಾಲಯದ ಆಳ ಕಣಿವೆಯ ಕಡೆ ಕಣ್ಣಾಡಿಸಿದೆವು.

೬

# ಮನಕಾಮನೆ ಅಲ್ಲದಿದ್ದರೂ ಮನಮೋಹಿನಿ

ಮನಕಾಮನ ತಪ್ಪಲಿನ ಮೇಲೆ ಕುಳಿತು ನಮ್ಮ ದಸ್ತಗೀರ್ ಚೌಕಾಸಿ ಮಾಡಿಕೊಂಡು ತಂದ ರುಚಿಕಟ್ಟಾದ ಕಿತ್ತಲೆ ಹಣ್ಣುಗಳನ್ನು ತಿನ್ನುತ್ತ ಪ್ರಕೃತಿ ರಮ್ಯತೆಯತ್ತ ಹೊರಳಿದೆವು. ಇಲ್ಲಿಂದ ಎತ್ತ ನೋಡಿದರೂ ಹಿಮಾವೃತ ಶಿಖರ ನಮ್ಮ ಮನಸೂರೆಗೊಂಡಿತು. ಬೀಳುತ್ತಿದ್ದ ಬೆಳಕನ್ನು ಅತ್ತ ಇತ್ತ ತಳ್ಳಿ ತನ್ನ ಸುತ್ತಮುತ್ತ ಪ್ರಭಾವಲಯವೊಂದನ್ನು ಕಟ್ಟಿಕೊಂಡಂತೆ ಭಾಸವಾದ ಆ ಹಿಮದ ಬೆಳ್ಳಿಬೆಟ್ಟ ನಮ್ಮ ಮೈಮನವನ್ನು ರೋಮಾಂಚನಗೊಳಿಸಿತು. ಬೀಸಿ ಬರುತ್ತಿದ್ದ ತಣ್ಣನೆಯ ಹಿಮಗಾಳಿಯನ್ನು ಮರೆತು ಅದರಲ್ಲಿ ಲೀನವಾಗಿಬಿಟ್ಟೆವು. ಎತ್ತ ನೋಡಿದರತ್ತ ಬರೀ ಬೆಟ್ಟಗಳು, ಸುತ್ತಮುತ್ತ ಕಲ್ಲುರಹಿತ ಮಣ್ಣಿನ ಬೆಟ್ಟ. ಆ ಮಣ್ಣು ಒಂದು ಬಗೆಯ ಬೂದಿಯ ರೂಪ. ದೂರದ ನೆತ್ತಿಯಲ್ಲಿ ಮಂಜಿನಲ್ಲಿ ತಿದ್ದಿದ ಬಗೆಬಗೆಯ ಆಕೃತಿ ಬಿಡಿಸಿದ ಬೆಟ್ಟ, ಕಣಿವೆ, ಶಿಖರಗಳು. ಅದು ಅನ್ನಪೂರ್ಣ ಮೌಂಟ್ ಎವರೆಸ್ಟ್ ಮತ್ತೊಂದು ಕಾಂಚನಗಂಗಾ ಹೀಗೆ ವಿವಿಧ ಹೆಸರುಗಳಲ್ಲಿ ಇಲ್ಲಿಂದ ಶಿಖರಗಳನ್ನು ಗುರುತಿಸುತ್ತಾರೆ. ಸೂರ್ಯನ ಎಳೆಯ ಬಿಸಿಲು ಆ ಕಣಿವೆಗಳ ಮೇಲೆ ಮುತ್ತಿದ್ದ ಹಿಮದ ರಾಶಿಯ ಮೇಲೆ ಬಿದ್ದಾಗ ಬಂಗಾರ ಬಳಿದ ಬಣ್ಣ ಚೇತೋಹಾರಿ ದೃಶ್ಯ. ಅದರ ಅಕ್ಕಪಕ್ಕದ ಪರ್ವತ ಸಾಲುಗಳು, ದಟ್ಟಡವಿ ಇವುಗಳ ಮಧ್ಯದಿಂದ ದಟ್ಟ ಹೊಗೆಯಂತೆ ಹರಿದಾಡುವ, ಎದ್ದು ಬರುತ್ತಿರುವ ಬೆಳ್ಳಿ ಮೋಡಗಳು, ಅತ್ಯಂತ ಎತ್ತರದ ಗಿರಿಶಿಖರಗಳಲ್ಲಿ ಕಾಣುವ ಬೂದಿಗುಡ್ಡೆ, ದೇವಾಸುರರ ಯುದ್ಧ, ಆ ಯುದ್ಧದಲ್ಲಿ ಮಡಿದವರ ಸಾಲುಸಾಲು ಹೆಣ - ಈ ಬಗೆಯ ಭಾವ ಹಿಮಪ್ರೇರಿತ ಶಿಖರದ ಮೇಲೆ ಬಿದ್ದ ಎಳೆಬಿಸಿಲಿನ ಸೇಡಿಗೆ ಚಿನ್ನದ ಬೆಟ್ಟದಂತೆ, ಮುಡಿದ ಮಲ್ಲಿಗೆಯಂತೆ ಮೋಡವನ್ನು ಚುಂಬಿಸಿ, ಸಂಕೋಚ, ಲಜ್ಜೆಯಿಂದ ಓಡಿ ಹೋಗುತ್ತಿರುವ ಪ್ರೇಮಿಯ ಹಾಗೆ ಎತ್ತರ ಮಟ್ಟಸ್ಥ ಕಣಿವೆ, ಕಂದರ, ನದಿ, ಮರ-ಗಿಡ ಒಟ್ಟು ಪರಿಸರ ಪ್ರಕೃತಿಯನ್ನೆಲ್ಲಾ

ನೆಲಮುಗಿಲುಗಳ ನಡುವಿನ ಅಂತರವನ್ನು ಅಳಿಸಿ ಎಲ್ಲವನ್ನೂ ನಿರಾಕಾರವಾಗಿಸಿ ಪ್ರಕೃತಿಯ ರಮ್ಯ ರಮಣೀಯ ನೋಟ ನಮ್ಮನ್ನು ಮಂತ್ರಮುಗ್ಧರನ್ನಾಗಿಸಿತು. ಗಿರಿಕಂದರ ಆಳದ ಪ್ರಪಾತಗಳಿಂದ ಜಲ ಹರಿದು ಮಂಜು ಕರಗಿ ತ್ರಿಶೂಲಿ ನದಿಯನ್ನು ಕೂಡಿಕೊಂಡು ನೀರೇ ಹಾಲಾದಂತೆ, ನೊರೆನೊರೆಯಾಗಿ, ಹಾಲು ಹಳ್ಳವಾಗಿ ತ್ರಿಶೂಲಿ ನದಿ ಮುಗ್ಧ ನಗೆಯಲ್ಲಿ ಹರಿಯುತ್ತಿತ್ತು. ಹಿಮವತ್ ಪರ್ವತದ ಜಾರು ಕಣಿವೆಯ ಕೂಟದಲ್ಲಿ ನಿಂತು ಪ್ರಕೃತಿಯಲ್ಲಿ ಪ್ರಕೃತಿಯಾದೆವು. ನಮ್ಮ ಮೋಹನ್, ಅವರಷ್ಟಕ್ಕೆ ಅವರು ಫೋಟೋ ತೆಗೆಯುತ್ತಾ ಹೋದರು.

ಮನೋಕಾಮನ ದಟ್ಟ ಬುಡಕಟ್ಟು ಪ್ರದೇಶ. ಗೂರ್ಖಾರ ಸಂಸ್ಕೃತಿಯ ಭಾವರೂಪ ಭಕ್ತಿಯ ನೆಲೆ. ಗೂರ್ಖರ ನಂಬಿಕೆ, ನಡಾವಳಿಗೆ ತಕ್ಕಂತೆ ಕಣಿವೆ ಮೇಲೆಯೂ ಮೂರ್‍ನಾಲ್ಕು ದೇವಾಲಯಗಳಿವೆ. ಈ ಒಂದೊಂದು ದೇವಾಲಯ ಗೂರ್ಖಾರ ದಟ್ಟ ಸಂಪ್ರದಾಯ, ರೀತಿ, ರಿವಾಜುಗಳ ಒಟ್ಟು ಮೊತ್ತವಾಗಿ ಸಾಕಾರಗೊಂಡಿವೆ. ಮಾತ್ರವಲ್ಲ ಮನಕಾಮನ ದೇವಿಯ ಅಸ್ತಿತ್ವದ ಹಿನ್ನೆಲೆಯೂ ಗೂರ್ಖಾ ರಾಜಮನೆತನದ ಹಿನ್ನೆಲೆಯನ್ನೂ ಒಳಗೊಂಡ ಐತಿಹ್ಯ, ಪೌರಾಣಿಕ ಹಿನ್ನೆಲೆ ರೂಪುಗೊಂಡ ಮೌಖಿಕ ಕಥೆಗಳೂ ಈ ಕಣಿವೆಯಲ್ಲಿ ದೊರೆಯುತ್ತವೆ.

## ಮನಕಾಮನ ಐತಿಹ್ಯ:

ಗೂರ್ಖಾ ಮನೆತನಕ್ಕೆ ಸೇರಿದ ವ್ಯಕ್ತಿಯೊಬ್ಬ ನೇಗಿಲು ಕಟ್ಟಿ ತನ್ನ ಹೊಲವನ್ನು ಉಳುತ್ತಾನೆ. ಹೀಗೆ ಹೊಲ ಉಳುತ್ತಿರುವಾಗ ನೆಲದಲ್ಲಿ ಹೂತು ಹೋಗಿದ್ದ. ಒಂದು ಬೆಣಚು ಕಲ್ಲು ನೇಗಿಲ ಕುಳಕ್ಕೆ ಸಿಕ್ಕಿಹಾಕಿಕೊಂಡು ಮೇಲೆ ಏಳುತ್ತದೆ. ಹೀಗೆ ಮೇಲೆ ಬಿದ್ದ ಆ ಕಲ್ಲಿನಿಂದ ವಿಚಿತ್ರವಾದ ರೀತಿಯಲ್ಲಿ ರಕ್ತ ಮತ್ತು ಹಾಲು ಎರಡೂ ಸುರಿಯುತ್ತದೆ. ಇದರಿಂದ ಕುತೂಹಲ, ಆತಂಕಕ್ಕೊಳಗಾದ ಆ ರೈತ ಅದರ ಹಿನ್ನೆಲೆಯ ಕಾರ್ಯ ಕಾರಣವನ್ನು ಹಿರಿಯರು, ಜ್ಯೋತಿಷಿಗಳ ಮುಂದೆ ಕೇಳುತ್ತಾನೆ. ಅದಕ್ಕೆ ಆ ಕಲ್ಲಿನ ಹಿಂದಿರುವ ಹಿರಿಯ ಆತ್ಮದ ಕಥನವನ್ನು ಪುರೋಹಿತರು ಹೇಳುತ್ತಾರೆ. ಆ ಗೂರ್ಖಾ ಕುಟುಂಬದ ಹಿರಿಯ ಹೆಂಗಸು. ಆಕೆಯ ಹೆಸರು ಲಾಕನ್ ತಾಪ. ಆಕೆ ಸತ್ತು ಹೋಗಿರುತ್ತಾಳೆ. ಆಕೆಯ ಗಂಡ ಗೂರ್ಖಾರ ರಾಜ್ಯಕ್ಕಾಗಿ 1614 ರಲ್ಲಿ ಹೋರಾಡಿ ಮಡಿಯುತ್ತಾನೆ. ತನ್ನ ಗಂಡ, ತನ್ನ ಜನಾಂಗದ ಅಸ್ತಿತ್ವಕ್ಕಾಗಿ ಹೋರಾಟ ಮಾಡಿ ಸತ್ತಮೇಲೆ ತಾನಿನ್ನು ಇರುವುದು ಉಚಿತವಲ್ಲ ಎಂದು ಬಗೆದು ಲಾಕನ್ ತಾಪ ಪತಿಯೊಂದಿಗೆ ಚಿತೆಗೆ ಆಹುತಿಯಾಗುತ್ತಾಳೆ. ಹೀಗೆ ಸತಿಯಾದ ಲಾಕನ್‌ತಾಪಳನ್ನು

ನಂತರದ ದಿನಗಳಲ್ಲಿ ಮರೆತು ಬಿಡುತ್ತಾರೆ. ಆಕೆಯ ಅತೃಪ್ತ ಆತ್ಮ ಮತ್ತೆ ದೈವತ್ವ ಪಡೆಯುವ, ಕಲ್ಲಿನಲ್ಲಿ ಹಾಲು, ರಕ್ತ ಸುರಿಸುವ ಮೂಲಕ ತನ್ನ ವಿಶಿಷ್ಟ ಶಕ್ತಿ ಪ್ರದರ್ಶಿಸುತ್ತಾಳೆ. ಆಕೆ ನಿಮ್ಮ ದೈವ, ಕುಲದೈವ ಗೂರ್ಖಾಮಾತೆ. ಆಕೆಗೆ ಪ್ರಶಾಂತವಾದ, ನಿರ್ಜನವಾದ ಪ್ರದೇಶಗಳಲ್ಲಿ ಗುಡಿಯೊಂದನ್ನು ಕಟ್ಟಿ ಆರಾಧಿಸುವಂತೆ ಜ್ಯೋತಿಷಿಗಳು ಅಪ್ಪಣೆ ಮಾಡುತ್ತಾರೆ.

ಜ್ಯೋತಿಷಿಗಳ ಹೇಳಿಕೆಯಂತೆ ಲಾಕನ್‌ತಾಪ ಕುಟುಂಬದವರು ತಮ್ಮ ಮನೆತನದ ಮಡಿದ ವೀರ ವನಿತೆಯ ರೂಪವಾಗಿ ಭೂಮಿಯೊಳಗೆ ದೊರೆತ ಬೆಣಚುಕಲ್ಲನ್ನು ಈಗಿನ ಮನಕಾಮನ ದೇವಿಯ ಗದ್ದಿಗೆಯ ಸ್ಥಳದಲ್ಲಿ ಸ್ಥಾಪಿಸಿ, ಆರಾಧಿಸುತ್ತಾರೆ. ಇದೇ ಮುಂದೆ ನೇಪಾಳದ ಬಹು ದೊಡ್ಡ ಶಕ್ತಿದೇವತೆ, ಗೂರ್ಖಾ ರಾಜರ ಕುಲದೇವತೆಯಾಗಿ ಆರಾಧನೆಗೆ ಒಳಗಾಗಿದೆ. ಗೂರ್ಖಾ ರಾಜ 'ರಾಮ' ಈ ಭಾಗಕ್ಕೆ ಪ್ರತಿನಿತ್ಯ ಕುದುರೆಯ ಮೇಲೆ ಬಂದು ಪೂಜಿಸುತ್ತಿದ್ದನೆಂದು ಹೇಳಲಾಗುತ್ತದೆ. ಇಂದಿಗೂ ಲಾಕನ್‌ತಾಪ ವಂಶದ 21ನೆಯ ತಲೆಮಾರಿನ ಇನ್‌ಸಾನ್ ತಾಪ ಮಾಗರ್ ಈ ದೇವಾಲಯದ ಪ್ರಧಾನ ಅರ್ಚಕ. ಈತನಿಂದಲೇ ಮೊದಲ ಪೂಜೆ. ದೇವಾಲಯದ ಮುಚ್ಚಿದ ಬಾಗಿಲು ತೆರೆಯದೆ, ದೇವಾಲಯದ ಗರ್ಭಗುಡಿಯ ಹೊರಗೆ, ಹಿಂದಿನಂದಲೇ ದೇವಿಗೆ ಪೂಜೆ ನಡೆಯುತ್ತದೆ. ಆರಾಧನೆಯ ಸಂದರ್ಭದಲ್ಲಿ ನೈವೇದ್ಯ, ಪ್ರಸಾದವಾಗಿ ಕೋಳಿಮೊಟ್ಟೆ, ಅನ್ನ, ಕಿತ್ತಲೆಹಣ್ಣು, ಕುಂಕುಮ, ಬಳೆ ಹಾಗೂ ಹೊಸವಸ್ತ್ರವನ್ನಿಟ್ಟು ಪೂಜಿಸುತ್ತಾರೆ. ಇದು ಪ್ರಾತಃಕಾಲ ಐದು ಗಂಟೆಯ ಒಳಗೆ ಮುಗಿದುಹೋಗುತ್ತದೆ. ಲಾಕೆನ್ ತಾಪ ಕುಟುಂಬದ ಮೊದಲ ಪೂಜೆಯ ನಂತರ ದೇವಾಲಯದ ಬಾಗಿಲು ತೆರೆದು ದೈನಂದಿನ ಪೂಜೆಯ ವಿಧಿ ವಿಧಾನ ನಡೆದು ಭಕ್ತರ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತದೆ. ಇದು ಮೌಖಿಕ ಐತಿಹ್ಯವಾದರೆ ಪುರಾಣ ಮೂಲವನ್ನು ಉಲ್ಲೇಖಿಸಿದ ಕಥೆಯೂ ಮನಕಾಮನ ದೇಗುಲದ ಪರಿಸರದಲ್ಲಿ ಬಳಕೆಯಲ್ಲಿದೆ.

## ಪೌರಾಣಿಕ ಹಿನ್ನೆಲೆ:

ಜಯ-ವಿಜಯರು, ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು ಎಂಬ ಹೆಸರಿನ ರಾಕ್ಷಸರಾಗಿ ಹುಟ್ಟುತ್ತಾರೆ. ಇವರು ಮಹಾ ಪರಾಕ್ರಮಿಗಳಾಗಿದ್ದು ಪರಮ ದುಷ್ಟರಾಗಿ ಬೆಳೆಯುತ್ತಾರೆ. ಋಷಿಮುನಿಗಳನ್ನು, ಸಾಧು-ಸಂತರನ್ನು ಪೀಡಿಸುತ್ತಾ, ಅವರ ಧಾರ್ಮಿಕ ಕಾರ್ಯಗಳಿಗೆ ಅಡ್ಡಿಯನ್ನುಂಟು ಮಾಡುತ್ತಾರೆ. ದೇವಗಣದ ದೇವೇಂದ್ರನೊಂದಿಗೆ ಯುದ್ಧ ಮಾಡಿ ಆತನನ್ನು ಪರಾಭವಗೊಳಿಸುತ್ತಾರೆ. ಇದಕ್ಕೆ ಹಿರಣ್ಯಾಕ್ಷನ ಮಗಳಾದ ವಿಖಾಸಿನಿಯೂ

ಮಹಾದುಷ್ಟೆಯಾಗಿ ಬೆಳೆದು ದೇವೇಂದ್ರನೂ ಸೇರಿದಂತೆ ದೇವಾನುದೇವತೆಗಳೊಂದಿಗೆ ಯುದ್ಧ ಮಾಡಿ ದೇವಾನುದೇವತೆಗಳನ್ನು ಪರಾಭವಗೊಳಿಸುತ್ತಾಳೆ. ಆದರೂ ಎಲ್ಲ ದೇವತೆಗಳನ್ನು ನಾಶಮಾಡಲು ದೈವಬಲದೊಂದಿಗೆ ತನ್ನ ತಂದೆಯನ್ನು ಹಂದಿಯ ರೂಪದಲ್ಲಿ ಬಂದು ಕೊಂದ, ನಾರಾಯಣನನ್ನು ಕೊಲ್ಲುವಂತಹ, ಮಗನನ್ನು ಪಡೆಯಬೇಕೆಂದು ಬಯಸುತ್ತಾಳೆ. ಇದಕ್ಕೆ ದೈವಬಲ ಪಡೆಯ ಬೇಕೆಂದು ಬ್ರಹ್ಮನನ್ನು ಕುರಿತು ದೀರ್ಘವಾದ ತಪಸ್ಸು ಮಾಡುತ್ತಾಳೆ. ಈಕೆಯ ತಪಸ್ಸಿಗೆ ಪ್ರತ್ಯಕ್ಷನಾದ ಬ್ರಹ್ಮದೇವ ವಿಖಾಸಿನಿಯನ್ನು ಕುರಿತು ನಿನ್ನ ಮನದಿಚ್ಛೆ ಯಾವುದು? ಏನು ವರ ಬೇಕೆಂದು ಕೇಳಲು ವಿಖಾಸಿನಿ ಬ್ರಹ್ಮದೇವರನ್ನು ಕುರಿತು ಹೀಗೆ ಬೇಡಿಕೊಳ್ಳುತ್ತಾಳೆ. ದೇವ ನನ್ನ ತಂದೆಯಾದ ಹಿರಣ್ಯಾಕ್ಷನನ್ನು ಕೊಂದ ಶ್ರೀಹರಿಯನ್ನು ಕೊಲ್ಲುವಂತಹ ಮಗನನ್ನು ನಾನು ಪಡೆಯಬೇಕು. ಅದಕ್ಕೆ ಪೂರಕವಾಗಿ ಪರಶಿವನು ನನ್ನನ್ನು ಕೂಡುವಂತಹ ವರವನ್ನು ನೀಡಬೇಕೆಂದು ಪ್ರಾರ್ಥಿಸುತ್ತಾಳೆ. ಬ್ರಹ್ಮದೇವ ತಥಾಸ್ತು ಎನ್ನುತ್ತಾನೆ.

ಇತ್ತ ಪರಶಿವನು 'ಕೈಲಾಸನಾಥ'ನಾಗಿ ಧ್ಯಾನಮಗ್ನನಾಗುತ್ತಾನೆ. ಆ ಸಂದರ್ಭ ವಸಂತಕಾಲವಾದುದರಿಂದ ನವಿಲುಗಳ ನರ್ತನ, ದುಂಬಿಗಳ ಝೇಂಕಾರ, ಪ್ರೇಮಿಗಳ ಕಲರವದಿಂದಾಗಿ ಶಿವನ ಧ್ಯಾನ ಭಗ್ನವಾಗುತ್ತದೆ. ಕಣ್ಣು ತೆರೆದ ಕೂಡಲೇ ವಸಂತ ಕಾಲದ ಆ ಸುಂದರ ಪರಿಸರ, ಮೋಹಕ ಸಂದರ್ಭ, ತನ್ನ ಮಡದಿ ಉಮೆಯು ಜೊತೆಗಿರಬೇಕೆಂಬ ಭಾವನೆ ತೀವ್ರವಾಗುತ್ತದೆ. ಶಿವ ತ್ರಿಶೂಲಿ ನದಿಯನ್ನು ದಾಟಿ ಹಿಮಾಲಯದ ತಪ್ಪಲುಗಳಲ್ಲಿ ಸಂಚರಿಸುವಾಗ ಶಿವನನ್ನೇ ಕುರಿತು ಧ್ಯಾನಾಸಕ್ತ ವಿಖಾಸಿನಿಯನ್ನು ಉಮೆಯ ರೂಪದಲ್ಲಿ ಕಾಣುತ್ತಾನೆ. ಧ್ಯಾನಮಗ್ನಳಾದ ವಿಖಾಸಿನಿಯನ್ನು ಶಿವ ತನ್ನೆರಡೂ ಕೈಗಳಿಂದ ತಬ್ಬಿ ಹಿಡಿಯುತ್ತಾನೆ. ಆಗ ಇವರಿಬ್ಬರೂ ಪರಸ್ಪರ ಅನುರಾಗಕ್ಕೆ ಒಳಗಾಗುತ್ತಾರೆ. ಉಮೆಯ ರೂಪದ ವಿಖಾಸಿನಿಯೊಂದಿಗೆ ಶಿವ ಭೋಗನಾಥನಾಗಿ ನಡೆದುಕೊಳ್ಳುತ್ತಾನೆ. ಇವರ ಮಿಲನಕ್ಕೆ ವಿಖಾಸಿನಿ ಗರ್ಭ ಧರಿಸುತ್ತಾಳೆ. ಇತ್ತ ಉಮೆಯ ರೂಪದಲ್ಲಿ ಶಿವನಿಂದ ಗರ್ಭ ಧರಿಸಿದ ರಾಕ್ಷಸಿ ವಿಖಾಸಿನಿಯ ವಂಚನೆಯನ್ನು ದೇವತೆಗಳು ತಿಳಿದು ಇದರ ಅಂತ್ಯಕ್ಕೆ ಚಿಂತಿಸುತ್ತಾರೆ. ರಾಕ್ಷಸಿಯ ಗರ್ಭಪಾತಕ್ಕೂ ಯತ್ನಿಸುತ್ತಾರೆ. ಬ್ರಹ್ಮನ ವರದಾನವಿರುವುದರಿಂದ ಅದ್ಯಾವುದೂ ಪ್ರಯೋಜನಕ್ಕೆ ಬರುವುದಿಲ್ಲ. ಜೊತೆಗೆ ದೇವತೆಗಳ ಉಪಟಳ, ತನ್ನ ಗರ್ಭನಾಶವಾಗಬಹುದೆಂಬ ಭಯದಿಂದ ತನ್ನ ಗರ್ಭದೊಳಗಿನ ಭ್ರೂಣವನ್ನು ಗರ್ಭ ಚೀಲದೊಂದಿಗೆ ಹೊರತೆಗೆದು ಭೂದೇವಿಯನ್ನು ಪ್ರಾರ್ಥಿಸಿ ತನ್ನ ಗರ್ಭವನ್ನು ಭೂಮಿಯೊಳಗೆ ಬಚ್ಚಿಡುವಂತೆಯೂ, ಒಂಬತ್ತು ತಿಂಗಳ ತರುವಾಯ

ಮಗು ಅಲ್ಲಿಂದಲೇ ಹುಟ್ಟಿ ಬರುವಂತೆ ಪ್ರಾರ್ಥಿಸುತ್ತಾಳೆ. ವಿಖಾಸಿನಿಯ ಪ್ರಾರ್ಥನೆಯನ್ನು ಭೂದೇವಿ ಈಡೇರಿಸುತ್ತಾಳೆ. ಒಂಭತ್ತು ತಿಂಗಳ ನಂತರ ಭೂಮಿಯೊಳಗಿನಿಂದ ಸೀಳಿಕೊಂಡು ಮಗುವೊಂದು ಹೊರಬರುತ್ತದೆ. ಅದೊಂದು ಭಯಂಕರ ರಾಕ್ಷಸರೂಪಿ. ಘೋರ ಗರ್ಜನೆ ಮಾಡುತ್ತಾ, ಹಸಿವು-ನೀರಡಿಕೆಯಿಂದ ಬಳಲುತ್ತಾ, ಆರ್ಭಟಿಸುತ್ತಾ ನೇರವಾಗಿ ವಿಖಾಸಿನಿಯ ಅರಮನೆಗೆ ಬರುತ್ತದೆ. ಎಲ್ಲ ವಿಚಾರದ ಅರಿವಿದ್ದ ವಿಖಾಸಿನಿ ತನ್ನ ರಾಕ್ಷಸ ರೂಪದ ಮಗುವನ್ನು ಪ್ರೀತಿಯಿಂದ ಆರೈಕೆ ಮಾಡುತ್ತಾಳೆ. ಆ ರಾಕ್ಷಸ ಸ್ವರೂಪದ ಮಗುವಿಗೆ ಅಂಡಾಸುರನೆಂದು ಹೆಸರಿಡುತ್ತಾಳೆ.

ಅಂಡಾಸುರನಿಗೆ ತನ್ನ ವಂಶದವರನ್ನೆಲ್ಲಾ ಶ್ರೀಹರಿ ಕೊಂದ ಬಗೆಯನ್ನು ಆತನ ನಾಶದ ಕಾರಣಕ್ಕೆ ಶಿವನಿಂದ ಪುತ್ರರೂಪದಲ್ಲಿ ನಿನ್ನನ್ನು ಪಡೆದುದಾಗಿ ವಿವರಿಸಿ ಹೇಳಿ, ದೇವತೆಗಳ ಮೇಲೆ ಯುದ್ಧಕ್ಕೆ ಕಳುಹಿಸುತ್ತಾಳೆ. ಈ ಅಂಡಾಸುರನ ಉಪಟಳಕ್ಕೆ ದೇವೇಂದ್ರ ಮೊದಲಾದ ದೇವತೆಗಳೆಲ್ಲರೂ ಹೆದರಿ ಓಡಿಹೋಗುತ್ತಾರೆ. ಬ್ರಹ್ಮನ ವರ, ಶಿವನ ವರಪುತ್ರ ಹಾಗಾಗಿ ಅಂಡಾಸುರನಿಗೆ ಯಾರೂ ಎದುರೇ ಇಲ್ಲದಂತಾಗಿ, ಎಲ್ಲ ದೇವತೆಗಳು ತೀವ್ರವಾದ ಆತಂಕಕ್ಕೆ ಒಳಗಾಗುತ್ತಾರೆ. ಕೊನೆಗೆ ಆ ದುಷ್ಟನನ್ನು ಸಂಹರಿಸಲು ಶಕ್ತಿಯೇ ಬೇಕಾಗುತ್ತದೆ. ಆ ಶಕ್ತಿಯನ್ನು ಪಾರ್ವತಿ, ಲಕ್ಷ್ಮಿ, ಸರಸ್ವತಿ ತಮ್ಮಲ್ಲಿರುವ ಶಕ್ತಿಯನ್ನು ಆ ತಾಯಿಗೆ ಅರ್ಪಿಸಲಿ. ತ್ರಿಮೂರ್ತಿಗಳಾದ ಹರಿ, ಹರ, ಬ್ರಹ್ಮಾದಿಗಳು ತಮ್ಮ ದಿವ್ಯ ಚೇತನವನ್ನೆಲ್ಲಾ ಆ ಸ್ತ್ರೀರೂಪದ ಶಕ್ತಿಗೆ ತುಂಬುತ್ತಾರೆ. ಆ ತ್ರಿಶಕ್ತಿ ರೂಪವೇ ಮನಕಾಮನ ದೇವಿ. ಮನಸ್ಸಿನ ಭಾವನೆಗಳನ್ನು ಅರಿಯುವ, ಇಷ್ಟಾರ್ಥಗಳನ್ನು ಈಡೇರಿಸುವ ಶಕ್ತಿರೂಪ. ಪಾರ್ವತಿ, ಭಗವತಿ ಎಂತಲೂ ಮಾರಿ, ಆದಿಶಕ್ತಿ, ದುರ್ಗಿ ಎಂತಲೂ ಹಲವು ಹೆಸರುಗಳಿಂದ ಕರೆದು ಆರಾಧಿಸುತ್ತಾರೆ. ಈ ಚೈತನ್ಯರೂಪಿ ಶ್ರೀದೇವಿಯನ್ನು ಕಂಡು ವ್ಯಾಮೋಹಿತನಾದ ಅಂಡಾಸುರ ತನ್ನನ್ನು ವಿವಾಹವಾಗುವಂತೆ ಕೇಳಿಕೊಳ್ಳುತ್ತಾನೆ. ದೇವಿಯ ಹತ್ತಿರ ಬಂದು ತಬ್ಬಿಕೊಳ್ಳಲು ಮುಂದಾದ ಅಂಡಾಸುರನಿಗೆ ತನ್ನ ತ್ರಿಶೂಲದಿಂದ ಇರಿದು, ರಕ್ತೇಶ್ವರಿಯಾಗುತ್ತಾಳೆ. ರಾಕ್ಷಸರ ವಂಶ ನಾಶಮಾಡಿ, ದೇವತೆಗಳನ್ನು ಭವಬಂಧನದಿಂದ ಬಿಡಿಸುತ್ತಾಳೆ. ಈ ದೇವಿಯೇ ಮನಕಾಮನ ದೇವಿ ಎಂದು ಹೇಳಲಾಗುತ್ತದೆ.

## ಬಾಕೇಶ್ವರ:

ಉದ್ದನೆಯ ಸರತಿ ಸಾಲಿನಲ್ಲಿ ನಿಂತು ದೇವಿಯ ದರ್ಶನಕ್ಕೆ ಹೋದ ನಮ್ಮ ತಂಡದ ಪ್ರೊ|| ಜಯಪ್ರಕಾಶ್ ಅವರ ಜೊತೆಯ ಸಹಪ್ರವಾಸಿಗರು ತಕ್ಷಣಕ್ಕೆ ಬರಲಿಲ್ಲ.

ಅವರು ಬರಲಿಲ್ಲವೆಂಬ ಆತಂಕ, ಕೋಪ-ತಾಪ ನಮಗೂ ಬರಲಿಲ್ಲ. ಮನಮೋಹಕ ಪ್ರಾಕೃತಿಕ ಸೊಬಗು, ರುಚಿಕಟ್ಟಾದ ಕಿತ್ತಲೆಹಣ್ಣಿನ ಸವಿ. ಹಾಗಾಗಿ ಮನಕಾಮನ ದೇವಿಯ ಆಲಯದ ಸುತ್ತಲಿನ ಕಣಿವೆಯ ಮೈದಾನದಲ್ಲಿ ಸುತ್ತಾಡಲು ಸಾಧ್ಯವಾಯಿತು.

ಮನಕಾಮನ ದೇವಾಲಯದ ಉತ್ತರ ಬದಿಗೆ ಬಾಕೇಶ್ವರ ಮಹದೇವ ಎಂಬ ಶಿವ ದೇವಾಲಯವಿದೆ. ಈ ದೇವಾಲಯಕ್ಕೆ ಕುತೂಹಲಕರ ಐತಿಹ್ಯವಿದೆ. ಪರಶಿವನ ಮಡದಿ ಪಾರ್ವತಿ ದೇವಿ ಮರಣ ಹೊಂದುತ್ತಾಳೆ. ಆಕೆಯ ಶವವನ್ನು ಸಂಸ್ಕಾರಕ್ಕೆ ತೆಗೆದುಕೊಂಡು ಹೋಗುವಾಗ ಪಾರ್ವತಿಯ ನಾಲಿಗೆ ತುಂಡಾಗಿ ಈ ಸ್ಥಳದಲ್ಲಿ ನೆಲಕ್ಕೆ ಬೀಳುತ್ತದೆ. ಇದೇ ಸ್ಥಳದಲ್ಲಿ ಶಿವನ ಲಿಂಗವೊಂದು ರೂಪುಗೊಂಡಿತೆಂದು ಹೇಳಲಾಗುತ್ತಿದೆ. ನೇಪಾಳದ ಸುತ್ತ ಈ ಬಗೆಯ ನಂಬಿಕೆಯೂ ರೂಢಿಯಲ್ಲಿದೆ. ಚಿಕ್ಕಮಕ್ಕಳು ಅವರು 2 ರಿಂದ 4 ವರ್ಷದೊಳಗಿನವರಿಗೆ ಮಾತು ಬಾರದೆ ಇದ್ದಾಗ, ನಾಲಿಗೆ ತೊದಲು ಇರುವವರು ಬಾಕೇಶ್ವರ ಮಹದೇವನ ಸನ್ನಿಧಿಗೆ ಬಂದು ಪೂಜೆ ಸಲ್ಲಿಸಿದರೆ, ನಾಲಿಗೆ ತಿರುಗಿ ಮಾತು ಬರುತ್ತವೆ, ತೊದಲು ಸರಿಯಾಗುತ್ತದೆ ಎಂಬ ನಂಬಿಕೆ ಬಲವಾಗಿದೆ. ಅದರಂತೆ ಆಚರಣೆಯೂ ರೂಢಿಯಲ್ಲಿದೆ. ಇದರ ಇನ್ನೊಂದು ಬದಿಗೆ ಗೋರಖ್‌ನಾಥನ ಗುಹೆ ಎಂಬ ಗುಹಾಂತರ ದೇವಾಲಯವಿದೆ. ಗೋರಖ್‌ನಾಥ್ ಎಂಬುವವನು ಗೂರ್ಖರ ಪ್ರಮುಖ ಗುರುವಾಗಿಯೂ, ಮಾರ್ಗದರ್ಶನ ಮಾಡುತ್ತಿದ್ದನೆಂದು ಹೇಳಲಾಗುತ್ತಿದೆ. ಹಾಗಾಗಿಯೇ ಇಂದಿಗೂ ಗೂರ್ಖರ ಮನೆತನಗಳಿಂದ ವಿಶೇಷ ಪೂಜೆಯ ಏರ್ಪಾಡು ನಡೆಯುತ್ತದೆ. ಮನಕಾಮನ ಕಣಿವೆಯ ಇಳಿಜಾರಿನಲ್ಲಿರುವ ಈ ಗುಹೆಯಲ್ಲಿ ರಾಜಋಷಿ ತಪಸ್ಸು ಮಾಡುತ್ತಿದ್ದನೆಂಬ ನಂಬಿಕೆ. ಆ ಋಷಿ ಇದೇ ಗುಹೆಯ ಒಳಗೆ ಐಕ್ಯವಾಗಿರುವನೆಂದೂ ನಂಬುತ್ತಾರೆ. ಬಂದ ಯಾತ್ರಿಕರು, ಭಕ್ತರು ಗವಿಯ ಕಪ್ಪುಶಿಲೆಯ ಬಾಗಿಲಿಗೆ ಪೂಜೆ ಸಲ್ಲಿಸುತ್ತಾರೆ. ವ್ಯಕ್ತಿ ಯಾರೇ ಆಗಲಿ ಆತನ ಸಾಧನೆಯೇ ಮುಖ್ಯ, ಅನುಕರಣೀಯ ಬದುಕು ಮುಖ್ಯ. ಆ ಅನುಕರಣೀಯ ನಡಾವಳಿ ಗೋರಖ್‌ನಾಥನ ಆರಾಧನೆಯಲ್ಲಿ ಕಾಣಬಹುದಾಗಿದೆ. ಮನಕಾಮನ ಗುಡಿಯ ತುಸು


ಬಾಕೇಶ್ವರ ದೇವಾಲಯ

ದೂರದಲ್ಲಿ ಕೊಂಚ ಇಳಿ ಜಾರಿನಲ್ಲಿ ಮತ್ತೊಂದು ದೇವಾಲಯವಿದೆ. ಜನಮರುಳೋ ಜಾತ್ರೆ ಮರುಳೋ ಎಂಬಂತೆ ಮನಕಾಮನಕ್ಕೆ ಬಂದವರೆಲ್ಲರೂ ಇಲ್ಲಿಗೂ ಭೇಟಿ ನೀಡುತ್ತಾರೆ. ಸದ್ದು ಗದ್ದಲ, ರಕ್ತ-ಆಹಾರ ನೈವೇದ್ಯ ಗಳಿಂದ ವಿಮುಕ್ತವಾಗಿ ಶಾಂತವಾಗಿರುವ ದೇವಾಲಯ ಸ್ವರೂಪದ ಒಂದು ಸ್ಮಾರಕ. ಇದನ್ನು ಹಿರಿಯರ ದಿಬ್ಬವೆಂದೂ ಕರೆಯಲಾಗುತ್ತದೆ. ಕರ್ನಾಟಕ ಸೇರಿದಂತೆ ಭಾರತದ ಹಲವು ರಾಜ್ಯಗಳಲ್ಲಿ, ಬುಡಕಟ್ಟು ಸಂಸ್ಕೃತಿಯಲ್ಲಿ ಹಿರಿಯರು ಕಲ್ಲು, ಮರ, ಗುಡ್ಡ, ಹುತ್ತಗಳ ರೂಪದಲ್ಲಿ ಆರಾಧನೆಗೆ ಒಳಗಾಗುತ್ತಾರೆ. ಇದೇ ಮಾದರಿ ನೇಪಾಳದ ಕಣಿವೆ ಪ್ರದೇಶದಲ್ಲೂ ಕಾಣಬಹುದು. ಆ ಒಂದೆರಡು ಮಾದರಿಗಳು ಮನಕಾಮನ ಕಣಿವೆಯ ಆಸುಪಾಸಿನಲ್ಲಿವೆ. ಇದರಲ್ಲಿ ಲಾಕಸ್‌ತಾಪ್‌ನ ಗುಹೆಯೂ ಒಂದು.

## ಲಾಕಸ್‌ತಾಪ್‌ಗೆ ಘಟಶ್ರಾದ್ಧ:

ಲಾಕಸ್‌ತಾಪ್ ಗುಹಾಂತರ ದೇವಾಲಯ. ಪ್ರಬಲ ಶಕ್ತಿದೇವತೆ ಎಂದು ನಂಬಲಾಗಿದೆ. ಇದರ ಮೂಲ ಭಾರತ-ನೇಪಾಳದ ಸಂಬಂಧವನ್ನು ಕಲ್ಪಿಸಿರುವುದು ಮತ್ತೊಂದು ವಿಶೇಷ. ವಾಹನ ಸೌಕರ್ಯ ಮೊದಲಾದ ನಾಗರಿಕ ಸೌಲಭ್ಯಗಳಿಂದ ಕ್ಷಣಾರ್ಧದಲ್ಲಿ ರಾಷ್ಟ್ರ-ರಾಷ್ಟ್ರಗಳ ನಡುವೆ ಸಂಪರ್ಕ ಸಾಧಿಸುವ, ಹೋಗಿಬರುವ ಈ ದಿನಗಳಿಗೆ ಹೋಲಿಸಿದರೆ ಪ್ರಾಚೀನ ಕಾಲದಿಂದಲೂ ಭಾರತ-ನೇಪಾಳದ ಅನ್ಯೋನ್ಯತೆ ಹೋಗಿಬರುವ ಜನಾಂಗಿಕ ಸಂಬಂಧ ಸಾರುವ ಹಲವು ನಿದರ್ಶನಗಳು ನೇಪಾಳ ದೇಶದ ತುಂಬಾ ವ್ಯಾಪಕವಾಗಿವೆ. ಬುಡಕಟ್ಟು ಮಾದರಿಯ ಗುಡ್ಡೆಪೂಜೆಯ ರೂಪದಲ್ಲಿ ಕಂಡುಬರುವ ಲಾಕಸ್‌ತಾಪ್ ದೇವಾಲಯ ಭಾರತಕ್ಕೆ ಹೋದವನು ಬಹಳ ದಿನಗಳ ಕಾಲ ಹಿಂತಿರುಗಿ ಬರಲಿಲ್ಲ. ಆತನ ಮನೆಯವರು, ಊರವರು ಬಹಳ ವರ್ಷಗಳಾದರೂ ಬರಲಿಲ್ಲವೆಂದು ಲಾಕಸ್‌ತಾಪ್ ಬದುಕಿದ್ದರೆ ಈ ವೇಳೆಗೆ ಬಂದೇ ಬರುತ್ತಿದ್ದನು, ಬಂದಿಲ್ಲ. ಹಾಗಾಗಿ ಆತನು ಸತ್ತುಹೋಗಿರಲೇಬೇಕು ಎಂಬ ತೀರ್ಮಾನಕ್ಕೆ ಬಂದರು. ಗೂರ್ಖಾ ಸಂಪ್ರದಾಯದ ಪ್ರಕಾರ ಸತ್ತವರಿಗೆ ಸಂಸ್ಕಾರ ಕ್ರಿಯೆಗಳನ್ನು ಮಾಡುವುದು ವಾಡಿಕೆ.

ಸತ್ತವರು ನಮ್ಮ ಎದುರಿಗಿರಲಿ, ಇಲ್ಲದಿರಲಿ ಅವರಿಗೆ ಮಾಡಬೇಕಾದ ಉತ್ತರ ಕ್ರಿಯೆಗಳನ್ನು ಮಾಡುತ್ತಾರೆ. ಕರ್ನಾಟಕದಲ್ಲಿ ಬ್ರಾಹ್ಮಣ ಸಮುದಾಯದಲ್ಲಿ ಇಂದಿಗೂ ಈ ಸಂಪ್ರದಾಯವಿದೆ. ಇದನ್ನು 'ಘಟಶ್ರಾದ್ಧ' ಎಂಬ ಹೆಸರಲ್ಲಿ ಕರೆಯಲಾಗುವುದು. ಹಿಂದೂ ಸಂಸ್ಕಾರ, ಆಚಾರ-ವಿಚಾರ ದಟ್ಟವಾಗಿರುವ ನೇಪಾಳದಲ್ಲೂ ಇದೇ ಪದ್ಧತಿ ಇದೆ. ಆ ಪದ್ಧತಿಯಂತೆ ಭಾರತಕ್ಕೆ ಬಂದು ಕಾಣೆಯಾದ ಲಾಕಸ್‌ತಾಪ್‌ಗೂ ಶ್ರಾದ್ಧ

ಮಾಡಲಾಯಿತು. ಆದರೆ ವಿಧಿ ಈ ಎಲ್ಲ ಆಟವನ್ನು ಮೀರಿ ಮತ್ತೊಂದು ಜೀವನವನ್ನು ಬದಲಿಸಿತ್ತು. ಭಾರತದಿಂದ ಬಹಳ ವರ್ಷಗಳ ನಂತರ ಲಾಕಸ್ ತನ್ನ ಊರಿಗೆ ಹಿಂತಿರುಗಿ ತನ್ನ ಹಳ್ಳಿಯ ಸಮೀಪಕ್ಕೆ ಬರುವಾಗ್ಗೆ ಭಾರೀ ಜನಗಳ ಗುಂಪನ್ನು ಕಾಣುತ್ತಾನೆ. ದಾರಿಹೋಕ ಒಬ್ಬನಿಂದ ಅದಕ್ಕೆ ಕಾರಣ ಕೇಳುತ್ತಾನೆ. ಆ ದಾರಿಹೋಕ ಲಾಕಸ್‌ತಾಪ ಎಂಬ ಯುವಕ ಭಾರತದ ಕಡೆ ವಲಸೆ ಹೋದವನು ಇದುವರೆಗೆ ಬಂದಿಲ್ಲ. ಆತನು ಜೀವಂತವಾಗಿದ್ದರೆ ಈ ವೇಳೆಗೆ ಹಿಂತಿರುಗಿ ಬಂದೇ ಬರುತ್ತಿದ್ದ. ಆತನು ಬಾರದೇ ಇರುವುದನ್ನು ಕಂಡು ಆ ಮನೆಯವರು ಅವನು ಸತ್ತಿದ್ದಾನೆಂದು ಸಂಪ್ರದಾಯದ ಪ್ರಕಾರ ಶ್ರಾದ್ಧ ಮಾಡಿ ಈಗ ಊರು ಸೇರಿದರು. ಅದೇ ಜನಗಳ ಗುಂಪು ಎಂದನು.

ಲಾಕಸ್‌ತಾಪ್‌ನಿಗೆ ಜೀವನವೇ ಬೇಸರವಾಯಿತು. ಫಟಶ್ರಾದ್ಧವಾದ ಮೇಲೆ ಮನೆ ಸೇರಬಾರದೆಂದು ಅಲ್ಲೇ ಸಮೀಪದಲ್ಲಿದ್ದ ಗುಹೆಯ ಒಳಗೆ ಹೋದವನು ತಪದಲ್ಲಿ ನಿರತನಾದನು. ಹೇಗೋ ಸುದ್ದಿ ತಿಳಿದ ಗೂರ್ಖಾ ಜನರು ಹುಡುಕಿದರೂ ಸನ್ಯಾಸಿಯ ಧ್ವನಿ ಮಾತ್ರ ಕೇಳುತ್ತಿದ್ದು ಆತನ ಸುಳಿವು ಕಾಣಲಿಲ್ಲ. ಅಂದಿನಿಂದ ಆತ ದೈವವಾಗಿದ್ದಾನೆ, ನಮ್ಮನ್ನೆಲ್ಲಾ ಹರಸುತ್ತಾನೆಂದು ಲಾಕಸ್ ಒಳಸೇರಿದ ಗುಹೆಯ ಬಾಗಿಲನ್ನೇ ದೇವಾಲಯವನ್ನಾಗಿಸಿಕೊಂಡು ಪೂಜಿಸುತ್ತಾರೆ. ಇದರಿಂದ ತಮ್ಮ ಪಾಪ ಪರಿಹಾರವಾಗುತ್ತದೆಂಬ ನಂಬಿಕೆ ಇಂದಿಗೂ ಇದೆ. ಅದರಂತೆ ನಡೆದುಕೊಳ್ಳುತ್ತಾರೆ.

ನೇಪಾಳದ ರಾಜವಂಶಗಳಲ್ಲಿ ಶಾಹ ರಾಜವಂಶ ಪ್ರಮುಖವಾದುದು. ಇದು ಕ್ರಿ.ಶ.1723 ರಿಂದ 2008 ರವರೆಗೆ ಅಧಿಕಾರ ನಡೆಸುತ್ತದೆ. ಈ ಶಾಹ ರಾಜವಂಶದ ಮೊದಲನೆಯ ರಾಜ ಪೃಥ್ವೀನಾರಾಯಣ ಶಾಹ ಕ್ರಿ.ಶ.1723 ರಲ್ಲಿ ಹುಟ್ಟಿ 1775 ರವರೆಗೆ ಕಠ್ಮಂಡುವನ್ನು ಆಳುತ್ತಾನೆ. ಈತನು ಲಾಕಸ್‌ತಾಪನ ವಂಶದವನಾಗಿದ್ದು ಈ ಗುಹಾ ದೇವಾಲಯದಲ್ಲಿ ಪ್ರಾರ್ಥನೆ ಸಲ್ಲಿಸಿದ ನಂತರವೇ ಆತನು ರಾಜನೀತಿ ಕಾರ್ಯಗಳಲ್ಲಿ ತೊಡಗುತ್ತಿದ್ದುದು. ಆ ಸಂಪ್ರದಾಯ ಕಠ್ಮಂಡುವಿನ ಕೊನೆಯ ರಾಜ (2001-2008) ರಾಜ ಜ್ಞಾನೇಂದ್ರ ವೀರ ವಿಕ್ರಮ ಶಾಹನವರೆಗೂ ಮುಂದುವರಿದಿತ್ತು. ಹಾಗಾಗಿ ಮನಕಾಮನ ದರ್ಶನಕ್ಕೆ ಹೋದವರೆಲ್ಲಾ ಇಂದಿಗೂ ಲಾಕಸ್ ತಾಪನ ಗುಹಾಂತರ ದೇವಾಲಯಕ್ಕೂ ಭೇಟಿ ನೀಡುವುದು ವಾಡಿಕೆಯಾಗಿದೆ. ನಾನು ಕುತೂಹಲದಿಂದಲೇ ನೋಡಿದೆ. ಪರ್ವತದ ಉಸುಕು ಮಣ್ಣಿನ ಇಳಿಜಾರಿನಲ್ಲೊಂದು ಬಂಡೆ, ಅದರ ತುದಿಯಲ್ಲೇ ತ್ರಿಶೂಲ ಮೊದಲಾದ ವಸ್ತುಗಳನ್ನಿಟ್ಟು ಪೂಜಿಸುತ್ತಾರೆ ಅಷ್ಟೇ.

ಮನಕಾಮನ ಕಣಿವೆ ಇಳಿದು ತ್ರಿಶೂಲ ನದಿಯ ದಂಡೆಯಲ್ಲಿ ತಣ್ಣನೆಯ ಚಿತ್ರಾನ್ನ, ಅದಕ್ಕೂ ತಣ್ಣನೆಯ ಮೊಸರನ್ನವನ್ನು ಊಟ ಮಾಡಿದೆವು. ಮೂರ್‍ನಾಲ್ಕು ಜನ ಮೊದಲೇ ಕೇಬಲ್ ಕಾರಿನಲ್ಲಿ ಬಂದುದರಿಂದ ಬೇಗ ಊಟ ಮುಗಿಸಿದೆವು. ನಾನು ತ್ರಿಶೂಲ ನದಿಯ ಮರಳ ದಂಡೆಯಲ್ಲಿ ಮೃದುವಾದ ಬಗೆಬಗೆಯ ಆಕೃತಿಯ ಕಲ್ಲುಗಳನ್ನು ನೋಡುತ್ತಾ ತಣ್ಣಗೆ ಹರಿಯುತ್ತಿದ್ದ ತ್ರಿಶೂಲ ನದಿಯಲ್ಲಿ ಸ್ವಲ್ಪ ದೂರ ನಡೆದೆ. ಮೇಲಕ್ಕೆ ನೋಡಿದರೆ ಹಸಿರು ಬಿಳಿ ಮಿಶ್ರಿತ ಎತ್ತರದ ಕಣಿವೆ, ಸುತ್ತಲೂ ಕಣಿವೆ! ಭಯ ಅಂಕುರಿಸಿತು. ಹಿಂದಕ್ಕೆ ತಿರುಗಿ ಪ್ರೊ||ದಸ್ತಗೀರ್, ಶೈಲಕುಮಾರಿ ಅವರೊಂದಿಗೆ ಕೂಡಿಕೊಂಡೆ. ನಮ್ಮ ಪ್ರೊ||ಮೋಹನ್ ಎಂದಿನಂತೆ ಫೋಟೋ ತೆಗೆಯುವುದರಲ್ಲಿಯೇ ಮಗ್ನರಾಗಿದ್ದರು. ನಮ್ಮ ತಂಡದವರೆಲ್ಲರೂ ಊಟ ಮುಗಿಸಿದ ತಕ್ಷಣ ವಾಹನ ಹತ್ತಿದೆವು. ಕೇರಳ ತಂಡದ ಸದಸ್ಯರು ಬಸ್ಸಿನಲ್ಲಿ ಈ ಮೊದಲೇ ಕುಳಿತಿದ್ದರು. ಗೈಡ್ ಅರ್ಜುನ ಪಾಂಡೆ ಮುಂದಿನ ಯಾತ್ರೆ ವಿವರ ಒದಗಿಸಿದರು. ಬಸ್ಸು ಎತ್ತರದ ಕಣಿವೆಗಳಲ್ಲಿ ಹಾದು ಹೋಗಬೇಕಾಗುತ್ತದೆ. ಕಠ್ಮಂಡುವಿನಿಂದ 200 ಕಿ.ಮೀ. ದೂರದಲ್ಲಿರುವ ನೇಪಾಳದ ಸುಂದರ ನಗರ ಪೋಖ್ರಾದಲ್ಲಿ ರಾತ್ರಿ ವಸತಿ ಎಂದು ವಿವರಿಸಿ ಪೋಖ್ರಾ ಪಟ್ಟಣದ ಮೇಲೆ ಪುಟ್ಟ ಉಪನ್ಯಾಸವನ್ನೇ ಕೊಟ್ಟರು. ಪಾಂಡೆ ಲವಲವಿಕೆಯ ಮನುಷ್ಯ. ನೇಪಾಳಿ ಮಿಶ್ರಿತ ಹಿಂದಿ ಹಾಗೂ ನಡುನಡುವೆ ಇಂಗ್ಲಿಷ್ ಭಾಷೆಯಲ್ಲಿಯೂ ಮಾತನಾಡುತ್ತಾನೆ. ಸ್ಪಷ್ಟವಾದ, ಕಲಾತ್ಮಕ ಮಾತುಗಾರಿಕೆಯ ಮನುಷ್ಯ, ಮಾತಿನಲ್ಲಿ ಉದಾರಿ!



ಪೋಖ್ರಾ ಚೌಕ

೭

# ಪೋಖ್ರಾ ಎಂಬ ಸುಂದರ ನಗರ

ಮನಕಾಮನ ಕಣಿವೆಯಿಂದ ಪೋಖ್ರಾಕ್ಕೆ ಮೂರು ತಾಸಿನ 74 ಕಿ.ಮೀ. ಹಾದಿ. ಘೋರ ಕಣಿವೆ, ಕುರುಚಲು ಕಾಡು, ಮಧ್ಯೆಮಧ್ಯೆ ಧುಮ್ಮಿಕ್ಕುವ ಜಲಪಾತ. ಇದರ ನಡುವೆ ಒಂದು ವಿದ್ಯುತ್ ಉತ್ಪಾದನಾ ಕೇಂದ್ರವೂ ಇದೆ.

ಪೋಖ್ರಾ ಸಮುದ್ರ ಮಟ್ಟದಿಂದ 900 ಮೀ. ಎತ್ತರದಲ್ಲಿದೆ. ಇದು ಕಾಸ್ಕಿ ಜಿಲ್ಲೆಯಲ್ಲಿದೆ. ಕಠ್ಮಂಡುವಿನಿಂದ ಪಶ್ಚಿಮಕ್ಕೆ 200 ಕಿ.ಮೀ. ದೂರದಲ್ಲಿದೆ. ಭಾರತದ ಉತ್ತರಪ್ರದೇಶ ರಾಜ್ಯದ ಗೋರಖ್‌ಪುರಕ್ಕೆ ಹತ್ತಿರದ ಪ್ರದೇಶ. ಸುಮಾರು 325 ಕಿ.ಮೀ. ಆದರೂ ಒಂದು ದಿನದ ಪೂರ್ಣ ಪ್ರಯಾಣ. ನಾವು ಮನಕಾಮನ ಮಾರ್ಗವಾಗಿ ಬಂದು ರಾತ್ರಿ 8 ಗಂಟೆಗೆ ಪೋಖ್ರಾ ತಲುಪಿದೆವು. ಇಲ್ಲಿನ ಹೋಟೆಲ್ ತಾಜ್‌ನಲ್ಲಿ ವಸತಿ ವ್ಯವಸ್ಥೆ ಮಾಡಲಾಗಿತ್ತು. ನಮ್ಮ ನಾಯಕ ಪ್ರೊ||ಜಯಪ್ರಕಾಶ್ ತ್ವರಿತವಾಗಿ ಹೋಟೆಲ್ ವ್ಯವಸ್ಥಾಪಕರೊಂದಿಗೆ ಮಾತನಾಡಿ ನಮಗೆಲ್ಲ ಕೊಠಡಿ ಕೀ ನೀಡಿದರು. ಇವರು ಸೂಚಿಸಿದ ಕೊಠಡಿಗಳಿಗೆ ಹೊರಟೆವು.

ಎಂದಿನಂತೆ ನಾನು ಮತ್ತು ಹಿರಿಯ ನಾಗರಿಕ ಪ್ರೊ|| ಕೆಸಿಎನ್ ಮೊದಲ ಮಹಡಿಯ ರೂಂ ನಂ.19 ರಲ್ಲಿ ವಸತಿ ಹಿಡಿದೆವು. ರೂಮಿನಲ್ಲಿ ಸುಸಜ್ಜಿತವಾದ ಎಲ್ಲಾ ವ್ಯವಸ್ಥೆಯಿತ್ತು. ಬಟ್ಟೆ ಬದಲಿಸುವ ಹೊತ್ತಿಗೆ ಬಿಸಿಬಿಸಿ ಕಾಫಿ ಬಂದಿತು. ಕಾಫಿ ಹೀರಿ ಸುಡುಸುಡು ಬಿಸಿನೀರಿನಲ್ಲಿ ಮೊದಲು ಕೆಸಿಎನ್ ನಂತರ ನಾನು ಸ್ನಾನ ಮುಗಿಸಿದೆವು. ವಾತಾವರಣ ಕಠ್ಮಂಡುವಿಗಿಂತ ಹಿತವಾಗಿತ್ತು. ತೀರಾ ಚಳಿಯೂ ಅಲ್ಲ, ಬಿಸಿಯೂ ಅಲ್ಲದ ಒಂದು ಬಗೆಯ ತಮಿಳುನಾಡಿನ ಕೊಡೈಕೆನಾಲ್‌ನ ಹವೆ. ಕಠ್ಮಂಡು, ಮನಕಾಮನ, ಗೂರ್ಖಾ ಇಲ್ಲೆಲ್ಲಾ ವಿಪರೀತ ಚಳಿ ಅನುಭವಿಸಿದ ನನಗೆ ಇದೊಂದು ಬಗೆಯ ಹೊಸ ವಾತಾವರಣ ಅನ್ನಿಸಿತು. ಒಪ್ಪವಾದ ತಾಜ್ ವಸತಿನಿಲಯದ ಟಿ.ವಿಯಲ್ಲಿ ಕನ್ನಡ ಚಾನಲ್‌ಗಾಗಿ

ಹುಡುಕಾಡುತ್ತಿದ್ದೆ. ಪ್ರೊಫೆಸರ್ 'ಸುತ್ತಾಡಿಕೊಂಡು ಬರುವಾ' ಅಂದರು. 'ಇಷ್ಟು ಹೊತ್ತಿನಲ್ಲಾ ಸಾರ್?' ಅಂದೆ. 'ಎಲ್ಲರೂ ಹೋಗಿದ್ದಾರೆ. ಊಟ ಹತ್ತು ಗಂಟೆಯ ಮೇಲೆ, ಬನ್ನಿ' ಅಂದು ಹೊರಟರು. ನಾನು ರೂಮ್ ಕೀ ಹಾಕಿ ಅವರನ್ನು ಹಿಂಬಾಲಿಸಿದೆ. ರಾತ್ರಿಗೆ ಪೋಖ್ರಾ ಹೇಳಿಕೊಳ್ಳುವ busy ಅಲ್ಲ. ಊರ ತುಂಬಾ ವೈನ್ ಷಾಪ್, ಬಗೆಬಗೆಯ ಬಾಟಲ್‌ಗಳ ಪ್ರದರ್ಶನ ಎದ್ದು ಕಾಣುತ್ತಿದ್ದವು. ರಾತ್ರಿ 10 ಗಂಟೆ ಆಗಿದ್ದರೂ ವಿದೇಶೀಯರು ಮಾಮೂಲಿನಂತೆಯೇ ಓಡಾಡುತ್ತಿದ್ದರು. ಪ್ಯಾಕೇಜ್ ಟೂರ್ ಆಫೀಸ್‌ಗಳೇ ಎಲ್ಲೆಂದರಲ್ಲಿ. ಸಫಾರಿ, ರ್‍ಯಾಫ್ಟಿಂಗ್, ಜಂಗಲ್, ಟ್ರೆಕ್ಕಿಂಗ್ ಏಜೆಂಟರು, ಬೋರ್ಡ್‌ಗಳು. ಪೋಖ್ರಾದ ಬಟ್ಟೆ ಅಂಗಳದಲ್ಲಿ ಪಶ್ಮಿನಾ ಎಂಬ ವಿಶಿಷ್ಟ ನಮೂನೆಯ ಶಾಲುಗಳು ದೊರೆಯುತ್ತವೆ. ನೂರು ಶೇಕಡಾ ಪಶ್ಮಿನಾ ಶಾಲುಗಳು ಎಂಬ ಬೋರ್ಡುಗಳು ಎಲ್ಲೆಡೆ ರಾರಾಜಿಸುತ್ತವೆ. ವೈನ್ ಶಾಪ್‌ಗಳಂತೆ ಅಲಂಕೃತಗೊಂಡ ಹೋಟೆಲ್‌ಗಳೂ ಇಲ್ಲಿ ಹೆಚ್ಚು. ಪ್ರವಾಸಿ ಸ್ಥಳವಾದುದರಿಂದ ರಾತ್ರಿಯೆಲ್ಲಾ ಹೋಟೆಲ್ ತೆರೆದಿರುತ್ತವೆ. ಹೋಟೆಲ್ ಮುಂಭಾಗದಲ್ಲಿ ಫುಟ್‌ಪಾತ್‌ಗೆ ಹೊಂದಿಕೊಂಡಂತೆ ಗೇಟ್‌ನಲ್ಲಿಯೇ ಮೆನು ಕಾರ್ಡ್ ಇಟ್ಟಿರುತ್ತಾರೆ. ಅದನ್ನು ಇಂಗ್ಲಿಷ್, ಹಿಂದಿ ಭಾಷೆಗಳೆರಡರಲ್ಲೂ ಮುದ್ರಿಸಲಾಗಿರುತ್ತದೆ. ಆ ಮೆನು ಕಾರ್ಡ್ ಓದಿಕೊಂಡು ಊಟ-ತಿಂಡಿ ಇಷ್ಟವಾದರೆ ಅದರ ಬೆಲೆಯನ್ನು ಹೊರಗಡೆಯಿಂದಲೇ ಖಚಿತಪಡಿಸಿಕೊಳ್ಳಬಹುದು. ಇಷ್ಟವಾದರೆ ಒಳಗೆ ಹೋಗಬಹುದು, ಇಲ್ಲವಾದರೆ ಮುಂದಿನ ದಾರಿ ಹಿಡಿಯಬಹುದು. ರಾತ್ರಿ ಸಮಯ ಹೊಸ ಜಾಗ ಬೇರೆ ನಮ್ಮ ತಂಡ ಎಲ್ಲಿ ನನ್ನನ್ನು ಬಿಟ್ಟು ಮುಂದಕ್ಕೆ ಹೋದಾರೋ ಎಂಬ ಆತಂಕ, ಭಯದಿಂದಲೇ ಆ ರಾತ್ರಿ ಪೋಖ್ರಾವನ್ನು ನೋಡುತ್ತಾ ಬಂದೆ. ಇಲ್ಲಿ 500 ರೂ. ಮುಖಬೆಲೆಯ ಇಂಡಿಯಾ ನೋಟುಗಳನ್ನು ತೆಗೆದುಕೊಳ್ಳುವುದಿಲ್ಲ. ನೇಪಾಳಿ ಕರೆನ್ಸಿ ಇದ್ದರೆ ಕೊಡಿ ಇಲ್ಲೆಲ್ಲಾ ವಿದೇಶೀಯರೇ ಬರುತ್ತಾರೆ ಎನ್ನುತ್ತಿದ್ದರು. ಇದು ಆ್ಯಪಲ್ ಅಂಗಡಿಯ ವಿಚಾರ. ಇದಕ್ಕೆ ತಕ್ಕನಾಗಿ ಪ್ರತಿಕ್ರಯಿಸಿದ ಪ್ರೊ|| ದಸ್ತಗೀರ್ ಪೋಖ್ರಾಕ್ಕೆ ಬಂದು ಪೋಕರಿಗಳಾಗಬಾರದು ಎಂದು ತುಸು ಜೋರಾಗಿಯೇ ನಗುತ್ತಾ ತಮಾಷೆ ಮಾಡುತ್ತಿದ್ದರು.

ನಮ್ಮ ತಂಡದಲ್ಲಿದ್ದ ಕೆಲವರು ಆ ರಾತ್ರಿಯಲ್ಲೂ ಚಿನ್ನದ ದರ, ರುದ್ರಾಕ್ಷಿ ಮಣಿ, ಹವಳಗಳ ಧಾರಣೆ ವಿನಿಮಯದಲ್ಲಿ ತೊಡಗಿದ್ದರೆ ಕೆಲವರು ವಿದೇಶೀ ವೈನ್ ರೇಟ್ ಹೇಗೆ ಎಂಬ ತರ್ಕದಲ್ಲೂ ಇದ್ದರು. ಅಂತೂ ಪೋಖ್ರಾ ಸುತ್ತಿ ಹೋಟೆಲ್ ತಾಜ್‌ಗೆ ಬಂದಾಗ ರಾತ್ರಿ 11 ಗಂಟೆ ಮೀರಿತ್ತು. ಗಸಗಸೆ ಪಾಯಸ, ಪೂರಿ-ಸಾಗು, ಅನ್ನ-ಸಾರು, ಮೊಸರು ಸಿದ್ಧವಾಗಿತ್ತು. ಮಂಗಳೂರಿನ (ಕುಂದಾಪುರದ) ಶ್ರೀ ಮುಖೇಶ್ ನಮ್ಮ

ಜೊತೆಯಲ್ಲಿಯೇ ಊಟೋಪಚಾರದ ಮೇಲ್ವಿಚಾರಕನಾದುದರಿಂದ ಕರ್ನಾಟಕದ ರುಚಿಕಟ್ಟಾದ ಊಟ, ನೇಪಾಳದ ಹಿಮಕಂದರದ ಕಣಿವೆಯಲ್ಲೂ ನಮ್ಮನ್ನು ಉಲ್ಲಾಸಗೊಳಿಸುತ್ತಿತ್ತು. ಬಯಲುಸೀಮೆಯ ಖಾರ ತುಸು ಕಡಿಮೆಯೇ.

ಚಳಿ ಕಡಿಮೆ. ಪ್ರಾತಃಕಾಲ 5 ಗಂಟೆಗೆ ಎಚ್ಚರವಾಯಿತು. ಎದ್ದು ಮುಖ ತೊಳೆದು ಒಂದು ರೌಂಡ್ ಸುತ್ತಾಡಿಕೊಂಡು ಬರುತ್ತೀನಿ ಎಂದು ಪ್ರೊ|| ಕೆಸಿಎನ್‌ಗೆ ಹೇಳಿದೆ. ಅವರಿನ್ನೂ ರಗ್ಗು ಹೊದ್ದುಕೊಂಡು, ಮಂಕಿ ಕ್ಯಾಪ್‌ನೊಳಗಿನಿಂದಲೇ 'ದೂರ ಹೋಗಬೇಡಿ, ಹೋದ ಜಾಗ ಗುರುತಿಟ್ಟುಕೊಂಡು ಬೇಗ ಬನ್ನಿ' ಅಂದರು. ಕೊಠಡಿಯ ಬಾಗಿಲು ತೆರೆದು ಹೊರಗೆ ಬಂದರೆ ಏನೂ ಕಾಣಲಿಲ್ಲ. ತಾಜ್ ಹೋಟೆಲ್‌ನ ದಪ್ಪ ದಪ್ಪ ಲೈಟ್‌ನೊಳಗೆ ತುಂತುರು ಹನಿಯಂತೆ ಸುರಿಯುತ್ತಿದ್ದ ಮಂಜು ಹೊರಗಡೆ ಬೆಳ್ಳಿಯ ಹೊದಿಕೆಯಂತೆ ಮೋಡ. ಕುತೂಹಲ ತಡೆಯಲಿಲ್ಲ, ಹೊರಗೆ ಬಂದೆ. ಕ್ಯಾಷ್ ಕೌಂಟರಿನಲ್ಲಿ ಕುಳಿತ ವ್ಯಕ್ತಿ ಹಲೋ ಹೇಳುವ ನೋಟದಲ್ಲಿ ಮುಗುಳ್ನಗೆ ಇತ್ತು. ಭಾಷೆಯ ತೊಂದರೆ ನಮ್ಮಿಬ್ಬರ ಆತ್ಮೀಯತೆಗೆ ಅಡ್ಡ ಬಂದಿತ್ತು!

ತಾಜ್ ಹೋಟೆಲ್‌ನ ಮುಂಭಾಗಕ್ಕೆ ಬಂದೆ. ಅಲ್ಲಿ ಹತ್ತಾರು ಬಸ್ಸುಗಳು, ಮಿನಿ ಕಾರುಗಳು, ಟ್ರೆಕ್ಕಿಂಗ್, ಗೂಡ್ಸ್ ತುಂಬಿದ ವಾಹನ ಸಾಲುಸಾಲಾಗಿ ನಿಂತಿದ್ದವು. ಬಂದಾಗ ಇವನ್ನು ನೋಡಿರಲಿಲ್ಲ ಅಥವಾ ರಾತ್ರಿ ಯಾವಾಗಲೋ ಬಂದಿರಬೇಕೆಂದು ಮುಂದಕ್ಕೆ ಹೆಜ್ಜೆ ಹಾಕಿ ಹೋಟೆಲ್ ಬಲಭಾಗದ ನೇರ ರಸ್ತೆಯಲ್ಲಿ ಹಾದು ಬಂದ ನನಗೆ ರುದ್ರಾಕ್ಷಿ ಅಂಗಡಿ ಕಂಡಿತು. ಧ್ಯಾನಮಗ್ನ ಶಿವನ ದೊಡ್ಡ ಚಿತ್ರ ಅಂಗಡಿಯ ಬಲಬದಿಗೆ ಎದ್ದು ಕಾಣುವಂತೆ ಕಟ್ಟಲಾಗಿದೆ. ಅದನ್ನು ಗುರುತುಮಾಡಿಕೊಂಡೆ. ಅಲ್ಲಿಂದ 2 ಕಿ.ಮೀ. ದೂರ ಹೋದರೂ ಒಂದೇ ರಸ್ತೆ. ಆ ರಸ್ತೆ ನೇರವಾಗಿ ಪೋಖ್ರಾದ ಮುಖ್ಯ ಪೇಟೆಬೀದಿಗೆ ಬಂದು ಅಲ್ಲಿಂದ ಎರಡು ಕವಲಾಗಿ ಸೀಳಿಕೊಳ್ಳುತ್ತದೆ. ಎಡಭಾಗಕ್ಕೆ ತಿರುಗಿ ಅರ್ಧ ಕಿ.ಮೀ. ದೂರ ಕ್ರಮಿಸಿದರೆ ಪ್ರಸಿದ್ಧ ಶಕ್ತಿದೇವತೆ ವಿಂಧ್ಯವಾಸಿನಿ ಮಂದಿರ. ಬಲಕ್ಕೆ ಇಳಿದರೆ ಪ್ರಸಿದ್ಧ ಫೆವಾ ಸರೋವರ, ನೌಕಾವಿಹಾರದ ಸ್ಥಳ. ನಾನು ವಿಂಧ್ಯವಾಸಿನಿಗೂ ಹೋಗದೆ, ಫೆವಾ ಸರೋವರಕ್ಕೂ ಹೋಗದೆ ಮಧ್ಯದಲ್ಲೇ ಹಿಂತಿರುಗುವಾಗ ಸಮಯ 7 ಗಂಟೆ ದಾಟುತ್ತಿತ್ತು. ನೇಪಾಳ ತೂಕಡಿಸುತ್ತಾ ಆಕಳಿಸುತ್ತ ಏಳುತ್ತಿತ್ತು. ರಾತ್ರಿ ನೇಪಾಳ ವ್ಯಾಪಾರಿ ಸರಕುಗಳಂತೆ ಕಂಡರೆ ಬೆಳಿಗ್ಗೆ ರೈತರ ಹೊಲ-ಗದ್ದೆ, ತೋಟಗಳ ಇನ್ನೊಂದು ಮುಖವೂ ಎದುರಾಯಿತು. ಭತ್ತದ ಹುಲ್ಲನ್ನು ಹೊದಿಸಿ ಕಟ್ಟಿದ ಕುಟೀರ, ದನಗಳ ಕೊಟ್ಟಿಗೆಮನೆ, ಮೇಕೆ, ಹಸು, ಕೋಣ, ದನ ಮನೆಯ ಪಕ್ಕದಲ್ಲೇ ಹುಲ್ಲಿನ ಪುಟ್ಟಪುಟ್ಟ

ಬಣವೆಗಳ ಹಿತ್ತಲು, ಅಲ್ಲೊಂದು ತರಕಾರಿ ತೋಟ, ಧಾರಾಳವಾಗಿ ಬೀದಿ ರಾಜನಂತೆ ತಿರುಗಾಡುವ ಅಪ್ಪಟ ದೇಶೀ ತಳಿಯ, ಕಂದುಬಣ್ಣದ ಕೋಳಿ ಹುಂಜಗಳು. ಅದರ ಬಳಿಯಲ್ಲಿಯೇ ಸುಳಿಯುವ ಹೇಂಟೆಗಳು ತನ್ನ ಕಾಲಿನಿಂದ ಕೆರೆದು ನೆಲದಲ್ಲಿ ಬಿದ್ದಿರುವ ಕಾಳುಗಳನ್ನು ತಿನ್ನಲು ಕೊಕ್‌ಕೊಕ್ ಎಂದು ಕರೆದು ಮರಿಗಳನ್ನೆಲ್ಲಾ ಒಟ್ಟುಗೂಡಿಸುವ ಮರಿ ಕೋಳಿ, ಈ ಎಲ್ಲಾ ದೃಶ್ಯ ಒಂದು ಕಡೆಗಾದರೆ ರಾತ್ರಿ ಬೇಟೆಗೆ ಹೋಗಿ ಶಿಕಾರಿ ಮಾಡಿ ಹೊಡೆದ ಮೊಲ, ಕಾಡುಬೆಕ್ಕುಗಳನ್ನು ಕೈಯಲ್ಲಿ ಹಿಡಿದು ಮಾರಾಟಕ್ಕೆ ಬಂದಿದ್ದ ಒಂದಿಬ್ಬರು ರೈತರನ್ನು ನೋಡಿದೆ. ಕಾಡಿನ ಅಂಚಿನ ಊರುಗಳಲ್ಲಿ ವಾಸಿಸುವವರು ಕಾಡುಗಳಲ್ಲಿ ರಾತ್ರಿ ಬಲೆ, ಉರುಲು ಹಾಕುವ, ಬಲೆ ಬಿಡುವ ಇಲ್ಲವೇ ಹಣೆಗೆ ಬ್ಯಾಟರಿ ಕಟ್ಟಿಕೊಂಡು ನಡೆಯುತ್ತಾ ಹೋಗಿ ಆ ಬೆಳಕಿನ ತೀಕ್ಷ್ಣತೆಗೆ ತಬ್ಬಿಬ್ಬಾದ ಮೊಲ, ಮುಂಗುಸಿ, ಕಾಡುಬೆಕ್ಕು ಓಡಿಹೋಗಲಾರದ ಸ್ಥಿತಿಯಲ್ಲಿ ಅವುಗಳನ್ನು ಬಂದೂಕದಿಂದಲೋ, ಬೀಸು ಕೋಲಿನಿಂದಲೋ ಸಾಯಿಸಿ ಅವುಗಳನ್ನು ಬೆಳಗಾದಾಗ ಪಕ್ಕದ ಹಳ್ಳಿಗಳ ಮಾಂಸಾಹಾರಿಗಳಿಗೆ ಮಾರಾಟ ಮಾಡುವ ಪದ್ಧತಿ ಕರ್ನಾಟಕದಲ್ಲಿದೆ. ಇದೇ ಮಾದರಿ, ಹಿಮಾಲಯದ ಕಣಿವೆಯಲ್ಲೂ ಇದೆ ಅನ್ನುವುದನ್ನು ಪೋಖ್ರಾದ ಬೆಳಕಿನ ಬೇಟೆಗಾರರ ನೋಟದಿಂದ ದೃಢವಾಯಿತು.

ಹೋದ ಮಾರ್ಗದ ಬಲಬದಿಗೆ ಹೊರಳಿ ಇನ್ನೊಂದು ಬದಿಯಿಂದ ಹೋಟೆಲ್ ತಾಜ್‌ಗೆ ಬಂದೆ. ತಪ್ಪಿಸಿಕೊಂಡೆನೆಂಬ ಆತಂಕ ಇರಲಿಲ್ಲ. ತಡವಾಯಿತೆಂಬ ಗಾಬರಿಯಿತ್ತು ರೂಮ್ ತಲುಪುವ ವೇಳೆಗೆ 'ಎಲ್ಲರೂ ಸಿದ್ಧವಾಗಿದ್ದಾರೆ ಬನ್ನಿ ಬೇಗ ರೆಡಿಯಾಗಿ' ಎಂದು ಪ್ರೊ||ಕೆಸಿಎನ್ ಎಚ್ಚರಿಸಿದರು. ಅವರು ಆಕಾಶ ಬಣ್ಣದ ಷರ್ಟ್, ಕಪ್ಪು ಪ್ಯಾಂಟಿನ ಮೇಲೊಂದು ಅಡಿಕೆ ಬಣ್ಣದ ಅರ್ಧ ತೋಳಿನ ಸ್ವೆಟರ್ ಹಾಕಿಕೊಂಡು ಸಿಗರೇಟ್ ಸೇದುತ್ತಿದ್ದರು. ಬಂದ ಹತ್ತೇ ನಿಮಿಷದಲ್ಲಿ ಸ್ನಾನ ಮುಗಿಸಿ 'ಆಯಿತು ಹೋಗುವಾ' ಎಂದೆ. ಕೆಳಗೆ ತಿಂಡಿಯ ತಟ್ಟೆಗಳ ಶಬ್ದದ ಜೊತೆಜೊತೆಗೂ ನಮ್ಮ ನಾಯಕ ಜೆ.ಪಿ ಅವರ ಮಾತು ಕೇಳುತ್ತಿತ್ತು. ಪೂರಿ-ಪಲ್ಯ, ದೋಸೆ ಎರಡೂ ರುಚಿಕಟ್ಟಾಗಿತ್ತು. ಕಾಫಿ ಚಳಿಗೆ ಕೊಂಚ ಚೇತರಿಕೆ. ಬೇಗ ಬೇಗ ಮುಗಿಸಿ ನಮಗಾಗಿ ಕಾದಿದ್ದ ವಾಹನವನ್ನು ಪತ್ತೆ ಮಾಡಿ ನನ್ನ ಜೊತೆಯವರೊಂದಿಗೆ ನನ್ನ ಜಾಗದಲ್ಲಿ ಕುಳಿತುಕೊಂಡೆ.

ಎಂಟು ಗಂಟೆಯ ಸುಮಾರಿಗೆ ನಮ್ಮ ಬಸ್ ಹೊರಟಿತು. ತಾಜ್ ಹೋಟೆಲ್‌ನಿಂದ ಬಲಬದಿಯಲ್ಲಿ ಹಾದು ಅದೇ ಹುಲ್ಲು ಗದ್ದೆ, ಬಣವೆಗಳ ನಡುವೆ ಸಾಗಿ ಮುಖ್ಯ ರಸ್ತೆಗೆ ಬಂತು. ಮೂರು ಕಿ.ಮೀ ಸಾಗಿದ ಕೂಡಲೇ ಬಸ್ ನಿಂತಿತು. ಪಾಂಡೆ ಶ್ರೀ ವಿಂಧ್ಯಾವಾಸಿನಿ

ದೇವಾಲಯದ ಬಗೆಗೆ ವಿವರ ನೀಡಿದರು.

## ವಿಂಧ್ಯಾವಾಸಿನಿ:

ವಿಂಧ್ಯಾವಾಸಿನಿ, ಬಿಂದು ವಾಸಿನಿ ಎಂದೆಲ್ಲಾ ಕರೆದು ಎಲ್ಲೆಡೆ ಪ್ರಸಿದ್ಧಿಯಾಗಿರುವ ಈ ಶಕ್ತಿ ದೇವತೆ ಪೋಖ್ರಾದ ಪ್ರಮುಖ ಆಕರ್ಷಣೆ. ನೇಪಾಳ ದೇಶದ ಪಶ್ಚಿಮ ಕ್ಷೇತ್ರಗಳಲ್ಲಿ ಇದು ಮುಖ್ಯವಾದುದು. ಕಠ್ಮಂಡುವಿನಿಂದ ಇಲ್ಲಿಗೆ ವಿಮಾನ ಸೌಕರ್ಯ ಕಲ್ಪಿಸಿದ್ದಾರೆ. ನೆಲಮಟ್ಟಕ್ಕಿಂತ 1000 ಮೀ. ಎತ್ತರದಲ್ಲಿರುವ ಈ ದೇವಾಲಯ ಬೊಗುಣಿ ಆಕೃತಿಯಲ್ಲಿ ಚಾಚಿಕೊಂಡಿದೆ. ನಕ್ಷತ್ರಾಕೃತಿಯಲ್ಲಿ ಈ ದೇವಾಲಯ ನಿರ್ಮಾಣವಾಗಿದೆ. ನಡುವೆ ವಿಂಧ್ಯವಾಸಿನಿ ಎಡಬದಿಗೆ ಹನುಮಾನ್ ಮಂದಿರ, ಪ್ರವೇಶ ದ್ವಾರದ ಬದಿಗೆ ಗಣೇಶ ಮಂದಿರ, ಎದುರಿಗೆ ರಾಧಾಕೃಷ್ಣ ಮಂದಿರ, ಸರಸ್ವತಿ ಮಂದಿರ, ಬಲಬದಿಯ ತುದಿಗೆ ಮಹಾದೇವ ಮಂದಿರ, ಶಿವಲಿಂಗವಿದೆ. ಇದಕ್ಕೆ ಹೊಂದಿಕೊಂಡಂತೆ ವೈದಿಕ ವಿದ್ಯಾಶ್ರಮವಿದೆ. ಇದು ನೇಪಾಳ ದೇಶದ ದಟ್ಟ ವೈದಿಕ ಸಂಸ್ಕೃತಿಯ ಪ್ರತಿರೂಪ. ವೈದಿಕ ಸಂಸ್ಕೃತಿಯ ಪ್ರಕಾರದ ಪ್ರಾಚೀನ ಕುರುಹು ಇಲ್ಲಿ ದೊರೆಯುತ್ತದೆ. ಇಲ್ಲಿಗೆ ಭಕ್ತರು, ಯಾತ್ರಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಬರುತ್ತಾರೆ. ದೇವಸ್ಥಾನದ ಅಂಗಳ ವಿಶಾಲವಾಗಿರುವುದರಿಂದ busy ಎಂದೆನ್ನಿಸುವುದಿಲ್ಲ. ಭಕ್ತರೂ ಅಷ್ಟೇ, ತಮ್ಮ ಪೂಜೆ, ಪ್ರಾರ್ಥನೆ ಮುಗಿಸಿ ಅಲ್ಲಿಂದ ಕೆಳಗಿಳಿದು ಹೋಗುತ್ತಾರೆ. ಒಂದು ವಿಶೇಷ, ನೇಪಾಳದ ಯಾವುದೇ ದೇವಾಲಯಗಳ ಆವರಣದಲ್ಲಿ ಪಿತೃಪಿಂಡಧಾರಣೆಯ ವ್ರತಧಾರಿಗಳು, ಅರ್ಚಕರ ಹಿಂಡೇ ಇರುತ್ತದೆ. ಆದರೆ ಇಲ್ಲಿ ಆ ಬಗೆಯ ಆಚರಣೆ ಕಾಣಲಿಲ್ಲ. ಇದು ದೇವಾಲಯದ ಸ್ವಚ್ಛತೆಗೆ ಪ್ರಮುಖ ಕಾರಣವೂ ಆಗಿದೆ.


ವಿಂಧ್ಯವಾಸಿನಿ ದೇವಾಲಯ

1000 ಮೀ. ಎತ್ತರದಲ್ಲಿರುವ ವಿಂಧ್ಯವಾಸಿನಿ ದೇವಿಯ ಮಂದಿರದ ಹಿಂಭಾಗಕ್ಕೆ ತಿರುಗಿದರೆ ವೃತ್ತಾಕಾರದ ಶಿಖರಗಳ ಸಾಲು ಸಾಲು ಹತ್ತಿರದಿಂದಲೇ ಕಾಣುತ್ತದೆ. ಅನ್ನಪೂರ್ಣ, ಮೌಂಟ್ ಎವರೆಸ್ಟ್, ಧವಳಗಿರಿ ಇತ್ಯಾದಿ ಶಿಖರಗಳು ಅತ್ಯಂತ ಸಮೀಪದಿಂದ

ಮನಮೋಹಕವಾಗಿ ಕಂಡುಬರುತ್ತವೆ. ಈ ದೇವಾಲಯಗಳ ಸಂಕೀರ್ಣದ ಕೆಳಬದಿಗೆ ಸೋಪಾನವಾಗಿ ಸಸ್ಯತೋಟಗಳನ್ನು ಆಕರ್ಷಕವಾಗಿ ನಿರ್ಮಿಸಿದ್ದಾರೆ. ಇದರಲ್ಲಿ ಹಿರಿಯ ನಾಗರೀಕರು ಬೆಳಗಿನ ವಾಕ್ ಮಾಡುತ್ತಿರುತ್ತಾರೆ. ದೇವಾಲಯದ ಆವರಣಗಳಿಂದ ಅರ್ಧ ಗಂಟೆಯಲ್ಲಿಯೇ ಕೆಳಗಿಳಿದೆವು. ದೇವಾಲಯ ದಿಬ್ಬದ ಬಲಬದಿ ವ್ಯಾಪಾರಿ ಅಂಗಡಿ ಸಾಲು ವಿಂಧ್ಯವಾಸಿನಿ ಚಿತ್ರವುಳ್ಳ ಬ್ಯಾಗ್, ದೇವರ ವಿಗ್ರಹ, ಪೋಖ್ರಾ ಸ್ಮಾರಕಗಳ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಇಲ್ಲಿ ಖರೀದಿಸಬಹುದು. ನೇಪಾಳಿ ಹಾಗೂ ಭಾರತ ಈ ಎರಡೂ ದೇಶಗಳ ಕರೆನ್ಸಿ ಇಲ್ಲಿ ನಡೆಯುತ್ತದೆ. ಅಂಗಡಿಗಳಲ್ಲಿ ಹೆಣ್ಣುಮಕ್ಕಳೇ ಅಧಿಕ. ಇಂಗ್ಲೀಷ್ ಅಂಕಿ-ಅಂಶ ಹೇಳುತ್ತಾರೆ. ಉದಾ. ಒಂದು ಬ್ಯಾಗ್‌ಗೆ '150 rupees in Indian currency, Rs.240 in Nepali currency' ಎಂದು ಸ್ಪಷ್ಟವಾಗಿಯೇ ಹೇಳುತ್ತಾರೆ. ನಯ, ನಾಜೂಕು, ಸೌಂದರ್ಯ ಪ್ರಜ್ಞೆ ಪ್ರವಾಸಿಗಳನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ. ಈ ಬಗೆಯ ಆಕರ್ಷಣೆ ನೇಪಾಳ ದೇಶದ ಇತರೆಡೆಯಲ್ಲಿ ಅಪರೂಪ.

ರೈತಾಪಿ, ವ್ಯಾಪಾರ ಮತ್ತು ಆ ಸಂಬಂಧಿ ಪ್ರವಾಸೋದ್ಯಮ ಪೋಖ್ರಾದ ಜನಜೀವನದ ಪ್ರಮುಖ ಅಂಶಗಳು. ರಾತ್ರಿ ಬಹು ಹೊತ್ತಿನವರೆಗೂ ಒಂದಲ್ಲಾ ಒಂದು ವ್ಯವಹಾರದಲ್ಲಿ ತೊಡಗಿರುತ್ತಾರೆ. ಆದರೆ ಬೆಳಿಗ್ಗೆ ಬೇಗನೆ ಎದ್ದು ದೈನಂದಿನ ಚಟುವಟಿಕೆಯಲ್ಲಿ ತೊಡಗುತ್ತಾರೆ. ಪೋಖ್ರಾ ಮಧ್ಯಭಾಗದಲ್ಲಿರುವ ಸಾರಂಗ್ ಕೋರ್ಟಿಗೆ ವಾಕಿಂಗ್ ಬರುತ್ತಾರೆ. ಸಾರಂಗ್ ಕೋರ್ಟ್‌ನಲ್ಲಿ ವಿಶ್ವಶಾಂತಿ ಸ್ತೂಪವೆಂಬ ಬಹು ದೊಡ್ಡ ಬೌದ್ಧ ಸ್ತೂಪವಿದೆ. ಇಲ್ಲಿ ನಿಂತು ಸೂರ್ಯೋದಯವನ್ನು ವೀಕ್ಷಿಸುವುದು ಪೋಖ್ರಾ ಜನರ ಸಾಮಾನ್ಯ ಹವ್ಯಾಸವಾಗಿದೆ.

ಬಿಂದುವಾಸಿನಿ ದೇವಾಲಯದಿಂದ ಹೊರಟ ನಮ್ಮ ತಂಡ ಪೋಖ್ರಾದ ಕೊನೆಯ ಪಶ್ಚಿಮದ ತುದಿಯಲ್ಲಿರುವ ಮಹೇಂದ್ರ ಕೇವ್ ತಲುಪಿದೆವು. ಇದು ಹಿಮಾಲಯದ ತಪ್ಪಲಿಗೆ ಹೊಂದಿಕೊಂಡಿದೆ. 1500 ಮೀ. ಆಳದ ಗುಹೆಯ ಒಳಗೆ ಹೋಗಬೇಕು. 10 ಅಡಿಗಳಷ್ಟು ಆಳದ ಈ ಕಂದರ ಹಿಮಾಲಯದ


ಪೋಖ್ರಾ ಗುಹಾಂತರ ದೇವಾಲಯ

ನೀರು ನುಗ್ಗಿ ಕಲ್ಲುಗಳು ನುಣುಪಾಗಿ, ಬೂದು ಮಣ್ಣಿನ ಸಣ್ಣ ಸಣ್ಣ ಮರಳಿನ ಕಣಗಳಿಂದ ಕೂಡಿದೆ. ಗುಹೆಯ ಕೊನೆಯ ತುದಿಯಲ್ಲಿ ಶಿವನ ಜಟೆಯಿಂದ ನೀರು ಧುಮ್ಮಿಕ್ಕುವ ಚಿತ್ರವನ್ನು ಹಾಕಲಾಗಿದೆ. ಅಲ್ಲೇ ಗಂಗಾಧರನ ಮೂರ್ತಿಯೂ ಇದ್ದು ಒಬ್ಬ ಗೋಸಾಯಿ ಪೂಜೆ ಸಲ್ಲಿಸುತ್ತಾನೆ. ಅಲ್ಲಿಗೆ ಬರುವ ಯಾತ್ರಿಕರೆಲ್ಲರೂ ಅವರವರ ಇಷ್ಟಾನುಸಾರ ಕಾಣಿಕೆಯನ್ನು ಅರ್ಪಿಸುವುದು ವಾಡಿಕೆ. ಗುಹೆಯ ನಡುನಡುವೆ ಮಹದೇವನ ಚಿಕ್ಕ ಚಿಕ್ಕ ಮೂರ್ತಿ, ಶಿವಲಿಂಗಗಳನ್ನು ಇಟ್ಟಿದ್ದಾರೆ. ಧೂಳು ಹಿಡಿದ ಈ ಮೂರ್ತಿಗಳನ್ನು ಸ್ವಚ್ಛಗೊಳಿಸುವ ಕನಿಷ್ಠ ಜವಾಬ್ದಾರಿಯೂ ಇಲ್ಲಿನ ಗೋಸಾಯಿಗೆ ಇದ್ದಂತಿಲ್ಲ. ಜನಮರುಳೋ ಜಾತ್ರೆ ಮರುಳೋ ಅಂತ ಜನಗಳು ಗುಂಪು ಗುಂಪಾಗಿ ಗುಹೆಯೊಳಗೆ ಇಳಿದು ಕೊನೆ ಮುಟ್ಟಿ ಹಿಂತಿರುಗುತ್ತಾರೆ.

ಮಹೇಂದ್ರ ಕೇವ್ ಈ ಆವರಣದ ವಿಸ್ತೀರ್ಣ ಕಾಡುಪ್ರದೇಶ. ಸಾಗುವಾನಿ, ಶಂಖ, ಧೂಪದ ಮರ ಮುಂತಾದ ಎತ್ತರವಾದ ಕಾಡುಮರಗಳು ದಟ್ಟವಾಗಿ ಬೆಳೆದಿವೆ. ಇಲ್ಲಿಗೆ ಬರುವ ಯಾತ್ರಾರ್ಥಿಗಳು ಊಟ-ತಿಂಡಿ ತಯಾರಿಸಿಕೊಂಡು ಇಲ್ಲಿಯೇ ಊಟ ಮಾಡುತ್ತಾರೆ. ನೀರಿನ ವ್ಯವಸ್ಥೆಯೂ ಇಲ್ಲಿದ್ದು ನೀರು-ನೆರಳಿಗೆ ಒಂದೆರಡು ಮಂಟಪಗಳೂ ಇಲ್ಲಿವೆ. ಪೋಖ್ರಾ ಪರ್ವತ ಪ್ರದೇಶದ ವ್ಯಾಪ್ತಿಗೆ ಬರುತ್ತದೆ. ಚಳಿಗಾಲ, ಮಳೆಗಾಲ ಇಲ್ಲಿನ ಬುಡಕಟ್ಟು ಜನ ವಾಸಿಸುವುದಕ್ಕೆ ಕಷ್ಟವಾಗುತ್ತದೆ. ಈ ಕಾರಣದಿಂದ ಕಣಿವೆಯಲ್ಲಿ ವಾಸಿಸುವ ಜನರು ಈ ಚಳಿಗಾಲದಲ್ಲಿ ಕಣಿವೆಯಿಂದ ನಗರದತ್ತ ವಲಸೆ ಬರುತ್ತಾರೆ. ಮನೆ-ಮಾರು ಬಿಟ್ಟು  ಈ ಪರ್ವತವಾಸಿಗಳು ಪರ್ವತ, ಗಿರಿ-ಕಂದರಗಳಲ್ಲಿನ ಸೌದೆ, ಹಣ್ಣು-ಗೆಡ್ಡೆ, ಗಿಡಮೂಲಿಕೆ ಮೊದಲಾದ ಸಂಗ್ರಹಣೆಯನ್ನು ಜೀವನೋಪಾಯಕ್ಕಾಗಿ ಅವಲಂಬಿಸಿರುತ್ತಾರೆ. ಬೆಳಿಗ್ಗೆ 9 ರ ಸುಮಾರಿಗೆ ಪೋಖ್ರಾ ನಗರದ ಯಾವುದೋ ಒಂದು ಭಾಗದಿಂದ ಕಣಿವೆಗೆ ತಮ್ಮ ಕೆಲಸಕ್ಕೆ ಹೊರಟ 7 ಜನ ಹೆಂಗಸರ ಗುಂಪು ನನ್ನನ್ನು ಸೆಳೆಯಿತು. ತೀರಾ ಬುಡಕಟ್ಟು ಅಲ್ಲದ, ನಾಗರೀಕತೆಯ ವಿಜೃಂಭಣೆಯೂ ಇಲ್ಲದ ಈ ಹೆಂಗಸರು ಸೀರೆಯನ್ನು ಮೊಣಕಾಲಿನವರೆಗೆ ನಾಜೂಕಾಗಿಯೇ ಉಟ್ಟಿದ್ದರು. ಸಣ್ಣ ಗೆರೆಯ, ಇಳಕಲ್ ಮಾದರಿಯ, ಕೆಂಪು-ಹಸಿರು ಮಿಶ್ರಿತ ಕಂದು ಸೀರೆ, ಹಸಿರು, ಹಳದಿ ಹಾಗೂ ಗುಲಾಬಿ ಬಣ್ಣದ ರವಿಕೆಯನ್ನು ತೊಟ್ಟಿದ್ದರು. ಮೂಗಿನ ಹೊಳ್ಳೆಗೆ ಮೂಗುದಾರದಂತಹ ಮೂಗುಬೊಟ್ಟು ಧರಿಸಿದ್ದ ಈ ಯುವತಿಯರಲ್ಲಿ ಮಧ್ಯವಯಸ್ಸಿನ ಕೆಲವು ಹೆಂಗಸರೂ ಇದ್ದು ಹೊಗೆಸೊಪ್ಪಿನ ಉದ್ದನೆಯ ಚೀಲವನ್ನು ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದರು. ತಲೆಮುಡಿಯನ್ನು ಅಲಂಕಾರಿಕವಾಗಿ ಹೆಣೆದು ಗಂಟುಹಾಕಿಕೊಂಡು

ಎಲ್ಲರ ಕೈಯಲ್ಲೂ ಕುಡುಗೋಲು ಹಿಡಿದುಕೊಂಡು ಹೊರಟ ನೋಟ ಆಕರ್ಷಕವಾಗಿತ್ತು. ಮಹೇಂದ್ರ ಕೇವಿನ ಹೊರ ಅಂಚಿನ ಹಿಮಾಲಯದ ಇಳಿಜಾರು ಮಣ್ಣಿನ ರಸ್ತೆ ಬದಿ ನಿಂತು ಆ ಭವ್ಯ ಪ್ರಾಕೃತಿಕ ಸೊಬಗನ್ನು ಕಾಣುತ್ತಿದ್ದಾಗ ತಟ್ಟನೆ ಎದುರಾದವರು ಈ ಮಾಯಾಂಗನೆಯರು. ಹೌದು, ಇವರನ್ನು ನಾನು ಅಲಂಕಾರಿಕವಾಗಿಯೇ ಮಾಯಾಂಗನೆಯರು ಎಂದು ಕರೆದಿದ್ದೇನೆ. ತೀರಾ ಕಪ್ಪೂ ಅಲ್ಲದ ಕೆಂಪೂ ಅಲ್ಲದ, ತುಸು ಎತ್ತರದ ಆಕೃತಿಯ ನೀಳ ದೇಹಿಗಳು ನನ್ನನ್ನು ವಿಶೇಷವಾಗಿ ಆಕರ್ಷಿಸಿದರು. ಮಂದಹಾಸದ, ಚಿಮ್ಮುತ್ತಿದ್ದ ಉತ್ಸಾಹದ ಕೆಲ ತರುಣಿಯರ ಮೂಗು ಕಠ್ಮಂಡುವಿನ ಹೆಂಗಸರಿಗಿಂತ ನೀಟಾಗಿ, ಒಪ್ಪವಾಗಿ, ತಿದ್ದಿ ತೀಡಿದಂತಿದ್ದು ಚಪ್ಪಟೆ ಮುಖಕ್ಕೆ ಹೊರತಾಗಿ ಪೂರ್ಣ ಚಂದಿರನ ಆಕೃತಿ. ಅತ್ತ ಟಿಬೆಟ್ ಕಠ್ಮಂಡುವೂ ಅಲ್ಲದ ಇತ್ತ ಕಾಶ್ಮೀರಿತನವೂ ಇಲ್ಲದೆ ವಾರಣಾಸಿಯಲ್ಲಿ ಕಂಡ ಮುಖದಷ್ಟೇ ಅಂದವಾಗಿ ಕಂಡಿತು. ನೋಟ ಮೋಹಕ, ಮಾತು ಮೀರದ ಮೌನ. ಕಣ್ಣು ಭಾಷೆಯ ಅಭಾವವನ್ನು ಸಾರಿ ಸಾರಿ ಹೇಳುತ್ತಿತ್ತು. ಸಂವಹನ ಸಾಧ್ಯವಾಗುವಂತಿದ್ದರೆ ಊರು, ಕೇರಿ, ಕುಲ-ಗೋತ್ರ, ಕಸುಬು-ಹವ್ಯಾಸಗಳನ್ನು ಜಾಲಾಡಿಬಿಡುತ್ತಿದ್ದ ನನ್ನ ಕ್ಷೇತ್ರಕಾರ್ಯ ಪ್ರಜ್ಞೆಗೆ ಇಲ್ಲಿ ಬ್ರೇಕ್ ಬಿದ್ದಿತು. ಗೂರ್ಖಾ ನಾಡಿನ ಈ ಅಪೂರ್ವ ಚೆಲುವೆಯರು ದುಡಿದುಣ್ಣುವ ಜನವರ್ಗಕ್ಕೆ ಸೇರಿದವರು. ಬೆಳಗಿನಿಂದ ಸಂಜೆ ತನಕ ಅಡವಿ, ಅರಣ್ಯಗಳಲ್ಲಿ ಚಳಿ-ಹಿಮ ಗಾಳಿಗೆ ಮೈಯೊಡ್ಡಿ ಬಾಳ್ವೆ ಮಾಡುವ ಈ ಜನರ ಧೈರ್ಯದಂತೆ ಚೆಲುವೂ ಅನನ್ಯ. ನಮ್ಮ ಸಿನಿಮಾ ತಾರೆಯರನ್ನು ಮೀರಿಸಬಲ್ಲ ಅಪೂರ್ವತೆ ಅವರಲ್ಲಿದೆ. ಆದರೆ ಕಾಸ್ಮೆಟಿಕ್ ವಸ್ತುಗಳ ಬಿಸಿ ತಾಕಿಲ್ಲ, ಸಹಜ ಚೆಲುವು ಮಾಸಿಲ್ಲ, ಕೃತಕತೆಯ ಆಚೆ ಬುಡಕಟ್ಟು ವೇಷಭೂಷಣ, ಸಹಜ ಪ್ರಾಕೃತಿಕ ಅಲಂಕಾರದಲ್ಲೇ ಮೋಹಕ. ನಮ್ಮ ರೂಪಸಿಗಳನ್ನೂ ಮೀರಿಸುವ ಗತ್ತು. ಎತ್ತರದ ದಿಬ್ಬದ ಮೇಲೆ ಕುಳಿತ ನನಗೆ ಪೋಖ್ರಾ ಇಳಿಜಾರಿನಿಂದ ಮೇಲೆ ಹತ್ತಿ ಬರುತ್ತಿದ್ದರಿಂದ ಈ ಸುಂದರಾಂಗಿಯರ ಪರಸ್ಪರ ತೀಕ್ಷ್ಣ ನೋಟ ಅವರಿಗೂ ಮುಜುಗರವಿಲ್ಲ, ಕುಹಕ ನನ್ನಲ್ಲಿಯೂ ಇರಲಿಲ್ಲ.

ಅಲ್ಲಿಯೇ ನಿಂತಿದ್ದ ಗೂರ್ಖಾನೊಬ್ಬ ಈ ಹೆಂಗಸರನ್ನು ಲೆಕಾನಿಗಳೆಂದು ಕರೆದ. ಅದರ ಅರ್ಥವನ್ನು ಪಾಂಡೆ ಹೀಗೆ ವಿವರಿಸಿದ: ಪರ್ವತದ ಮೇಲಿರುವ ಬುಡಕಟ್ಟು ಜನ ಮಳೆಗಾಲ ಚಳಿಗಾಲದಲ್ಲಿ ತಮ್ಮ ಜಾನುವಾರು ಸಂರಕ್ಷಣೆಗಾಗಿ ಕಣಿವೆಗಳಿಂದ ಇಳಿದು ನಗರದಂಚಿಗೆ ಬಂದು ವಾಸಮಾಡುತ್ತಾರೆ. ಮಳೆಗಾಲದ ನಂತರ ತಮ್ಮ ಮನೆಗಳಿಗೆ ಮರಳುತ್ತಾರೆ. ಇವರೆಲ್ಲಾ ಹಿಮಾಲಯ ಕ್ಷೇತ್ರದ ಹೆಂಗಸರು ಎಂದರು.

ನಮ್ಮ ಜಯಪ್ರಕಾಶ್ ಜೊತೆಯಲ್ಲಿದ್ದ ಪ್ರೊ॥ ಪೂರ್ಣಾದೇವಿ, ಪ್ರೊ॥ಮಂಜುಳ, ಮಮತ, ಪ್ರೊ॥ ರುದ್ರಮುನಿ, ಪ್ರೊ॥ ಜಗದಾಂಬ ಮೊದಲಾದವರು ಮಹೇಂದ್ರ ಕೇವ್‌ನ ಇಂಚಿಂಚನ್ನೂ ದರ್ಶಿಸಿ ಕಣಿವೆಯನ್ನು ಹೊಕ್ಕು ಅಲ್ಲಿನ ಬಗೆಬಗೆಯ ದೇವಾಲಯ, ಗುಹಾಂತರಗಳನ್ನು ನೋಡುವ ಕೆಲಸದಲ್ಲಿ ಮಗ್ನರಾಗಿದ್ದರು. ನಾನು ಕಣಿವೆಯ ಕಾಡುಮರ, ಅಲ್ಲಿನ ಪುಟ್ಟ ಪುಟ್ಟ ಪಕ್ಷಿ ಸಂಕುಲಗಳನ್ನು ಲೆಕ್ಕ ಹಾಕುವುದರಲ್ಲಿ ಮಗ್ನನಾಗಿದ್ದೆ. ಕೆಸಿಎನ್, ದಸ್ತಗೀರ್ ಕಾಫಿ ಕುಡಿಯುವ ಭರದಲ್ಲಿದ್ದರು. ಕೆಲವು ಯಾತ್ರಾರ್ಥಿಗಳು ಪಡ್ಡೆ ಹುಡುಗ-ಹುಡುಗಿಯರು ಕುದುರೆ ಸವಾರಿಯ ಮೋಜಿನಲ್ಲಿದ್ದರು.

ಪಾಂಡೆಯ ವಿಜಿಲ್ 'come back, come back' ಕೂಗಿಗೆ ಎಲ್ಲರೂ ಬಂದರು. ಗಾಡಿ ನಿಧಾನವಾಗಿ ಪೋಖ್ರಾದ ಹೊರಬದಿಯಲ್ಲಿ ಚಲಿಸುತ್ತಾ ಮುಂದುವರಿಯಿತು. ಕರುಣಾನಿಧಿಯವರ ಶಿಕ್ಷಣ ಸಂಸ್ಥೆ, ಮಣಿಪಾಲ್ ಆಸ್ಪತ್ರೆ, ರಾಮಕೃಷ್ಣ ಮಠ ಈ ಎಲ್ಲವುಗಳನ್ನು ಹಾದು ಗಾಡಿ ಮುಂದೆ ಮುಂದೆ ಬಂದಾಗ ಅಪ್ಪಟ ರೈತರ ಕೇರಿ. ಒಂದಿಷ್ಟು ಪುಟ್ಟ ಪುಟ್ಟ ಮಡಿಗಳ ಹೊಲ, ಅಲ್ಲೆಲ್ಲಾ ಸಾಸಿವೆ, ಮೂಲಂಗಿ, ಪಾಲಕ್, ಹರಿವೆ ಸೊಪ್ಪು, ತರಕಾರಿ ಮಡಿ. ಪುಟ್ಟ ಪುಟ್ಟ ಹುಲ್ಲಿನ ಜೋಪಡಿ, ದನಗಳ ಕೊಟ್ಟಿಗೆ, ಮೇಕೆಯ ರೊಪ್ಪ ಈ ಎಲ್ಲವನ್ನೂ ಮೀರಿಸುತ್ತಿದ್ದ ಕಂದು ಬಣ್ಣದ ಬಾಸಿಂಗದ, ಆಕರ್ಷಕ ದೇಶೀ ತಳಿಯ ಕೋಳಿ ಹುಂಜಗಳ ಗಾಂಭೀರ್ಯ. ರಸ್ತೆಯಲ್ಲೇ ಅವುಗಳ ರಾಜನಡಿಗೆ, ಹೇಂಟೆಯೊಂದಿಗಿನ ಸರಸ, ಒಂದು ಕಾಳು ಮೇವು ಸಿಕ್ಕರೂ ತನ್ನೆಲ್ಲಾ ಬಂಧುಗಳನ್ನು ಕೂಗಿ ಕರೆದು ಹಂಚಿ ಉಣ್ಣುವ ಸಮಾಜವಾದಿತನ ನನ್ನಲ್ಲಿ ವಿಶೇಷ ಕುತೂಹಲ ಮೂಡಿಸಿತ್ತು.

ಪೋಖ್ರಾದ ಊರಂಚಿಗೆ ಹೊಂದಿಕೊಂಡಂತೆ ಡೇವಿಡ್ ಫಾಲ್ಸ್ ಎಂಬ ಪುಟ್ಟ ಜಲಪಾತವಿದೆ. ವಿಮಾನ ನಿಲ್ದಾಣದ ಬದಿಗೇ ಬರುವ ಈ ಫಾಲ್ಸ್ ಪುಟ್ಟದು. ಒಂದು ಸಣ್ಣ ಕಾಲುವೆಯ ಅಥವಾ ಕೆರೆಯ ತೂಬನ್ನು ತೆರೆದಾಗ ರಭಸವಾಗಿ ನುಗ್ಗುವ ನೀರಿನ ಫೋರ್ಸ್ ನಂತೆಯೇ ಇಲ್ಲಿನ ಜಲಪಾತದ ಓಟ. ಶುಭ್ರವಾದ ತಿಳಿ ಹಾಲಿನಂಥ ನೀರು, ಇದನ್ನೇ ಕೃತಕವಾಗಿ


**ಪೋಖ್ರಾದ ಡೇವಿಡ್ ಫಾಲ್ಸ್**

ಸುತ್ತಿ ಬಳಸಿ ಕಾಲುವೆಯ ರೂಪದಲ್ಲಿ ಒಂದು ಫರ್ಲಾಂಗ್ ದೂರ ಹರಿಯುವಂತೆ ಮಾಡಿದೆ. ಒಂದು ಪುಟ್ಟ ವನವನ್ನು ಅರಣ್ಯ ರೂಪದಲ್ಲಿ ಪೋಖ್ರಾ ನಗರಸಭೆ ನಿರ್ಮಿಸಿದೆ. ಹಿಮಾಲಯದ ಮಂಜುಗಡ್ಡೆ ಕರಗಿ ನೀರಾಗಿ ಹರಿದ ಸ್ವರೂಪದಲ್ಲಿ ಈ ಜಲಪಾತದ ಓಟವಿದೆ. ಮೇಲಿಂದ ರಭಸವಾಗಿ ಓಡುವ ನೀರನ್ನು ಯಾತ್ರಾರ್ಥಿಗಳು ವೀಕ್ಷಿಸಲು ಅನುಕೂಲವಾಗುವಂತೆ ಕಾಲು ಸೇತುವೆಯನ್ನು ನಿರ್ಮಿಸಲಾಗಿದೆ. ಆ ಸೇತುವೆಯ ಮೇಲೊಂದು ಅಲ್ಯೂಮಿನಿಯಂ ಬಿಂದಿಗೆಗೆ ಹಗ್ಗ ಕಟ್ಟಿ ಇರಿಸಲಾಗಿದೆ. ಬೇಕಾದವರು ಓಡುವ ಜಲಪಾತದ ನೀರನ್ನು ಮೇಲೆತ್ತಿ ಕುಡಿಯಬಹುದಾಗಿದೆ. ನಮ್ಮ ಪ್ರೊ॥ ಜಯಪ್ರಕಾಶ್ ಬಿಂದಿಗೆಯನ್ನು ಕೆಳಗೆ ಬಿಟ್ಟು ಅರ್ಧ ಬಿಂದಿಗೆಯಷ್ಟು ನೀರನ್ನು ಮೇಲಕ್ಕೆ ಎಳೆದರು. ಮೊದಲು ಒಂದು ಬೊಗಸೆಯಷ್ಟು ನೀರನ್ನು ಅವರು ಕುಡಿದರು, ತಲೆಯ ಮೇಲೆ ಸಿಂಪಡಿಸಿಕೊಂಡರು. ನಾವೂ ಅವರನ್ನು ಅನುಸರಿಸಿದೆವು. ನೀರು ಅತ್ಯಂತ ರುಚಿಕಟ್ಟಾಗಿತ್ತು, ಕೊರೆಯುವಂತಿತ್ತು. ಈ ಜಲಪಾತ, ತೋಟಗಾರಿಕೆ ಅದರ ಮುಂದೊಂದು ಶಾಪಿಂಗ್ ಕಾಂಪ್ಲೆಕ್ಸ್. ನಾವು ಮೂವರೂ ಒಂದಿಷ್ಟು ಸುತ್ತಾಡಿ ನಮ್ಮ ಬಸ್ಸು ನಿಂತಿದ್ದ ಜಾಗಕ್ಕೆ ಬಂದೆವು. ಅರ್ಧ ಗಂಟೆಯಾಯಿತು, ನಮ್ಮ ತಂಡದ ಉಳಿದವರ ಸುಳಿವಿಲ್ಲ. ನಾನು ಅದಕ್ಕೆ ಎದುರಿಗಿದ್ದ ರಸ್ತೆ ಬದಿಯಲ್ಲಿ ಸುತ್ತಾಡಿದೆ. ಕಡಲೇಕಾಯಿ ಮಾರುವ ಹೆಂಗಸರು ಸಾಲಾಗಿ ಕುಳಿತಿದ್ದರು. ಅವರ ಎಡಬದಿಗೆ ವಿಮಾನ ನಿಲ್ದಾಣ. ವಿಮಾನ ನಿಲ್ದಾಣ ನಮ್ಮ ಸರ್ಕಾರಿ ಬಸ್ ನಿಲ್ದಾಣದಂತಿದೆ. ವಿಮಾನಗಳು ಬರುತ್ತವೆ, ಹೋಗುತ್ತವೆ. ಇಲ್ಲಿನ ಸಾಮಾನ್ಯ ಜನ ಇವುಗಳ ಬಗೆಗೆ ವಿಶೇಷ ಗಮನ ಕೊಡುವುದಿಲ್ಲ. ಆದರೂ ಪ್ರವಾಸಿಗರೇ ಇಲ್ಲಿ ಹೆಚ್ಚು. ಟ್ರೆಕ್ಕಿಂಗ್, ಜಂಗಲ್ ಸಫಾರಿ, ರ್‍ಯಾಫ್ಟಿಂಗ್ ಇವುಗಳಿಗೆಲ್ಲಾ ವಿಮಾನದ ಸ್ಥಳೀಯ ಸಂಚಾರದ ವ್ಯವಸ್ಥೆಯನ್ನು ಇಲ್ಲಿಂದಲೇ ಕಲ್ಪಿಸಲಾಗಿದೆ. ನೇಪಾಳ ಪರ್ವತ ರಾಷ್ಟ್ರವಾಗಿರುವುದರಿಂದ ರಸ್ತೆ ಸಂಚಾರ ಎಲ್ಲ ಕಡೆ ಸುಲಭವಾಗಿಲ್ಲ. ಆದುದರಿಂದ ಇಲ್ಲಿಂದ ಅನೇಕ ಕಡೆ ಮಿನಿ ವಿಮಾನ ಸೇವೆಗಳಿವೆ. ರಾಯಲ್ ನೇಪಾಳ, ಅನನ್ಯ ಏರ್‌ಲೈನ್ ನೇಪಾಳ ವಿಮಾನ ಕಂಪನಿಗಳೂ ಸೇವೆ ನೀಡುತ್ತಿವೆ.

ವಿಶ್ವದ ಅತಿ ಎತ್ತರದ ಪರ್ವತ ಮೌಂಟ್ ಎವರೆಸ್ಟ್ ಇಲ್ಲಿಗೆ ಸಮೀಪ. ಅಂತೆಯೇ ಮಾನಸ ಸರೋವರ, ಕೈಲಾಸನಾಥ ಯಾತ್ರಾರ್ಥಿಗಳೂ ಇಲ್ಲಿಂದಲೇ ಹೊರಡುತ್ತಾರೆ. ಅನ್ನಪೂರ್ಣ, ಧವಳಗಿರಿ, ಕಾಂಚನಗಂಗಾ ಈ ಪರ್ವತಗಳೂ ಇಲ್ಲಿಗೆ ಸಮೀಪವಾಗಿವೆ. ಟ್ರೆಕ್ಕಿಂಗ್ ಪ್ರದೇಶಗಳಾದ ಲ್ಯಾಂಗ್‌ಟಂಗ್, ಅಪ್ಪರ್ ಮುಸ್ತಾಂಗ್, ಲೋವರ್ ಡೋಲ್ಪೋ, ನಾಗರ್‌ಕೋಟ್ ಮುಂತಾದ ಸ್ಥಳಗಳು ಇಲ್ಲಿಗೆ ಹತ್ತಿರವಾಗಿದ್ದು ಇಲ್ಲಿಂದ ನೇರವಾಗಿ ನೇಪಾಳಿ ಏರ್‌ಲೈನ್ ವಿಮಾನಯಾನದ ವ್ಯವಸ್ಥೆ ಮಾಡಿದೆ. ನೇಪಾಳ ದೇಶವು

ಹಿಮಾಲಯ ಪರ್ವತ ಶ್ರೇಣಿಗೆ ಹೊಂದಿಕೊಂಡಿದ್ದು ವಿಶ್ವದ ಹತ್ತು ಪರ್ವತಗಳಲ್ಲಿ (ಅತಿ ಎತ್ತರದ) ಮೌಂಟ್ ಎವರೆಸ್ಟ್ ಸಹಿತ 8 ಪರ್ವತಗಳು ನೇಪಾಳ ದೇಶದಲ್ಲಿವೆ. ಈ ಎಲ್ಲವುಗಳಿಗೂ ಪೋಖ್ರಾದಿಂದ ನೇರವಾಗಿ ವಿಮಾನಯಾನದ ಸೌಲಭ್ಯ ಕಲ್ಪಿಸಲಾಗಿದೆ. ನಾನು ವಿಮಾನ ನಿಲ್ದಾಣದ ಕೌಂಟರ್ ನಲ್ಲಿ ನಿಂತು ವೀಕ್ಷಿಸಿದೆ. ಜನ ಬರುತ್ತಾರೆ, ಹಣ ನೀಡಿ ತಮಗೆ ಬೇಕಾದ ವಿಮಾನ ಏರಿ ಹೊರಟು ಹೋಗುತ್ತಾರೆ. ಇಳಿಯುವ ವಿಮಾನಗಳಿಂದ ಇಳಿಯುತ್ತಾರೆ. ಲಗೇಜ್ ತೀರಾ ಕಡಿಮೆ ಅನ್ನಿಸಿತು. ಉದ್ದನೆಯ ಮೂರು ಬೀಜಗಳ ಕಡಲೇಕಾಯಿ ನನ್ನ ನಾಲಿಗೆಯಲ್ಲಿ ನೀರೂರಿಸಿತು. ಎರಡು ಗಂಟೆಯ ಸಮಯ. ಹೊಟ್ಟೆ ಚುರುಗುಟ್ಟುತ್ತಿದೆ. ಪ್ರವಾಸ ಕಾಲದಲ್ಲಿ ಹಸಿವು ಜಾಸ್ತಿ ಎಂಬುದನ್ನು ಓದಿದ ನೆನಪು. ನನಗೂ ಅನುಭವವಾದಂತಾಗಿ ಕಡ್ಲೆಕಾಯಿ ಬೆಲೆ ವಿಚಾರಿಸಿದೆ. ಬರೀ ಹೆಂಗಸರು ಬಯಲಲ್ಲಿ ಶೇಂಗಾ, ಕಿತ್ತಲೆ, ಸೇಬು ವ್ಯಾಪಾರ ಮಾಡುತ್ತಿದ್ದರು. ಅವರ ನೇಪಾಳಿ ಭಾಷೆ ನನಗೆ ತಿಳಿಯದು, ಇಂಗ್ಲೀಷ್ ಅವರಿಗೆ ಗೊತ್ತಿಲ್ಲ. ಭಾರತದ 20 ರ ಒಂದು ನೋಟು ಕೊಟ್ಟು ಒಂದು ಪಾವು ಕಡಲೇಕಾಯಿಯ ಒಂದು ಪೊಟ್ಟಣ ತೆಗೆದುಕೊಂಡೆ. ಆಯಮ್ಮ ಮತ್ತೆ ಕೊಸರಿದಳು. ಎರಡೂ ಕೈಬೆರಳುಗಳನ್ನು ತೋರಿಸಿ ಇನ್ನೂ 10 ರೂ. ಕೊಡುವಂತೆ ಒತ್ತಾಯಿಸಿದಳು. ನನ್ನಿಂದ ಪ್ರತಿಕ್ರಿಯೆ ಇಲ್ಲ. ಅಲ್ಲಿಂದ ಮೂರ್‍ನಾಲ್ಕು ಹೆಂಗಸರು ಜೋರು ಮಾಡಿ ಹಣ ಕೊಡುವಂತೆ ಒತ್ತಾಯಿಸಿದರು. ಮತ್ತೆ 20 ರ ಒಂದು ನೋಟು ಕೊಟ್ಟೆ. ಆ ಹಣ ತೆಗೆದುಕೊಂಡು ಆ ದಢೂತಿ ಹೆಂಗಸು ಹೋಗುವಂತೆ ಕೈಸನ್ನೆ ಮಾಡಿದಳು. ಅವಳ ಮುಖದಲ್ಲಿ ಗೆದ್ದ ಖುಷಿಯಿತ್ತು. ಜೊತೆಯಲ್ಲಿದ್ದವರಿಗೆ ಈ ಬಕರನಿಗೆ ಸರಿಯಾಗಿ ಬರೆ ಎಳೆದೆ ಎಂಬ ಉಲ್ಲಾಸದ ಮಂದಹಾಸವಿತ್ತು. ಭಾರತದ 40 ರೂಪಾಯಿಗೆ ನೇಪಾಳದ 60 ರೂ. ಸಮ. ಒಂದು ಪಾವು ಶೇಂಗಾ 60 ರೂ. ಆಯಿತಲ್ಲ ಎಂದು ಯೋಚಿಸುತ್ತಾ ಶೇಂಗಾ ಸುಲಿದು ಬಾಯೊಳಗಿಡುತ್ತಾ ನಮ್ಮ ಬಸ್ ನಿಂತ ಜಾಗಕ್ಕೆ ಬಂದೆ. ಪ್ರೊ|| ದಸ್ತಗೀರ್, ಕೆಸಿಎನ್ ಮತ್ತು ಕೇರಳದ ಕೆಲವರು ನಮ್ಮ ಬಸ್ಸಿನಲ್ಲಿ ಕುಳಿತಿದ್ದರು. ನಾನು 60 ರೂ. ಕಥೆ ಹೇಳಿದೆ. ಪ್ರೊ|| ದಸ್ತಗೀರ್ ಪೋಖ್ರಾದಲ್ಲಿ ಬಕರಾ ಆದಿರಿ ಎಂದು ಜೋರಾಗಿಯೇ ನಗುತ್ತಾ ಗಡ್ಡ ಕೆರೆದುಕೊಂಡು ಶೇಂಗಾದ ಪೊಟ್ಟಣಕ್ಕೆ ಕೈ ಹಾಕಿದರು. ನಮ್ಮ ತಂಡದ ಇತರ ಸದಸ್ಯರೂ ಒಬ್ಬೊಬ್ಬರಾಗಿ ಬಂದರು. ತಲೆಯ ಮೇಲೆ ಗೂರ್ಖಾ ಟೋಪಿ, ಬಿಳಿ ಹಸಿರು ಕಂದು ಬಣ್ಣದ ಪಟ್ಟೆಪಟ್ಟೆ ಟೀಷರ್ಟ್, ಕಪ್ಪು ಪ್ಯಾಂಟ್‌ನ ಮೇಲೆ ಬಿಂದುವಾಸಿನಿ ದೇವಾಲಯದ ಬಳಿ ತಂದಿದ್ದ ಸೆಣಬಿನ ಚೀಲ ಕಂಕುಳಲ್ಲಿ ನೇತು ಹಾಕಿಕೊಂಡು ಬಂದ ನಮ್ಮ ತಂಡದ ನಾಯಕ ಪ್ರೊ|| ಜಯಪ್ರಕಾಶ್, ನಿಜವಾಗಿಯೂ ಗೂರ್ಖಾ ತರಹವೇ ಕಾಣುತ್ತಿದ್ದರು.

೮

# ಫೆವಾ ಸರೋವರದ ತೆಪ್ಪೋತ್ಸವ

ನಾವು ಮಧ್ಯಾಹ್ನ 1.30 ಗಂಟೆಯ ಸುಮಾರಿಗೆ ಫೆವಾ ಸರೋವರಕ್ಕೆ ಹೋದೆವು. ಇದಿರುವುದು ಪೋಖ್ರಾದ ಪಶ್ಚಿಮದ ಇಳಿಜಾರಿನಲ್ಲಿ ಊರಿಗೆ ಅಂಟಿಕೊಂಡೇ ಇದೆ. ತಗ್ಗು ಪ್ರದೇಶ ಸುತ್ತಲೂ ಎತ್ತರದ ಕಣಿವೆಗಳ ಸಾಲು ಸಾಲು ಆ ಕಣಿವೆಗಳ ಮೇಲೆ ತರಾವರಿ ಮನೆಗಳನ್ನು ನಿರ್ಮಿಸಿ ಕೊಂಡಿದ್ದಾರೆ. ವಾಹನ ಸೌಲಭ್ಯ ಪಡೆದಿದ್ದಾರೆ. ಪೋಖ್ರಾದ ಆಡಳಿತ ಕಛೇರಿ, ಆಕಾಶವಾಣಿ, ದೂರದರ್ಶನ ಕೇಂದ್ರ, ಮಣಿಪಾಲ್ ಆಸ್ಪತ್ರೆ, ಅನ್ನಪೂರ್ಣ ಮ್ಯೂಸಿಯಂ ಇವೆಲ್ಲ ಫೆವಾ ಸರೋವರದ ನಡುಮಧ್ಯ ಬೋಟಿನಲ್ಲಿ ಕುಳಿತ ಕಡೆಯಿಂದಲೇ ಕಾಣುತ್ತವೆ.

ಉತ್ತರ ದಕ್ಷಿಣವಾಗಿ ಮೂರ್‍ನಾಲ್ಕು ಕಿ.ಮೀ ವಿಸ್ತೀರ್ಣದ ಪ್ರದೇಶ. ಸರೋವರದ ಎಡಬದಿ ಸಂಪೂರ್ಣ ಹಿಮಾಚ್ಛಾದಿತವಾದ ಪರ್ವತ. ಹಸಿರಿರದ, ಹಿಮ ಕರಗಿ ನಿಂತ ಧವಳ ಪರ್ವತದ ಸವಕಲಿನ ರೂಪ. ಸರೋವರದ ನೀಲ ನೀರು ನೋಡುವ ಕಣ್ಣೋಡುವವರೆಗೂ ಹರಡಿ ನಿಂತ ಅನುಭವ. ಶುಭ್ರ ಜಲ, ಪರಿಶುದ್ಧ ನೀರು. ನೀರು ನೀರೇಯಾದ ಶೀತಾನುಭವ, ಹಿತವಾದ ಹವೆ ನೀರೊಳಗೆ ಬಿಳಿಯ ಕೊರಳಿಗೆ ಕಪ್ಪು ಪದಕ ಹಾಕಿದಂತೆ ಕಾಣುವ ಕೆಂಪು ಕೊಕ್ಕಿನ ಹಂಸ ಮಾದರಿಯ ಪಕ್ಷಿಗಳು, ಸೂರ್ಯ ನಡು ನೆತ್ತಿಯಲ್ಲಿ ಕೂತು ತನ್ನ



ಫೆವಾ ಸರೋವರ



ಪ್ರಖರ ಕಣ್ಣುಗಳಿಂದ ನಮ್ಮ ಕಡೆಯೇ ನೋಡುತ್ತಿದ್ದುದರಿಂದ ಚುಮು ಚುಮು ವಾತಾವರಣದಲ್ಲಿ ನಮ್ಮ ದೋಣಿ ಸಾಗುತ್ತಾ ಹೋಯಿತು. 'ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ' ಎಂದು ನಮ್ಮ ದೋಣಿಯಲ್ಲಿದ್ದವರು ಹಾಡುತ್ತಿದ್ದರು. ಇನ್ನೊಂದು ದೋಣಿಯಲ್ಲಿ ರಾಶಿಯಂತೆ ಕೂತು ಪ್ರಯಾಣ ಬೆಳೆಸುತ್ತಿದ್ದವರು 'ನಾವೊಂದು ತೀರ ನೀವೊಂದು ತೀರ, ದೂರ ಬಹು ದೂರ' ಎಂದು ಹಾಸ್ಯ, ಅಣಕು ಗೆದ್ದ ದೊಡ್ಡಸ್ತಿಕೆಗಳಿಂದ ಉಲ್ಲಾಸ ಉತ್ಸುಕರಾಗಿದ್ದರು. ಈ ಎಲ್ಲ ದೋಣಿಯನ್ನು ನಡೆಸುವವರು ಶೆರ್ಪಾಗಳು. ಗಂಡಸರಂತೆ ಹೆಂಗಸರೂ ಆಳ ಸರೋವರದಲ್ಲಿ ಪ್ರಯಾಣಿಕರನ್ನು ದೋಣಿಯಲ್ಲಿ ತುಂಬಿಕೊಂಡು ಪ್ರಯಾಣ ಮಾಡಿಸುತ್ತಾರೆ. ನಮ್ಮ ಎರಡು ತಂಡಗಳಾಗಿ ಕುಳಿತುಕೊಂಡಿದ್ದ ದೋಣಿಗಳನ್ನು ಗಂಡ, ಹೆಂಡತಿಯರು ಪ್ರತ್ಯೇಕವಾಗಿ ಒಂದೊಂದು ದೋಣಿಯನ್ನು ನಡೆಸುತ್ತಿದ್ದರು. ಪ್ರೊ||ಜಯಪ್ರಕಾಶ್, ಪ್ರೊ|| ಕೆಸಿಎನ್, ನಾನು, ಪ್ರೊ||ಮೋಹನ್, ಪ್ರೊ||ದಕ್ಷಿಣಾಮೂರ್ತಿ ಹಾಗೂ ಪ್ರೊ||ಶೈಲ ಇದ್ದ ದೋಣಿಯನ್ನು ಗಂಡಸು ನಡೆಸುತ್ತಿದ್ದರು. ಅವನ ಹೆಂಡತಿ ನಡೆಸುತ್ತಿದ್ದ ದೋಣಿಯಲ್ಲಿ ಡಾ||ಸದಾಶಿವ, ಪ್ರೊ||ರುದ್ರಮುನಿ, ಪ್ರೊ||ಟಿ.ಜಿ. ಮಮತ, ಪ್ರೊ||ಮಂಗಳ, ಪ್ರೊ||ಮಹಮದ್ ದಸ್ತಗೀರ್, ಪ್ರೊ|| ಜಗದಾಂಬ ಹಾಗೂ ಪ್ರೊ|| ಪೂರ್ಣಾದೇವಿ ಇದ್ದರು. ಮಾತಿನ ಮೋಜು, ಉಲ್ಲಾಸದ ತೀವ್ರತೆಯ ನಡುವೆ ಒಂದು ಕಡೆಗೇ ಭಾರ ಹಾಕಿದ ಕಾರಣ ಎರಡನೇ ತಂಡದವರಿದ್ದ ದೋಣಿ ಬಲಬದಿಗೆ ವಾಲಿಕೊಂಡು ಮುಂದೆ ಹೋಗದೆ ಮುಳುಗು ತೇಲುವ ಸನ್ನಿವೇಶ ಸೃಷ್ಟಿಸಿತು. ಆ ದೋಣಿ ನಡೆಸುತ್ತಿದ್ದ ಹೆಂಗಸು ದಪ್ಪಗೆ, ಎತ್ತರಕ್ಕೆ, ನಸುಗೆಂಪಿನ ಹೆಂಗಸು. ನೀಳ ಮೂಗು ನೋಟದಲ್ಲಿ ನಮ್ಮ ಚಲನಚಿತ್ರ ಕಲಾವಿದೆ ಜಯಮಾಲ ಅವರ ತದ್ರೂಪು. ಆದರೂ ಸ್ವಲ್ಪ ಕಂದುಬಣ್ಣ. 'ಗಿರಿಕನ್ಯೆ' ಚಲನಚಿತ್ರದ ಹೊಳೆಯಲ್ಲಿ ಕೊಚ್ಚಿ ಹೋಗುವ ಸನ್ನಿವೇಶ, ಇಲ್ಲಿನ ಗಿರಿಕನ್ಯೆ ಜಯಮಾಲ ಡಾ|| ರಾಜಕುಮಾರ್ ಹರಿಯುವ ಹೊಳೆಯಲ್ಲಿ ಈಜಿ ಗಿರಿಕನ್ಯೆಯನ್ನು ಹಿಡಿದು ತರುವ ಸಂದರ್ಭ. ಗಾಬರಿ, ಆತಂಕ ಆ ಮುನ್ನೋಟದ ತಲ್ಲಣ. ದೋಣಿ ನಾವಿಕೆಯಲ್ಲಿ



ಸಾಕ್ಷಾತ್ಕರಿಸಿಕೊಂಡಿತು. ತನ್ನ ಗಂಡ ಮತ್ತು ಇತರರು ಏನೇನೋ ಸಲಹೆ ನೀಡಿದರು. ಆಕೆ ಗಾಬರಿ, ಆತಂಕಕ್ಕೊಳಗಾದರೂ ವಿಚಲಿತಳಾಗದೆ ದೋಣಿಯನ್ನು ನೀರಿನ ಸುಳಿ, ರಭಸವಿರುವ ಜಾಗದಿಂದ ಸ್ವಲ್ಪ ದೂರಕ್ಕೆ ತಂದು ನಿಲ್ಲಿಸಿದಳು. ನಮ್ಮವರು ಕುಳಿತ ಭಂಗಿ ಸರಿಪಡಿಸಿಕೊಂಡು ಹಿಂದಕ್ಕೆ ಮುಂದಕ್ಕೆ ಸಮಭಾಗದಲ್ಲಿ ಕೂರುವಂತೆ ಸಲಹೆ ನೀಡಿದಳು, ದೋಣಿಯನ್ನು ಮುನ್ನಡೆಸಿದಳು. ಯಾರಿಗೂ ತೊಂದರೆ ಆಗಲಿಲ್ಲ. ಇದೊಂದು ಪುಣ್ಯದ ಸಂಗತಿ. ನಮ್ಮ ಪ್ರೊ|| ಜಯಪ್ರಕಾಶ್ ಮನಕಾಮನ ದೇವಿಯಲ್ಲಿ ನಮಗೆ ಬರಬೇಕಾಗಿರುವ ಯುಜಿಸಿಯ ಹಿಂಬಾಕಿ ಬೇಗ ಬಂದಲ್ಲಿ ಮತ್ತೊಮ್ಮೆ ದೇವಿ ದರ್ಶನಕ್ಕೆ ಬರುವುದಾಗಿ ಹರಸಿಕೊಂಡರೆಂದು ಕೇಳಿದ್ದೆ. ಅದು ಈಡೇರಿತೋ ಇಲ್ಲವೋ ಆದರೆ ಫೆವಾ ಸರೋವರದ ದೊಡ್ಡ ದುರಂತದಿಂದ ದೇವಿ ಪಾರು ಮಾಡಿದಳು. ಈ ಮೂಲಕ ಹರಕೆ ಫಲಪ್ರದವಾಯಿತು ಎಂದು ಕೆಲವರು ನಗಾಡಿದರು!

ಸ್ವಲ್ಪ ಹೊತ್ತು ಫೆವಾ ಸರೋವರದಲ್ಲಿ ಸುತ್ತಾಟ ಮಾಡಿದೆವು. ಈ ಸರೋವರದ ನಡುವೆ ಒಂದು ದಿಬ್ಬ. ಅದರ ವಿಸ್ತೀರ್ಣ 2000 ಅಡಿಗಳಷ್ಟಿರಬಹುದು. ಸುತ್ತಲೂ ನೀರು, ನಡುವೆ ನೆಲದ ದಿಬ್ಬ, ದ್ವೀಪದ ಮಾದರಿ. ಇಲ್ಲಿನ ದಿಬ್ಬದ ಮೇಲೆ ಒಂದು ದೊಡ್ಡ ಬೇವಿನ ಮರವಿದೆ. ಎತ್ತರವಲ್ಲವಾದರೂ ಅಗಲವಾಗಿ ಹರಡಿಕೊಂಡು, ಸೊಂಪಾಗಿ ಬೆಳೆದು ಒಳ್ಳೆಯ ನೆರಳು ಕೊಡುತ್ತದೆ. ಬೇವಿನ ಮರವೂ ಸೇರಿದಂತೆ ಇಲ್ಲಿರುವ ಬಾರಾಹಿ ಮಂದಿರ, ಗುಪ್ತೇಶ್ವರ ಮಹದೇವ, ಭಗವತಿ ದೇವಾಲಯಗಳ ಪುಟ್ಟ ಗುಡಿಗಳು ಪ್ರತ್ಯೇಕ ಪ್ರತ್ಯೇಕವಾಗಿಯೇ ಇವೆ. ಇವುಗಳಿಗೆ ಪೇಡ ಮಾದರಿಯ ಮಿಠಾಯಿ, ಚಟನ್‌ಮರಿ (ಅಕ್ಕಿಯ ತಂಬಿಟ್ಟು ಮಾದರಿ) ಈ ಬಗೆಯ ತಿಂಡಿಯನ್ನು ಪ್ರಸಾದ ರೂಪದಲ್ಲಿ ದೇವರಿಗೆ

ನೈವೇದ್ಯ ಮಾಡಿಸುತ್ತಾರೆ. ಇಲ್ಲಿನ ಅರ್ಚಕ, ಭಕ್ತರು ಕೊಟ್ಟ ಪ್ರಸಾದ ಪೊಟ್ಟಣದ ಒಂದೆರಡು ತುಣುಕುಗಳನ್ನು ತಾನು ತೆಗೆದುಕೊಂಡು ದೇವರಿಗೆ ಅರ್ಪಿಸಿ ಹಿಂತಿರುಗಿಸುತ್ತಾರೆ. ಎಲ್ಲವೂ ಸಿಹಿ. ಸಿಹಿ ತಿಂಡಿಯ ನೈವೇದ್ಯ ಇದು ನೇಪಾಳ ದೇಶದ ವಿಶೇಷ.

ಫೆವಾ ಸರೋವರದಲ್ಲಿ ಎರಡು ಗಂಟೆಗೂ ಹೆಚ್ಚು ಕಾಲ ತಿರುಗಾಟ ಮಾಡಿದರೂ ಹಿಂತಿರುಗುವ ಮೂಡ್ ನಮ್ಮಲ್ಲಿ ಯಾರಿಗೂ ಇರಲಿಲ್ಲ. ಶುದ್ಧವಾದ, ನಿಧಾನಗತಿಯ ಉತ್ತರ-ದಕ್ಷಿಣ ಓಟದ ಇಲ್ಲಿನ ಹಿಮಾಲಯದ ನೀರು ಸಂಗ್ರಹಗೊಂಡು ಸರೋವರದ ಸೊಗಸು ಅಷ್ಟು ಚೆಂದ. ಊಟಿಯ ಕೊಳಕು ಕೊಳದಲ್ಲೇ ಜಲಯಾನ ಮಾಡುವ ನಮ್ಮ ನಾಗರಿಕರು ಫೆವಾ ಸರೋವರದ ಸೊಬಗು, ಸ್ವಚ್ಛತೆ ಮರೆಯದೆ ನೋಡಬೇಕಾದ ಸ್ಥಳ.

ಅರ್ಜುನ ಪಾಂಡೆಯ ಸಮಯಪ್ರಜ್ಞೆಗಿಂತ ವ್ಯಾಪಾರಿ ಮನೋಭಾವದ ಫೆವಾ ಸರೋವರದ ತೆಪ್ಪದ ನಾವಿಕನ ಕರ್ತವ್ಯಪ್ರಜ್ಞೆ ಹೆಚ್ಚು ಜಾಗೃತವಾಗಿತ್ತು. ಆ ಮೂಲೆಗೆ ಇನ್ನೊಂದಿಷ್ಟು ದೂರ ಆ ತುದಿ, ಈ ತುದಿ ಎಂದು ನಾವು ಹೇಳುತ್ತಿದ್ದರೂ ಆತ ಮಾತನಾಡುತ್ತಲೇ ಇರಲಿಲ್ಲ. ಮೌನವಾಗಿಯೇ ಅವನು ತೋರಬೇಕಾದ ಸ್ಥಳ, ಸಮಯ ಎರಡನ್ನೂ ಖಚಿತವಾಗಿಸಿಕೊಂಡೇ ವ್ಯವಹರಿಸುತ್ತಿದ್ದ. ನೀರಿನ ತಿರುಗಾಟ ತಿರುಗಾಟವೇ! ಅದರಲ್ಲಿ ಇನ್ನೊಂದಿಷ್ಟು ಮತ್ತೊಂದು ಸುತ್ತು ಎಂಬ ನಮ್ಮಗಳ ಚೌಕಾಸಿ, ವ್ಯರ್ಥ ಕಸರತ್ತು ಎಂದು ನನಗನ್ನಿಸುತ್ತಿತ್ತು. ಸಂಜೆ 4 ರ ವೇಳೆಗೆ ಫೆವಾ ಸರೋವರ ಬಿಟ್ಟ ನಮ್ಮ ತಂಡ ಪೋಖ್ರಾದ ರಾಜಬೀದಿ, ಮ್ಯೂಸಿಯಂ ಬದಿ ಪಾರ್ಕ್ ರಸ್ತೆಯನ್ನು ಸುತ್ತುತ್ತಾ ಹೋಯಿತು.

ಪೋಖ್ರಾದ ವಿಶೇಷತೆಯೆಂದರೆ ಅಲ್ಲಿನ ಸ್ವಚ್ಛತೆ. ಅದು ರೈತಾಪಿ ಕಾಲೋನಿ, ಮಾರ್ಕೆಟ್, ಕಛೇರಿ ರಸ್ತೆ, ದೇವಾಲಯ ಬೀದಿ ಎಲ್ಲೆಡೆ ಸ್ವಚ್ಛತೆಯನ್ನು ಕಾಯ್ದುಕೊಂಡಿದ್ದಾರೆ. ಪ್ರವಾಸಿಗರಾಗಲಿ ಬೇರೆ ಯಾರಾದರೂ ಸರಿಯೇ ಸಿಕ್ಕಸಿಕ್ಕಲ್ಲಿ ತಾವು ತಿಂದ ಹಣ್ಣಿನ ಸಿಪ್ಪೆ, ಬಿಸ್ಕೆಟ್ ಪ್ಯಾಕೆಟ್, ಕವರ್ ಇತ್ಯಾದಿಗಳನ್ನು ರಸ್ತೆ ಬದಿ ಹಾಕುವಂತಿಲ್ಲ. ರಸ್ತೆಯ ತುದಿಯ ಅಂಚಿನಲ್ಲಿಟ್ಟಿರುವ ಕಸದ ತೊಟ್ಟಿಯಲ್ಲಿಯೇ ಕಸ ಹಾಕುವುದು ಇಲ್ಲಿ ಕಡ್ಡಾಯ, ಮಾತ್ರವಲ್ಲ ಕಿಟಕಿ ಸರಿಸಿ ಉಗುಳುವುದಾಗಲಿ, ನೀರಿನಲ್ಲಿ ಕೈ ತೊಳೆಯುವಂತೆಯೂ ಇಲ್ಲ. ಮಾತ್ರವಲ್ಲ ಮೂತ್ರ ವಿಸರ್ಜನೆಗೆ ನಿರ್ದಿಷ್ಟ ಸ್ಥಳದ ಸರ್ವೀಸ್ ಟಾಯ್ಲೆಟ್‌ನ್ನು ಮಾತ್ರ ಬಳಸುವುದು ಇಲ್ಲಿ ಕಡ್ಡಾಯ. ಹಳೆಯ ಗೋಡೆ, ಅಂಗಡಿ, ಮರ, ಪಾರ್ಕ್ ಮೂಲೆಗಳಲ್ಲಿ ಯಾರಾದರೂ ನಿಂತುಕೊಂಡಿದ್ದರೂ

ದಾರಿಹೋಕರೇ ಕೈಯಲ್ಲಿ ಕಲ್ಲು ಹಿಡಿದು ತೋರುತ್ತಾರೆ. ಅದು ಮೀರಿದರೆ ಕಲ್ಲಿನಿಂದ ಹೊಡೆಯುತ್ತಾರೆ. ಇದು ಪೋಖ್ರಾ ವಿಶೇಷ. ಹಾಗಾಗಿಯೇ ಪೋಖ್ರಾ ರಸ್ತೆಗಳು, ಸಾರ್ವಜನಿಕ ಸ್ಥಳಗಳು ಅಂದವಾಗಿಯೇ ಕಾಣುತ್ತವೆ. ಇಲ್ಲಿನ ಸಾಮಾಜಿಕ, ನಾಗರಿಕ ಪ್ರಜ್ಞೆ ನಿಜಕ್ಕೂ ಮಾದರಿ.

ಮರಳಿ ತಾಜ್ ರೆಸ್ಟೋರೆಂಟ್‌ಗೆ ಪಯಣ. ಕರ್ನಾಟಕದ ಕರಾವಳಿ ಭೋಜನದ ಪರಿಮಳ ಹಸಿದ ಒಡಲಿಗೆ ಹಿತವೆನ್ನಿಸಿತು. ಊಟ ಮುಗಿಸಿದ ಅರ್ಧ ತಾಸಿನಲ್ಲೇ ತಾಜ್ ವಸತಿ ಖಾಲಿ ಮಾಡಿ ಕಠ್ಮಂಡುವಿಗೆ ಹೋಗಬೇಕು. ಎತ್ತರದ ಶಿಖರ, ಕಣಿವೆಯ ಮೂಲಕ ಹಾಯ್ದು ಹೋಗಬೇಕೆಂದೂ, ದೀರ್ಘ ಪ್ರಯಾಣವೆಂದೂ ಸಾರಥಿ ಪಾಂಡೆ ದೀರ್ಘ ಭಾಷಣವನ್ನೇ ಮಾಡಿದರು.  ಸಂಜೆ 5 ಗಂಟೆಯ ಸುಮಾರಿಗೆ ಪೋಖ್ರಾದಿಂದ ಕಠ್ಮಂಡು ಕಡೆಯ ಪಯಣ, ನಡುವೆ ಸಂಜೆಯ ಸೂರ್ಯನ ರಶ್ಮಿ ಅನ್ನಪೂರ್ಣ, ಗೌರಿಶಂಕರ, ಧವಳಗಿರಿ, ಲ್ಯಾಂಗ್‌ಟಂಗ್ ಮುಂತಾದ ಹಿಮಾವೃತವಾದ ಕಣಿವೆಗಳ ಮೇಲೆ ಸೂರ್ಯರಶ್ಮಿ ಬೀಳುತ್ತದೆ. ಬಂಗಾರ, ತಿಳಿ ಬಂಗಾರ, ಬೆಳ್ಳಿಗುಡ್ಡೆ, ಕೆಮ್ಮುಗಿಲು, ಯುದ್ಧ ನಿರತ ಸೈನಿಕರ ರೂಪ, ಹಿಂಜಿದ ಅರಳೆ ಹಾರಿ ಹೋಗಿ ಕಣಿವೆಯ ಕೋಡುಗಲ್ಲಿಗೆ ಸಿಕ್ಕಿಕೊಂಡು ಬಗೆಬಗೆಯ ಆಕೃತಿ ನೀಡಿರುವ ತಗ್ಗು-ದಿಣ್ಣೆ, ಕಣಿವೆಯ ಕೋವೆ ಇಲ್ಲೆಲ್ಲಾ ಮುತ್ತಿಕೊಂಡ ಹಿಮದ ಮೇಲೆ ಬಿದ್ದ ಸೂರ್ಯನ ಕಿರಣ ವರ್ಣಸಲಸದಳವಾದ ಜಗತ್ತನ್ನು ಸೃಷ್ಟಿಸಿಬಿಡುತ್ತದೆ. ಮೋಹಕ ಅತ್ಯದ್ಭುತ ಸಾಂದರ್ಭಿಕ ವಾತಾವರಣವನ್ನು ರೋಚಕವಾಗಿ ನಿರ್ಮಿಸಿದೆ. ಇಂಥ ಕಣಿವೆ ಹತ್ತಿರಕ್ಕೆ ವಾಹನ ತಲುಪಿದ ಕೂಡಲೇ 'ನಿಲ್ಲಿಸಿ ನಿಲ್ಲಿಸಿ' ಎಂಬ ಒಂದೇ ಉಸಿರಿನ ಕೂಗು. ಕೆಳಗಿಳಿದು ಕಣ್ಣು ತುಂಬಿಕೊಳ್ಳುವ, ಮಾತಿನ ವರ್ಣನೆಗೆ ತೊಡಗುವ, ಅದು ಹೀಗೆ ಇಲ್ಲಿ ಹಾಗೆ ಎಂತೆಲ್ಲಾ ವರ್ಣನೆಗೆ ಇಳಿದದ್ದು ಮಜವಾಗಿತ್ತು. ಬಹುತೇಕರು ತಮ್ಮ ಕ್ಯಾಮರಾಗಳಿಂದ ಆ ರಮ್ಯ ರಮಣೀಯ ದೃಶ್ಯವನ್ನು ಸೆರೆ ಹಿಡಿಯುವುದರಲ್ಲೇ ಮಗ್ನರಾಗಿದ್ದರು. ಪ್ರೊ॥ ಮೋಹನ್, ಪ್ರೊ॥ ಮಂಜುಳ ಮುಂದೆ ಮುಂದಕ್ಕೆ ಹೋಗಿ ಕ್ಯಾಮರಾಗಳಲ್ಲಿ ಆ ದೃಶ್ಯಗಳನ್ನು ಸೆರೆ ಹಿಡಿಯಲು ನಿಂತರೆ ಪ್ರೊ॥ಕೆಸಿಎನ್ ಮತ್ತು ನಾನು ಮೌನವಾಗಿಯೇ ಶಿಖರದ ಕಣಿವೆಯ ಮಂಜಿನ ಮೋಹದಾಟಗಳನ್ನು ವೀಕ್ಷಿಸಿದೆವು. ಸೂರ್ಯ ದಿನದ ಆಟ ಮುಗಿಸಿ ತನ್ನ ಮಾತೃಗರ್ಭ ಸೇರುವ ತನಕ ಮಂಜು, ಮೋಹದಾಟದೊಂದಿಗೆ ನಮ್ಮ ಪಯಣ ಸಾಗುತ್ತಿತ್ತು. ಬಿಟ್ಟು ಬಿಟ್ಟು ಎದುರಾಗುತ್ತಿದ್ದ ಹಿಮ ಕಣಿವೆಗಳಿಂದ ಅಲ್ಲಿನ ಮೋಹಕ ಚೆಲ್ಲಾಟದಿಂದ ಬಿಡಿಸಿಕೊಳ್ಳುವುದು ತುಸು ಪ್ರಯಾಸಕರವೇ. ವಿಶೇಷವಾಗಿ ದಕ್ಷಿಣದ ಸಮುದ್ರ ಭಾಗದಿಂದ

ಉತ್ತರದ ಬಯಲುಸೀಮೆ ದಾಟಿ ಬರುವವರಿಗೆ ಪಶ್ಚಿಮದ ಈ ಘಟ್ಟಗಳು, ಅವುಗಳ ಮಂಜು ಇವುಗಳ ಆಕರ್ಷಣೆ ಬಿಟ್ಟೂಬಿಡದೆ ಕಾಡುತ್ತದೆ. ವಿಶೇಷವಾಗಿ ನೇಪಾಳದ ಹಿಲ್‌ಸ್ಟೇಷನ್ ಸ್ಥಳಗಳಾದ ನಗರ್‌ಕೋಟ್, ಕಕನಿ, ದಮೆನ್ ದುಲೀಖೇಲ್ ಇವುಗಳ ಸೊಬಗನ್ನು ಸವಿಯಲೇಬೇಕು.

## ಮದಿರೆ ಜೊತೆಜೊತೆಗೆ ಮಾನಿನಿಯರು:

ನೇಪಾಳದಲ್ಲಿ ಹೆಂಗಸರದ್ದು ಸಮಾನ ದುಡಿತ. ಅಲ್ಲಿನ ಹೆಣ್ಣುಮಕ್ಕಳ ಕ್ರಿಯಾಶೀಲತೆ ಎದ್ದು ಕಾಣುತ್ತದೆ. ವ್ಯಾಪಾರ, ಕಾಫಿಬಾರ್, ವೈನ್ ಅಂಗಡಿಗಳಲ್ಲೆಲ್ಲಾ ಹೆಂಗಸರದ್ದೇ ಕಾರುಬಾರು. ನೇಪಾಳ ದೇಶದಲ್ಲಿ ಪ್ರವಾಸೋದ್ಯಮ ಪ್ರಧಾನ. ಈ ಮೂಲಕ ವ್ಯಾಪಾರ ಇವರ ಪ್ರಧಾನ ಉದ್ಯಮ. ಪ್ರವಾಸಿಗರೊಂದಿಗೆ ಸೌಮ್ಯತೆ, ಆಕರ್ಷಣೆಗಳ ಜೊತೆಗೆ ತಾಳ್ಮೆಯೂ ಅಗತ್ಯ. ಹಾಗೆಯೇ ಇರಬೇಕು. ಇಲ್ಲಿನ ಯಾವುದೇ ವ್ಯಾಪಾರಿ ಅಂಗಡಿ ಅಥವಾ ಇತರೆ ಉದ್ದಿಮೆಗಳಲ್ಲಿ ಹೆಣ್ಣುಮಕ್ಕಳೇ ಹೆಚ್ಚಿನ ರೀತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ಸಂವಹನ ಅಷ್ಟಕ್ಕಷ್ಟೇ. ನೇಪಾಳಿ, ಸ್ವಲ್ಪ ಸ್ವಲ್ಪ ಹಿಂದಿ ಹಾಗೂ ಸ್ಥಳೀಯ ಮೌಖಿಕ ಭಾಷೆಯಲ್ಲಿ ವ್ಯವಹರಿಸುತ್ತಾರೆ. ಹಿಂದಿ ಅಂಕಿ ಅಥವಾ ಇಂಗ್ಲೀಷ್ ಅಂಕಿಗಳೊಂದಿಗೆ ವ್ಯವಹರಿಸುವುದು ಇವರಿಗೆ ಕರಗತವಾಗಿದೆ. ಒಮ್ಮೊಮ್ಮೆ ಬರೆದು ತೋರಿಸುವುದೂ, ಕೈಬೆರಳ ಮೂಲಕ ಆಂಗಿಕ ಅಂಕಿ-ಅಂಶ ನೀಡುವುದೂ ಉಂಟು. ನಗುಮುಖ, ತಾಳ್ಮೆ, ಸಂಯಮದಿಂದ ವ್ಯವಹರಿಸುವುದು ಇವರ ವಿಶೇಷ.

ಪೋಖ್ರಾದಿಂದ 5 ಗಂಟೆಗೆ ಹೊರಟ ನಮ್ಮ ಪ್ರವಾಸಿ ತಂಡದ ವಾಹನ ಹಿಮಪರ್ವತ, ಸೂರ್ಯನ ಚಮತ್ಕಾರಗಳೊಂದಿಗೆ ನಾವು ಚೆಲ್ಲಾಟ ಆಡಿದೆವು. ಪ್ರಯಾಣದೊಂದಿಗೆ ರಾತ್ರಿಯೂ ಬೆಳೆಯುತ್ತಾ ಹೋಯಿತು. ದಟ್ಟ ಕಣಿವೆ, ಹರಿಯುತ್ತಿರುವ ಜಲಪಾತ, ನದಿ, ಕತ್ತಲೆಯ ರಾತ್ರಿಯಲ್ಲಿಯೂ ಕಂಪನಗರೆಯುತ್ತಿತ್ತು. ನಾವು ಸಾಗುತ್ತಿದ್ದ ದಾರಿಯಲ್ಲಿನ ಒಂದು ಪುಟ್ಟ ಹಳ್ಳಿ. ಪುಟ್ಟ ಹಳ್ಳಿ ಅನ್ನುವುದಕ್ಕಿಂತಲೂ ಕಣಿವೆಹಳ್ಳಿ ಅನ್ನಬಹುದು. ಬಲಬದಿಯ ಪರ್ವತವನ್ನು ಮಟ್ಟಗೊಳಿಸಿ ಕೆಲವು ಅಂಗಡಿಗಳು, ಪುಟ್ಟ ಪುಟ್ಟ ಮನೆಗಳು ನಿರ್ಮಾಣಗೊಂಡಿವೆ. ಇದೊಂದು ಫರ್ಲಾಂಗ್ ಉದ್ದದ ಏರಿಳಿತವುಳ್ಳ ತಿರುವು, ಏರಿಳಿತದ ರಸ್ತೆಯಂಚಿನಲ್ಲಿ ಹಬ್ಬಿಕೊಂಡ ಈ ಪುಟ್ಟ ಹಳ್ಳಿಯಲ್ಲಿ ಕೆಲವೊಂದು ಕಿರಾಣಿ ಅಂಗಡಿಗಳು, ಕೆಲವು ಪ್ಲಾಸ್ಟಿಕ್ ಸಾಮಾನು, ದಿನಬಳಕೆಯ ಅಂಗಡಿಗಳೂ ಇಲ್ಲಿವೆ. ಆದರೂ ಪಾನ್ ಮತ್ತು ಕರಿದ ಮೀನಿನ ಗೂಡಂಗಡಿಗಳೇ ಇಲ್ಲಿ ಹೆಚ್ಚು. ನಾಲ್ಕು ಗಂಟೆಯ ಸತತ ಪ್ರಯಾಣದ ನಡುವೆ ಚಾಲಕ ವಾಹನವನ್ನು ಇಲ್ಲಿ ನಿಲ್ಲಿಸಿದನು. ಇದು ಡ್ರೈವರ್‌ಗಳ

ವಿಶ್ರಾಂತಿಯ ಸ್ಥಳವೆಂದು ನಂತರ ತಿಳಿಯಿತು. ಕಠ್ಮಂಡು, ಚೈನಾ, ಗೂರ್ಖಾ ಹೆದ್ದಾರಿ ಇದಾಗಿರುವುದರಿಂದ ಗೂಡ್ಸ್ ಸರಕು ತುಂಬಿದ ವಾಹನಗಳು ಇಲ್ಲಿ ಹೆಚ್ಚು. ಜೊತೆಗೆ ನೇಪಾಳದಲ್ಲಿ ಹಗಲು ಪ್ರಯಾಣಕ್ಕಿಂತ ರಾತ್ರಿ ಪ್ರಯಾಣಕ್ಕೆ ದರ ಕಡಿಮೆ ಇರುತ್ತದೆ. ಹಾಗಾಗಿ ಪ್ರಯಾಣಿಕರ ವಾಹನ, ಟ್ರಕ್‌ನಂತೆಯೇ ಬಿರುಸಾಗಿ ಓಡಾಡುತ್ತಿರುತ್ತವೆ.

ನಾವು ಮಧ್ಯರಾತ್ರಿ ಇಳಿದ ಹಳ್ಳಿಯ ಹೆಸರು ತ್ರಿಶೂಲಕೇಡ್. ಇದು ಕಠ್ಮಂಡುವಿಗೆ 100 ಕಿ.ಮೀ. ದೂರದಲ್ಲಿದೆ. ಹಗಲಿಗಿಂತ ರಾತ್ರಿ ಹೆಚ್ಚು ಚುರುಕಾಗಿರುತ್ತದೆ. ರಾತ್ರಿಯಿಡೀ ಮದ್ಯದ ಗೂಡಂಗಡಿ, ಚಹಾದಂಗಡಿ ತೆರೆದಿರುತ್ತವೆ. ಇಲ್ಲಿನ ಮದ್ಯದಂಗಡಿಗಳು ದೊಡ್ಡವುಗಳೇನಲ್ಲ. ಅದೂ ಒಂದು ಪೆಟ್ಟಿಗೆ ಅಥವಾ ಸೋಗೆಯಿಂದ ನಿರ್ಮಿಸಿದ ಪುಟ್ಟ ಅಂಗಡಿ. ಅಂಗಡಿಯ ಹೊರಗೆ ಪ್ರತಿ ಗೂಡಂಗಡಿಯ ಮುಂದೆ ಚಹಾ ಕಾಯಿಸುವ, ತಿಂಡಿ ತಯಾರಿಸುವ ಸೌದೆಯ ಪುಟ್ಟ ಪುಟ್ಟ ಒಲೆಗಳಿವೆ. ಆ ಒಲೆಗಳು ನನ್ನಲ್ಲಿ ಕುತೂಹಲ ಹೆಚ್ಚಿಸಿದವು. ನಾನು ಕಂಡ ಐವತ್ತಕ್ಕೂ ಹೆಚ್ಚು ಅಂಗಡಿಗಳೆಲ್ಲ ಆಗ ತಾನೇ ಕೆಮ್ಮಣ್ಣಿನಿಂದ ಸಾರಿಸಿ, ರಂಗೋಲಿಯಿಟ್ಟು ಶುಭ್ರಗೊಳಿಸಲಾಗಿತ್ತು. ಅಂಗಡಿಯ ಮುಂದೆ ಒಣಮೀನನ್ನು ಎಣ್ಣೆಯಲ್ಲಿ ಕರಿದು ಕೊಕ್ಕೆಯಲ್ಲಿ ಜೋಡಿಸಿ ನೇತುಹಾಕಲಾಗಿದೆ. ಟ್ರಕ್ಕುಗಳಲ್ಲಿ ಬರುವ ಎಲ್ಲ ಚಾಲಕರು ಇಲ್ಲಿ ವಾಹನ ನಿಲ್ಲಿಸಿ ಒಂದೆರಡು ಗ್ಲಾಸ್ ವೈನ್ ಹಾಗೂ ಕರಿದ ಮೀನನ್ನು ಸಹಜವಾಗಿಯೇ ಸೇವಿಸುತ್ತಾರೆ. ನಾನು ಒಲೆಯನ್ನು ಚಹಾ ಮಾಡುವುದಕ್ಕೆ ಎಂದು ತಿಳಿದೆ. ಆದರೆ ಈ ರಾತ್ರಿಯಲ್ಲಿ ಒಂದೂ ಒಲೆ ಉರಿಯುತ್ತಿರಲಿಲ್ಲ. ಕಾರಣ ಆ ಚಳಿಯಲ್ಲಿ ಚಹಾಕ್ಕಿಂತ ಹೆಚ್ಚಾಗಿ ಒಣ, ಕರಿದ ಮೀನನ್ನು ಹಾಗೂ ವೈನ್ ಸೇವಿಸಿ, ಕೊಂಚ ವಿಶ್ರಮಿಸಿ ಮುಂದೆ ಹೋಗುವುದು ಇಲ್ಲಿ ರೂಢಿ. ಇಲ್ಲಿ ಡ್ರೈವರ್ ಹಾಗೂ ಇತರೆ ಯಾತ್ರಿಕರೊಂದಿಗೆ ವ್ಯವಹರಿಸುವುದು ಗಂಡಸರಲ್ಲ, ಎಲ್ಲರೂ ಹೆಂಗಸರೇ. ಈ ಹೆಂಗಸರೇನೂ ತೀರಾ ವಯಸ್ಸಾದವರಲ್ಲ. ಬಹುತೇಕ 15 ರಿಂದ 30 ವಯೋಮಿತಿಯ ಒಳಗೆ ಇರುವವರು. ಇವರೆಲ್ಲರೂ ಶ್ವೇತ ಕನ್ಯೆಯರು. ಚೂಡಿದಾರ್ ಧರಿಸಿದ, ನೀಟಾಗಿ ಮುಡಿ ಕಟ್ಟಿಕೊಂಡ, ಎದೆಯ ಮೇಲೆ ವೇಲ್ ಹಾಕಿಕೊಳ್ಳದ ತರುಣಿಯರು. ಲಗುಬಗೆಯಿಂದಲೇ ವರ್ತಿಸುತ್ತಾರೆ. ಕೆಲವರು ತಮ್ಮ ಮೈಕೈ ತಾಗಿಸಿಕೊಂಡೇ ವ್ಯವಹರಿಸುತ್ತಾರೆ. ಬಾಟಲಿಗಳು ಅಲಂಕಾರಿಕ ಜೋಡಣೆ, ಅವುಗಳ ಮೇಲೆ ಮುತ್ತಿಕೊಳ್ಳುವ ಧೂಳನ್ನು ಮೇಲಿಂದ ಮೇಲೆ ಒರೆಸುವ ಅಥವಾ ಆ ನೆಪದಲ್ಲಿ ಬಾಟಲಿಯ ಆಕರ್ಷಣೆಯನ್ನು ಹೆಚ್ಚಿಸುವಲ್ಲಿ, ಆಸಕ್ತಿಯನ್ನು ಉಂಟುಮಾಡುವುದೂ ಇರಬಹುದು. ಅಂಗಡಿಯ ಮುಂದೆ ಕುಳಿತುಕೊಳ್ಳಲು ಹಾಸುಕಲ್ಲು ಹಾಕಿದ್ದಾರೆ. ಕೆಲವೆಡೆ ಹಗ್ಗದ ಮಂಚವೂ ಇವೆ. ಬರುವ

ಗಿರಾಕಿ ಅವುಗಳ ಮೇಲೆ ಕುಳಿತು, ಡ್ರಿಂಕ್ ಮಾಡುತ್ತಾ ಕರಿದ ಒಣಮೀನು ತಿನ್ನುತ್ತ ಹುಡುಗಿಯರೊಂದಿಗೆ ನಗೆ, ಹಾಸ್ಯ ಚಟಾಕಿಯಲ್ಲಿ ತೊಡಗುತ್ತಾರೆ. ಆದರೆ ಈ ಶ್ವೇತಕನ್ಯೆಯರು ಅತ್ಯಂತ ಖುಷಿಯಿಂದ ಅವರೊಂದಿಗೆ ವ್ಯವಹರಿಸುತ್ತಾರೆ. ಟ್ರಕ್ ಡ್ರೈವರ್ ಸ್ವಲ್ಪ ವಿಶ್ರಾಂತಿ ಪಡೆದು ಸಹಜ ಎನ್ನುವಂತೆ ಮುಂದೆ ಹೋಗುತ್ತಾರೆ. ಇದೊಂದು ಸಾಮಾನ್ಯ ಚಿತ್ರ. ನನ್ನ ತೀವ್ರ ಕುತೂಹಲ ಸೆಳೆದ ಎರಡು ಅಂಶಗಳೆಂದರೆ ಒಂದು - ಕುಡಿತ ಇಲ್ಲಿ ಸಾರ್ವತ್ರೀಕರಣವಾಗುತ್ತಿರುವುದು, ಎರಡನೆಯದು ಮಧ್ಯರಾತ್ರಿಯಲ್ಲಿಯೂ ಹೆಂಗಸರು ಯಾವುದೇ ಭಯ-ಬೇಧ ಎಣಿಸದೆ ಪ್ರಯಾಣಿಕರು, ಕುಡಿದ ಡ್ರೈವರ್‌ಗಳೊಂದಿಗೆ ವ್ಯವಹರಿಸುವುದು. ನೇಪಾಳದ ಈ ಕಣಿವೆ ಗಡಿ ಪ್ರದೇಶದಲ್ಲಿರುವ ಹೆಣ್ಣು ಮಕ್ಕಳು ಸಹಜವಾಗಿಯೇ ಸೌಂದರ್ಯವತಿಯರು. ಹುಟ್ಟುತ್ತಲೇ ಸೌಂದರ್ಯವನ್ನು ಹೊತ್ತುಕೊಂಡು ಬಂದಿರುತ್ತಾರೆ. ಮೂಲ ನೇಪಾಳಿ ಯುವತಿಯರಿಗೆ ಮೂಗು ಕೊಂಚ ಮೊಂಡಾದರೂ ಅಂಗಸೌಷ್ಟವ ಸೌಂದರ್ಯ ಸೂಚಿಸುತ್ತದೆ. ಶ್ವೇತವರ್ಣ, ಆಕರ್ಷಕ ಕಣ್ಣೋಟ, ಧವಳ ದಂತಪಂಕ್ತಿ, ಮೈಮಾಟ ಎಲ್ಲವೂ ಆಕರ್ಷಕವೇ. ಇದು ಇವರಿಗೆ ವರವೂ ಹೌದು. ಇದನ್ನೇ ಬಂಡವಾಳವನ್ನಾಗಿಸಿಕೊಂಡು ಇಲ್ಲಿನ ಚೆಂದುಳ್ಳಿ ಚೆಲುವೆಯರನ್ನು ನೇಪಾಳದ ಗಡಿಗಳ ರಸ್ತೆ ಮಾರ್ಗಗಳಲ್ಲಿ ಉದ್ಯೋಗದ ಆಸೆ ತೋರಿಸಿಯೋ, ಮತ್ತಿತರ ಲಾಭದಾಯಕ ಆದಾಯದ ರುಚಿ ತೋರಿಸಿ ಅಪಹರಿಸುವ ಅಪಾಯಗಳೂ ನಡೆಯುತ್ತಿವೆ. ಮುಂಬೈ, ಮದ್ರಾಸ್, ದೆಹಲಿ, ಕಲ್ಕತ್ತಾ ಮೊದಲಾದ ಕಡೆಗಳಲ್ಲಿ ನೇಪಾಳಿ ವೇಶ್ಯೆಯರು ಇದ್ದಾರೆ. ಇವರೆಲ್ಲ ನತದೃಷ್ಟ ಹೆಣ್ಣುಗಳಾಗಿದ್ದು ನೇಪಾಳದ ತರಾಯಿ, ಖೇಡ್, ಬುಟ್ವಲ್, ನಾರಾಯಣಘಾಟ್, ನವಕೋಟ್ ಮುಂತಾದ ಕಡೆಗಳಿಂದ ಗ್ರಾಮೀಣ ನೇಪಾಳಿ ಹೆಣ್ಣುಮಕ್ಕಳನ್ನು ಅಥವಾ ಅವರ ತಂದೆ-ತಾಯಿಯರನ್ನೋ ಕೆಲಸದ ಆಮಿಷ, ಹಣ ಮೊದಲಾದ ಆಮಿಷಗಳಿಗೆ ಒಳಗುಮಾಡಿ ಪುಸಲಾಯಿಸಿ ಭಾರತದ ಕಡೆಗೆ ಕರೆತರುವ ವ್ಯವಸ್ಥಿತ ಜಾಲ ಇದೆ ಎಂದು ಕೇಳಿದ್ದೇನೆ. ಉತ್ತರ ಪ್ರದೇಶದ ಗೋರಖ್‌ಪುರ ಈ ಬಗೆಯ ಸಾಗಾಟದ ಸ್ಥಳ. ಇಲ್ಲಿಂದ ರೈಲುಗಳಲ್ಲಿ ಮುಂಬೈ, ದೆಹಲಿ, ಕಲ್ಕತ್ತಾ ಕಡೆ ಹೆಣ್ಣುಮಕ್ಕಳನ್ನು ಸಾಗಾಟ ಮಾಡುತ್ತಾರೆ. ಈ ಬಗೆಯ ವರದಿಗಳೂ ಪ್ರಕಟವಾಗಿವೆ. ನಾವು ಕಂಡ ಈ ಹಳ್ಳಿ ಮುದ್ದಾದ ಹೆಣ್ಣುಮಕ್ಕಳ ದುಡಿಮೆ, ಅವರನ್ನು ಸಲೀಸಾಗಿ ಆಟವಾಡಿಸುತ್ತಿದ್ದ ರೀತಿ, ಈ ಕತ್ತಲ ರಾತ್ರಿ, ಹಿಮಕಣಿವೆ, ರಾಷ್ಟ್ರೀಯ ಹೆದ್ದಾರಿ, ಜನಸಂದಣಿ ಮೈಮರೆತರೆ ಸುಲಭವಾಗಿ ಏನೆಲ್ಲಾ ಅನಾಹುತ ಆಗಬಹುದು ಎಂದೆಲ್ಲಾ ಯೋಚಿಸಿ ಆಂತಕವನ್ನು ಮೂಡಿಸಿತು. ಬದುಕಿಗೆ ವ್ಯಾಪಾರ ಅನಿವಾರ್ಯ. ಆದರೂ ಆಗದಿರಲಿ ಅನರ್ಥ, ಎಂದುಕೊಂಡೇ ಬಂದು ಬಸ್ಸಿನ ನನ್ನ

ಜಾಗದಲ್ಲಿ ಕುಳಿತುಕೊಂಡೆ. ಕೆಲವರು ಇಳಿದು ನಿತ್ಯಕರ್ಮ ಮುಗಿಸಿ ಬಂದರೂ ಇನ್ನು ಕೆಲವರು ಚಳಿಗೆ, ದಣಿದು ನಿದ್ರೆಗೆ ಮಾರು ಹೋಗಿದ್ದರು. ಕೇರಳದ ಪುಟಾಣಿ ರುಕ್ಮಿಣಿದೇವಿ ಮಾತ್ರ ಅದೇಕೋ ರೋಧಿಸುತ್ತಲೇ ಇದ್ದಳು.

ಮತ್ತದೇ ಏರು ಕಣಿವೆ, ಇಳಿವು, ತಿರುವು, ಗವ್ವೆನ್ನುವ ಕತ್ತಲೆ. ಕತ್ತಲೆಗೆ ಕವಿದುಕೊಂಡಿದ್ದ ಮಂಜು ಕಣಿವೆಯನ್ನು ಮತ್ತಷ್ಟು ಕಪ್ಪಾಗಿಸಿತ್ತು. ನೂರು ಮೀಟರ್ ಬೇಡ ಒಂದು ಮಾರು ದೂರದ ವಸ್ತುವೂ ನಮಗೆ ಕಾಣದಾದವು. ಡ್ರೈವರ್ ಬ್ರೇಕ್ ಹಾಕಿದ ಬಿರುಸಿಗೆ ಕಿರುಗುಡುತ್ತಿದ್ದ ವಾಹನ ಮಾತ್ರ ಕವಿದ ಕತ್ತಲೆಯನ್ನು ಸೀಳಿಕೊಂಡು ಮಂಜು ಕವಿದ ಹಾದಿಗುಂಟ ಪಯಣಿಸುತ್ತಿತ್ತು. ನಾನು ನೋಡುತ್ತಲೇ ಇದ್ದೆ, ಕಿಟಕಿಯ ಗಾಜನ್ನು ಒಮ್ಮೆ ಸರಿಸಿ, ಚಳಿಗೆ ಹೆದರಿ ಮುಚ್ಚಿ. ಬೆಳಗಿನ ಜಾವ ಒಂದು ಗಂಟೆಯ ಸುಮಾರಿಗೆ ನಮ್ಮ ವಾಹನ ಮತ್ತದೇ ಕಠ್ಮಂಡುವಿನ ಮಹಾರಾಜ ಪ್ಯಾಲೇಸ್ ಭವನಕ್ಕೆ ಬಂದಿತು. ಕೊರೆವ ಚಳಿಗೆ ಬಿಸಿಬಿಸಿ ಭಕ್ಷ್ಯ ಅಷ್ಟೇನೂ ರುಚಿಕಟ್ಟಾಗಿ ಕಾಣಲಿಲ್ಲ. ಪ್ರೊ||ಜಯಪ್ರಕಾಶ್ ಅವರ ಒತ್ತಾಯಕ್ಕೆ ಒಂದೆರಡು ಜಾಮೂನು, ಬೋಂಡಗಳೊಂದಿಗೆ ಒಂದಿಷ್ಟು ಚಿತ್ರಾನ್ನ ತಿಂದು ರೂಂ ನಂ.221 ನ್ನು ಸೇರಿಕೊಂಡೆ. 'ಊಟದ ಗೊಡವೆ ನನಗೇಕೆ?' ಎಂಬ ನಮ್ಮ ಕೆಸಿಎನ್, ರೂಮಿಗೆ ಬಂದು ನಿದ್ರೆಗೆ ಜಾರಿದ್ದರು. ನಾನು ಬಂದ ಕೂಡಲೇ ಬಾಗಿಲು ತೆರೆಯುವ ಉದಾರತನವನ್ನು ಅವರು ಮರೆಯಲಿಲ್ಲ. ಪ್ರವಾಸದುದ್ದಕ್ಕೂ ಧಾರಾಳವಾಗಿಯೇ ಈತನವನ್ನು ತೋರುತ್ತಾ ಬಂದರು. ಇದು ಅವರ ಹಿರಿತನದ ವಿಶೇಷ.

೯

# ಕಠ್ಮಂಡು ಒಳಗೊಂದು ಸುತ್ತು

ಕಠ್ಮಂಡು ಇಟ್ಟಿಗೆಯಿಂದ ನಿರ್ಮಿಸಿದ ಪುಟ್ಟ ಪುಟ್ಟ ಕಟ್ಟಡಗಳನ್ನು ಹೊಂದಿದೆ. ವಿಶೇಷವೆಂದರೆ ಈ ನಗರದಲ್ಲಿ ಎಲ್ಲಿಯೂ ಹೊಗೆಯುಗುಳುವ ಕಾರ್ಖಾನೆಗಳಿಲ್ಲ, ಬೃಹತ್ ಬಂಗಲೆಗಳಿಲ್ಲ, ಗಗನಚುಂಬಿ ಕಟ್ಟಡಗಳಿಲ್ಲ. ನೆಲ ಅಂತಸ್ತಿನ ಸಾದಾಸೀದ ಮನೆಗಳೇ ಹೆಚ್ಚು. ಇಲ್ಲಿನ ಬಹುತೇಕ ಮನೆಗಳು ಇಟ್ಟಿಗೆಯಿಂದ ನಿರ್ಮಿಸಿದ್ದರೂ ಹೊರ ಗೋಡೆಗೆ ಮರಳುಗಾಜು ಅಥವಾ ಗಿಲಾಯಿ ಮಾಡಿರುವುದು ಅಪರೂಪ. ಭಾರತದ ಹಳೆಯ ನಗರವೊಂದರ ನೆನಪು ಇಡೀ ಕಠ್ಮಂಡುವಿನಲ್ಲಿ ಪ್ರಕಟವಾಗುತ್ತದೆ. ಈ ನಗರ ಪವಿತ್ರವಾದ ಭಾಗಮತಿ ಮತ್ತು ವಿಷ್ಣುಮತಿ ನದಿಗಳ ಸಂಗಮವೂ ಆಗಿದೆ. ಕಠ್ಮಂಡು ಸುತ್ತಲೂ ಹಬ್ಬಿರುವ ಹಲವು ಪರ್ವತ, ಅವುಗಳ ಹುಲ್ಲು-ಗಿಡಗಳ ಹಸಿರು, ಪುಟ್ಟಪುಟ್ಟ ಜಲಪಾತ ಮೋಹಕವಾಗಿದೆ. ಆದರೂ ನಾವು ನೋಡಿದ ಭಾಗಮತಿ ಮೊದಮೊದಲಿಗೆ ಸ್ವಲ್ಪ ಶುಭ್ರಳಂತೆ ಕಂಡರೂ ದಕ್ಷಿಣಕ್ಕೆ ಇಳಿದಂತೆಲ್ಲಾ ಕೊಳಕಾಗಿ ಹೆಣ, ಮಲಿನವಸ್ತು, ಕೊಚ್ಚೆ, ಪಾಚಿಯ ಕರ್ಮಕೂಪವಾಗಿದೆ. ಬಸ್‌ನಲ್ಲೇ ಹೊರಟ ನಮಗೆ ಗೈಡ್ ಅರ್ಜುನ್ ಪಾಂಡೆ ಕಠ್ಮಂಡು ನಗರ, ಕಛೇರಿ, ಮ್ಯೂಜಿಯಂ, ಅರಮನೆ, ಈಗಿನ ಪಾರ್ಲಿಮೆಂಟ್ ಭವನ,



ಬುಡಾನೀಲಕಂಠ

ಬಂದೀಖಾನೆ ಎಲ್ಲವನ್ನೂ ತೋರಿಸುತ್ತಾ ಹೋದನು. ನಗರದ ಒಳಭಾಗದಲ್ಲೇ ಇರುವ ಬುಡಾನೀಲಕಂಠ ಮಂದಿರ ಕೊಂಚ ವಿಚಿತ್ರವಾಗಿದೆ. ವಿಶಾಲ ಪ್ರಾಂಗಣದ ಆವರಣದೊಳಗೆ 30x30 ರ ಜಾಗದಲ್ಲಿ ನೀರಿನ ತೊಟ್ಟಿಯ ಮಾದರಿಯಲ್ಲಿ ದೇವಪೀಠ ನಿರ್ಮಿಸಲಾಗಿದೆ. ಅದರ ಮಧ್ಯಭಾಗದಲ್ಲಿ ವಿಷ್ಣು ಬೆನ್ನು ಕೆಳಗೆ ಮಾಡಿಕೊಂಡು ಆಕಾಶ ನೋಡುವಂತೆ ಮಲಗಿದ್ದಾನೆ. ಸರ್ಪಗಳಿಂದ ಆವೃತಗೊಂಡಿರುವ ವಿಷ್ಣು ಶಂಖ, ಚಕ್ರ, ಗಧೆ ಧರಿಸಿ ಮಲಗಿದ್ದಾನೆ. ಹೊರಬದಿಯ ಕಟ್ಟೆಯ ಬದಿ ನಿಂತು ಪೂಜೆ ಸಲ್ಲಿಸುವ ಪದ್ಧತಿ ಇಲ್ಲಿದೆ. ವಿಶೇಷವೆಂದರೆ ತೆಂಗಿನಕಾಯಿ, ಬಾಳೆಹಣ್ಣು ಅರ್ಪಣೆಗಿಂತ ಲಾಡುಗಳನ್ನು ತಟ್ಟೆಯಲ್ಲಿಟ್ಟು ನೈವೇದ್ಯವಾಗಿ ಅರ್ಪಿಸಿ ಹಿಂಪಡೆಯುವುದು ಇಲ್ಲಿನ ವಾಡಿಕೆ. ಪ್ರಾಂಗಣದ ತುಂಬಾ ಹತ್ತಾರು ಪುರೋಹಿತರು ಹೋಮಕಾರ್ಯದಲ್ಲಿ ನಿರತರಾಗಿದ್ದು ಪಿತೃಗಳಿಗೆ ಪಿಂಡ ಪ್ರದಾನ ಇಲ್ಲಿ ಪ್ರಧಾನವಾಗಿ ನಡೆಯುತ್ತದೆ.

ನೇಪಾಳದ ಅರಮನೆಯ ರಸ್ತೆಗುಂಟ ಸಾಗುತ್ತ ಅಲ್ಲಿರುವ ಅಂಗಡಿಗಳಲ್ಲಿ ನಮ್ಮ ಸಂಗಡಿಗರು ಶಾಪಿಂಗ್‌ಗೆ ಶುರು ಹಚ್ಚಿಕೊಂಡರು. ಇಲ್ಲಿಯ ಬಜಾರುಗಳಲ್ಲಿ ನೇಪಾಳಿ ಕೈಕಸುಬಿನ ಹ್ಯಾಂಡಿಕ್ರಾಫ್ಟ್ ವಸ್ತುಗಳ ಅಂಗಡಿಗಳೇ ಹೆಚ್ಚು. ಇಲ್ಲಿನ ಯಾವ ಅಂಗಡಿಗೆ ಹೋದರೂ ಸ್ಕರ್ಟ್ ಧರಿಸಿ ಮೇಲೊಂದು ಸ್ವೆಟರ್ ಹಾಕಿರುವ ಬಾಳೆದಿಂಡಿನ ತರಹದ ಹುಡುಗಿಯರೇ ನಮ್ಮನ್ನು ಸ್ವಾಗತಿಸುತ್ತಾರೆ. ನೇಪಾಳಿ ಭಾಷೆಯ ಜೊತೆಗೆ ಹಿಂದಿ ಅಂಕಿಗಳನ್ನು ಕೆಲವು ಕಡೆ ಇಂಗ್ಲೀಷ್ ಭಾಷೆಯ ಅಂಕಿಗಳನ್ನು ತಮ್ಮ ವ್ಯಾವಹಾರಿಕ ಬದುಕಿಗೆ ಬಳಸುತ್ತಾರೆ. 'ಅಚ್ಛಾ', 'ಪಸಂದ್', 'ಓಕೆ' ಶಬ್ದಗಳನ್ನು ಧಾರಾಳವಾಗಿ ಉಚ್ಚರಿಸುವ ಈ ತರುಣಿಯರು ವ್ಯಾಪಾರಿಗಳೊಂದಿಗೆ ಕೌಶಲದಿಂದ ವರ್ತಿಸುತ್ತಾರೆ. ಪುರುಷರಿರಲಿ, ಹೆಂಗಸರಿರಲಿ ನಿಮಗೆ 'ಹಲೋ' ಹೇಳುತ್ತಾರೆ. ಇಲ್ಲಿನ ಸೂಪರ್‌ಮಾರ್ಕೆಟ್, ಬರ್ಮಾ ಬಜಾರ್‌ಗಳಲ್ಲಿ ಸ್ವೆಟರ್, ಪ್ಯಾಂಟ್ ವ್ಯಾಪಾರ ಬಹಳ ಜೋರಾಗಿಯೇ ನಡೆಯುತ್ತದೆ. ನಮ್ಮ ತಂಡದ ಕೆಲವರು ತಮಗೆ, ತಮ್ಮ ಆತ್ಮೀಯರಿಗೆ ಅನುಕೂಲವಾಗುವ ಹಲವು ಉಡುಪುಗಳನ್ನು ಕೊಳ್ಳುತ್ತಾ ಹೋದರು. ನಾನೂ ಒಂದೆರಡು ಅಂಗಡಿ ನೋಡಿ ಹೊರಬಂದು ಅರಮನೆ ರಸ್ತೆಯ ಉದ್ದಕ್ಕೂ ಒಂದು ಸಣ್ಣ ತಿರುಗಾಟ ಮಾಡಿದೆ. ನಮ್ಮ ವಾಹನ ನಿಂತಿರುವ ಸ್ಥಳವನ್ನು ಗಮನದಲ್ಲಿಟ್ಟುಕೊಂಡು ತಪ್ಪಿಸಿಕೊಂಡೇನೆಂಬ ಎಚ್ಚರದಲ್ಲಿ ತಿರುಗಾಡಿದೆ. ರಸ್ತೆಬದಿಯ ವ್ಯಾಪಾರದಲ್ಲೂ ಹೆಂಗಸರದ್ದೇ ಮೇಲುಗೈ. ಬಟ್ಟೆ, ಕಾಲುಚೀಲ, ಬಣ್ಣದ ಆಟಿಕೆಯ ವಸ್ತು, ಕಿತ್ತಲೆ, ಸೇಬು, ಶೇಂಗಾ, ಮಧ್ಯೆಮಧ್ಯೆ ಟೀ ಅಂಗಡಿ ಎಲ್ಲವೂ ರಸ್ತೆಯ ಮೇಲೆಯೇ. ಬಣ್ಣಬಣ್ಣದ ಛತ್ರಿಗಳ ವ್ಯಾಪಾರವೂ ಬಲು ಜೋರು. ಹೊಗೆ ಸೊಪ್ಪಿನ ಎಸಳುಗಳ ರಾಶಿಯನ್ನು ಒಟ್ಟಿಕೊಂಡು

ವ್ಯಕ್ತಿ ಕುಳಿತಿದ್ದ. ಪಕ್ಕದಲ್ಲಿ ಕುಲುಮೆ ತಿದಿಯ ಆಕೃತಿಯ ಒಂದು ಯಂತ್ರ. ಅದಕ್ಕೆ ಒಂದೋ ಎರಡೋ ಹೊಗೆಸೊಪ್ಪಿನ (ತಂಬಾಕು) ಎಸಳನ್ನು, ಅದಕ್ಕೆ ಒಂದಿಷ್ಟು ಸುಣ್ಣವನ್ನು ಹಾಕುತ್ತಾನೆ. ಮೂರು ಸುತ್ತು ರಾಟೆಯಿಂದ ತಿರುವಿದರೆ ತಂಬಾಕು ಪುಡಿಯಾಗಿ, ಆ ಪುಡಿಯನ್ನು ಒಂದು ಸಣ್ಣ ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ ಮೇಣದ ಬತ್ತಿಯ ಉರಿಯಿಂದ ಅದರ ತುದಿಯನ್ನು ಅನಿಸಿ ಪ್ಯಾಕ್ ಮಾಡುತ್ತಾನೆ. ಒಂದು ನಿಮಿಷಕ್ಕೆ 2-3 ಪ್ಯಾಕ್ ಮಾಡುತ್ತಿದ್ದ ಆ ವ್ಯಕ್ತಿ 20 ರೂಪಾಯಿಗೆ ಒಂದರಂತೆ ಮಾರುತ್ತಿದ್ದ. ನಾನು ನಿಂತು ಗಮನಿಸಿದ 15 ನಿಮಿಷಗಳ ಒಳಗೆ 10-15 ಪ್ಯಾಕೆಟ್ ಮಾರಾಟ ಮಾಡಿದ. ನೇಪಾಳದಲ್ಲಿ ತಂಬಾಕು ಪ್ರಿಯರು ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ನಮ್ಮಲ್ಲಿ ಗುಟ್ಕಾ ಹಾಕುವ ಮಾದರಿಯಲ್ಲಿ ಅಲ್ಲಿ ತಂಬಾಕು ಜಗಿಯುತ್ತಾರೆ. ಒಂದು ತಂಬಾಕು ಪೊಟ್ಟಣ 3 ಗುಟ್ಕಾ ಪ್ಯಾಕೆಟ್ ಪ್ರಮಾಣದಷ್ಟಿರುತ್ತದೆ.

ಹುರಿದ ಬಟಾಣಿ, ಉಪ್ಪುಕಡಲೆ, ಖಾರ ಹಚ್ಚಿದ ಸೇಂಗಾಬೀಜ, ಕಾಂಗ್ರೆಸ್ ಸೇಂಗಾ ಬೀಜದ ಹೋಳು, ಒಣಮೀನು ಈ ಎಲ್ಲವೂ ಮಿಕ್ಸ್ ಆಗಿಯೇ ರಸ್ತೆ ಉದ್ದಕ್ಕೂ ಬೀದಿಬದಿಗೆ ರಾಶಿ ರಾಶಿ ಹಾಕಿಕೊಂಡು ಗಂಡಸರು-ಹೆಂಗಸರು ಮಾರಾಟ ಮಾಡುತ್ತಾರೆ. ಕ್ಯಾಮರಾ, ಕನ್ನಡಕ, ಚಪ್ಪಲಿಗಳೂ ಈ ಗುಂಪಿಗೆ ಸೇರಿದ್ದವು. ರುದ್ರಾಕ್ಷಿ 10 ರೂ. ನಿಂದ ಆರಂಭವಾಗಿ 1000 ರೂ. ತನಕ ಮಾರಾಟ ಮಾಡುತ್ತಿದ್ದರು. ಶಾಪಿಂಗ್ ಹೀಗೇ ಮುಂದುವರಿದಿತ್ತು. ಪ್ರೊ॥ಕೆಸಿಎನ್, ಮೋಹನ್ ಬಂದು ನಮ್ಮ ವಾಹನ ಹತ್ತಿದರು. ನಾನೂ ಅವರನ್ನು ಹಿಂಬಾಲಿಸಿದೆ. ಪ್ರೊ॥ ದಕ್ಷಿಣಾಮೂರ್ತಿಯೂ ಬಂದರು. ಅವರ ಕೈಯಲ್ಲೊಂದು ಪ್ಲಾಸ್ಟಿಕ್ ಚೀಲವಿದ್ದು ಎರಡು ಸ್ವೆಟರ್ ಕೊಂಡಿದ್ದರು. ಪ್ರೊ॥ ಪೂರ್ಣಾದೇವಿ ಹೀಗೆ ಒಬ್ಬೊಬ್ಬರಾಗಿ ಬಂದು ನಮ್ಮ ವಾಹನ ಹತ್ತಿದರು. ವಾಹನ ಮುಂದುವರಿದು ಕಠ್ಮಂಡು ಬಂದೀಖಾನೆ, ವೀಸಾ ಕಛೇರಿ, ಮ್ಯೂಸಿಯಂ ಬಳಸಿ ನೇರವಾಗಿ ಕ್ಯಾಸಿನೋ ಎಂಬ ಮನರಂಜನಾ ಕ್ಲಬ್‌ನ ಅಂಗಳದಲ್ಲಿ ನಿಲ್ಲಿಸಿತು.

೧೦

# ಕ್ಯಾಸಿನೋ ಎಂಬ ಜೂಜಿನ ಅಂಗಳ

ನೇಪಾಳದಲ್ಲಿ ಒಂದು ಜನಪ್ರಿಯ ಗಾದೆ ಇದೆ ಇದನ್ನು ಇಲ್ಲಿನ ಗೈಡ್‌ಗಳು, ಪ್ರವಾಸಿಗರಿಗೂ ಸಹಜವಾಗಿಯೇ ಕಲಿಸಿಬಿಡುತ್ತಾರೆ. 'ಸೂರ್ಯ ಅಸ್ತ್ ನೇಪಾಳ್ ಮಸ್ತ್' ಇದರ ಅರ್ಥ ಈ ದೇಶದಲ್ಲಿ ಕುಡಿತ ಒಂದು ಸಹಜ ಹವ್ಯಾಸ. ಯಾವುದೇ ಅಡ್ಡಿ ಆತಂಕಗಳಿಲ್ಲ. ಇಲ್ಲಿ ಬಿಯರ್ ಮತ್ತು ಕಡಿಮೆ ಬೆಲೆಯ ಷರಾಫ್ ಎರಡೂ ಹೆಚ್ಚು ಬಳಕೆಯಲ್ಲಿದೆ. ತರಕಾರಿ, ಕಿರಾಣಿ, ಮಾಂಸದ ಅಂಗಡಿಗಳಲ್ಲೂ ಬಿಯರ್ ದೊರೆಯುತ್ತದೆ. ಸಂಜೆ ಆಯಿತೆಂದರೆ ನೇಪಾಳಿಗಳು ಊಟ ತಿಂಡಿಗಳೊಂದಿಗೆ ಕುಡಿತದಲ್ಲೂ ಮುಳುಗಿಹೋಗುತ್ತಾರೆ. ಮಾಂಸಾಹಾರ ಇಲ್ಲಿನ ಪಾರಂಪರಿಕ ಅಡಿಗೆ. ಪರ್ವತ ಪ್ರದೇಶ, ಚಳಿ ವಾತಾವರಣ ಹಾಗಾಗಿ ಮಾಂಸಾಹಾರ ಮೇಲಿಷ್ಟು ಮದ್ಯಪಾನ ಬದುಕಿಗೆ ಅನಿವಾರ್ಯ ಎಂಬ ವಾತಾವರಣ ಸೃಷ್ಟಿಯಾಗಿದೆ. ಹಾಗಂತ ನೋಡಿದರೆ ಮದ್ಯಪಾನವಿಲ್ಲದೆಯೂ ಬದುಕಬಹುದು. ಚೆನ್ನಾಗಿಯೇ ಬದುಕಿರುವ ಕರ್ನಾಟಕ, ಮದ್ರಾಸ್, ಗುಜರಾತಿ ಮೂಲದ ರುದ್ರಾಕ್ಷಿ ಶೋರೂಂನವರು, ಫ್ಯಾನ್ಸಿ ಡ್ರೆಸ್ ಅಂಗಡಿಯವರು ಮಂಗಳೂರು ಕಡೆಯ ಹೋಟೆಲ್ ಉದ್ದಿಮೆಯವರು ಅಷ್ಟೇ ಏಕೆ ಪಶುಪತಿ ದೇವಾಲಯದ, ಕರ್ನಾಟಕ ಮೂಲದ ಅರ್ಚಕರ ಬಳಗ ಮದ್ಯಪಾನವಿಲ್ಲದೆಯೂ 400-500 ವರ್ಷಗಳಿಂದಲೂ ಇಲ್ಲಿ ಬದುಕುತ್ತಿದ್ದಾರೆ, ಚೆನ್ನಾಗಿಯೇ ಬಾಳುತ್ತಿರುವುದನ್ನು ಕಾಣಬಹುದು. ಪೂರ್ವಜರಿಗೆ ಪಿಂಡ ಪ್ರಧಾನ ಮಾಡಿಸುತ್ತಾ ಹೋಮ, ಹವನ ಕಾರ್ಯದಲ್ಲಿ ನಿರತರಾಗಿರುವ ಇಲ್ಲಿನ ಬ್ರಾಹ್ಮಣ ಸಮುದಾಯದವರೂ ಅನುಕೂಲವಾಗಿಯೇ ಇದ್ದಾರೆ. ಕುಡಿತ, ಖಂಡ-ತುಂಡು, ಜೂಜುಗಳಂಥ ಹವ್ಯಾಸದ ದಾಸರಾಗಿ ಹಗಲು-ರಾತ್ರಿಯೆನ್ನದೆ ಪಾನಮತ್ತರಾಗಿ ಕಡು ಬಡವರಂತೆ ಬಾಳುವವರೂ ನೇಪಾಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಚಳಿ ದೇಶ, ಕುಡಿತ ಇರಲಿ ಆದರೆ ಮಿತಿ ಮೀರಿದೆ. ಇದೇ ಈ ದೇಶದ ದರಿದ್ರತನಕ್ಕೂ ಮೂಲ ಕಾರಣ. ವಿಶೇಷವಾಗಿ ನಾನು

ತಿರುಗಾಡಿದ ಆರೇಳು ದಿನಗಳ ನೇಪಾಳದ ಹಲವಾರು ನಗರ ಬೆಟ್ಟಪ್ರದೇಶ, ಪರ್ವತ ಶ್ರೇಣಿ, ಹಳ್ಳಿಯ ರೈತ, ವ್ಯಾಪಾರಿ, ಪ್ರವಾಸಿಗರನ್ನು ಕರೆದೊಯ್ಯುವ ವಾಹನ ಚಾಲಕ, ಗೈಡ್ ಇವರೆಲ್ಲರೂ ಈ ಬಗೆಯ ಮದ್ಯವ್ಯಸನಿಗಳು. ಇದರಲ್ಲಿ ಕೆಲವರು ಗಂಭೀರ ಕುಡುಕರಾದರೆ ಹಲವರು ಬೀದಿಕುಡುಕರು. ವ್ಯತ್ಯಾಸವೇನಿಲ್ಲ. ಡೀಸೆಂಟಾಗಿದ್ದ, ತುಂಬಾ ಬುದ್ಧಿವಂತನಾಗಿ, ಆತ್ಮೀಯನಾಗಿ ಬೆರೆಯುತ್ತಿದ್ದ ನಮ್ಮ ಖಾಯಂ ಗೈಡ್ ಅರ್ಜುನ ಪಾಂಡೆಗೂ ಈ ಹವ್ಯಾಸ ಬಿಟ್ಟಿರಲಿಲ್ಲ. ನಮ್ಮ ಪ್ರವಾಸಿ ತಂಡದ ಹಲವು ಹೆಂಗಸರು ಅವನು ಸಮೀಪದಲ್ಲಿ ನಿಂತು ಮಾತನಾಡುವಾಗ ಇವರು ಅಲ್ಲಿಂದ ಸರಿದು ದೂರ ನಿಲ್ಲುತ್ತಿದ್ದರು. ಆದರೂ ಪಾಂಡೆ ತುಂಬಾ ಒಳ್ಳೆಯ ಮನುಷ್ಯ. ಸಭ್ಯತೆಯನ್ನು ಎಲ್ಲಿಯೂ ಮೀರುತ್ತಿರಲಿಲ್ಲ. ಭಕ್ತಾಪುರ, ನಗರ್ ಕೋಟ್ ಮುಂತಾದ ಕಡೆಗೆ ಆತನ ಮುದ್ದಾದ ಮಡದಿ, 5 ವರ್ಷದ ಆತನ ಮಗನೂ ನಮ್ಮ ಜೊತೆಗೆ ಬಂದಿದ್ದರು. ಸಭ್ಯ ಕುಟುಂಬ.

ಸುಮಾರು 6 ಎಕರೆ ವಿಸ್ತೀರ್ಣ ಜಾಗದಲ್ಲಿ ನೇಪಾಳದ ಮಧ್ಯಭಾಗದ ಪೂರ್ವ-ಪಶ್ಚಿಮ ರಾಷ್ಟ್ರೀಯ ರಸ್ತೆಯ ಎಡ ತಿರುವಿನ ಬದಿಗೆ ಕ್ಯಾಸಿನೊ ಇದೆ. ನೇಪಾಳದ ಜನಪ್ರಿಯ ಶ್ರೀಮಂತ ಕ್ಲಬ್. ನಮ್ಮ ಪ್ರವಾಸಿ ಏರ್‌ಬಸ್ ನೇರವಾಗಿ ಈ ಕ್ಲಬ್ಬಿನ ಅಂಗಳದಲ್ಲಿಯೇ ನಿಂತಿತು. ಸಿಮೆಂಟ್ ಹಾಸಿನೊಂದಿಗೆ ವಾಹನ ನಿಲುಗಡೆಯೂ ಮಸ್ತಿದೆ. ಬೋರ್ಡ್ ಆಕರ್ಷಕವಾಗಿಲ್ಲ. ನಮಗೆ ಎಲ್ಲಿಗೆ ಹೋಗುತ್ತೇವೆ, ಏನು ಮಾಡುತ್ತೇವೆ ಒಂದೂ ತಿಳಿಯಲಿಲ್ಲ. ಬಸ್ಸಿನಿಂದ ಒಬ್ಬೊಬ್ಬರಾಗಿ ಇಳಿದು ಪಾಂಡೆಯೊಂದಿಗೆ ಕ್ಲಬ್ಬಿನ ಒಳಗೆ ಹೋದೆವು. ನಾನು ಇಷ್ಟೊಂದು ತರದ ತರಾವರಿ ತಿಂಡಿಯ, ಐಭೋಗದ ಸಂಗೀತ-ನೃತ್ಯದ ಕ್ಲಬ್‌ನ್ನು ಕಂಡದ್ದು ಇದೇ ಮೊದಲು. ನಮ್ಮ ಕಡೆ ಕ್ಲಬ್‌ಗೆ ಹೋಗುತ್ತಾರೆ ಅಂದರೆ ಇಸ್ಪೀಟ್ ಆಡುವುದಕ್ಕೆ ಅಂದೇ ನಾನು ತಿಳಿದಿದ್ದೆ. ಆದರೆ ಕ್ಯಾಸಿನೋ ನನ್ನೆಲ್ಲಾ ತಿಳುವಳಿಕೆಯನ್ನು ತಲೆಕೆಳಗು ಮಾಡಿತು. ತರಾವರಿ ಬಣ್ಣದ ಉಡುಗೆ-ತೊಡುಗೆಯ ಜನಗಳೇ ಹೆಚ್ಚು. ಸೀರೆ ಉಟ್ಟವರು ಈ ಸಂದರ್ಭಕ್ಕೆ ನನಗೆ ಯಾರೂ ಕಾಣಲೇ ಇಲ್ಲ. ಕ್ಷಮಿಸಿ, ನಮ್ಮ ತಂಡದ ಐವರು ಮಹಿಳಾ ಪ್ರೊಫೆಸರ್‌ಗಳೂ ಒಳಗೊಂಡಂತೆ. ದಪ್ಪ ತುಟಿಯ, ಬಾಗಿದ ಕುಂಡಿಯ, ಗುಂಗುರು ಮಟ್ಟಸ್ಥ ಕೂದಲಿನ ಕೋಟ್ ಮತ್ತು ತೊಡೆಯ ಮೇಲ್ಭಾಗಕ್ಕೆ ಸ್ಕರ್ಟ್ ಧರಿಸಿದ ಆಫ್ರಿಕಾ ಮೂಲದವರಿಂದ ಹಿಡಿದು ಕೆಂಪು ಮೂಗಿನ, ಹಾಲು ಬಿಳುಪಿನ ರಷ್ಯಾ, ಶ್ರೀಲಂಕಾದವರೂ, ಚಪ್ಪಟೆ ಮೂಗಿನ ಮಟ್ಟಸ್ಥ ಎತ್ತರದ ಚೀನಾ, ಟಿಬೆಟ್ ಮೂಲದವರೊಂದಿಗೆ ಬಾಂಬೆ, ಮದ್ರಾಸ್, ಕಲ್ಕತ್ತಾ, ದೆಹಲಿ, ಉತ್ತರ ಪ್ರದೇಶ, ಕಾಶ್ಮೀರ ಮೂಲದ ಹಲವರು ಅಲ್ಲಿದ್ದರು.

ಕರ್ನಾಟಕದ ಹದಿಮೂರು, ಕೇರಳದ ಪುಟಾಣಿ ರುಕ್ಮಿಣಾದೇವಿ ಸೇರಿದಂತೆ 7 ಜನ ಕೂಡಿದರೆ ಪುಟ್ಟ ಭಾರತವೇ ಅಲ್ಲಿತ್ತು. ನೇಪಾಳ ದೇಶ ಭಾರತಕ್ಕೆ ಅತಿ ಸಮೀಪ. ಹಿಂದೂ ದೇವಸ್ಥಾನಗಳ ಪುರಾಣ ಪುಣ್ಯ ನೆಲೆ. ಹೋಗಿ ಬರುವುದಕ್ಕೆ ಯಾವುದೇ ನಿರ್ಬಂಧವಿಲ್ಲ. ಹಾಗಾಗಿ ಬಾಂಬೆ, ಮದ್ರಾಸ್, ಕಲ್ಕತ್ತಾ, ದೆಹಲಿ ಕಡೆಯಿಂದ ನೇಪಾಳಕ್ಕೆ ಮೋಜಿಗಾಗಿ ರಜೆ ದಿನಗಳನ್ನು ಕಳೆಯುವ ಸಲುವಾಗಿಯೂ ಕಠ್ಮಂಡುಗೆ ಬರುತ್ತಾರೆ. ಇವರೆಲ್ಲಾ ಹೆಚ್ಚಾಗಿ ವಿಮಾನದ ಮೂಲಕವೇ ಬಂದು ಹೋಗುವ ಜನ. ಇಲ್ಲಿ ಭಾಷೆ ಮತ್ತು ಹಣಕಾಸಿನ ವಿನಿಮಯವೂ ಕಷ್ಟವಲ್ಲ. ಹಿಂದಿ ಭಾಷೆ ಗೊತ್ತಿದ್ದರೆ ನೇಪಾಳದ ವ್ಯವಹಾರ ಸಲೀಸು. ಇಲ್ಲಿನ ವಿಮಾನ ನಿಲ್ದಾಣ, ಪಂಚತಾರಾ ಹೋಟೆಲ್, ಕ್ಲಬ್‌ಗಳಲ್ಲಿಯೂ ಇಂಗ್ಲೀಷ್ ಭಾಷಾ ಸಾಮ್ರಾಜ್ಯ ಮನೆ ಮಾಡಿಲ್ಲ. ಎಷ್ಟು ಬೇಕೋ ಅಷ್ಟೇ. ಅನಿವಾರ್ಯವಾದರೆ ಮಾತ್ರ ಉಳಿದುದೆಲ್ಲಾ ನೇಪಾಳಿ-ಹಿಂದಿ ಭಾಷೆಯದ್ದೇ ಕಾರುಬಾರು. ಹಾಗಾಗಿ ಎಲ್ಲ ಅಂತಸ್ತಿನ, ವರ್ಗದ ಜನರು ಸುಲಭವಾಗಿ ವಿದೇಶ ಪ್ರವಾಸ ಮಾಡಬಹುದಾದ ಜಾಗವೆಂದರೆ ನೇಪಾಳ ದೇಶ. ಇಷ್ಟಕ್ಕೂ ನೇಪಾಳ ಭಾರತದಿಂದ ಹೊರಗಿದೆ. ಅದು ಬೇರೆಯ ದೇಶ. ಇನ್ನೊಂದು ಧರ್ಮದ್ದು ಎಂಬ ಕಲ್ಪನೆಯೂ ನಮಗೆ ಸುಳಿಯುವುದಿಲ್ಲ. ಅಷ್ಟೊಂದು ಸುಮಧುರ ವಾತಾವರಣ. ಸ್ವಲ್ಪ ಚಳಿ ಜಾಸ್ತಿ ಅಷ್ಟೇ!

ಕ್ಯಾಸಿನೋ ಸಕಲ ಮನರಂಜನೆಯ ತಾಣ. ನಾಲ್ಕು ಭಾಗವಾಗಿ ವರ್ಗೀಕರಣಗೊಂಡಿರುವ ಈ ಹಾಲ್, ಪ್ರವೇಶ ದ್ವಾರದಲ್ಲಿ ಇಬ್ಬರು ಸಿಪಾಯಿಗಳು ನಿಂತು ಬರುವವರನ್ನು ಆದರದಿಂದ ಸ್ವಾಗತಿಸುತ್ತಾರೆ. ಈ ಸ್ವಾಗತಕಾರ ಹಾಗೂ ದ್ವಾರಪಾಲಕ ಸಾಂಪ್ರದಾಯಿಕ ಉಡುಗೆಯಲ್ಲಿ ರಾಜರ ಆಸ್ಥಾನದ ದ್ವಾರಪಾಲಕನ ತರಹದಲ್ಲೇ ಇರುತ್ತಾರೆ. ಇಲ್ಲಿನ ಮನರಂಜನೆ ಕ್ಲಬ್ಬುಗಳಿಗೆ ಯಾವುದೇ ಪ್ರವೇಶ ಫೀ ಇರುವುದಿಲ್ಲ. ಹಾಲಿನ ಮಧ್ಯಭಾಗದಲ್ಲಿ ಹತ್ತಾರು ಉದ್ದನೆಯ ಟೇಬಲ್, ಅದರ ಸುತ್ತ ಮೆತ್ತನೆಯ ಛೇರ್. ಅದರಲ್ಲಿ ಕಾರ್ಡ್ಸ್, ಕೇರಂ, ಚದುರಂಗ, ಕುದುರೆ ಆಟ, ಸಂಖ್ಯೆ ತಿರುಗಿಸುವುದು ಈ ಮೊದಲಾದ ತರಾವರಿ ಆಟಕ್ಕೆ ವ್ಯವಸ್ಥೆ ಇದೆ. ಬಲಬದಿಯ ಒಂದು ಭಾಗದಲ್ಲಿ ಸ್ಥಳವನ್ನು ಕಾಯ್ದಿರಿಸಿದ್ದರು. ಅಲ್ಲಿ ಪ್ರತಿಷ್ಠಿತ ಮನೆತನದವರು ಬಂದು ಗೇಮ್ ಆಡುತ್ತಾರೆಂದು ಗೈಡ್ ತಿಳಿಸಿದನು. ಹಾಲಿನ ಕೊನೆಯ ಭಾಗದಲ್ಲಿ ಉಪಹಾರದ ವಿಭಾಗ. ಎಡಭಾಗದಲ್ಲಿ ವೈನ್ ಸೆಕ್ಷನ್. ಆಹಾರ ವಿಭಾಗದಲ್ಲಿ ಹುರಿದ ಬಗೆಬಗೆಯ ಕಾಳುಗಳು, ಕರಿದ ಹಲವು ತಿಂಡಿಗಳು, ಚಿಕನ್, ಮಟನ್, ಚಟನ್‌ಮೆರಿ (ಅಕ್ಕಿಯಿಂದ ತಯಾರಿಸಿದ ತಿಂಡಿ), ಚೊಯ್ಲ (ಮಾಂಸದ್ದು), ಗುಂಡ್ರುಕ್-ಕೋ-ಚೋಲ್ (ಒಂದು

ಬಗೆಯ ಸೂಪ್), ಸುಕಟಿ, ಸೆಕುವಾ, ತವ್‌ಖಾ (ಮಾಂಸದಿಂದ ಕರಿದು ತಯಾರಿಸಿದ ತಿಂಡಿ), ಆಲೂತಮಾ, ಬೀನ್ಸ್ ತೊವೆ ಮೊದಲಾದ ತಿಂಡಿಗಳನ್ನು ಒಪ್ಪವಾಗಿ ಪ್ರದರ್ಶನಕ್ಕಿಟ್ಟಂತೆ ಜೋಡಿಸಿರುತ್ತಾರೆ. ಅದರ ಎಡಬದಿಗೆ ಬಗೆಬಗೆಯ ದೇಶಿ-ವಿದೇಶೀ ವೈನ್‌ಗಳು, ನಾನು ಕುತೂಹಲದಿಂದ ಗಮನಿಸಿದ ವೈನ್ ಬಾಟಲಿಗಳಲ್ಲಿ ಕಿಂಗ್‌ಫಿಷರ್, ರಾಜಾ ವ್ಹಿಸ್ಕಿ, ರಮ್ ಮೊದಲಾದ ನಮ್ಮ ಯುಬಿ ಕಂಪನಿಯವೂ ಇದ್ದವು. ನೇಪಾಳದಲ್ಲಿ ಇದೇನೂ ಹೊಸತಲ್ಲ. ಪಾರ್ಲೆ ಬಿಸ್ಕೆಟ್, ಕುರ್‌ಕುರೆ, ಚಾಕಲೇಟ್, ಡೈರಿಮಿಲ್ಕ್ ಸೇರಿದಂತೆ ಹಲವು ಬಗೆಯ ಜ್ಯೂಸ್‌ಗಳೆಲ್ಲಾ ಕರ್ನಾಟಕ ಮೂಲದವುಗಳು. ಈ ಬಗೆಯ ಉಪತಿಂಡಿಗಳು ಕಠ್ಮಂಡು, ಪೋಖ್ರಾ ಮೊದಲಾದ ವಿಮಾನ ನಿಲ್ದಾಣಗಳಲ್ಲೂ ಸಾಮಾನ್ಯವಾಗಿ ಲಭ್ಯವಿವೆ. ವಿವಿಧ ಆಟಗಳಲ್ಲಿ ತೊಡಗಿದವರಿಗೆ ತಿಂಡಿ, ಪಾನೀಯ, ಸಿಗರೇಟ್ ಮೊದಲಾದ ವಿಲಾಸಿ ವಸ್ತುಗಳನ್ನು ಒದಗಿಸುವ ಚಾಕಚಕ್ಯತೆ ತಾರುಣ್ಯ ಚಿಮ್ಮುವ ಹತ್ತಾರು ಯುವಕರು ಪ್ರತಿ ಟೇಬಲ್‌ಗಳ ಮುಂದೆ ಆಹಾರ, ವೈನ್ ಸಾಲುಗಳಲ್ಲೆಲ್ಲಾ ನಿಂತಿರುತ್ತಾರೆ. ಇವರೆಲ್ಲರಿಗೂ ವಿಮಾನಗಳ ಪೈಲಟ್ ತರಹವೇ ವೇಷಭೂಷಣ, ಉಡುಪು ಬಣ್ಣವೂ! ಕ್ಯಾಸಿನೋ ಅಂಗಳದ ಇನ್ನೊಂದು ಬದಿಗೆ ಒಂದು ರಂಗಮಂಟಪ, ವಿವಿಧ ಆಟದಲ್ಲಿ ತೊಡಗಿದ್ದವರಿಗೆ ನೇರವಾಗಿ ಕಾಣುವಂಥ ವ್ಯವಸ್ಥೆ ಅಲ್ಲೊಂದು ತರಾವರಿ ನೃತ್ಯ ಕೂಟ.

ಕ್ಯಾಬರೆ ಸ್ವರೂಪ, ಆದರೆ ಕ್ಯಾಬರೆ ಅಲ್ಲ. ಹದಿನಾರು ತುಂಡು ಹುಡುಗ, ಹುಡುಗಿಯರ ಗುಂಪು. ಎಲ್ಲರೂ ಮಟ್ಟಸ್ಥರು. ಹುಡುಗಿಯರು ತೊಡೆಯಿಂದ ಮೇಲಕ್ಕೆ ಒಂದು ಚಡ್ಡಿ, ಮೇಲೊಂದು ಅಂಗಾಂಗ ಮಾಸಲು ಮಬ್ಬಾಗಿ ಕಾಣುವ ಬನೀನ್ ಮಾದರಿಯ ಕೆಂಪು ಉಡುಗೆ, ಕಾಲಿಗೆ ಬಿಳಿ ಕ್ಯಾನ್‌ವಾಸ್ ಷೂ, ತಲೆಗೆ ಕೆಂಪು ರಿಬ್ಬನ್, ಕೈಯಲ್ಲಿ ಬಳೆಯಿಲ್ಲ, ಮುಡಿಗೆ ಹೂವಿಲ್ಲ, ಹಣೆಗೆ ಬೊಟ್ಟಿಲ್ಲ. ಎಲ್ಲರೂ ಟೀನ್‌ಏಜಿನ ಹುಡುಗಿಯರು, ಮೂಗುತಿ ಸುಂದರಿಯರು. ನನಗೆ ತಿಳಿದಂತೆ ಈ ಹುಡುಗಿಯರೆಲ್ಲರೂ ಹೊರಭಾಗದಿಂದ ಆಹ್ವಾನಿತರಿರಬೇಕು. ತೀರಾ ದಪ್ಪವೂ ಅಲ್ಲದ, ಸಣ್ಣವೂ ಅಲ್ಲದ ಸಾಧಾರಣ ದೇಹಾಕೃತಿ. ಕಾಯಿಸಿ ಆರಿಸಿದ ಹಾಲಿನ ಕೆನೆಯ ಬಣ್ಣ, ಒರಿಸ್ಸಾ, ಯು.ಪಿ., ಕಲ್ಕತ್ತಾ ಕಡೆಯ ಮೈಲಕ್ಷಣ. ಎಂಟು ಯುವಕರು, ಅದೇ ಮೈಮಾಟ. ಕೆಂಪು ಬನಿಯನ್, ತುಂಡು ಚೆಡ್ಡಿ, ತಲೆಗೊಂದು ಓರಣವಾಗಿ, ಅಡ್ಡಲಾಗಿ ಕಟ್ಟಿ ಎಡಭಾಗಕ್ಕೆ ಕುಚ್ಚಿನ ಹಾಗೆ ಇಳಿಬಿಟ್ಟಿದ್ದ ಕೆಂಪು ರಿಬ್ಬನ್. ನೃತ್ಯ, ಹಿಂದುಗಡೆಯಿಂದ ಸಂಗೀತ. ಸಂಗೀತಕ್ಕೆ ತಕ್ಕ ಹಾಗೆ ಕುಣಿತ. ಹುಡುಗ-ಹುಡುಗಿ ವ್ಯತ್ಯಾಸವೇನಿಲ್ಲ. ಪರಸ್ಪರ ಕೈಹಿಡಿದು, ಸೊಂಟ ಹಿಡಿದು, ಎದೆಯ



ನೇಪಾಳದ ಕ್ಯಾಸಿನೋ ಒಂದರ ನೋಟ

ಮೇಲೆ ಕೈ ಹಾಕಿ ಲಯಬದ್ಧ ವಾಗಿ ನೃತ್ಯದಲ್ಲಿ ತಲ್ಲೀನ. ಅದೊಂದು ಅಶ್ಲೀಲವೂ ಅಲ್ಲದ, ಅಸಹ್ಯವೂ ಅಲ್ಲದ ಮೋಹಕ ಮನರಂಜನೆ. ಬೆಂಗಳೂರು, ಕಲ್ಕತ್ತಾ ಮುಂತಾದ ಕಡೆಯ ರೆಸ್ಟೋರೆಂಟ್-ಕ್ಲಬ್‌ಗಳಲ್ಲಿ ನಡೆಯುತ್ತದೆ ಎನ್ನಲಾಗುವ ಕ್ಯಾಬರೆ ನೃತ್ಯದ ಬಗೆಗೆ ಕೇಳಿದ್ದೇನೆ. ಅದೊಂದು ಗುಂಡಿನ ಮತ್ತಿನ, ಕಾಮಕೇಳಿಯ ಪ್ರಚೋದಕ ದೃಶ್ಯಾವಳಿ. ಮಜಬೂತಾದ ಹೆಂಗಸು, ಕೆಲವು ಬಾಳೆ ದಿಂಡಿನ ತರಹದ ಚೆಲುವೆಯರೂ ಇದರಲ್ಲಿ ಸೇರಿಕೊಂಡಿರುತ್ತಾರೆ. ವೇದಿಕೆಯ ಮೇಲೆ ಬರುತ್ತಲೇ ಜಗಜಗಿಸಿರುವ ವಿದ್ಯುತ್ ಚಮತ್ಕಾರಿಕ ಆಟದಲ್ಲಿ ಇವರ ನೃತ್ಯ ರಂಜನೀಯ ಭಂಗಿಗಿಂತ ಶೃಂಗಾರ ರಸೋಲ್ಲಾಸದ ಉತ್ತೇಜನಕಾರಿ ವಾತಾವರಣ. ರಂಗಮಂಚದ ಮೇಲೆಯೇ ಮೈಮೇಲಿನ ನಿಲುವಂಗಿ ಕಳಚುವುದು, ಮೇಲುಡಿಗೆ ಬಿಚ್ಚುವುದು, ತೊಡೆ ಪೂರಾ ಕಾಣುವ ಪಾರದರ್ಶಕ ತೊಡೆಯ ಒಳಗೆ ತಮ್ಮ ಶಾರೀರಿಕ ಸೌಂದರ್ಯ ತೋರಿಸುತ್ತ ಕುಣಿತ, ಜೂಜಿನ ಗಿರಾಕಿಗಳಿಗೆ ಮತ್ತೇರಿಸುವುದು, ಅವರಿಂದ ಶಹಬಾಸ್‌ಗಿರಿ ಪಡೆಯುವುದು ಮುಖ್ಯ ಆಶಯ. ಜೊತೆಗೆ ಗಿರಾಕಿಗಳು ಖುಷಿಯಿಂದ ನೋಟುಗಳನ್ನು ಚಿಮ್ಮುವುದು ಉಂಟೆಂದು ಕೇಳಿದ್ದೇನೆ. ಆದರೆ ನೇಪಾಳದ ಕ್ಯಾಸಿನೋ ಇದಕ್ಕೆ ಸಂಪೂರ್ಣ ಹೊರತು. ನಾವು ಗಮನಿಸಿದ ಒಂದು ಗಂಟೆಯ ಈ ಮನರಂಜನಾ ಕೂಟದಲ್ಲಿ ಸುಮಾರು ಆರೇಳು ಬಗೆಯ ಸಂಗೀತ, ನೃತ್ಯ ಭಂಗಿಯನ್ನು ವೀಕ್ಷಿಸಿದೆವು. ಒಂದಿನಿತೂ ಅಶ್ಲೀಲವಾಗಲಿ, ಬಟ್ಟೆ ಕಳಚುವ ದೃಶ್ಯವಾಗಲಿ ಅಶ್ಲೀಲ ಹಾಡು ಈ ಬಗೆಯ ವಾತಾವರಣ ಕಾಣಲಿಲ್ಲ. ಎಲ್ಲವೂ ಡೀಸೆಂಟ್. ಕಾರ್ಡ್ಸ್ ಆಡುತ್ತಾ ಸಂಖ್ಯೆಗೆ ಪಣ ಹೂಡುತ್ತ, ಅತ್ತ ಕಡೆಯೆ ಹೆಚ್ಚು ಗಮನ ಕೇಂದ್ರೀಕರಿಸಿದ ವಾತಾವರಣ. ಅಲ್ಲಿನ ರಸ್ತೆ, ಕುರಿ ತುಂಬುವ ಹಾಗೆ ಜನ ತುಂಬುವ ವ್ಯಾನ್ ಮಾದರಿಯ ವಾಹನ. ಬಾಯಿ ತುಂಬಾ ತಂಬಾಕು, ಗುಟ್ಕಾ ಹಾಕಿಕೊಂಡು ಕಿಟಕಿಯಿಂದ ಉಗಿವ

ಪ್ಯಾಸೆಂಜರ್, ಡ್ರೈವರ್, ಮರಳು-ಉಸುಕಿನಿಂದ ಕೂಡಿರುವ ರಸ್ತೆ. ರಸ್ತೆ ಬದಿ ವ್ಯಾಪಾರ, ದೇವಸ್ಥಾನದ ಮುಂದೆ ಕುಳಿತಿರುವ ಭಿಕ್ಷುಕರು, ಅನಾಥರು, ವೃದ್ಧರು, ವಯಸ್ಸಾದರೂ ಹೊಟ್ಟೆಪಾಡಿಗೆ ಕಟ್ಟಿಗೆ ಹೊರುತ್ತಲೋ, ಕನ್ನಡಕ, ಪ್ಲಾಸ್ಟಿಕ್ ಚಪ್ಪಲಿ, ರುದ್ರಾಕ್ಷಿ, ಹಣ್ಣು, ಶೇಂಗಾ ಮಾರಾಟ ಮಾಡುವ ಮುದುಕ-ಮುದುಕಿಯರು ಇವರೆಲ್ಲರ ಚಿತ್ರಣ ನೇಪಾಳದ ಆರ್ಥಿಕ ಸ್ಥಿತಿಗತಿಯನ್ನು ಬಿತ್ತಲಾಗಿಸುವ ಒಂದು ನೋಟವಾದರೆ, ಕ್ಯಾಸಿನೋ ಇವುಗಳಿಗೆ ವ್ಯತಿರಿಕ್ತ ವಾತಾವರಣ. ನೇಪಾಳದ ಸಂಪತ್ತೆಲ್ಲ ಇಲ್ಲೇ ಗುಡ್ಡೆಹಾಕಿರುವಂಥ ಮೋಜಿನ ತಾಣ. ಯಾರದ್ದೋ ದುಡಿಮೆ, ಯಾರದ್ದೋ ವ್ಯವಸ್ಥೆ. ಲಾಭ-ನಷ್ಟದ ನಡುವೆ ಕ್ಯಾಸಿನೋ ವಿಜೃಂಭಿಸುತ್ತಿದೆ. ಈ ಚಿಂತನೆ ಹೋಟೆಲ್ ಮಹಾರಾಜ ಪ್ಯಾಲೇಸ್‌ನ ವಸತಿಗೃಹದ ಬೆಚ್ಚನೆಯ ಕೊಠಡಿಯನ್ನು ಹೊಕ್ಕರೂ ಬಿಡಲಿಲ್ಲ. ನಾಗರೀಕತೆಯ ಮೋಜು - ಜೂಜಿನಲ್ಲೇ ನಮ್ಮ ಬದುಕು ಜರ್ಝರ. ಸಂಪತ್ತು ಪೋಲು, ದುಡಿತ, ಶ್ರಮಿಕತ್ವ ಇಂಥವುಗಳಿಗೆ ಬಲಿಯಾಗುತ್ತಿವೆ. ಇದು ನೇಪಾಳ ಮಾತ್ರವಲ್ಲ ವಿಶ್ವದ ಎಲ್ಲಾ ಮಹಾನಗರಗಳ ಹಣೆಬರಹ. ಚಿಕ್ಕ ನೇಪಾಳದಲ್ಲಿ ಎದ್ದು ಕಾಣುತ್ತದೆ ಅಷ್ಟೇ.

ಕ್ಯಾಸಿನೋ ನೃತ್ಯ ಕೂಟದಲ್ಲಿ ಸಣ್ಣನೆಯ ಸಂಗೀತ ಸಂಯೋಜನೆ ಹಿತವಾಗಿತ್ತು, ಹಿಂದಿ, ನೇಪಾಳಿ, ಇಂಗ್ಲಿಷ್ ಸಂಗೀತವೂ ನೃತ್ಯಕ್ಕೆ ಸಂಯೋಜನೆಯಾಗಿತ್ತು. ನಾನು ಗ್ರಹಿಸಿಕೊಂಡ ನೇಪಾಳಿ ಮೂಲದ ಒಂದು ಹಾಡು, ಆ ಹಾಡಿಗೆ ತೋರಿದ ನೃತ್ಯ ಸಂಯೋಜನೆ, ನಟನೆ ನನ್ನ ಗಮನ ಸೆಳೆಯಿತು.

ಹೆಣ್ಣೆ ಹೆಣ್ಣೆ ಗಜನಿಂಬೆ ಹಣ್ಣೆ
ನಾನೂ ನೀನು ಕೂಡುವ ಕೃಷ್ಣನ ಆಟ ಆಡುವಾ

ಎಂದು ಹುಡುಗ ಹೇಳುತ್ತಾನೆ. ಅದಕ್ಕೆ ಹುಡುಗಿ ಹೇಳುತ್ತಾಳೆ

ಮಾವನ ಮಗನೆ ಮೋಹದ ದೊರೆಯೆ
ಅತ್ತೆ ಮಾವನ ಕರೆಸು
ಬಂಧು ಬಳಗ ಕೂಡಿಸು
ಅಲ್ಲಿ ನಮ್ಮನ್ನು ಮೆರೆಸು

ಹುಡುಗ ಹೇಳುತ್ತಾನೆ

ಅತ್ತೆ ಮಾವರ ಕೇಳಲ್ಲ, ಕುಲದೂಟ ಹಾಕಲ್ಲ
ದೂರದಾಚೆ ಹೋಗುವ
ಅಲ್ಲಿ ನಾವು ಸುಖಿಸುವ

ಹುಡುಗಿ ಹೇಳುತ್ತಾಳೆ

ಮಾವನ ಮಗನೆ ಮಾವನ ಮಗನೆ
ದಿಕ್ಕು ದೆಸೆ ಇಲ್ಲದಂಗೆ
ಕೇಳಾರ್‍ಯಾರು ಇಲ್ಲದಂಗೆ
ಓಡಿ ಹೋಗಾದು ಬ್ಯಾಡಪ್ಪ
ಪ್ರೀತಿ ತೌರವರಲ್ಲಿ ತೋರಪ್ಪ


ಹೀಗೆ ಗಂಡಿನ ಪ್ರೀತಿ, ಆತುರ-ಕಾತುರ, ಹುಡುಗಿಯ ವಿವೇಕ, ಗೌಪ್ಯತೆಯ ಪ್ರೇಮದಾಟದ ಒಂದು ನೃತ್ಯ ರೂಪಕ. ಅವರ ಹಾವಭಾವ, ಹಿಂದಿ-ಸಂಸ್ಕೃತ ಬೆರೆತ ಬುಡಕಟ್ಟು ಮಾದರಿಯ, ಹಿನ್ನೆಲೆಯ ಸಂಗೀತದಲ್ಲಿ ಪ್ರಕಟವಾಗುತ್ತಿತ್ತು. ಒಳಗೆ ಹವಾನಿಯಂತ್ರಿತ ಬೆಚ್ಚನೆಯ ವಾತಾವರಣ, ಹೊರಗೆ ಕೊರೆವ ಚಳಿ. ಬಣ್ಣಬಣ್ಣದ ತೆರದಲ್ಲಿ ಸಾಲಾಗಿ ಜೋಡಿಸಿಟ್ಟಿದ್ದ ಐಸ್‌ಕ್ರೀಂ ಪರಿಮಳಿಸುತ್ತಿತ್ತು. ಮುಟ್ಟುವುದುಂಟೆ ಚಳಿಯಲ್ಲಿ ಬನ್ನಿ ಬನ್ನಿ ಎಂಬ ಪ್ರೊ॥ ಜೆಪಿ ಅವರ ಕೈಸನ್ನೆ, ಬಾಯಿ ಸನ್ನೆಯ ಸಂದೇಶ. ಪ್ರೊ॥ ದಸ್ತಗೀರ್, ಕ್ಯಾಸಿನೋ ಪರಿಸರವನ್ನು, ಅಲ್ಲಿನ ಭಾಷಿಕ ವ್ಯವಹಾರವನ್ನು ನನಗೆ ಮತ್ತು ಪ್ರೊ॥ ಕೆಸಿಎನ್ ಅವರಿಗೆ ವಿವರಿಸುತ್ತಲೇ ಹೊರಬಂದೆವು. ನಮ್ಮ ಕೇರಳ ತಂಡದವರು ನಮಗಿಂತ ಮುಂಚೆ ವಾಹನದಲ್ಲಿ ಕುಳಿತಿದ್ದರು. ರಾತ್ರಿ ಯಾರಾದರೂ ತಪ್ಪಿಸಿಕೊಳ್ಳಬಾರದೆಂಬ ಎಚ್ಚರಿಕೆಯಲ್ಲಿ ಜೆಪಿ ಎಲ್ಲರ ಹೆಸರು ಹಿಡಿದು ಹಾಜರಿ ಖಾತರಿಯಾಗಿರುವುದನ್ನು ಖಚಿತಪಡಿಸಿಕೊಂಡರು. ಕತ್ತಲೆಯ ರಾತ್ರಿ, ಮಿನುಗುವ ವಿದ್ಯುತ್ ದೀಪ, ತಗ್ಗು-ದಿಣ್ಣೆಯ ರಸ್ತೆ. ಬಸ್ ತೂಕಡಿಸುತ್ತಲೇ ನಿಧಾನವಾಗಿ ಹೋಟೆಲ್ ಮಹಾರಾಜ ಪ್ಯಾಲೇಸ್ ತಲುಪಿತು. ಜಾಮೂನ್, ಬೋಂಡ, ಚಿತ್ರಾನ್ನ, ಮಂಗಳೂರು ಶೈಲಿಯ ಬಾಳೇಕಾಯಿ ಪಲ್ಯ ಕೊರೆಯುತ್ತಿದ್ದ ಚಳಿಯಲ್ಲೂ ಉಲ್ಲಾಸದಾಯಕವಾಗಿತ್ತು.

೧೧

# ಸಿದ್ಧಾರ್ಥನ ಲುಂಬಿನಿ

ಬುದ್ಧ ಭಾರತದವನು, ಬೌದ್ಧ ಧರ್ಮ ಉದಯಿಸಿದ್ದು ಭಾರತದಲ್ಲಿ. ನಂತರ ಪಾಶ್ಚಿಮಾತ್ಯ ದೇಶಗಳಿಗೆ ಹರಡಿತು ಎಂಬ ಮಾತಿದೆ. ಇತಿಹಾಸಕಾರರು ಇದನ್ನೇ ಹೇಳುತ್ತಾ ಬಂದಿದ್ದಾರೆ ಇದಕ್ಕೆ ಪೂರಕ ಎಂಬಂತೆ ಬುದ್ಧನೆಲೆಗಳು ಇಂದಿಗೂ ಸ್ಮಾರಕವಾಗಿ ಉತ್ತರಭಾರತದ ಕೆಲವೆಡೆ ಗೋಚರಿಸುತ್ತವೆ. ಬುದ್ಧನ ಧರ್ಮ ಪ್ರಸಾರದ ಕೇಂದ್ರ ಇರುವುದು ಉತ್ತರಪ್ರದೇಶದ ಪ್ರಸಿದ್ಧ ಹಿಂದೂ ಕ್ಷೇತ್ರ ವಾರಣಾಸಿಗೆ ಸಮೀಪದ ಸಾರನಾಥದಲ್ಲಿ.

ಬೌದ್ಧಧರ್ಮೀಯರಿಗೆ ನಾಲ್ಕು ಸ್ಥಳಗಳು ಪ್ರಮುಖವಾದವು. ಇವುಗಳನ್ನು ಬೌದ್ಧರಿಗೆ ಮುಕ್ತಿ ಕೇಂದ್ರಗಳೆಂದೇ ತಿಳಿದುಕೊಂಡಿದ್ದಾರೆ. ಇವುಗಳಲ್ಲಿ ಮೊದಲನೆಯದು ಸಿದ್ಧಾರ್ಥ ಹುಟ್ಟಿದ ಕಪಿಲವಸ್ತು. ಇದು ಈಗಿನ ನೇಪಾಳ ದೇಶದ ಲುಂಬಿನಿ ವನದಿಂದ 27 ಕಿ.ಮೀ. ದೂರದಲ್ಲಿದೆ. ಇದನ್ನು ಈಗ ತಿಲೌರಾಕೋಟ್ (Tilaurakot) ಎಂದು ಕರೆಯಲಾಗುತ್ತಿದೆ. ಇದೇ ಪ್ರಾಚೀನ ಕಪಿಲವಸ್ತುವಾಗಿದ್ದು ಬುದ್ಧನ ತಂದೆ ಶುದ್ಧೋದನ, ಆತನ ಪೂರ್ವಿಕರೆಲ್ಲರೂ ಇದೇ ಕಪಿಲವಸ್ತುವಿನಲ್ಲಿ ಹುಟ್ಟಿ ಬೆಳೆದವರು, ರಾಜ್ಯ ಕಟ್ಟಿ ಮೆರೆದವರು. ಇಲ್ಲಿ ಇಂದಿಗೂ ಶಾಕ್ಯರ ಪ್ರಾಚೀನ ಅರಮನೆಯ ಸ್ಥಳವನ್ನು ತೋರುತ್ತಾರೆ. ಇಲ್ಲಿಗೆ ಸಮೀಪದಲ್ಲಿ ಅಂದರೆ 27 ಕಿ.ಮೀ. ದೂರದಲ್ಲಿ ಲುಂಬಿನಿ ವನವಿದೆ. ಇದು



ಲುಂಬಿನಿಯ ಒಂದು ನೋಟ

ಸಿದ್ಧಾರ್ಥ ಹುಟ್ಟಿದ ಸ್ಥಳ. ಸದಾ ಜನ ಜಂಗುಳಿಯಿಂದ ತುಂಬಿರುತ್ತದೆ. ವಿದೇಶೀಯರು ಧ್ಯಾನ, ಪ್ರಾರ್ಥನೆ ಮುಂತಾದ ಧಾರ್ಮಿಕ ಚಟುವಟಿಕೆಯಲ್ಲಿ ಸದಾ ನಿರತ ರಾಗಿರುತ್ತಾರೆ. ದೇಶ-ವಿದೇಶಗಳ ಮಂದಿರಗಳು, ಬುದ್ಧನ ಎತ್ತರದ ಪ್ರತಿಮೆಗಳೂ ಇಲ್ಲಿವೆ. ಆದರೂ ಗಮನ ಸೆಳೆಯುವುದು ಕ್ರಿ.ಶ.7 ನೇ ಶತಮಾನದಲ್ಲಿ ಶಾಕ್ಯಮುನಿ ನಿರ್ಮಿಸಿರುವ ಬುದ್ಧ ಜನ್ಮಸ್ಮಾರಕ ಶಿಲೆ, ನೋಡುಗರನ್ನು ಮೋಹಕಗೊಳಿಸುತ್ತದೆ. ಇದು ಲುಂಬಿನಿಯ ವಿಶೇಷ ಆಕರ್ಷಣೆ. ಇದು ಸಿದ್ಧಾರ್ಥನ ಜನ್ಮಸ್ಥಳವಾದುದರಿಂದ ಸಹಜವಾಗಿಯೇ ಆಕರ್ಷಣೆ ಇದೆ. ಗೈಡ್ ನಿಧಾನವಾಗಿ ಬುದ್ಧನ ಕೌಟುಂಬಿಕ ಹಿನ್ನೆಲೆ, ಕುದುರೆ ಸಾರೋಟಿನಲ್ಲಿ ಕಪಿಲವಸ್ತುವಿನಿಂದ ತನ್ನ ತಾಯಿಯ ತವರು ಮನೆಕ್ಕೆ ಹೋಗುವಾಗ ಮಾರ್ಗಮಧ್ಯೆ ಈ ಲುಂಬಿನಿಯಲ್ಲಿ ಗೌತಮನ ಜನನವಾಗುತ್ತದೆ. ಹಾಗಾಗಿ ಇದೊಂದು ಪವಿತ್ರ ಸ್ಥಳವಾಗಿದೆ. ಇಲ್ಲಿಯೇ ಮಾಯಾದೇವಿ ಮಂದಿರವಿದೆ. ಇದರಲ್ಲಿ ಮಾಯಾದೇವಿಯ ಸುಂದರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಹಲವು ಕಾಲಘಟ್ಟಗಳಲ್ಲಿ ರಚನೆಯಾಗಿರುವ ಈ ಮಾಯಾದೇವಿ ಮಂದಿರ ತುಂಬಾ ಚೆನ್ನಾಗಿದೆ. ಪಾಲಿ ಭಾಷೆಯಲ್ಲಿ ಬುದ್ಧನ ತತ್ವಗಳನ್ನು, ಆತನ ಚಾರಿತ್ರಿಕ ಅಂಶಗಳ ಕುರಿತ ವಿವರಣೆಗಳ ಫಲಕಗಳನ್ನು ಇಲ್ಲಿ ಹಾಕಲಾಗಿದೆ. ಭಾಷೆ ಗೊತ್ತಿಲ್ಲದ ನಾವುಗಳು ಫಲಕವನ್ನು ನೋಡಬಹುದೇ ಹೊರತು ಇದರಿಂದ ಏನೂ ತಿಳಿಯುವುದಿಲ್ಲ. ಪ್ರತಿಯೊಂದಕ್ಕೂ ಗೈಡ್‌ನ ಸಹಾಯವನ್ನು ಅವಲಂಬಿಸಬೇಕು. ಮಾಯಾದೇವಿ ಮಂದಿರದ ಪಕ್ಕದಲ್ಲಿಯೇ ಅಶೋಕ ಸ್ತಂಭವಿದೆ. ಇದನ್ನು ಕ್ರಿ.ಪೂ 249 ರಲ್ಲಿ ಸಾಮ್ರಾಟ ಅಶೋಕ ಚಕ್ರವರ್ತಿ ಪ್ರತಿಷ್ಠಾಪನೆ ಮಾಡಿದ. ವಿವರವನ್ನು ಗೈಡ್ ನೀಡುತ್ತಾನೆ. ಇದರ ಕೆಳಗೆ ಬುದ್ಧನ ಜನ್ಮ ವಿವರ, ಆತನ ಪರ್ಯಟನೆ, ಸಂದೇಶ ಇವುಗಳನ್ನು ಪಾಲಿ ಭಾಷೆಯಲ್ಲಿ ಕೆತ್ತಲಾಗಿದೆ. ಪಾಲಿ ಭಾಷೆಯನ್ನು, ಅದರ ಸ್ವರೂಪವನ್ನು ನಾನು ಮೊದಲು ಕಂಡದ್ದು ಮೈಸೂರಿನ ಪ್ರಾಚ್ಯವಸ್ತು ಇಲಾಖೆ ಹಾಗೂ ಕನ್ನಡ ಅಧ್ಯಯನ



ಕೇಂದ್ರದ ಹಸ್ತಪ್ರತಿ ವಿಭಾಗದಲ್ಲಿ. ಅಶೋಕ ಶಾಸನಗಳ ಉಲ್ಲೇಖವನ್ನು ಚಿತ್ರದುರ್ಗ ಜಿಲ್ಲೆಯ ಜಟಿಂಗ ರಾಮೇಶ್ವರ ಹಾಗೂ ರಾಯಚೂರು ಜಿಲ್ಲೆಯ ಮಸ್ಕಿಗಳಲ್ಲಿ ಗುರುತಿಸಿದ್ದಾರೆ. ಅವೆಲ್ಲವೂ ಶಿಥಿಲವಾಗಿರುವುದರಿಂದ ಭಾಷೆಯ ಸ್ವರೂಪ ತಿಳಿಯುವುದಿಲ್ಲ. ಆದರೆ ನಾನು ಪ್ರವಾಸ ಮಾಡಿದ ನೇಪಾಳದ ಬಹುತೇಕ ಬೌದ್ಧ ಮಂದಿರ, ಭಾರತದ ಗಯಾ, ಸಾರನಾಥಗಳಲ್ಲಿ ಅಪೂರ್ವವೆಂದೆನಿಸುವ ಪಾಲಿ ಭಾಷೆಯ ಬರವಣಿಗೆಯ ಸಾಮಗ್ರಿಗಳನ್ನು ಗಮನಿಸಲು ಸಾಧ್ಯವಾಯಿತು. ನನ್ನ ಜೊತೆಗಿದ್ದ ಪ್ರೊ|| ಕೆಸಿಎನ್ ಜೊತೆಗೆ ನೇಪಾಳದ ಸ್ವಯಂಭುನಾಥ ಮಂದಿರ, ಕಠ್ಮಂಡುವಿನ ಚಾವ್‌ಹಿಲ್‌ನ ಬೌದ್ಧ ಚೈತ್ಯಾಲಯಗಳ ಲ್ಲಿದ್ದ ಪಾಲಿ ಭಾಷೆಯ ಶಿಲಾಫಲಕಗಳನ್ನು ಓದುವುದಕ್ಕೆ ಪ್ರಯತ್ನಿಸಿದೆವು. ಆದರೆ ಒಂದು ಶಬ್ದವೂ ಅರ್ಥವಾಗಲಿಲ್ಲ. ತಮ್ಮ ಅಪೂರ್ವ ತ್ಯಾಗಗಳಿಂದ ಜಗತ್ತನ್ನೇ ಪ್ರೀತಿಯಿಂದ ಗೆದ್ದ ಬುದ್ಧನ ಸತ್ಯ ಸಂದೇಶಗಳನ್ನು ಪ್ರಾದೇಶಿಕ ಭಾಷೆಗಳ ಮೂಲಕ ಬಂಧಿಯಾಗಿಸಿರುವುದು ಅಕ್ಷರ ಲೋಕದ ಬಹು ದೊಡ್ಡ ಚೋದ್ಯ. ಜಗತ್ತಿಗೆ ಬೆಳಕಾದ ಬುದ್ಧನನ್ನು ಭಾಷಿಕತನದಿಂದ ಬಂಧಿಸಬಾರದಲ್ಲ!

## ಸ್ವಯಂಭೂನಾಥ:

ನೇಪಾಳದಲ್ಲಿ ನಾವಿರುವಷ್ಟು ದಿನಗಳು ಹಿಂದೂ ದೇವಾಲಯಗಳಿಗೆ ಭೇಟಿ ಕೊಟ್ಟಷ್ಟೇ ಬೌದ್ಧ ವಿಹಾರ, ಸ್ತೂಪಗಳಿಗೂ ಭೇಟಿ ಕೊಟ್ಟೆವು. ಶಿವ ಮಂದಿರಗಳಂತೆ ಬುದ್ಧ ಮತ್ತು ಆ ಸಂಬಂಧಿ ಮಂದಿರಗಳ ಬಗೆಗೂ ನೇಪಾಳಿಗರಿಗೆ ವಿಶೇಷ ಗೌರವ. ಬುದ್ಧನನ್ನು ವಿಷ್ಣುವಿನ ಹನ್ನೊಂದನೆಯ ಅವತಾರ ಎಂದೇ ಭಾವಿಸಿರುವ ನೇಪಾಳಿಗಳು ಶಿವ, ದುರ್ಗಿ, ಹನುಮಂತ ಮಂದಿರಗಳಂತೆ ಬೌದ್ಧ ವಿಹಾರ, ಸ್ತೂಪಗಳಿಗೂ ಭಕ್ತಿಭಾವದಿಂದ ನಡೆದುಕೊಳ್ಳುತ್ತಾರೆ. ಆದರೆ ಒಂದು ವಿಶೇಷವೆಂದರೆ ಬೌದ್ಧ ಸ್ತೂಪಗಳಲ್ಲಿ ಪಿತೃಪಿಂಡ ಅರ್ಪಣೆ, ಹೋಮಗಳ ಹಾವಳಿ, ತೀರ್ಥ ಪ್ರಸಾದ, ಹಣ್ಣು-ಕಾಯಿ, ಹೆಸರಿನ ಆರಾಧನೆ ಇಲ್ಲ. ನಾವು ಕಂಡ ಬಹುತೇಕ ಬೌದ್ಧ ಸ್ತೂಪಗಳಲ್ಲಿ ಸ್ವಚ್ಛತೆ ಕಾಯ್ದುಕೊಳ್ಳಲಾಗಿದೆ. ನಾವು ಬುದ್ಧ ಹುಟ್ಟಿದ ನೆಲದಿಂದ ತನಗುಂಟಾದ ಜ್ಞಾನೋದಯವನ್ನು ತನ್ನ ಶಿಷ್ಯರಿಗೆ ಹಂಚಿಕೊಂಡ ಮೊದಲ ಸ್ಥಳ ಸಾರನಾಥ, ಬುದ್ಧನ ಸ್ತೂಪಗಳನ್ನು ನಿಧಾನವಾಗಿಯೇ ವೀಕ್ಷಿಸಿದೆವು. ನಮ್ಮ ಪ್ರವಾಸಿ ತಂಡದ ನಾಯಕ ಪ್ರೊ|| ಜಯಪ್ರಕಾಶ್, ಇಂಗ್ಲೀಷ್ ಪ್ರಾಧ್ಯಾಪಕರು ಹಾಗೂ ಹಲವು ಸಂಘಟನೆಗಳ ಮುಖ್ಯಸ್ಥರೂ ಹೌದು. ಇದರ ಒಳಗೂ ಅವರಿಗಿರುವ ಧಾರ್ಮಿಕ ಶ್ರದ್ಧೆ, ತಾಳ್ಮೆ ಎಲ್ಲರಿಗೂ ಸಮಾನ ಅವಕಾಶ, ಅವಸರ ತಮ್ಮೊಬ್ಬರದಲ್ಲ ಎಲ್ಲರೊಂದಾದಾಗ ಮಾತ್ರ ಗುರಿ ಮುಟ್ಟಲು ಸಾಧ್ಯ ಎಂದು ಹೇಳುತ್ತಲೇ



ಕಠ್ಮಂಡುವಿನ ಸ್ವಯಂಭುನಾಥ ಮಂದಿರ

ನಿಧಾನವಾಗಿ ಗೈಡ್‌ನ ಮಾರ್ಗದರ್ಶನದಲ್ಲಿ ಎಲ್ಲವನ್ನೂ ಕೇಳಿಸುತ್ತಾ ಬಂದರು.

ಗೈಡ್ ನೀಡುತ್ತಿದ್ದ ದೇವನಾಗರಿ ಮಿಶ್ರಿತ ಹಿಂದಿ ಭಾಷೆಯ ಜೊತೆ ಜೊತೆಗಿನ ಇಂಗ್ಲಿಷ್ ವಿವರಣೆಯನ್ನು ಇವರು ಮತ್ತೊಮ್ಮೆ ಮನದಟ್ಟು ಮಾಡಿಕೊಡುತ್ತಾ ಬಂದರು. ನಮ್ಮದೇ ವಾಹನ, ಅಡಿಗೆ ತಂಡ, ನಿಗದಿಪಡಿಸಿದ ವಿಮಾನ ವೇಳೆ, ತಂಗುವಿಕೆ ಇದ್ದುದರಿಂದ ನಮಗೆ ಎಲ್ಲಿಯೂ ಅವಸರ ಎಂದಾಗಲಿ, ಅನಾನುಕೂಲವಾಗಲಿ ಸುಳಿಯಲೇ ಇಲ್ಲ. ಸಾರನಾಥ ಬುದ್ಧ ಕೇಂದ್ರದ ವೀಕ್ಷಣೆ ನಿಧಾನವಾದರೂ ಲಾಲ್‌ಬಹದ್ದೂರ್ ಶಾಸ್ತ್ರಿ ಅಂತರರಾಷ್ಟ್ರೀಯ ವಿಮಾನಕ್ಕೆ ಹೋಗಬೇಕಾದುದರಿಂದ ಚೆಕ್-ಇನ್, ಲಗೇಜ್, ವಿಸಾ ಪರಿಶೀಲನೆಯಿಂದ ಕೊಂಚ ಮುಂಚೆ ಹೋಗಬೇಕಾದುದರಿಂದ ಸ್ವಲ್ಪ ಆತುರ ಆತುರವಾಯಿತು ಅನ್ನಿಸಿತು. ಉಳಿದ ಯಾವುದೇ ಕಡೆಗಳಲ್ಲಿ ನಮಗೆ ಈ ಅನುಭವವಾಗಲೇ ಇಲ್ಲ.

ಕಠ್ಮಂಡುವಿನ ಸಮೀಪದಲ್ಲೇ ಕಣಿವೆಯಲ್ಲಿ ಸ್ವಯಂಭುನಾಥ ಮಂದಿರವಿದೆ. ಕಠ್ಮಂಡುವಿನಿಂದ ಪಶ್ಚಿಮಕ್ಕೆ 3 ಕಿ.ಮೀ. ದೂರದಲ್ಲಿದೆ. ತೀರಾ ಎತ್ತರವೂ ಅಲ್ಲದ, ಚಿಕ್ಕದೂ ಅಲ್ಲದ ಒಂದು ಬಗೆಯ ದಿಬ್ಬದಂತಿರುವ ಈ ಸ್ಥಳ ಇಂದಿಗೂ ಕಾಡಿನ ವಾತಾವರಣವನ್ನು ಹೊಂದಿದೆ. ಸ್ವಯಂಭುನಾಥ ಮಂದಿರ ಗುಡ್ಡದ ಮೇಲಕ್ಕೆ ಅರ್ಧ ಭಾಗದ ತನಕ ವಾಹನ ಸೌಕರ್ಯ ಕಲ್ಪಿಸಲಾಗಿದೆ. ಅಚ್ಚುಕಟ್ಟಾದ ರಸ್ತೆಯೂ ಇದೆ.

ಉಳಿದ 500 ಮೀ. ಎತ್ತರಕ್ಕೆ ಸುಸಜ್ಜಿತವಾದ ಮೆಟ್ಟಿಲುಗಳನ್ನು ನಿರ್ಮಿಸಿ ಹತ್ತುವುದಕ್ಕೆ ಅವಕಾಶ ಕಲ್ಪಿಸಿದ್ದಾರೆ. ಅಸಹಾಯಕರು, ವಯಸ್ಕರಿಗೆ ಭೋಗಿ ರೂಪದಲ್ಲಿ ಕೆಳಗಿಂದ ಮೇಲಕ್ಕೆ ಇಬ್ಬರು ಹೊತ್ತುಕೊಂಡು ಹೋಗುವ ಡೋಲಿ ಸ್ವರೂಪದ ವ್ಯವಸ್ಥೆಯಿದೆ. ಮಾತ್ರವಲ್ಲ ಕುದುರೆಯ ಮೂಲಕವೂ ಕೆಲವರು ಸ್ವಯಂಭು ನಾಥ ಮಂದಿರ ಹತ್ತುತ್ತಿದ್ದುದನ್ನು ನಾನು ಗಮನಿಸಿದೆ.

ಸ್ವಯಂಭುನಾಥ ಎತ್ತರದ ಬೌದ್ಧ ಸ್ತೂಪವಿರುವ ಸ್ಥಳ. ಇದು ವಿಶ್ವಮಟ್ಟದ ಖ್ಯಾತಿ ಪಡೆದ ಸ್ಥಳ. ಪ್ರಮುಖ ಬೌದ್ಧ ಚೈತ್ಯಗಳಲ್ಲಿ ಇದೂ ಒಂದು. ಇದು ಎರಡು ಸಾವಿರ ವರ್ಷಗಳ ಹಿಂದಿನದು ಎಂದು ಹೇಳಲಾಗುತ್ತಿದೆ. ವಿಶಾಲವಾದ ಬೆಟ್ಟದ ಮೇಲೆ ಬೌದ್ಧ ಧರ್ಮೀಯ ಹಲವು ಸಂಸ್ಥೆಗಳು, ಧಾರ್ಮಿಕ ನೇತಾರರು ಸ್ವಯಂಸೇವಕರಾಗಿ ಧರ್ಮ ಪ್ರಸಾರ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಇದರ ಆವರಣದಲ್ಲಿ ಮಂಜುಶ್ರೀ ಸರಸ್ವತಿಯ ಗುಡಿ ಆಕರ್ಷಕವಾಗಿದೆ. ಬೌದ್ಧ ಮಾದರಿಯಲ್ಲಿ ಇದಕ್ಕೂ ಅರ್ಚನೆ ನಡೆಯುತ್ತದೆ. ಇಲ್ಲಿನ ಮರದಲ್ಲಿ ಬಿಡಿಸಿರುವ ಚಿತ್ರಕಲೆ ಹಿಂದೂ-ಬೌದ್ಧಿಕ್ ಮಾದರಿಯ ಸಮ್ಮಿಶ್ರಣದಲ್ಲಿ ಇಲ್ಲಿನ ವಾಸ್ತುಶಿಲ್ಪಗಳು, ಕಟ್ಟಿಗೆಯಲ್ಲಿ ರೂಪುಗೊಂಡಿರುವುದು ವಿಶೇಷ. ಸ್ವಯಂಭುನಾಥ ಮಂದಿರದ ಮೇಲೆ ನಿಂತು ಪೂರ್ವದ ಕಡೆ ತಿರುಗಿದರೆ ಇಡೀ ಕಠ್ಮಂಡು ನಗರ, ಅಲ್ಲಿನ ದೇವಾಲಯ, ಶಾಸನ ಮಂದಿರ, ಅರಮನೆ ಈ ಎಲ್ಲವೂ ಸ್ಪಷ್ಟವಾಗಿ ಕಾಣುತ್ತವೆ. ದೂರದಲ್ಲಿ ಚೀನಾ ಗಡಿ ಕಾಣುತ್ತದೆ. ಇಲ್ಲಿ ನಿಂತು ನೋಡಿದರೆ ವಿಮಾನಗಳ ಹಾರಾಟವೂ ಸ್ಪಷ್ಟವಾಗಿ ಕಾಣುವುದು. ಈ ದಿಬ್ಬದ ಇನ್ನೊಂದು ತುದಿಗೆ ನೇಪಾಳದ ರಾಷ್ಟ್ರೀಯ ವಸ್ತು ಸಂಗ್ರಹಾಲಯ (The Museum of Natural History) ಇದೆ. ಇದೊಂದು ವಿಶ್ವಕೋಶದ ಮಾದರಿ. ನೇಪಾಳ-ಭಾರತ ಎರಡೂ ದೇಶಗಳ ಅಮೂಲ್ಯ ವಿಗ್ರಹಗಳು, ಬೌದ್ಧ ಧರ್ಮಕ್ಕೆ ಸೇರಿದ ಗ್ರಂಥ, ಹಸ್ತಪ್ರತಿ, ಬುದ್ಧ ಬಳಸುತ್ತಿದ್ದ ಎನ್ನಲಾಗುವ ವಸ್ತುಗಳು, ದೇಶ-ವಿದೇಶಗಳ ಬೌದ್ಧ ಸ್ಮಾರಕಗಳ ಮಾದರಿಯನ್ನು ಇಲ್ಲಿ ಕಾಣಬಹುದಾಗಿದೆ. ಮಧ್ಯ ಮತ್ತು ಆಧುನಿಕ ಕಾಲದ ಚಾರಿತ್ರಿಕ ಕಲಾಕೃತಿಗಳು ಈ ಸಂಗ್ರಹದಲ್ಲಿ ವಿಶೇಷ ಗಮನ ಸೆಳೆಯುತ್ತವೆ.

ಇಲ್ಲಿನ ಸ್ವಯಂಭುನಾಥ ಚೈತ್ಯಾಲಯದ ಬಗೆಗೆ ಸ್ಥಳೀಯ ಐತಿಹ್ಯವೊಂದು ಚಾಲ್ತಿಯಲ್ಲಿದೆ. ಪುರಾತನ ಕಾಲದಲ್ಲಿ ಈ ಸ್ಥಳದಲ್ಲಿ ಒಂದು ಸರೋವರವಿತ್ತು. ಇದರಲ್ಲಿ ನಾಗಗಳೆಂಬ ಸರ್ಪಗಳು ವಾಸಮಾಡುತ್ತಿದ್ದವು. ಈ ಕಾರಣದಿಂದಾಗಿ ಈ ಸ್ಥಳಕ್ಕೆ ನಾಗ ವಾಸಗೃಹ ಎಂದು ಕರೆಯುತ್ತಿದ್ದರು. ಬುದ್ಧನ ಮೊದಲನೆಯ ಶಿಷ್ಯನಾದ ವಿಪಾಸ್ಥಿ

ಎಂಬ ಬೋಧಿಸತ್ವ ತನ್ನ ತಿರುಗಾಟದ ಕಾಲದಲ್ಲಿ ಈ ಸರೋವರದ ಬಳಿಗೆ ಬರುತ್ತಾನೆ. ಆ ಸರೋವರದ ದಂಡೆಯ ಮೇಲೆ ನಿಂತ ಆ ಮುನಿ ಕಮಲ ಪುಷ್ಪದ ಬೀಜವೊಂದನ್ನು ಸರೋವಕ್ಕೆ ಎಸೆದು ಮುಂದೆ ಹೋಗುತ್ತಾನೆ. ನಂತರ ಸಾವಿರಾರು ವರ್ಷಗಳ ತರುವಾಯ ಭೂಮಿ ಕಂಪಿಸಿ ಬಿರುಕು ಒಡೆದಾಗ ಅದರ ಒಳಗೆ ಸಿಕ್ಕ ಕಮಲ ಪುಷ್ಪದ ಕುಡಿಯೊಡೆದು ಅದರಲ್ಲಿ ಕಣ್ಣು ಪ್ರಜ್ವಲಿಸುವ ಬೆಳಕೊಂದು ಹೊರಡುತ್ತದೆ. ಅದನ್ನು ಸ್ವಯಂಭು ಜ್ಯೋತಿ ಎಂದೇ ಕರೆಯಲಾಯಿತು. ಇದಾದ ಮೇಲೆ ಮಂಜುಶ್ರೀ ಬುದ್ಧ ಎಂಬುವವನು ಉತ್ತರ ದೇಶದಿಂದ ಆಗಮಿಸಿದನು. ಸರೋವರ, ಕಮಲ ಪುಷ್ಪ, ಸ್ವಯಂಜ್ಯೋತಿ ಕಂಡು ಚಕಿತನಾಗಿ ಇದನ್ನು ಯಾತ್ರಾರ್ಥಿಗಳ ತಾಣವನ್ನಾಗಿಸಬೇಕೆಂದು ಬಗೆದನು. ಆ ಸರೋವರದ ಒಂದು ಸುತ್ತು ಹಾಕಿ ಅಲ್ಲಿನ ತಗ್ಗು ಪ್ರದೇಶದಲ್ಲಿ ತನ್ನ ಕೈಯಲ್ಲಿದ್ದ ಬೌದ್ಧಿಕ ಖಡ್ಗದಿಂದ ಭೂಮಿಗೆ ತಿವಿಯುತ್ತಾನೆ. ಆಗ ಆ ಭಾಗದಿಂದ ನೀರು ಚಿಮ್ಮತೊಡಗಿತು. ಸರೋವರದಲ್ಲಿದ್ದ ನಾಗರಾಜ (ನಾಗಸರ್ಪವೆಂಬ ಕಾರ್ಕೋಟಕ) ಹೊರಬಂದು ಬುದ್ಧನಿಗೆ ಪ್ರದಕ್ಷಿಣೆ ಹಾಕುತ್ತದೆ. ಆಗ ಮಂಜುಶ್ರೀ ಬುದ್ಧ ಆ ಸರ್ಪರಾಜನಿಗೆ ಆಶೀರ್ವಾದ ಮಾಡಿ ವಜ್ರದ ಕಿರೀಟ, ಪದ್ಮಪೀಠ, ಬಂಗಾರದ ಬಾಗಿಲುಗಳುಳ್ಳ ಭವ್ಯ ಭವನವೊಂದನ್ನು ನಿರ್ಮಿಸಿಕೊಟ್ಟನು. ಹೀಗೆ ಕಣಿವೆಯ ಐಶ್ವರ್ಯವನ್ನು ಕಾಪಾಡುತ್ತಾ, ಸರ್ಪರಾಜ ವಾಸ ಮಾಡುತ್ತಿದ್ದನು. ಇದರಿಂದ ಅಮೂಲ್ಯ ಪ್ರಭೆಯ ಜ್ಯೋತಿಯೊಂದು ಉರಿಯುತ್ತಲೇ ಇತ್ತು. ಕಾಲಾನುಕಾಲಕ್ಕೆ ಸ್ವಯಂಭುಜ್ಯೋತಿ ಬೆಳಗುತ್ತ ಜನಗಳಿಗೆ ಆಶ್ಚರ್ಯ, ಶಾಂತಿಯ ಸಂದೇಶ ನೀಡುತ್ತಾ ಇದ್ದಿತು. ಮುಂದೆ ಕಲಿಯುಗದಲ್ಲಿ ಈ ಜ್ಯೋತಿ, ಅದರ ವಜ್ರಖಚಿತ ಮಂದಿರವನ್ನು ದುಷ್ಟರು ನಾಶಮಾಡಬಹುದೆಂದು ಬೌದ್ಧ ಸನ್ಯಾಸಿಯೊಬ್ಬ ಸ್ವಯಂಭು ಜ್ಯೋತಿಯನ್ನು ಗುಣಿಯೊಂದರಲ್ಲಿ ಇಟ್ಟು ಅದನ್ನು ಅಮೂಲ್ಯ ಮಣಿಯಿಂದ ಮುಚ್ಚಿಬಿಟ್ಟನು. ಇದೇ ಬೌದ್ಧ ಸನ್ಯಾಸಿ ಸ್ವಯಂಭು ಜ್ಯೋತಿಯ ಗುಣಿಯ ಮೇಲೆ ಸ್ತೂಪವೊಂದನ್ನು ನಿರ್ಮಿಸಿದನು. ಇದೇ ನೇಪಾಳದ ಪ್ರಮುಖ ಆಕರ್ಷಣೆ ಸ್ವಯಂಭು ಬೆಟ್ಟ, ಬೌದ್ಧರ ಅತ್ಯಂತ ಪವಿತ್ರ ಮಂದಿರ. ಈ ಮಂದಿರದ ಮೇಲೆ ನಾವು 2 ಗಂಟೆಗೂ ಮೀರಿ ಸಮಯ ಕಳೆದೆವು. ಈ ಬೆಟ್ಟದ ಪ್ರಾಕೃತಿಕ ಸೊಬಗಿನಂತೆ ಇಡೀ ನೇಪಾಳದ ವಿಹಂಗಮ ನೋಟ ತುಂಬಾ ಆಕರ್ಷಕವಾಗಿ ಕಾಣುತ್ತದೆ. ಇದೇ ಸಂದರ್ಭದಲ್ಲಿ ಬೆಲ್ಜಿಯಂನ ಸಂಶೋಧಕಿ ಪಿಂಟೋ ಜಾರ್ಜ್ ನಮ್ಮೊಂದಿಗೆ ಆತ್ಮೀಯವಾಗಿ ಕಾಲ ಕಳೆದರು. ಫೋಟೋ ಕೂಡ ತೆಗೆಸಿಕೊಂಡರು.

## ಕೋಳಿಯ ಜಂಭವೂ ಕೊಕ್ಕರೆಯ ಹೆದರಿಕೆಯೂ :

ಸ್ವಯಂಭುನಾಥ ಸ್ತೂಪದ ಬದಿಯಲ್ಲೊಂದು ಪುಟ್ಟ ಮನೆ. ಅದರ ಬದಿಗೆ ಪುಟ್ಟಪುಟ್ಟ ಅಂಗಡಿಗಳು. ಅಲ್ಲಿ ಕೋಳಿಗಳು ಚೆದರಿಕೊಂಡು ಮೇಯುತ್ತಿದ್ದವು. ಅವುಗಳಲ್ಲಿ ಒಂದು ಕೋಳಿ ಎಮ್ಮೆಯ ಬುಡದಲ್ಲಿಯೇ ಗೆದ್ದಲು ಹುಳುಗಳನ್ನು ಕಾಲಿನಿಂದ ಕೆದರಿ, ಕೊಕ್ಕಿನಿಂದ ಕುಕ್ಕುತ್ತಾ ಮೇಯುತ್ತಿತ್ತು. ಅಲ್ಲಿಯೇ ಸುತ್ತಮುತ್ತ ತಿರುಗಾಡುತ್ತಿದ್ದ ಬಿಳಿಯ ಬಣ್ಣದ ಕೊಕ್ಕರೆ ಎಮ್ಮೆ ಮೇಲೆ ಹತ್ತಿ, ಅದರ ಮೈಮೇಲೆ ಧೀರೋದ್ದಾತ್ತವಾಗಿ ಸವಾರಿ ಮಾಡುತ್ತಾ ಎಮ್ಮೆಯ ಮೇಲಿನ ಉಣ್ಣೆಯನ್ನು ಹೆಕ್ಕಿ ತಿನ್ನುತ್ತಾ ಮೋಜಿನಲ್ಲಿ ನಿರತವಾಗಿತ್ತು. ನಾನು ಸ್ವಯಂಭುನಾಥ ಬೆಟ್ಟದ ಮೇಲೆ ನಿಂತು ಚೀನಾ ಗಡಿಯ ಮುಖವಾಗಿ ಮಂಜು ಕವಿದ ಪರ್ವತಗಳನ್ನು ನೋಡುತ್ತಿದ್ದೆ. ಸೂರ್ಯನ ಕೆಂಪು ಕಿರಣ, ಮಂಜು ಮುಸುಕಿದ ಪರ್ವತಗಳ ಮೇಲೆ ಬೀಳುತ್ತಿದ್ದುದರಿಂದ ಆ ಭಾಗವೆಲ್ಲಾ ಬಂಗಾರದ ರಶ್ಮಿಯ ಹಾಗೆ, ಹೊಂಬಣ್ಣದ ಚಿತ್ತಾರಗಳನ್ನು ಬಿಡಿಸುತ್ತಾ, ಭೂಮಿ-ಆಕಾಶಗಳನ್ನು ಒಂದುಮಾಡಿತ್ತು. ಹೀಗೆಯೇ ನೋಡುತ್ತಾ ನನ್ನ ಗಮನ ಸಮೀಪದ ಕೋಳಿ-ಕೊಕ್ಕರೆಯ ಆಟದ ಕಡೆ ತಿರುಗಿ ವಿಚಿತ್ರವಾದ ಕುತೂಹಲ ಮೂಡಿಸಿತು.

ಕೊಕ್ಕರೆ ಎಮ್ಮೆಯ ಹತ್ತಿರಕ್ಕೆ ಬರುತ್ತಲೇ ಕೋಳಿ ಅದನ್ನು ಓಡಿಸಿಕೊಂಡು ಹೋಗುತ್ತಿತ್ತು. ಕೊಕ್ಕರೆ ಮೊದಲು ಕುಪ್ಪಳಿಸಿ, ಕುಪ್ಪಳಿಸಿ ತುಸು ದೂರ ಸರಿದು ಮತ್ತೆ ಅದೇ ಬದಿಗೆ ಬರುತ್ತಿತ್ತು. ಕೋಳಿ ಕೊರ್ ಎಂದು ತನ್ನ ಗರಿಯನ್ನು ಅರ್ಧಕ್ಕೆ ಬಿಚ್ಚಿ ಕೊಕ್ಕರೆಯನ್ನು ಓಡಿಸಿಕೊಂಡು ಹೋಗುವುದು, ಅದು ಓಡಿಹೋಗುವಂತೆ ನಟಿಸಿ ಮತ್ತೆ ಎಮ್ಮೆಯ ಬಳಿಗೆ ಬರುವುದು. ಎಮ್ಮೆಯ ಬೆನ್ನು, ತಲೆ, ಕೋಡು, ಭುಜದ ಮೇಲೆಲ್ಲಾ ಸವಾರಿ ಮಾಡಿ, ಕೆಳಗಿಳಿದು ಅದರ ಹಿಂದೆಯೇ ಓಡುವುದು, ಹೊಟ್ಟೆಯ ತಳಭಾಗದ ಉಣ್ಣೆಗೆ ಬಾಯಿ ಹಾಕುವುದು ಮಾಡುತ್ತಲೇ ಇತ್ತು. ಕೋಳಿ ವೈರದಿಂದ ಓಡಿಸುತ್ತಲೇ ಅದೂ ಸೋತಂತೆ ಕಂಡಿತು. ಹೀಗೆ ಪರಸ್ಪರ ಕಾದಿದ ಕೋಳಿ-ಕೊಕ್ಕರೆ ತರುವಾಯ ಒಟ್ಟಿಗೆ ಗೆದ್ದಲು ಹುಳುವನ್ನು ಹುಡುಕುತ್ತಾ ಒಂದೇ ಜಾತಿಯಂತೆ ಒಟ್ಟಿಗೆ ಹೊಟ್ಟೆ ತುಂಬಿಸಿಕೊಳ್ಳಲು ಶುರು ಮಾಡಿದವು. ಇದು ನನಗೆ ನಿಜಕ್ಕೂ ಕುತೂಹಲಕರವಾಗಿತ್ತು.

ನೇಪಾಳ ಅಪ್ಪಟ ಹಿಂದೂ ದೇಶ ಎಂಬ ನಾಥಪಂಥೀಯರ ದಟ್ಟ ಸಂಸ್ಕೃತಿಯ ಒಳಗೂ ಬೌದ್ಧ ಸ್ತೂಪಗಳು, ಮಂದಿರಗಳು, ಅವುಗಳ ಭವ್ಯತೆ, ಸ್ವಚ್ಛತೆ, ಜನಾಕರ್ಷಣೆಯ ನೋಟ. ಬೌದ್ಧ ಮತ್ತು ಹಿಂದೂ ಆರಂಭದಲ್ಲಿ ಕೋಳಿ-ಕೊಕ್ಕರೆಯ ಹಾಗೆ ಧರ್ಮ ಕಾರಣ ಕಲಹ ಮಾಡಿರಬಹುದು. ಮೇಲು-ಕೀಳುಗಳ ತಾಕಲಾಟದ ಸಾಧ್ಯತೆಯೂ

ಇಲ್ಲಿದೆ. ಆದರೆ ಇಂದು ಕೋಳಿ-ಕೊಕ್ಕರೆ ಪರಸ್ಪರ ಒಂದಾಗಿ ಆಹಾರ ಹುಡುಕಿಕೊಂಡಂತೆ ಹಿಂದೂ-ಬೌದ್ಧ ಸಂಸ್ಕೃತಿ ತನ್ನ ಪಾಡಿಗೆ ತಾವು ನೆಲೆ ಕಂಡುಕೊಂಡಿವೆ. ನಾಥ ಪಂಥ ವಿಜೃಂಭಿಸಿದೆ.



**ವಿಶ್ವಶಾಂತಿಸ್ತೂಪ**

ಇಲ್ಲಿಂದ ಕಠ್ಮಂಡುವಿನ ಹೃದಯಭಾಗದಲ್ಲಿರುವ ಬುದ್ಧ ವಿಶ್ವಶಾಂತಿಸ್ತೂಪ, ಇದು 660 ಮೀ. ಅಗಲ ಹಾಗೂ 43 ಮೀ. ಉದ್ದದ ಈ ಸ್ತೂಪ ಏಷ್ಯಾದ ಬಹುದೊಡ್ಡ ಸ್ತೂಪವಾಗಿದೆ. ಯಾತ್ರಾರ್ಥಿಗಳು ಸ್ತೂಪದ ಕೆಳ ಹಾಗೂ ಮಧ್ಯಭಾಗಕ್ಕೆ ಹತ್ತಿ ಸ್ತೂಪದ ಒಂದು ಸುತ್ತು ಹಾಕಬಹುದು. ಪ್ರವಾಸಿಗರು, ಭಕ್ತರು ಶಾಂತಿಸ್ತೂಪದ ಸುತ್ತ ಸಾವಿರ ಧರ್ಮಚಕ್ರಗಳನ್ನು ತಿರುಗಿಸುತ್ತಾ ಸುತ್ತುಹಾಕುತ್ತಾರೆ. ಇಲ್ಲಿಯೇ ಗಂಧದ ಪರಿಮಳಭರಿತ ಚಕ್ಕೆಗಳನ್ನು ಒಲೆಗೆ ಹಾಕಲಾಗುತ್ತದೆ. ಇದು ಇಲ್ಲಿನ ಭಕ್ತಿ ಸಮರ್ಪಣೆಯ ಒಂದು ಭಾಗ. ಹಾಗಾಗಿ ಚಾವ್‌ಹಿಲ್ ಬಜಾರ್‌ನ ಈ ಸ್ತೂಪದ ಸುತ್ತ ಸುಗಂಧ ಪರಿಮಳ ಆಕರ್ಷಿಸುತ್ತದೆ. ವಿಶಾಲವಾದ ಪ್ರಾಂಗಣ, ಅದರ ಸುತ್ತಾ mosaic ಕಲ್ಲು ಹಾಸು. ಸುತ್ತಲೂ ಸಾಕಷ್ಟು ಧ್ವಜಗಳನ್ನು ಹಾಕಲಾಗಿದೆ. ಕಠ್ಮಂಡು-ಟಿಬೆಟ್ ಜೀವನ ಶೈಲಿ ಹೆಚ್ಚಾಗಿ ಪ್ರಕಟವಾಗುವ ಈ ಶಾಂತಿಸ್ತೂಪದ ಆವರಣ ಸದಾ ಪ್ರವಾಸಿಗರಿಂದ ತುಂಬಿರುತ್ತದೆ. ದೇವಾಲಯದ ಹೊರಾಂಗಣದಲ್ಲಿ ಪಾಲಿ ಭಾಷೆಯಲ್ಲಿ ಬುದ್ಧನ ತ್ರಿಪಿಟಕಗಳ ಸಾರವನ್ನು ಸಂದೇಶವಾಗಿ ಕಪ್ಪು ಹಲಗೆಯ ಮೇಲೆ ಬರೆಸಲಾಗಿದೆ. ಅದನ್ನು



ಗೈಡ್ ಒಂದಿಷ್ಟು ವಿವರಿಸುತ್ತಾನಾದರೂ ಅದರ ಪೂರ್ಣ ಪಾಠವನ್ನು ಓದುವುದಿಲ್ಲ. ಪಾಲಿ ಭಾಷೆಯ ಪುಸ್ತಕ, ಬುದ್ಧನ ವಿಗ್ರಹ, ಟಿಬೆಟ್ ಉಡುಗೆ-ತೊಡುಗೆ, ಪೂಜಾ ಪರಿಕರ, ಫೋಟೋ ಹೆಚ್ಚು ಪ್ರಮಾಣದಲ್ಲಿ ಇಲ್ಲಿನ ವಾಣಿಜ್ಯ ಸಂಕೀರ್ಣದಲ್ಲಿ, ಮಾರಾಟ ಮಳಿಗೆಗಳಲ್ಲಿವೆ. ಬೌದ್ಧ ಅನುಯಾಯಿಯ ವೇಷ ತೊಡಿಸಿ ಫೋಟೋ ತೆಗೆದುಕೊಂಡುವ ತ್ವರಿತ ಫೋಟೋಗ್ರಾಫಿಕ್ ಕೆಲಸವೂ ಇಲ್ಲಿ ನಡೆಯುತ್ತದೆ. ಇಂಥ ಸಾಹಸಕ್ಕೆ ಅವಸರ ಅವಸರವಾಗಿ ಇಳಿದ ನನಗೆ ಟಿಬೆಟ್ ಉಡುಪುಗಳನ್ನು ಕ್ರಮವಾಗಿ ಹಾಕಿಕೊಳ್ಳಲು ಬಾರದೆ, ತೆಗೆದ ಫೋಟೋ ನನಗೇ ಮುಜುಗರ ತರುವಂತಿದೆ. ವಿಜಲ್‌ನ ಕೂಗು, ಗೈಡ್‌ನ ಚಪ್ಪಾಳೆ, ಬಸ್ ಹೊರಡುತ್ತಿದೆ ಬನ್ನಿ ಎಂಬ ಸೂಚನೆ. ಒಬ್ಬೊಬ್ಬರಾಗಿ ಬಂದು ವಾಹನವೇರತೊಡಗಿದರು.

ಮಧ್ಯಾಹ್ನದ ಚುಮುಚುಮು ಬಿಸಿಲು, ಹೊರ ಹವೆ ಹಿತವಾದರೆ ಪಾಕಶಾಲೆಯ ಪುಳಿಯೋಗರೆ, ಪೂರಿ, ರಸಾಯನ, ಕೆನೆಮೊಸರು-ಅನ್ನ ಅದರಷ್ಟೇ ರುಚಿಕಟ್ಟಾಗಿತ್ತು. ಊಟ ಮುಗಿಸಿ ಕೊಂಚ ರಿಲ್ಯಾಕ್ಸ್. ಬನ್ನಿ ಬನ್ನಿ ಕಠ್ಮಂಡು ಮತ್ತೊಂದು ಸುತ್ತು ಎಂಬ ಸೂಚನೆ ಪ್ರೊ||ಜೆಪಿ ಅವರಿಂದ. ಲಗುಬಗೆಯಿಂದಲೇ ಮಹಲಿನಿಂದ ಇಳಿದು ಬಂದು ವಾಹನ ಏರಿದೆವು.

೧೨

# ಬುದ್ಧ ಹುಟ್ಟಿದ ನೆಲದಲ್ಲಿ

ನೇಪಾಳ ಹಿಮಾಲಯದಾಚೆಯ ಕಣಿವೆ ದೇಶ. ಈ ದೇಶದ ವಿಚಾರ ಬಂದಾಗಲೆಲ್ಲಾ ಇದೊಂದು ಪೂರ್ಣ ಹಿಂದೂ ದೇಶ, ವಿಶ್ವದಲ್ಲಿ ಹಿಂದೂ ರಾಷ್ಟ್ರ ಎಂಬುದು ಇದೊಂದೇ. ನೇಪಾಳದ ಪಶುಪತಿನಾಥ, ಮನಕಾಮನ ಹಾಗೂ ಸೀತೆ ಹುಟ್ಟಿದ ಜನಕಪುರ ಈ ಎಲ್ಲವೂ ಕಾರಣವಾಗಿದ್ದವು. ಕಠ್ಮಂಡುವಿನ ಪಶುಪತಿನಾಥ ದೇವಾಲಯದ ಅರ್ಚಕರು ಕರ್ನಾಟಕದವರು, ಕನ್ನಡಿಗರು. ನಂಜನಗೂಡು, ಮಂಗಳೂರು ಮೂಲದವರು ಎಂದು ಕೇಳಿದ್ದೇ ಕಾರಣವಾಗಿತ್ತು. ಇದು ಮೇಲ್ಮಟ್ಟಕ್ಕೆ ಸರಿ ಅನ್ನಿಸಿದರೂ ನೇಪಾಳ ಪೂರ್ಣ ಹಿಂದೂ ಸಂಸ್ಕೃತಿಯನ್ನು ಇಂದು ಉಳಿಸಿಕೊಂಡಿಲ್ಲ. ಈ ದೇಶದಲ್ಲಿ ಬೌದ್ಧ ಮತ್ತು ಹಿಂದೂ ಈ ಎರಡೂ ಧರ್ಮಗಳ ಮುಖಾಮುಖಿ ಸಮನ್ವಯತೆ ಎದ್ದು ಕಾಣುತ್ತದೆ. ಇಲ್ಲಿ ನಾಥಪಂಥದ ಸಂಸ್ಕೃತಿ ದಟ್ಟೈಸಿದೆ.

ನೇಪಾಳದ ಶೇ.90 ರಷ್ಟು ಹಿಂದೂಗಳು, ಶೇ.5% ಬೌದ್ಧರು, ಶೇ.1 ರಷ್ಟು ಕ್ರಿಶ್ಚಿಯನ್ ಹಾಗೂ 3% ಪ್ರಮಾಣದಲ್ಲಿ ಮುಸ್ಲಿಮರಿದ್ದಾರೆ. ಆದರೆ ನೇಪಾಳ ದೇಶದಲ್ಲಿ ತಿರುಗಾಡಿದ ಯಾರಿಗಾದರೂ ಇದು ಹಿಂದೂ ರಾಷ್ಟ್ರ ಮಾತ್ರವಲ್ಲ ಇದೊಂದು ಬೌದ್ಧರ ನೆಲೆ ಎಂಬುದು ಅರಿವಾಗುತ್ತದೆ. ಏಕೆಂದರೆ ಅಷ್ಟೊಂದು ಪ್ರಮಾಣದಲ್ಲಿ ಬೌದ್ಧ ದೇವಾಲಯ, ಸ್ತೂಪ, ಸ್ಮಾರಕ, ಪಾರ್ಕ್, ಕೊಳಗಳು ನಿರ್ಮಾಣವಾಗಿವೆ. ಮಾತ್ರವಲ್ಲ ಹಿಂದೂ ದೇವಾಲಯ, ತೀರ್ಥ ಕ್ಷೇತ್ರಗಳಿಗೆ ಹೋಲಿಸಿಕೊಂಡರೆ ಸ್ವಚ್ಛತೆ, ಶುಭ್ರತೆಯನ್ನು ಕಾಯ್ದುಕೊಂಡಿರುವುದು ಬೌದ್ಧ ದೇವಾಲಯಗಳಲ್ಲೇ ಹೆಚ್ಚು. 2500 ವರ್ಷಗಳ ಕೆಳಗೆ ಉತ್ತರ ದೇಶದಲ್ಲಿ ಮಗಧ, ಕೋಸರ, ಕಾಶಿ, ಆವಂತಿ, ವತ್ಸ, ಕುರು, ಪಾಂಚಾಲ, ಶೂರಸೇನ, ವಜ್ಜೀ ಈ ಮುಂತಾದ ಹದಿನಾರು ರಾಜ್ಯಗಳಿದ್ದವು. ಮಗಧ ದೇಶವನ್ನು ಬಿಂಬಸಾರ ಆಳ್ವಿಕೆ ಮಾಡುತ್ತಿದ್ದನು. ಈ ಪರಂಪರೆಯ ಶುದ್ಧೋಧನ, ಮಹಾದೇವಿ ಇವರು ಕೋಸಲದ ಕಪಿಲವಸ್ತುವಿನಲ್ಲಿ ಏಕಚಕ್ರಾಧಿಪತ್ಯದೊಂದಿಗೆ ಅಧಿಕಾರ ನಡೆಸುತ್ತಿದ್ದರು. ಇವರ ಮಗನೇ

ಸಿದ್ಧಾರ್ಥ ಅರ್ಥಾತ್ ಬುದ್ಧ. ಸುಂದರವಾದ ವಾತಾವರಣ, ಏಕೈಕ ಪುತ್ರ, ತನ್ನ ಹದಿನಾರನೇ ವಯಸ್ಸಿನಲ್ಲಿ ಯಶೋಧರೆ ಎಂಬ ತರುಣಿಯೊಂದಿಗೆ ವಿವಾಹವಾಗುತ್ತಾನೆ. ತನ್ನ 28ನೆಯ ವಯಸ್ಸಿನಲ್ಲಿ ಓರ್ವ ಪುತ್ರನ ಜನನವೂ ಆಗುತ್ತದೆ. ನೇಪಾಳಿ ಹೇಳಿಕೆಯ ಪ್ರಕಾರ ಶಾಕ್ಯ ಸಂಘದವರಿಗೂ ಶುದ್ಧೋದನನಿಗೂ ರೋಹಿಣಿ ನದಿಯ ನೀರಿನ ವಿತರಣೆಯ ವಿಚಾರದಲ್ಲಿ ಕಲಹ ಆರಂಭವಾಗುತ್ತದೆ. ಪ್ರೌಢ ವಯಸ್ಕನಾಗಿದ್ದ ಸಿದ್ಧಾರ್ಥ ರೋಹಿಣಿ ನದಿಯ ನೀರಿನ ಹಂಚಿಕೆಯನ್ನು ಮಾತಿನ ಮೂಲಕ ಬಗೆಹರಿಸಬಹುದು, ಕಲಹ ಬೇಡ ಎಂದೇ ವಾದಿಸುತ್ತಾನೆ. ಆದರೆ ಯುದ್ಧ ವಿರೋಧಿಯಾಗಿದ್ದ ಸಿದ್ಧಾರ್ಥನ ಇಚ್ಛೆಗೆ ವಿರುದ್ಧವಾಗಿ ಯುದ್ಧ ಘಟಿಸಿ ಸಾವಿರಾರು ಜನರ ಸಾವು ಆದರಾಚೆಗೂ ಯುದ್ಧವೆಂಬ ಘೋರ ದುರಂತಕ್ಕೆ ಸಾಕ್ಷಿಯಾಗುತ್ತದೆ. ಕೈಕಾಲು ಕಳೆದುಕೊಂಡು ಶಾಶ್ವತ ಊನವಾದ ಸಾವಿರಾರು ಪ್ರಸಂಗಗಳು, ಗೌತಮನ ಮನಃಪಟಲವನ್ನು ಕಲಕುತ್ತದೆ. ವೈರತ್ವವನ್ನು ಪ್ರೇಮದಿಂದ ವಾದವನ್ನು ಮಾತುಕತೆಯಿಂದ ಬಗೆಹರಿಸಬಹುದು ಎಂದು ಬಲವಾಗಿ ವಾದಿಸುತ್ತಾ ಬಂದವನಿಗೆ ಆತನ ನಿರೀಕ್ಷೆ ಸುಳ್ಳಾಗಿ ಘೋರ ರಕ್ತಪಾತಕ್ಕೆ ಕಾರಣವಾಯಿತು. ಇದೊಂದು ಸಿದ್ಧಾರ್ಥನಿಗೆ ಸಹಿಸಲಾರದ ವೇದನೆಯಾಯಿತು. ಮೋಕ್ಷ-ಬದುಕುಗಳ ತುಮುಲದಲ್ಲಿ ಸಿಕ್ಕಿ ತನ್ನ 29ನೆಯ ವಯಸ್ಸಿನಲ್ಲಿಯೇ ದೇಶ ತ್ಯಾಗ ಮಾಡುತ್ತಾನೆ. ತನ್ನ 29 ನೆಯ ವಯಸ್ಸಿನಿಂದ 35 ನೆಯ ವಯಸ್ಸಿನ ತನಕ ಆರು ವರ್ಷಗಳ ಕಾಲ ಕಠಿಣ ವ್ರತ, ಅಲೆದಾಟ ಮಾಡುತ್ತಾನೆ. ಇದೆಲ್ಲದರ ಹಿಂದೆ ಮೋಕ್ಷದ ಬಯಕೆ. ಅಂತೂ ತನ್ನ 35ನೆಯ ವಯಸ್ಸಿಗೆ ಸಿದ್ಧಾರ್ಥನಿಗೆ ಜ್ಞಾನೋದಯವೂ ಆಗುತ್ತದೆ. ಇದನ್ನು ಕೆಲವರು ಮುಕ್ತಿ ಎಂದರೆ ಸಿದ್ಧಾರ್ಥ ಜ್ಞಾನೋದಯ ಎಂದು ಕರೆದುಕೊಂಡಿದ್ದಾನೆ. ಕ್ರಿ.ಪೂ.528 ರಲ್ಲಿ ಭಾರತದ ಬಿಹಾರ ರಾಜ್ಯದ ಗಯಾ ಸಿದ್ಧಾರ್ಥನಿಗೆ ಜ್ಞಾನೋದಯವಾದ ಸ್ಥಳ. ಇದು ಬಿಹಾರ ರಾಜಧಾನಿ ಪಾಟ್ನಾದಿಂದ 110 ಕಿ.ಮೀ ದೂರದಲ್ಲಿದೆ. ಪುರೋಹಿತಶಾಹಿ ಹಿಡಿತದಲ್ಲಿದ್ದ ಈ ಗಯಾ ನಗರದಿಂದ ಆಚೆಗೆ ಏಳು ಕಿ.ಮೀ ದೂರದ ಬೋಧಗಯಾ ಸಿದ್ಧಾರ್ಥನನ್ನು ಬುದ್ಧನನ್ನಾಗಿಸಿದ್ದು ಇದೇ ಸ್ಥಳ. ಇಲ್ಲೊಂದು ಅರಳೀ ಮರವಿದೆ. ಇದು ಸಾವಿರಾರು ವರ್ಷಗಳಿಂದಲೂ ಪವಿತ್ರ ಮರವಾಗಿ, ಭಕ್ತಿಯ, ಧ್ಯಾನದ ಮಂದಿರವಾಗಿ ಸಹಸ್ರ ಸಹಸ್ರ ಯಾತ್ರಾರ್ಥಿಗಳ ಭಕ್ತಿಭಾವದ ನೆಲೆಯಾಗಿದೆ. ಇದೇ ಅರಳಿಮರದಡಿ ಸುಜಾತ ನೀಡಿದ ಪಾಯಸ ಸೇವಿಸಿದ ಬುದ್ಧನಿಗೆ ವೈಶಾಖ ಪೂರ್ಣಿಮೆಯಂದು ಜ್ಞಾನೋದಯವಾಯಿತು. ಮೋಕ್ಷವನ್ನು ಹುಡುಕಿಕೊಂಡು ಬಂದ ಸಿದ್ಧಾರ್ಥ, ಪ್ರೀತಿಯ ಬಂಧನದಲ್ಲಿ ಸಿಲುಕುತ್ತಾನೆ. ಅದು ಎಂಥಾ ಪ್ರೀತಿ! ರೋಗಿಗಳ, ಮುದುಕರ, ಬಡವರ ಪ್ರೀತಿಯ ಬಂಧನದಲ್ಲಿ ಸಿಲುಕಿದ್ದು ವಿಶೇಷ. ಸಿದ್ಧಾರ್ಥ ಬುದ್ಧನಾಗಿ ಬದಲಾದದ್ದು ಬಿಹಾರದ ಬುದ್ಧಗಯಾದಲ್ಲಿನ ಅರಳಿ ಮರವೊಂದರ ಕೆಳಗೆ. ಈ ಸ್ಥಳದಲ್ಲಿ ಈಗಲೂ



ಗಯಾದಲ್ಲಿನ ಬುದ್ಧನ ಮೂರ್ತಿ

ಬೋಧಿವೃಕ್ಷವಿದೆ. ಇದು ಬುದ್ಧನ ಮಹತ್ವಕ್ಕೆ, ಜ್ಞಾನೋದಯಕ್ಕೆ ಸಾಕ್ಷಿಯಾಗಿ ನಿಂತಿದೆ. ಅದು ಸಿದ್ಧಾರ್ಥ ಧ್ಯಾನಕ್ಕೆ ಕುಳಿತ ಮರ ಇದಲ್ಲದೆ ಇರಬಹುದು. ಬದಲಿಗೆ ಇದೇ ಸ್ಥಳದಲ್ಲಿ ಕುಡಿಯೊಡೆದ ಅದರದೇ ಸಂತಾನ ಎಂಬ ನಂಬಿಕೆ ಇದೆ. ಈ ಮರ ಬುದ್ಧನ ನಂತರದ ನಾಲ್ಕನೇ ತಲೆಮಾರಿನದು ಎಂದು ಹೇಳುತ್ತಾರೆ. ಈ ಮರದ ಅಡಿ ತಪಸ್ಸಿಗೆ ಕುಳಿತ ಸಿದ್ಧಾರ್ಥನಿಗೆ ಜ್ಞಾನೋದಯವಾದ ಬಳಿಕ ಸ್ವಲ್ಪದಿನ ಅಲ್ಲಿದ್ದು ನಂತರ ಮುಂದೆ ಸಾಗಿದ. ಬುದ್ಧನ ಅನುಯಾಯಿಗಳು ಗುಂಪು ಗುಂಪಾಗಿ ಬಂದು ಈ ವೃಕ್ಷಕ್ಕೆ ಪೂಜೆ ಮಾಡುವುದು, ಧ್ಯಾನಕ್ಕೆ ಕುಳಿತುಕೊಳ್ಳುವುದು ಆರಂಭ ಮಾಡಿದರು. ಬರುಬರುತ್ತಾ ಇದೊಂದು ಧಾರ್ಮಿಕ ಕೇಂದ್ರವಾಗಿ ಪ್ರವಾಸಿ ತಾಣವಾಗಿ, ಚಾರಿತ್ರಿಕ ಘಟನೆಗೂ ಸಾಕ್ಷಿಯಾಯಿತು. ಕ್ರಿ.ಪೂ.3 ನೇ ಶತಮಾನದಲ್ಲಿ ನಡೆದ ಕಳಿಂಗ ಯುದ್ಧಕ್ಕೂ ಬೋಧಿ ವೃಕ್ಷಕ್ಕೂ ನಿಕಟ ಸಂಬಂಧವಿದೆ. ಆಸೆಯೇ ದುಃಖಕ್ಕೆ ಕಾರಣ. ಮನುಷ್ಯ ದುಃಖದಲ್ಲಿದ್ದರೆ ದುಃಖಕ್ಕೆ ಕಾರಣವಾದುದನ್ನು ಪರಿಹರಿಸಬಹುದು. ದುಃಖವೇ ಬಾರದ ಹಾಗೆಯೂ ನಡೆದುಕೊಳ್ಳಬಹುದು. ಬುದ್ಧನ ಈ ನಾಲ್ಕು ಸತ್ಯಗಳು ಸಾಮ್ರಾಟ್ ಅಶೋಕನಿಗೆ ಪರಮಪ್ರಿಯವಾಗಿ ಕಂಡವು. ಕಳಿಂಗ ಯುದ್ಧ ಸಾವು, ನೋವು, ರಕ್ತಪಾತ, ಆತನ ಬದುಕನ್ನೇ ಬದಲಿಸಿತು. ಬುದ್ಧನ ತತ್ವಾದರ್ಶಗಳು ಆತನಿಗೆ ಪ್ರಿಯವಾಗಿ ಕಂಡಿತು. ಯುದ್ಧಭೂಮಿಯಿಂದ ವಿಮುಖನಾಗಿ ನೇರವಾಗಿ ಬುದ್ಧಗಯಾಕ್ಕೆ ಬರುತ್ತಾನೆ. ಬೋಧಿ ವೃಕ್ಷಕ್ಕೆ ಪೂಜೆ ಸಲ್ಲಿಸುತ್ತಾನೆ. ಬೌದ್ಧ ಧರ್ಮ, ಬುದ್ಧನ ತತ್ವ, ಬೋಧಿ ವೃಕ್ಷದ ಪರಿಸರ ಅಶೋಕನನ್ನು ಬೌದ್ಧಧರ್ಮ ಸ್ವೀಕರಿಸುವಂತೆ ಮಾಡಿದವು. ಆತನೂ ಕೂಡ ಸಾಮಾನ್ಯ ಮನುಷ್ಯನ ಹಾಗೆ ವಾರಗಟ್ಟಲೆ ಧ್ಯಾನಮಗ್ನನಾಗುತ್ತಿದ್ದ. ಸಾಂಸಾರಿಕ ಬಂಧನಕ್ಕೆ ಒಳಗಾಗಿದ್ದ ಅಶೋಕನ ಈ ಬಗೆಯ ವೈರಾಗ್ಯ ಆತನ ಮಡದಿ ತಿಸ್ಸಾರಖಾಳ ಗಾಬರಿಗೂ ಕಾರಣವಾಯಿತು. ಮಾತ್ರವಲ್ಲ ಬೋಧಿವೃಕ್ಷದ ಮೇಲೆ ಅಸಮಾಧಾನಗೊಂಡು ಆ

ಬೋಧಿವೃಕ್ಷವನ್ನೇ ಕೆಡವಿಸುತ್ತಾಳೆ. ಇದು ಅಶೋಕನಿಗೆ ದುಃಖದ ಜೊತೆಗೆ ಮರದ ಸಂರಕ್ಷಣೆಯ ಜಾಗೃತಿಯೂ ಉಂಟಾಗುತ್ತದೆ. ಕತ್ತರಿಸಿದ ಮರದ ಬೇರುಗಳನ್ನು ಬಿಡಿಸಿ, ಪಾತಿ ಮಾಡಿ, ಬೇರುಗಳಿಗೆ ಹಾಲನ್ನು ಹಾಕುತ್ತಾನೆ. ವಿಸ್ಮಯ ಎನ್ನುವಂತೆ ಈ ಬೇರುಗಳು ಚಿಗುರಿ ದೊಡ್ಡ ಮರವಾಗಿ ಬೆಳೆಯಿತು. ಸುಮಾರು 37 ಮೀ. ಎತ್ತರಕ್ಕೆ ಬೆಳೆದ ಈ ಮರದ ಬುಡಕ್ಕೆ ಬಲವಾದ ಕಟ್ಟೆಯನ್ನು ಕಟ್ಟುತ್ತಾನೆ. ಮುಂದೆ ಅಶೋಕನ ಮಗಳಾದ ಸಂಘಮಿತ್ರೆ ತಂದೆಯ ಹಾದಿಯನ್ನು ತಾನೂ ಅನುಸರಿಸಿ ಬೌದ್ಧ ಧರ್ಮ ಸ್ವೀಕರಿಸಿ ಈ ಬೋಧಿವೃಕ್ಷದ ಬೇರುಗಳನ್ನು ಶ್ರೀಲಂಕಕ್ಕೂ ಕೊಂಡೊಯ್ದು ಅಲ್ಲಿಯೂ ನೆಟ್ಟು ಬೌದ್ಧ ಧರ್ಮ ಪ್ರಚಾರ ಮಾಡಿದಳು. ಶ್ರೀಲಂಕಾದಲ್ಲಿ ಇಂದಿಗೂ ಬೋಧಿ ವೃಕ್ಷ ಇರುವುದಾಗಿ, ಈ ಬೋಧಿವೃಕ್ಷದ ಪರಿಚಾರಕ ಹೇಳುತ್ತಾನೆ.

ನಮಗೋ ಆ ವೃಕ್ಷವನ್ನು ತದೇಕಚಿತ್ತದಿಂದ ನೋಡುವ, ಅದರ ಸೊಬಗು, ತತ್ವಾದರ್ಶಗಳನ್ನು ತುಂಬಿಕೊಳ್ಳುವ ತವಕ. ಆದರೆ ನಮ್ಮ ಗೈಡ್ ವೇಗವಾಗಿ ಬುದ್ಧ ಗಯಾದ ಪರಿಸರ, ಅಲ್ಲಿನ ದೇವಾಲಯಗಳನ್ನು, ಅವುಗಳ ಚಾರಿತ್ರಿಕ ಮಹತ್ವವನ್ನು ಬಣ್ಣಿಸುತ್ತಾ ಮುಂದೆ ಮುಂದೆ ಸಾಗುತ್ತಿದ್ದ. ಗೈಡ್ ನೀಡುತ್ತಿದ್ದ ವಿವರ, ಚರಿತ್ರೆ, ಮಾಸ್ತಿಯವರ ಯಶೋಧರ, ಪ್ರಭುಶಂಕರ ಅವರ ಅಂಗುಲೀಮಾಲ ನಾಟಕಗಳನ್ನು



ಬುದ್ಧ ಟ್ಯಾಂಕ್ (ಗಯೆ)



ಓದಿದ್ದ ನನಗೆ ಈ ಸ್ಥಳ ರೋಚಕಕವಾಗಿ ಕಾಣಲಾರಂಭಿಸಿತು. ಸಾವಿರಾರು ವರ್ಷಗಳ ಹಿಂದೆ ರಾಜಭೋಗವನ್ನು ಕಡೆಗಣಿಸಿ, ಕಠಿಣ ತಪಸ್ಸಿಗೆ ಕುಳಿತು ದಿವ್ಯಚೇತನ ಪಡೆದ ರಾಜಕುಮಾರನ ದಿವ್ಯಚೇತನ ಕಣ್ಣ ಮುಂದೆ ಬಂದಂತಾಯಿತು.

ಗಯಾದಲ್ಲಿ ವಿಷ್ಣುವಿನ ಬೃಹತ್ ದೇವಾಲಯವಿದೆ. ಸಿದ್ಧಾರ್ಥ ಇದನ್ನು ನೋಡಿಕೊಂಡು ನಿಶ್ಶಬ್ಧವಾದ ಬೋಧಿವೃಕ್ಷದ ಕಡೆ ಬಂದನೆಂದು ಹೇಳಲಾಗುತ್ತದೆ. ಆ ನೆನಪಿನಲ್ಲೇ ವಿಷ್ಣು ದೇವಾಲಯಕ್ಕೆ ವಿದೇಶೀಯರೂ ಭೇಟಿಕೊಡುತ್ತಾರೆ. ಬೋಧಿವೃಕ್ಷದ ಸಮೀಪದಲ್ಲಿಯೇ 180 ಅಡಿ ಎತ್ತರದ ಬೃಹತ್ ಬುದ್ಧನ ದೇವಾಲಯವಿದೆ. ಇದನ್ನು ಕನಿಷ್ಕನ ಕಾಲದಲ್ಲಿ ನಿರ್ಮಾಣ ಮಾಡಲಾಯಿತೆಂದು ಗೈಡ್ ವಿವರಣೆ ನೀಡುತ್ತಾನೆ. ಇಲ್ಲಿನ ವಿಶೇಷವೆಂದರೆ ಬುದ್ಧನ ದೇವಾಲಯ ಹಲವು ಮಾದರಿಯಲ್ಲಿ ರಚನೆಯಾಗಿರುವುದು. ಬೌದ್ಧಧರ್ಮ ಹೆಚ್ಚು ಜನಪ್ರಿಯವಾಗಿರುವ ನೇಪಾಳ, ಚೀನಾ, ಟಿಬೆಟ್, ಭೂತಾನ್, ಡಾರ್ಜಿಲಿಂಗ್, ಥಾಯ್‌ಲ್ಯಾಂಡ್, ಜಪಾನ್, ಟೋಕಿಯೋ ಈ ಮೊದಲಾದ ದೇಶದ ಭಕ್ತರು ತಮ್ಮ ತಮ್ಮ ಸಂಸ್ಕೃತಿಗೆ ಅನುಗುಣವಾಗಿ ದೇವಾಲಯಗಳನ್ನು ನಿರ್ಮಿಸಿರುವುದು. ಇದರ ನಡುವೆಯೂ ಹೆಚ್ಚು ಆಕರ್ಷಕವಾಗಿರುವುದು ಬುದ್ಧ ಟ್ಯಾಂಕ್ ದೇವಾಲಯ. ಸುತ್ತಲೂ ನೀರು, ಮಧ್ಯದಲ್ಲಿ ಸರ್ಪದ ಮೇಲೆ ಕುಳಿತಿರುವ ಬುದ್ಧನ ಪ್ರತಿಮೆಯೂ ಆಕರ್ಷಕವಾಗಿದೆ. ವಿದೇಶೀಯರು ವಿಪರೀತ ಅನ್ನುವಂತೆ ಇಲ್ಲಿ ಧ್ಯಾನ, ಕ್ಯಾಂಡಲ್ ಹಚ್ಚಿಸುವುದು, ಹಳದಿ ವಸ್ತ್ರ ಅರ್ಪಿಸುವುದು, ಅಶೋಕನ ಚಕ್ರ ತಿರುಗಿಸುವುದು ನಡೆಸುತ್ತಲೇ ಇರುತ್ತಾರೆ. ಸುಂದರ ಉದ್ಯಾನವನ, ಭವ್ಯವಾದ ಅರಳೀಮರ, ಅದಕ್ಕೊಂದು ಪಾತಿ ಪ್ರವಾಸಕ್ಕೆ ಹಿತವಾಗಿದೆ.

೧೩


# ಬುದ್ಧನ ಸಾರನಾಥ

ನಾವು ಹೊರಟಿದ್ದು ನೇಪಾಳ ದೇಶಕ್ಕೆ. ತಿರುಗಾಟ ಮಾಡಿದ್ದು ನೇಪಾಳ ಮತ್ತು ಭಾರತ ಎರಡು ಕಡೆ. ಲಾರ್ಡ್ ಪಶುಪತಿ ನೇಪಾಳದ ಪ್ರಭಾವಿ ನಾಯಕ. ಅಂತೆಯೇ ಭಗವಾನ್ ಬುದ್ಧ ಕೂಡ. ಪಶುಪತಿನಾಥ ಸ್ವಯಂ ಶಿವ. ಹಿಂದೂಗಳಿಗೆ ಕಾಶಿ ಎಂದರೆ ಪ್ರಾಣ, ಪವಿತ್ರ. ಕಾಶಿಯ ಜನಪ್ರಿಯತೆ ವಿಶ್ವನಾಥನ ಆರಾಧನೆ ಆಚರಣೆಯಲ್ಲಿ. ಹಾಗಾಗಿ ಉತ್ತರ ಪ್ರದೇಶದ ಕಾಶಿ ವಿಶ್ವನಾಥನಿಗೂ ನೇಪಾಳದ ಪಶುಪತಿನಾಥನಿಗೂ ಬಿಡಿಸಲಾರದ ನಂಟು. ಭಗವಾನ್ ಬುದ್ಧ ಹುಟ್ಟಿದ್ದು ನೇಪಾಳದ ಕಪಿಲವಸ್ತುವಿನ ಸಮೀಪದ ಲುಂಬಿನಿ ವನದಲ್ಲಿ. ಆದರೆ ಸಿದ್ಧಾರ್ಥ ಧ್ಯಾನಕ್ಕೆ ಕುಳಿತ ಸ್ಥಳ, ಗೌತಮ ಬುದ್ಧನಾಗಿ ಬೆಳಕು ಕಂಡದ್ದು ಉತ್ತರ ಭಾರತದ ಬಿಹಾರಿನ ಗಯಾದಲ್ಲಿ ತನಗಾದ ತಿಳುವಳಿಕೆ, ಜ್ಞಾನೋದಯವನ್ನು ತನ್ನ ಶಿಷ್ಯರೊಂದಿಗೆ ಹಂಚಿಕೊಂಡದ್ದು ಈ ಮೂಲಕ ಬೌದ್ಧ ಧರ್ಮವನ್ನು ಅಧಿಕೃತವಾಗಿ ಪ್ರಚಾರಕ್ಕೆ ಅಣಿಗೊಳಿಸಿದ್ದು ಉತ್ತರ ಪ್ರದೇಶದ ವಾರಣಾಸಿಗೆ 13 ಕಿ.ಮೀ. ದೂರದ ಸಾರನಾಥದಲ್ಲಿ. ಬುದ್ಧನ ಗುರುಕುಲ ಬೋಧನಾ ಶಾಲೆ ಇಂದಿಗೂ ಪಳೆಯುಳಿಕೆಯ ಮಾದರಿಯಲ್ಲಿ ನೋಡಸಿಗುತ್ತವೆ. ಬುದ್ಧನ ಬಗೆಗಿನ ಅಧ್ಯಯನ, ಶಿವನ ವಿವಿಧ ಅವತಾರ, ಆರಾಧನಾ ನೆಲೆಗಳನ್ನು ಕಾಣಬೇಕೆಂದಿದ್ದರೆ ನೇಪಾಳದೊಂದಿಗೆ ಭಾರತದ ಬುದ್ಧಗಯಾ, ಸಾರನಾಥದಂತೆಯೇ ವಾರಣಾಸಿಯ ವಿಶ್ವನಾಥ ಮಂದಿರವನ್ನು ನೋಡಲೇಬೇಕು. ಅಂತೆಯೇ ಸೀತೆ ಹುಟ್ಟಿದ್ದು ನೇಪಾಳದ ಜನಕ್‌ಪುರವಾದರೆ ಆಕೆ ಐಕ್ಯವಾದದ್ದು ಉತ್ತರ ಪ್ರದೇಶದ ಸೀತಾಮಡುವಿನಲ್ಲಿ. ಇದು ಅಲಹಾಬಾದ್‌ಗೆ 40 ಕಿ.ಮೀ ದೂರದಲ್ಲಿ ದೆಹಲಿ-ಕಲ್ಕತ್ತಾ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾಶಿಯಿಂದ 67 ಕಿ.ಮೀ. ದೂರದಲ್ಲಿದೆ. ಕಾಶಿಯಿಂದ ಅಲಹಾಬಾದ್‌ಗೆ ಹೋಗುವ ಹೆದ್ದಾರಿಯಲ್ಲಿ ಬಲಬದಿಗೆ ತಿರುಗಿ ಒಂದು ಸಣ್ಣ ರಸ್ತೆಯಲ್ಲಿ 7 ಕಿ.ಮೀ. ಕ್ರಮಿಸಿದರೆ ಸೀತೆಮಡು ಸಿಗುತ್ತದೆ. ಇದೊಂದು ಪ್ರವಾಸಿ ಕೇಂದ್ರ. ರಾಮಾಯಣದ ಸೀತೆ ತನ್ನ ಕೊನೆಯನ್ನು

ಕಂಡುಕೊಂಡ ಸ್ಥಳವಿದು. ಸೀತೆ ಸತಿ ಹೋದ ಸ್ಥಳ ಎಂದು ತೋರಿಸುತ್ತಾರೆ. ಮೇಲಿನ ಮಂಟಪದಲ್ಲಿ ಸೀತೆಯ ಮೋಹಕ ವಿಗ್ರಹವಿದ್ದರೆ ಕೆಳಭಾಗದಲ್ಲಿ ಸೀತೆ ಭೂಮಿಯನ್ನು ಸೀಳಿಕೊಂಡು ಧರೆಗಿಳಿಯುವ ಅಪರೂಪದ ದೃಶ್ಯವನ್ನು ಭಿತ್ತಿ ಚಿತ್ರದ ಮೂಲಕ ತೋರಿಸಿದ್ದಾರೆ. ಶಿವಪುರಾಣದಂತೆ ರಾಮಾಯಣಕ್ಕೂ ನೇಪಾಳ-ಭಾರತದ ಕೊಳು-ಕೊಡುಗೆಯ ವೈವಾಹಿಕ, ಧಾರ್ಮಿಕ ಸಂಬಂಧಗಳನ್ನು ಇಲ್ಲಿ ಕಾಣಬಹುದು. ಸಾರನಾಥ ವಿಫುಲ ಆಕರಗಳ, ಬುದ್ಧನ ಬಗೆಗಿನ ಹೆಚ್ಚು ಮಾಹಿತಿ ದೊರೆಯುವ ಸ್ಥಳ.

ಆರಂಭದಲ್ಲಿ ಈ ಊರು ಒಂದು ಕಾಡಿನ ಭಾಗವಾಗಿತ್ತೆಂದೂ ಜಿಂಕೆಗಳು ಇಲ್ಲಿ ಹಿಂಡು ಹಿಂಡಾಗಿ ವಾಸಿಸುತ್ತಿದ್ದವೆಂತಲೂ ಹೇಳಲಾಗುತ್ತದೆ. ಕಾಡಿನ ಭಾಗವಾದುದರಿಂದ ಇಲ್ಲಿ ಋಷಿ ಮುನಿಗಳು ತಂಗಿ, ಧ್ಯಾನಾರೂಢರಾಗುತ್ತಿದ್ದರು. ಹಾಗಾಗಿಯೇ ಋಷಿಯಿಂದ ಇಸಿಲವಾಗಿ ಮುಂದೆ ಇದೇ ಸಾರನಾಥವಾಗಿದೆ ಎಂದು ಇಲ್ಲಿನ ಗೈಡ್ ಬಹದ್ದೂರ್ ಸಿಂಗ್ ವಿವರಿಸುತ್ತಾ ಬಂದರು.

ಸಾರನಾಥದ ಪ್ರಮುಖ ಆಕರ್ಷಣೆ ಬೌದ್ಧ ಸ್ತೂಪ. ಬೌದ್ಧ ಮಂದಿರದ ಪಕ್ಕದಲ್ಲಿಯೇ ಚಂದ್ರನಾಥ ಬಸದಿಯ ಹಿಂಭಾಗಕ್ಕೆ ಇರುವ ಈ ಸ್ತೂಪವನ್ನು ಕ್ರಿ.ಪೂ.500 ರಲ್ಲಿ ನಿರ್ಮಿಸಲಾಗಿದೆ. ಮೌರ್ಯ ವಂಶದ ಅರಸರು ನಿರ್ಮಿಸಿರುವ ಈ ಸ್ತೂಪ 43.6 ಮೀ. ಎತ್ತರ. 28.3 ಮೀ. ವಿಸ್ತೀರ್ಣವನ್ನು ಹೊಂದಿದೆ. ಸ್ತೂಪ ಎರಡು ವಿಶೇಷ ಕಾರಣಗಳಿಂದ ಗಮನ ಸೆಳೆಯುತ್ತದೆ. ಮೇಲ್ಭಾಗ ಬೌದ್ಧ ಧರ್ಮದ ಸಂಕೇತವಾದರೆ, ಸ್ತೂಪದ ಕೆಳಪಾಯದ ಭಾಗದ ರಚನೆ ಅಶೋಕ ಚಕ್ರವರ್ತಿಯ ಆಳ್ವಿಕೆಯನ್ನು ಪ್ರತಿನಿಧಿಸುವುದು. ಚೀನಾ, ಶ್ರೀಲಂಕಾ, ಜಪಾನ್, ಬರ್ಮಾ, ನೇಪಾಳ ಸೇರಿದಂತೆ ವಿದೇಶೀ ಪ್ರವಾಸಿಗರು ತಂಡತಂಡವಾಗಿ ಬಂದು ಹಳದಿ, ಬಿಳಿ ರೇಷ್ಮೆಯ ವಸ್ತುವನ್ನು ಈ ಸ್ತೂಪಕ್ಕೆ ಅರ್ಪಿಸಿ ಮೇಣದ ಬತ್ತಿ ಹಚ್ಚಿ



ಸಾರನಾಥದ ಬುದ್ಧಸ್ತೂಪ

ಧ್ಯಾನಮಗ್ನರಾಗುತ್ತಾರೆ. ಇದರ ಬಲತುದಿಗೆ ಚೌಕಂದಿ ಸ್ತೂಪವಿದೆ. ಈ ಸ್ತೂಪದೊಂದಿಗೆ ಬುದ್ಧನ ನೇರ ಸಂಬಂಧ ಕಲ್ಪಿಸಲಾಗುತ್ತಿದೆ. ಸಾರನಾಥದಲ್ಲಿ ನಿರ್ಮಾಣಗೊಂಡ ಮೊದಲ ಸ್ತೂಪವಿದು. ಗೌತಮ ಬುದ್ಧ ತನಗುಂಟಾದ ಜ್ಞಾನೋದಯದ ತರುವಾಯ ಬುದ್ಧಗಯೆಯಿಂದ ನೇರವಾಗಿ ಇಲ್ಲಿನ ಜಿಂಕೆ ವನಕ್ಕೆ ಬಂದನು. ಬುದ್ಧನನ್ನು ಅನುಸರಿಸಿ ಕೆಲವು ಶಿಷ್ಯರೂ ಬಂದರು. ಆ ಶಿಷ್ಯರಿಗೆ ಬುದ್ಧನು ಬೋಧಿಸಿದ ಪಾಠವೇ ಬೌದ್ಧ ತತ್ವಗಳು. ಬುದ್ಧನ ಬೋಧನೆಯ ಸಾರವೇ ಬೌದ್ಧ ಧರ್ಮ. ಬುದ್ಧನು ಬೋಧಿಸಿದ ಸ್ಥಳದ ಐತಿಹ್ಯ ವಾಗಿ ಗುಪ್ತರ ಕಾಲದಲ್ಲಿ ಸಾರನಾಥದಲ್ಲಿ ನಿರ್ಮಾಣ ಗೊಂಡ ಮೊದಲ ಸ್ತೂಪ ಇದಾಗಿದೆ. ಕ್ರಿ.ಪೂ.4-5 ನೇ ಶತ ಮಾನಗಳಲ್ಲಿಯೇ ನಿರ್ಮಾಣವಾಗಿದ್ದು ನಂತರದ ಕಾಲಘಟ್ಟ ದಲ್ಲಿ ಮೊಘಲರ ಆಳ್ವಿಕೆಯ ಸಂದರ್ಭದಲ್ಲಿ ಚೌಕಾ ಕೃತಿಯ ಸ್ತೂಪವನ್ನು ಅಷ್ಟಾಕಾರ ದಲ್ಲಿ ನಿರ್ಮಿಸಲಾಗಿದೆ ಎಂದು ಗೈಡ್ ಕೊಂಚ ಭಾವುಕರಾಗಿಯೇ ವಿವರಣೆ ನೀಡುತ್ತಾ ಹೋದರು. ಹಿಂದಿ, ಇಂಗ್ಲೀಷ್ ಎರಡೂ ಭಾಷೆಗಳಲ್ಲೂ ಸ್ಪುಟವಾಗಿ ಮಾಹಿತಿ ನೀಡುತ್ತಿರುವ ಇಲ್ಲಿನ ಗೈಡ್ ಬಹದ್ದೂರ್ ಸಿಂಗ್ ಉತ್ತಮ ಶಿಕ್ಷಕನ ಚಾಕಚಕ್ಯತೆ ಹೊಂದಿದ್ದಾರೆ.

ಸಾರನಾಥನ ಬಸ್ ನಿಲ್ದಾಣದಿಂದ 100 ಮೀ. ಅಂತರದಲ್ಲಿ ಬೌದ್ಧ ಮಂದಿರವಿದೆ. ಬೋಧಿವೃಕ್ಷದ ಕೆಳಗೆ ಧ್ಯಾನಾಸಕ್ತ ಬುದ್ಧ ಹಾಗೂ ಶಿಷ್ಯರಿಗೆ ಬೋಧನೆ ಮಾಡುತ್ತಿರುವ



ಗೌತಮನು ಬುದ್ಧನಾಗಿ ಮೊದಲು ಉಪದೇಶಿಸಿದ ಸ್ಥಳ ಬೋಧಿವೃಕ್ಷ

ಬುದ್ಧ ಈ ಎರಡೂ ಚಿತ್ರಗಳು ವಿಶೇಷ ಗಮನಸೆಳೆಯುತ್ತವೆ. ಧ್ಯಾನಾಸಕ್ತ ಬುದ್ಧನ ಪ್ರತಿಮೆ ಜ್ಞಾನೋದಯದ ಸಂಕೇತವಾದರೆ ಬೋಧನೆ ಮಾಡುತ್ತಿರುವ ಬುದ್ಧನ ಪ್ರತಿಮೆ, ಬುದ್ಧ ತನಗುಂಟಾದ ಜ್ಞಾನೋದಯದ ವಿವೇಕವನ್ನು ಶಿಷ್ಯರಿಗೆ ಬೋಧಿಸುತ್ತಿರುವ ಸಂಕೇತವಾಗಿದೆ.

ಸಾರನಾಥದ ಮತ್ತೊಂದು ವಿಶೇಷ ಬಹುದೊಡ್ಡ ಬೋಧಿವೃಕ್ಷ. ಇದನ್ನು ಸ್ವತಃ ಬುದ್ಧನೇ ನೆಟ್ಟದ್ದು ಎಂದು ಹೇಳಲಾಗುತ್ತದೆ. ಮೂಲ ಮರ ಬಿದ್ದು, ಅದರ ಕಾಂಡ, ಬೇರು ಚಿಗುರಿ ಮರವಾಗುತ್ತಾ ಗುಡುಗು-ಮಳೆ, ಚಳಿ-ಗಾಳಿಗೆ ಬೆತ್ತಲಾಗಿ ಭದ್ರವಾಗಿ ನಿಂತಿದೆ. ಇದು ಬುದ್ಧನ ತತ್ವಗಳಷ್ಟೇ ಗಟ್ಟಿ ಎಂಬ ನಂಬಿಕೆ ಸಾರನಾಥದ ಪರಿಸರದಲ್ಲಿದೆ. ಬುದ್ಧನ ಕುರುಹು ಎಂದು ನಂಬಿರುವ ಬೋಧಿವೃಕ್ಷಗಳು ಪ್ರಪಂಚದ ಮೂರು ಕಡೆ ಮಾತ್ರ ಇಂದಿಗೂ ಇವೆ. ಅವು ಮೂಲದವೋ ಅದರ ಕುಡಿಯೊಡೆದ ಕಳ್ಳುಬಳ್ಳಿಯವೋ ಎಂಬುದನ್ನು ಸಸ್ಯವಿಜ್ಞಾನಿಗಳು ಹೇಳಬೇಕು! ಮೊದಲ ಬೋಧಿವೃಕ್ಷ ಬುದ್ಧನ ಜ್ಞಾನಕೇಂದ್ರ ಬುದ್ಧಗಯೆಯಲ್ಲಿದೆ. ಎರಡನೆಯದು ಬುದ್ಧನು ಬೌದ್ಧಧರ್ಮ ಬೋಧಿಸಿದ ಮೊದಲ ಸ್ಥಳ ಸಾರನಾಥದಲ್ಲಿದೆ. ಮೂರನೆಯದು ಬುದ್ಧನ ತತ್ವಪ್ರಸಾರ ಮಾಡಿದ ಸಾಮ್ರಾಟ್ ಅಶೋಕನ ಮಗಳು ಸಂಘಮಿತ್ರೆ ಶ್ರೀಲಂಕಾದಲ್ಲಿ ನೆಟ್ಟ ಬೋಧಿವೃಕ್ಷವಾಗಿದೆ. ಸಾರನಾಥದ ಬೋಧಿವೃಕ್ಷ ವಿಶಾಲವಾಗಿ ಹರಡಿದ್ದು ಅದರ ಬದಿಗೆ ಕಟ್ಟೆಯನ್ನು ಕಟ್ಟಲಾಗಿದೆ. ತಂಡ ತಂಡವಾಗಿ ಬರುವ ಯಾತ್ರಾರ್ಥಿಗಳು ಈ ಮರದ ಕೆಳಗೆ ಕುಳಿತು ಧ್ಯಾನಮಗ್ನರಾಗುವುದು ಸಾರನಾಥದ ವಿಶೇಷವಾಗಿದೆ.


## ಮಹಾಮೂರ್ತಿಯ ಮಹಾನ್ ಚಿತ್ರಣ:

ಸಾರನಾಥದ ಮತ್ತೊಂದು ಆಕರ್ಷಣೆ 80 ಅಡಿ ಎತ್ತರದ ಬುದ್ಧಮೂರ್ತಿಯದು. ಅಫ್‌ಘಾನಿಸ್ತಾನದಲ್ಲಿ ತಾಲಿಬಾನಿಗಳು ಧ್ವಂಸ ಮಾಡಿ ವಿರೂಪಗೊಳಿಸಿದ್ದ ಬುದ್ಧ ಪ್ರತಿಮೆಗೆ ಪ್ರತಿರೂಪ ಎಂಬಂತೆ ಈ ಬೃಹತ್ ಪ್ರತಿಮೆಯನ್ನು ನಿರ್ಮಿಸಲಾಗಿದೆ. ವಿವಿಧ ಬಗೆಯ 280 ಕಲ್ಲಿನ ತುಂಡುಗಳನ್ನು ಜೋಡಿಸಿ, 15 ವರ್ಷಗಳ ಕಾಲ ನಿರಂತರ ಕೆಲಸಗಳಿಂದ ಈ ಮೂರ್ತಿಯನ್ನು ನಿರ್ಮಿಸಲಾಗಿದೆ. ಬುದ್ಧಗಯಾ ನೋಡಿಕೊಂಡು ನೇರವಾಗಿ ಸಾರನಾಥಕ್ಕೆ ಬರುವ ಯಾತ್ರಾರ್ಥಿಗಳು ಈ ಬುದ್ಧ ಮಂದಿರದ ಬುದ್ಧನ ಪ್ರತಿಮೆಯ ಎದುರು ಭಾವಪರವಶವಾದವರಂತೆ ಧ್ಯಾನಮಗ್ನರಾಗುವುದನ್ನು ಇಲ್ಲಿ ವಿಶೇಷವಾಗಿ ಕಾಣಬಹುದು. ಅರ್ಧ ದಿನ ಕಳೆದ ನಮ್ಮ ಪ್ರವಾಸಿ ತಂಡ ಬುದ್ಧನ ಬೋಧನೆಯ ಸ್ಥಳ, ಬುದ್ಧನ ವಸತಿ ಗೃಹ, ಶಿಷ್ಯರ ವಾಸಗೃಹ ಇವುಗಳ ಪಳೆಯುಳಿಕೆಯ

ದಿಬ್ಬದ ಮೇಲೆ ಕುಳಿತು ಚರ್ಚೆ ಮಾಡುತ್ತಿದ್ದೆವು. ಡಾ.ಸದಾಶಿವಯ್ಯನವರು ಬುದ್ಧ ಹಾಗೂ ಆತನ ಕಾಲದ ಗುರುಶಿಷ್ಯ ಪರಂಪರೆಯ ಬಗೆಗೆ ಮಾಹಿತಿ ನೀಡುತ್ತಿದ್ದರು. ಹಲವು ಗುಂಪುಗಳಲ್ಲಿ ಚೆಲ್ಲಿಕೊಂಡ ನಮ್ಮ ಟೀಮ್ ಸಾರನಾಥದ ವಿಶಾಲ ಬೌದ್ಧ ಸಾಮ್ರಾಜ್ಯದಲ್ಲಿ ವಿಹರಿಸುತ್ತಿದ್ದರು.

ನಾನು ಚರಿತ್ರೆಯ ವಿದ್ಯಾರ್ಥಿ ಯಾದುದರಿಂದ ಬುದ್ಧನ ಅಶೋಕ ಸ್ತಂಭ ಸಾರನಾಥದ ಮ್ಯೂಜಿಯಂ ನಲ್ಲಿದೆ ಎಂದು ತಿಳಿದಿದ್ದೆ. ಸಾರನಾಥದ ಬಸ್‌ನಿಲ್ದಾಣದ ಎಡಬದಿಗೆ ಬೌದ್ಧವಿಹಾರದ ಎದುರಿಗೆ ಒಂದು ಅಪರೂಪದ ವಸ್ತು ಪ್ರದರ್ಶನವಿದೆ. ರೂ.5 ನೀಡಿದರೆ ಅದರೊಳಗೆ ಪ್ರವೇಶಿಸಬಹುದು. ಭಾರತದ ಪುರಾತತ್ವ ಇಲಾಖೆಯವರು 1910 ರಲ್ಲಿ ನಿರ್ಮಿಸಿದ್ದಾರೆ. ಬಿಹಾರ, ನೇಪಾಳ, ಕರ್ನಾಟಕದ ಕುಶಾಲನಗರ ಬಳಿಯ ಬೈಲಕುಪ್ಪೆಯ ಟಿಬೇಟಿಯನ್ ಕಾಲೋನಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ, ಧಾರವಾಡ ನಡುವಿನ ಮುಂಡಗೋಡು ಟಿಬೆಟಿಯನ್ ಕ್ಯಾಂಪ್‌ನ ಬೌದ್ಧಸ್ತೂಪ ಹಾಗೂ ವಸ್ತು ಪ್ರದರ್ಶನಕ್ಕೆ ಹೊರತಾದ ಮ್ಯೂಜಿಯಂ ಇದಾಗಿದೆ. ಬೌದ್ಧ ವಿಹಾರದ ಮಾದರಿಯಲ್ಲಿಯೇ ಈ ವಸ್ತು ಸಂಗ್ರಹಾಲಯ ನಿರ್ಮಾಣಗೊಂಡಿದೆ.

ಸಾರನಾಥದ ಈ ಮ್ಯೂಸಿ ಯಂನಲ್ಲಿ ಐದು ಗ್ಯಾಲರಿಗಳಿವೆ. ಕ್ರಿ.ಶ.3-4 ನೇ ಶತಮಾನದಿಂದ ಆರಂಭಿಸಿ 12ನೇ ಶತಮಾನದ ತನಕ ಬುದ್ಧನ ವಿವಿಧ ಪ್ರತಿಮೆ ಗಳು ಮೋಹಕವಾಗಿವೆ. ದೇಶ-ವಿದೇಶಗಳ ಶೈಲಿಯನ್ನು ಇಲ್ಲಿ ಕಾಣಬಹುದಾಗಿದೆ. ಚಿತ್ರಪಟಗಳು,



**80 ಅಡಿ ಎತ್ತರದ ಬುದ್ಧ ಮೂರ್ತಿ, ಸಾರನಾಥ**

ಕ್ಯಾನ್ವಾಸ್ ಮೇಲೆ ಬಿಡಿಸಿರುವ ಅಪೂರ್ವವೆಂದೆನಿಸುವ ವರ್ಣರಂಜಿತ ಚಿತ್ರಗಳು ಗಮನ ಸೆಳೆಯುತ್ತವೆ. ಬುದ್ಧನು ಬಳಸುತ್ತಿದ್ದ ಊಟದ ತಟ್ಟೆ, ಕುಡಿಕೆ, ಆಭರಣ, ಆ ಕಾಲದ ಕುಡುಗೋಲು, ಆಯುಧಗಳನ್ನು ಇಡಲಾಗಿದೆ. ಪಾಲಿ ಭಾಷೆಯ ಹಲವು ಶಾಸನಗಳು ಬೇರೆ ಬೇರೆ ಕಡೆ ದೊರೆತ ಬುದ್ಧನ ಕಾಲದ ಸ್ಮಾರಕಗಳನ್ನು ಇಲ್ಲಿ ಒಪ್ಪವಾಗಿ ಜೋಡಿಸಿಡಲಾಗಿದೆ.

ಮ್ಯೂಸಿಯಂನ ವಿಶೇಷ ಆಕರ್ಷಣೆ ಅಶೋಕಚಕ್ರ, ಭಾರತದ ರಾಷ್ಟ್ರೀಯ ಲಾಂಛನ, ಅಶೋಕ ಚಕ್ರವನ್ನು ಒಂದು ಬಂಡಿಗಾಡಿಯ ಚಕ್ರದ ಹಾಗೆ ಗೋಡೆಗೆ ಒರಗಿಸಿ ನಿಲ್ಲಿಸಲಾಗಿದೆ. ಈ ಮ್ಯೂಸಿಯಂನ ವಿಶೇಷ ಆಕರ್ಷಣೆಯೂ ಇದೇ ಆಗಿದೆ. ಇದಕ್ಕೆ ಕಂದು ಬಣ್ಣದ ಲೇಪನದಿಂದಾಗಿ ಈ ಚಕ್ರ ಹೊಸದು ಎಂಬಂತೆ ಭಾಸವಾಗುತ್ತದೆ. 3.30 ರ ಸಮಯಕ್ಕೆ ನಾವು ಪ್ರಯಾಣ ಮಾಡಬೇಕಾಗಿದ್ದ ವಿಮಾನ ವಾರಣಾಸಿಯ ಲಾಲ್ ಬಹದ್ದೂರ್‌ಶಾಸ್ತ್ರಿ ವಿಮಾನ ನಿಲ್ದಾಣವನ್ನು ಬಿಡುವುದಾಗಿ ಅದಕ್ಕೂ ಮೊದಲು ನಾವು ಅಲ್ಲಿರಬೇಕೆಂದು ನಮ್ಮ ನಾಯಕರಾದ ಜೆಪಿ ನೆನಪಿಸುತ್ತಲೇ ಇದ್ದರು. ನಾನು ಆತುರಾತುರವಾಗಿ ಮ್ಯೂಸಿಯಂ ನೋಡಿಕೊಂಡು ಓಡಿಹೋಗಿ ನಮ್ಮ ಬಸ್ ಹತ್ತಿದೆ. ನಮ್ಮ ಮಹಿಳಾ ತಂಡದವರು ಶಾಪಿಂಗ್‌ನಲ್ಲಿ ತೊಡಗಿದ್ದರಿಂದ ನನಗೂ ಮ್ಯೂಸಿಯಂ ನೋಡಲು ಅನುಕೂಲವಾದುದು ನನ್ನ ಭಾಗ್ಯವೆಂದೇ ಭಾವಿಸಿದ್ದೇನೆ. ಪ್ರೊ॥ ಶೈಲಕುಮಾರಿ, ಪ್ರೊ॥ ಮಂಜುಳ, ಪ್ರೊ॥ ಮಮತ ಇನ್ನೂ ಸಾರನಾಥದ ಸೀರೆಯ ಖರೀದಿಯ ಮೂಡಿನಲ್ಲಿಯೇ ಇದ್ದರು. ಬಸ್ ಹೊರಟಾಗ ಎಲ್ಲರೂ ಬಂದು ಕುಳಿತುಕೊಂಡರು. 2.45 ಕ್ಕೆ ನಾವೆಲ್ಲ ವಾರಣಾಸಿಯ ಲಾಲ್ ಬಹದ್ದೂರ್ ಶಾಸ್ತ್ರಿ ಅಂತರರಾಷ್ಟ್ರೀಯ ವಿಮಾನನಿಲ್ದಾಣ ತಲುಪಿದೆವು. ಸಮಯ ಮೀರಿದ್ದರಿಂದ ವಿಮಾನ ನಿಲ್ದಾಣದ ಕ್ಯಾಂಟೀನ್, ಬೇಕರಿಗಳಲ್ಲಿ ಮಧ್ಯಾಹ್ನದ ಊಟದ ಕಾರ್ಯವೂ ನಡೆದುಹೋಯಿತು. ತಪಾಸಣೆ ಮುಗಿದು 3.30 ಕ್ಕೆ ನಾವು ದೆಹಲಿ, ಗುಜರಾತ್ ಮಾರ್ಗವಾಗಿ ಬಾಂಬೆ ತಲುಪಬೇಕಾಗಿದ್ದ ಸ್ಪೈಸ್‌ಜೆಟ್ ವಿಮಾನದಲ್ಲಿ ಪ್ರಯಾಣ ಬೆಳೆಸಿದೆವು.

೧೪

# ಭಕ್ತಾಪುರ ಎಂಬ ದೇವಾಲಯಗಳ ಊರು

ಭಕ್ತಾಪುರ ನೇಪಾಳದ ಪ್ರಮುಖ 'Living Heritage' ಎಂದೇ ಕರೆಸಿಕೊಂಡಿದೆ. ಕಠ್ಮಂಡುವಿನಿಂದ ಪೂರ್ವಕ್ಕೆ ಸುಮಾರು 14 ಕಿ.ಮೀ. ದೂರದಲ್ಲಿದೆ. ಕಠ್ಮಂಡುವಿನಿಂದ ತ್ರಿಭುವನ್ ವಿಮಾನ ನಿಲ್ದಾಣ ದಾಟಿದರೆ ಭಕ್ತಾಪುರ ಸರಹದ್ದು ಪ್ರಾರಂಭ. ನೇಪಾಳ ದೇಶದಲ್ಲಿ ಹೆಚ್ಚು ತರಕಾರಿ ಬೆಳೆಯುವ ಪ್ರದೇಶ. ಭಾಗಮತಿ ನದಿಯ ಮುಖಜ ಭೂಮಿ, ಇದ್ದುದರಲ್ಲಿ ನೇಪಾಳ ದೇಶದ ಅತಿ ಹೆಚ್ಚು ಫಲವತ್ತಾದ ಭೂಮಿ ಈ ಭಕ್ತಾಪುರ ಪರಿಸರದಲ್ಲಿದೆ. ಹಾಗಾಗಿ ಇಲ್ಲಿನ ಶೇ.55 ರಷ್ಟು ಬದುಕು ಬೇಸಾಯದಿಂದ ಕೂಡಿದೆ. ಎತ್ತ ನೋಡಿದರೂ ಪಾಲಕ್, ದಂಟು, ಕೊತ್ತಂಬರಿ, ಬದನೆ, ಮೂಲಂಗಿ, ಕಬ್ಬು, ಸಾಸಿವೆ, ಭತ್ತದ ಮಡಿ, ಅವರೆ, ಕುಂಬಳ, ಸೋರೆ, ಆಲೂ ಧಾರಾಳವಾಗಿ ಕಾಣುತ್ತವೆ. ಪುಟ್ಟ-ಪುಟ್ಟ ಮನೆಗಳ ಮುಂದೆ ಹಾದಿ ಬದಿಯಲ್ಲೂ ಪುಟ್ಟಮಡಿ, ಅಲ್ಲೊಂದು ತರಕಾರಿ ಇಲ್ಲವೇ ಸಾಸಿವೆಯ ಕೃಷಿ. ಇದು ಭಕ್ತಾಪುರದ ಪರಿಸರದ ವಿಶೇಷ.

ಭಕ್ತಾಪುರ ಹೆಸರೇ ಹೇಳುವಂತೆ ಭಕ್ತಿ-ಭಾವಗಳ ಸಂಕೀರ್ಣ, 25 ಎಕರೆ ವಿಶಾಲ ಜಾಗದಲ್ಲಿ ಒಟ್ಟು ಭಕ್ತರದೆ ಅರಮನೆ, ನೂರೆಂಟು ದೇವಾಲಯ, ಎರಡು ವಸ್ತು ಪ್ರದರ್ಶನ, ದರ್ಬಾರ್, ನವರಂಗ್, ನೃತ್ಯಮಂಟಪ ಈ ಎಲ್ಲವೂ ಪಳೆಯುಳಿಕೆಯಂತೆ ಕಳೆದ ವೈಭವಕ್ಕೆ ಸಾಕ್ಷಿ ನುಡಿಯುತ್ತವೆ. 143 ಅಡಿ ಎತ್ತರದ ಶಿವನ ಮೂರ್ತಿ ಆಕರ್ಷಕವಾಗಿದ್ದು ವಿಶ್ವದಲ್ಲಿಯೇ ಏಕೈಕ ಮೂರ್ತಿ ಎಂದು ಅಲ್ಲಿನ ಗೈಡ್ ಹೇಳುತ್ತಾರೆ.

17ನೇ ಶತಮಾನದಿಂದ ಆರಂಭವಾಗುವ ಇಲ್ಲಿನ ಚಾರಿತ್ರಿಕ ಸಂಗತಿ ಮೊದಲಿಗೆ ಕಠ್ಮಂಡುವಿನ ಭಾಗವೇ ಆಗಿತ್ತು. ನಂತರ ಗೊಂದಲ, ಕಲಹದಿಂದಾಗಿ ಪ್ರತ್ಯೇಕ ಪಶುಪತಿನಾಥನೂ ಸೇರಿದಂತೆ ಕಠ್ಮಂಡು ಮೀರಿಸುವ ರೀತಿಯಲ್ಲಿ ಭಕ್ತಾಪುರವನ್ನು ನಿರ್ಮಿಸಲಾಗಿದೆ ಎಂದು ಗೈಡ್ ಹೇಳುತ್ತಾ ಹೋದರು. ಕ್ರಿ.ಶ.899 ರಲ್ಲಿ ಆನಂದಮಲ್ಲ



ಭಕ್ತಾಪುರ ದೇವಾಲಯ

ರಾಜನಿಂದ ಈ ನಗರ ಸ್ಥಾಪನೆಗೊಂಡು, 10ನೆಯ ರಾಜ ಭೂಪತೇಂದ್ರ ಮಲ್ಲನ ತನಕ ಭಕ್ತಾಪುರ ವೈಭವದಿಂದ ಮೆರೆಯಿತು. 1769 ರಲ್ಲಿ ಶಾಹ ರಾಜವಂಶದ ಆಳ್ವಿಕೆ ಭಕ್ತಾಪುರದ ಭಕ್ತಿ ಸಾಮ್ರಾಜ್ಯದ ವಿಜೃಂಭಣೆಗೆ ಪ್ರೇರಕವಾಯಿತು. ರಾಜ ಭೂಪತೇಂದ್ರಮಲ್ಲನ ಕಾಲದಲ್ಲಿ ನಿರ್ಮಿಸಿರುವ ಭಕ್ತಾಪುರ ದರ್ಬಾರ್ ಚೌಕ 55 ಕಿಟಕಿಗಳ ದರ್ಬಾರ್ ಹಾಲ್, ಅಲ್ಲಿನ ಕುಸುರಿ ಕೆಲಸ, ಮರದ ಜೋಡಣೆ, ಮೋಹಕವಾಗಿದೆ. ಇಷ್ಟೊಂದು ತರಾವರಿ ಕೆತ್ತನೆ, ಉತ್ತಮ ಜಾತಿಯ ಮರಗಳನ್ನು ಬಳಸಿರುವುದು, ಅವುಗಳಲ್ಲಿ ಒಂದು ಸೂಜಿ ಮೊನೆಯಷ್ಟೂ ಸ್ಥಳ ಬಿಡದೆ ಬಿಡಿಸಿರುವ ವೈವಿಧ್ಯ ಕೌಶಲ ಕಲೆಗಾರಿಕೆ ಚಿತ್ತಾಕರ್ಷಕವಾಗಿದೆ. ಒಂದು ನಗರವನ್ನು ಒಟ್ಟುಗೂಡಿಸಿ, ಅದರ ಮೂಲಕ ಹೊರ-ಒಳಗೆ ಪ್ರವೇಶಕ್ಕೆ ಸಾಧ್ಯವಾಗುವಂತೆ ನಿರ್ಮಿಸಿರುವ ಈ ಅರಮನೆ ಮೈದಾನ ಸಂಪೂರ್ಣ ದೇವರುಗಳ, ರಾಜನ ವಿಲಾಸಿ ಬಂಗಲೆಗಳ ತಾಣ. ಇಲ್ಲಿನ ಮುಖ್ಯ ದ್ವಾರದಲ್ಲಿಯೇ ರಾಜಾ ರಣಜೀತ್‌ಮಲ್ಲ ನಿರ್ಮಿಸಿರುವ ಸ್ವರ್ಣದ್ವಾರ. ಇದನ್ನು ಗೋಲ್ಡನ್ ಗೇಟ್ ಎಂದು ಕರೆಯುತ್ತಾರೆ. ಈ ಸ್ವರ್ಣಮಂದಿರದ ಎಡಬದಿಗೆ ರಾಜರ ಅರಮನೆ, ಅದರಲ್ಲೇ ದರ್ಬಾರ್ ಹಾಲ್. ಬಾಲ್ಕನಿಯಲ್ಲಿ ಮರದಿಂದಲೇ ತಯಾರಿಸಿದ ಚಿತ್ರಗಳು, ಕುಸುರಿ ಕಲೆಯ ಮೋಹಕತೆ ಇವು ವಿಶ್ವಕಲೆಯಲ್ಲಿ ಸ್ಥಾನ ಪಡೆದಿವೆ. ಕಲ್ಲಿನಲ್ಲಿಯೇ ನಿರ್ಮಿಸಿರುವ ಬೃಹತ್ ನರಸಿಂಹ, ಭೈರವ, ಹನುಮಾನ್, ಲಕ್ಷ್ಮೀನಾರಾಯಣ, ಶಿವ-ಪಾರ್ವತಿ, ಗಣಪತಿ

ಶಿಲ್ಪಗಳು ತುಸು ದಪ್ಪವಾದರೂ ಆಕರ್ಷಕವಾಗಿವೆ. ಇಲ್ಲಿನ ದುರ್ಗಾ, ವತ್ಸಲಾದೇವಿ, ತಲೇಜುದೇವಿ ಮಂದಿರ ಅವುಗಳ ಚೌಕಾಕೃತಿಯ ವರ್ಣಶಾಲೆಯ ವಿಶೇಷ ಬಾಗಿಲುಗಳ ಶೈಲಿ, ಮಂಟಪ ಶಾಲೆ ಬಹು ಆಕರ್ಷಕ. ಇಲ್ಲಿನ ಲೋಹದ ವಿಶಾಲ ಗಂಟೆ ಗಮನ ಸೆಳೆಯುತ್ತದೆ. ದೇವಮಂದಿರದ ದ್ವಾರಬಾಗಿಲು ಸಂಪೂರ್ಣ ಬಂಗಾರದ ಕವಚಗಳಿಂದಲೇ ನಿರ್ಮಿಸಲಾಗಿದೆ. ಇಂದಿಗೂ ಪೊಲೀಸರ ಬಲವಾದ ಕಾವಲು ಪಡೆ ದ್ವಾರದ ಬಳಿಯಿದೆ. ಇಲ್ಲಿಯ ದುರ್ಗಾದೇವಿ ಮಂದಿರ, ಅದರ ಎದುರಿಗೆ ಪುಟ್ಟ ಪುಷ್ಕರಣಿ, ಅದರ ಕಲಾತ್ಮಕ ಕಲ್ಲು ಕಟ್ಟಡ, ತೊಟ್ಟಿ ಮನೆಯ ಆಕೃತಿಯಲ್ಲಿ ನಿರ್ಮಿಸಲಾಗಿದೆ. ಇಡೀ ದುರ್ಗಾಮಂದಿರ ಲಕ್ಷಲಕ್ಷ ಮರಗಳ ದಿಮ್ಮಿಯಿಂದಲೇ ಕಂಬ ಸಾಲಿನ ಮಾದರಿಯಲ್ಲಿ ನಿರ್ಮಿಸಲಾಗಿದೆ. ಅಲ್ಲೆಲ್ಲಾ ಭಾಗವತ ಸಂಬಂಧಿ ಚಿತ್ರಗಳನ್ನು ಕೆತ್ತಲಾಗಿದೆ. ಇಲ್ಲಿನ ದುರ್ಗಾದೇವಿಯ ಪೂಜೆ ವರ್ಷಕ್ಕೊಮ್ಮೆ ಮಾತ್ರ ನಡೆಯುತ್ತದೆ. ದೇವಿಯ ಬಾಗಿಲಿಗೆ 108 ಕೋಣಗಳ ಬಲಿ ಅರ್ಪಿಸಿ ದೇವಿಯ ಬಾಗಿಲು ತೆರೆಯಲಾಗುವುದು. ಈ ದಿನ ಹೆಚ್ಚು ಹೆಚ್ಚು ಮಾಂಸವನ್ನು ಜನರಿಗೆ ಯಾರು ಹಂಚುತ್ತಾರೋ ಅವರು ಚುನಾವಣೆಯಲ್ಲಿ ವಿಜಯಿಯಾಗುತ್ತಾರೆಂಬ ನಂಬಿಕೆಯೂ ಈ ಮಂದಿರಕ್ಕೆ ಸಂಬಂಧಿಸಿದಂತೆ ಬಲವಾಗಿದೆ.

ಅರಮನೆಯ ಮಧ್ಯಭಾಗದಲ್ಲಿ ಬಲರಾಮ, ಲಕ್ಷ್ಮೀನಾರಾಯಣ, ಶಿವ, ಗಣಪತಿಯರ ದೇವಾಲಯಗಳೂ, ಅವುಗಳ ಮೇಲೆ ಬೃಹತ್ತಾಗಿಯೇ ಬಿಡಿಸಿರುವ ಕಲಾಕೃತಿ ಗಮನ ಸೆಳೆಯುತ್ತವೆ. ಇವು ಭಾರತದ ಚೋಳರ ಕಲಾ ಶೈಲಿಯನ್ನು ನೆನಪಿಸುವಂತಿವೆ. ಬೃಹಸ್ಪತಿ, ತುಂಬುರ-ನಾರದರು, ವಾಲ್ಮೀಕಿಯ ಚಿತ್ರಗಳನ್ನು ಕಾಣಬಹುದು. ಈ ಅರಮನೆಯ ಕೊನೆಯ ಭಾಗದ ಕಾಂಪೌಂಡಿಗೆ ಅಂಟಿಕೊಂಡಂತಿರುವ ಸರಸ್ವತಿ ಮಂದಿರ, ಅದರ ಹೊರಮೈ ಸಂಪೂರ್ಣ ಕಾಮಕೇಳಿಯ, ರತಿ-ಮನ್ಮಥರ ತರಾವರಿ ಶೃಂಗಾರ ಚಿತ್ರಗಳು, ಶೃಂಗಾರ-ಕಾಮಕೇಳಿಯ ಬಗೆಬಗೆಯ ಆಸನ, ವಿಧಾನಗಳನ್ನು, ವಾತ್ಸಾಯನನ ಕಾಮಸೂತ್ರವನ್ನು ನಾಚಿಸುವಂತೆ ಬಿಡಿಸಲಾಗಿದೆ.  ಈ ಎಲ್ಲವೂ ಮರದಿಂದಲೇ ಕೆತ್ತಿರುವುದು ಇಲ್ಲಿನ ವಿಶೇಷವಾಗಿದೆ.

ಇದರ ಎದುರಿಗಿರುವ ಲಕ್ಷ್ಮೀನಾರಾಯಣನ ಭವ್ಯ ಮೂರ್ತಿಯನ್ನು 'Tallest temple' ಎಂದು ಕರೆಯುತ್ತಾರೆ. ಇದನ್ನು ದೊರೆ ಭೂತೇಂದ್ರಮಲ್ಲ ನಿರ್ಮಿಸಿದನೆಂದು ಹೇಳಲಾಗುತ್ತದೆ. ಭಕ್ತಾಪುರದ ಅರಮನೆಯ ಸಮುಚ್ಚಯ ಇಂದು ಭಕ್ತಾಪುರದ ಪುರಸಭೆಯ ಕಛೇರಿ, ಆಸ್ಪತ್ರೆ, ಅಂಚೆ ಕಛೇರಿ, ಹೈಸ್ಕೂಲ್ ಪೊಲೀಸ್ ಸ್ಟೇಷನ್‌ಗಳಾಗಿವೆ. ಮಹಾರಾಜರ ಅರಮನೆ ಪ್ರವಾಸಿಗರ ಭರ್ಜರಿ ರೆಸ್ಟೋರೆಂಟ್ ಆಗಿದೆ. ಕಲೆ, ಕಲಾವಿದರು,

ಇಲ್ಲಿನ ನಿಸರ್ಗವನ್ನು ಇಂದು ನಿರ್ಮಿಸುವುದಕ್ಕೆ ಆಗದಿದ್ದರೂ, ಅವುಗಳ ರಕ್ಷಣೆಯ ಹೊಣೆಗಾರಿಕೆಯನ್ನು ಮುಂದಿನ ತಲೆಮಾರು ಮಾಡುತ್ತಿಲ್ಲ. ಇದು ನೇಪಾಳಕ್ಕೆ ಮಾತ್ರವಲ್ಲ ಭಾರತದ ಪ್ರಖ್ಯಾತ ವಾಸ್ತುಶಿಲ್ಪ, ಕಲಾಮಂದಿರ ಪ್ರಕೃತಿ ತಾಣಗಳಿಗೂ ಅನ್ವಯವಾಗುತ್ತದೆ. ಅದೇಕೋ ಭಕ್ತಾಪುರದ ಅರಮನೆಗೆ ಪ್ರವೇಶ ಶುಲ್ಕವನ್ನು ವಿಧಿಸಿದ್ದಾರೆ. ವಿದೇಶೀಯರಿಗೆ 250 ರೂ, ದೇಶೀಯರಿಗೆ 100 ರೂ. ಯೋಗಾಯೋಗ ಭಾರತೀಯರನ್ನು ದೇಶೀಯರು ಎಂದೇ ಭಾವಿಸಿರುವ ಈ ಅರಮನೆಯ ಆಡಳಿತ, ಭಾರತೀಯರಿಗೂ 100 ರೂ. ಪ್ರವೇಶ ಧನ ವಿಧಿಸುತ್ತಾರೆ. ಭಕ್ತಾಪುರ ಹಾಗೂ ಕಠ್ಮಂಡುವಿನ ಪೌರರಿಗೆ ಪ್ರವೇಶಧನವಿಲ್ಲ. ಕಾರಣ ಆಡಳಿತ ಕಛೇರಿಗಳೆಲ್ಲಾ ಇರುವುದು ಅರಮನೆಯ ಒಳಗೆ ಹಾಗಾಗಿ ಒಳಗೆ ಹೋಗಿಬರಬಹುದು.

ಭಕ್ತಾಪುರದ ಕರಕುಶಲತೆಯನ್ನು ಮರೆಯುವಂತಿಲ್ಲ. ಮಣ್ಣಿನ ಮಡಕೆ, ಅವುಗಳಿಗೆ ಬಳಸುತ್ತಿರುವ ಕಲಾತ್ಮಕ ಚಿತ್ರಗಳು, ಪ್ರಾಚೀನ ಶೈಲಿಯ ಅನುಕರಣೆ, ವಿಶಿಷ್ಟ ಚಿತ್ರಶೈಲಿ ಮೋಹಕವಾಗಿವೆ. ಈ ಬಗೆಯ ಮಡಕೆ ತಯಾರಿಸುವ ಕುಂಬಾರರ ಕೇರಿಯೂ ಇಲ್ಲಿ ಪ್ರತ್ಯೇಕವಾಗಿಯೇ ಇದೆ. ಇಲ್ಲಿ ಮಣ್ಣಿನ ಮಡಕೆಗಳ ತಯಾರಿಕಾ ಪ್ರಾತ್ಯಕ್ಷಿಕೆಯನ್ನು ಕಾಣಬಹುದಾಗಿದೆ. ನೇಪಾಳಿಗರು ಸಾಂಪ್ರದಾಯಿಕವಾಗಿ ತಲೆಗೆ ಧರಿಸುವ ಟೋಪಿಗಳನ್ನು ಇಲ್ಲಿಯೇ ತಯಾರಿಸುವುದು. ಇದು ಈ ಭಕ್ತಾಪುರದ ವಿಶೇಷವೂ ಹೌದು.

ಚಿತ್ರಪಟ, ಕುಸುರಿ ಕುಶಲಕಲೆ, ಬ್ಯಾಗ್, ಗೊಂಬೆ, ಚಾಪೆ ಕಲೆ, ಮಣಿ, ರುದ್ರಾಕ್ಷಿ ಕಲೆ, ದನಗಳ ಕೋಡಿನಿಂದ ತಯಾರಿಸಿದ ವೈವಿಧ್ಯಮಯ ಶಿವಲಿಂಗ ವಿವಿಧ ಮೂರ್ತಿಗಳು ಸುಟ್ಟ ಮಣ್ಣಿನಿಂದ ತಯಾರಿಸಿದ ಗೊಂಬೆ ನೋಡುಗರ ಗಮನ ಸೆಳೆಯುತ್ತವೆ. ಅಪರೂಪವಾಗಿ ಕಾಣುವ ಕಿತ್ತಳೆ ಬದಲಿಗೆ ಯಥೇಚ್ಛವಾಗಿ ಕಾಣುವ ಸೀಬೆಹಣ್ಣು ಹಾಗೂ ಅವುಗಳನ್ನು ಮಾರುವ ಹೆಂಗಸರ ಸಾಲು ಸಾಲು ಅರಮನೆಯ ಹೊರಭಾಗದಲ್ಲಿ ಕಂಡುಬರುತ್ತದೆ. ಅರಮನೆಯ ಕೊನೆಯ ತುದಿ ವ್ಯಾಪಾರೀ ಸಂಕೀರ್ಣವಾಗಿದ್ದು ಅಲ್ಲಿ ದೇಶಿ-ವಿದೇಶಿ, ಶಾಲು, ಕಸೂತಿ ಬಟ್ಟೆ, ದೇವರ ಪೂಜೆ ಪರಿಕರಗಳ ಮಾರಾಟದ ಸ್ಥಳವಾದರೆ, ಭೂಪತೇಂದ್ರ ಮಲ್ಲ ದೊರೆಯ ವೈಭವದ ಅರಮನೆ ಇಂದು ಬಾರ್ ಅಂಡ್ ರೆಸ್ಟೋರೆಂಟ್ ಆಗಿ ಪರಿವರ್ತನೆಯಾಗಿರುವುದು ವಿಷಾದಕರ. ರೆಸ್ಟೋರೆಂಟ್ ಆದರೂ ವಿಲಾಸಿ ಗಿರಾಕಿಗಳಿಲ್ಲದೆ ಬಿಕೋ ಎನ್ನುತ್ತಿದೆ.

ಇಲ್ಲಿನ ದರ್ಬಾರ್ ಹಾಲಿನ ಬದಿಗೆ ದಕ್ಷಿಣ ಮುಖಭಾಗಕ್ಕಿರುವ ನ್ಯಾತಪೋಲ್ ಮಂದಿರ ಆಕರ್ಷಕವಾಗಿದೆ. ಇದರಲ್ಲಿ ಸಿದ್ಧಿಲಕ್ಷ್ಮಿಯ ಮೂರ್ತಿ ಆಕರ್ಷಕವಾಗಿದೆ.



ಮಾಳಿಗೆಯ ಪಗೋಡ ಶೈಲಿಯ ವಿಶಾಲ ಮಂದಿರ, ಕೆತ್ತನೆಯ ವರ್ಣಚಿತ್ರ ಕಲೆಗೆ ಹೆಸರುವಾಸಿ. 'ಭಾಗ್ಯದ ಲಕ್ಷ್ಮೀ ಬಾರಮ್ಮ' ಮೊದಲಾದ ಕನ್ನಡ ಚಿತ್ರಗಳು ಇದರಲ್ಲಿ ಚಿತ್ರೀಕರಣವಾಗಿದೆ. ಡಾ.ರಾಜಕುಮಾರ್ ಇಲ್ಲಿಗೆ ಬಂದಿದ್ದರು ಎಂದು ಗೈಡ್ ಹೇಳುತ್ತಾ ಹೋದರು.

ಸೂರ್ಯ ವಿನಾಯಕ, ಭಗವಾನ್ ದತ್ತಾತ್ರೇಯ, ಸಮೀಪದ ವಾಂಗ್ ನಾರಾಯಣ ಮಂದಿರ, ಭಕ್ತಾಪುರದ ಇತರ ಆಕರ್ಷಣೆಗಳು. ಕಳೆದುಕೊಂಡ ವೈಭವದ ಅವಶೇಷದಂತಿದೆ. ಭಕ್ತಾಪುರವೆಂಬ ದೇವರುಗಳ ಊರು ಅರಮನೆ. ಮುಂದೆ ತರಕಾರಿ, ಸೊಪ್ಪು, ಸೀಬೆ, ಕಿತ್ತಲೆ, ಸೇಬು ಹಣ್ಣುಗಳ ಮಾರುಕಟ್ಟೆ ಈ ಪರಿಸರ ನಮ್ಮ ಸಂತೆಗಳ ಸ್ವರೂಪದ್ದೇ. ತಾಜಾ ತರಕಾರಿ. ಚಕ್ಕೋತ, ಕೊತ್ತಂಬರಿ ಮೊದಲಾದ ಸೊಪ್ಪುಗಳ ಒಂದು ಇಲ್ಲವೇ ಎರಡು ಕಟ್ಟಿಗೆ ಇಲ್ಲಿನ ಗ್ರಾಹಕರು ಸುಸ್ತು. ಕೊಸರಾಟ, ತರ್ಕ ಇಲ್ಲಿಯೂ ಮಾಮೂಲು. ಬಡತನದ ನಡುವೆಯೂ ಇಲ್ಲಿನ ಜನ ಸೊಗಸುಗಾರರು.

೧೫

# ನಗರ್‌ಕೋಟ್ ಎಂಬ ಹಿಮಕಣಿವೆ

ನೇಪಾಳದಲ್ಲಿ ಎತ್ತ ನೋಡಿದರತ್ತ ಕಣಿವೆಗಳೇ. ಕಣಿವೆ ಎಂದರೆ ಬರೀ ಕಲ್ಲು, ಮಣ್ಣು, ಗಿಡ, ಗುಡ್ಡಗಳಲ್ಲ. ನಿಡಿದಾದ, ಎತ್ತರವಾದ ಶಿಖರಗಳು. ಇವೆಲ್ಲವೂ ಹಿಮದಿಂದ ಪೂರ್ಣ ಆವೃತ್ತವಾಗಿ ಹಿಮಪರ್ವತವೇ ಆಗಿವೆ. ಇದೇ ವಿಶೇಷ. ನಾಗರ್‌ಕೋಟ್, ನಗರ್ ಕೋಟ್ ಎಂದೆಲ್ಲಾ ಕರೆಯುವ ಈ ಕಣಿವೆ ಊರು, ಮೇಘಗಳು ಮುತ್ತಿಡುತ್ತಿರುವ ಸುಂದರ ತಾಣ. ಕಠ್ಮಂಡುವಿಗೆ 34 ಕಿ.ಮೀ. ದೂರವಾದರೂ, ಪಯಣದ ಹಾದಿ ಮೂರು ಗಂಟೆಗೂ ಅಧಿಕ. ಕಠ್ಮಂಡುವಿನ ಪೂರ್ವದ ಗಡಿಗೆ, ಹಿಮಾಲಯದ ಸೆರಗಿಗೆ ಅಂಟಿಕೊಂಡಂತಿರುವ ಪ್ರದೇಶ. ಕಠ್ಮಂಡುವಿನಿಂದ ಹೊರಟರೆ ಹತ್ತಾರು ಕಿ.ಮೀ. ದೂರ ಹೊಲ, ಗದ್ದೆ, ತೋಟಗಳ ಪ್ರದೇಶ. ರೈತಾಪಿಗಳೇ ತುಂಬಿರುವ ನೆಲ. ನಾವು ನಗರ್‌ಕೋಟ್‌ಗೆ ಹೋದಾಗ ಸರಿ ಸುಮಾರು ಸಂಜೆ 5.30 ರ ಸಮಯ. ಬೆಳಗಿನ ಉಪಹಾರ ಮುಗಿಸಿ ಒಂದಿಷ್ಟು ನಗರ ಸುತ್ತಿ ಭಕ್ತಾಪುರ ಬಳಸಿ ಅಲ್ಲಿಂದ ನೇರವಾಗಿ ನಗರ್‌ಕೋಟ್‌ಗೆ ಹೊರಟೆವು. ಹಿಂಗಾರು ಮಾನ್ಸೂನ್ ಮುಕ್ತಾಯದ ಕಾಲ. ಕೆಲವೆಡೆ ಭತ್ತದ ಗದ್ದೆಯನ್ನು ಕೊಯ್ದು ಗದ್ದೆ ಬಯಲಿಗೆ ಮೆದೆ ಹಾಕಿದ್ದರು. ಇನ್ನು ಕೆಲವರು ಹಿಂಗಾರು ಜೋಳವನ್ನು ಚೆಲ್ಲಿ ಅವು ತೆನೆ ಬಿರಿಯುವ ಹಂತ ತಲುಪಿತ್ತು. ಉಳಿದೆಡೆ ಸಾಸಿವೆ, ಪಾಲಕ್, ಮೂಲಂಗಿ, ಬದನೆ, ಆಲೂಗಡ್ಡೆ, ತೊಗರಿ, ಕೋಸು ಹೀಗೆ ಸೊಪ್ಪು, ತರಕಾರಿ, ಕಾಳುಗಳ ಹೊಲ-ಗದ್ದೆ ಕಣ್ಣಿಗೆ ಹಿತವನ್ನುಂಟುಮಾಡುತ್ತಿದ್ದವು. ಕಣಿವೆಯ ಇಕ್ಕಟ್ಟಿನ ಪುಟ್ಟ ಪುಟ್ಟ ಮನೆ, ಆ ಮನೆಯ ಪಕ್ಕದಲ್ಲೇ ಎಲ್ಲಿಂದಲೋ ಜಿನುಗುತ್ತಾ ಹರಿಯುವ ಜಲಧಾರೆ, ಆ ಜಲಧಾರೆಯನ್ನು ಆಶ್ರಯಿಸಿಯೇ ಬಾಳೆ, ಬದನೆ, ಕುಂಬಳ, ಚಪ್ಪರದವರೆ, ತರಕಾರಿ, ಸೊಪ್ಪು ಇನ್ನೂ ಹೆಚ್ಚೆಂದರೆ ಸಾಸಿವೆ ಹೊಲಗಳ ಪುಟ್ಟ ಪುಟ್ಟ ಮಡಿಗಳು ನೋಡುಗರಿಗೆ ಕುತೂಹಲವಾಗಿತ್ತು. ಕರ್ನಾಟಕದಲ್ಲಿ ಸಾಸಿವೆ ಒಂದು ಮಿಶ್ರಬೆಳೆ. ರಾಗಿ, ಜೋಳ, ಕಡಲೆ ಬೆಳೆಯೊಂದಿಗೆ ಅಲ್ಲೊಂದು ಇಲ್ಲೊಂದು ಸಹಜವಾಗಿಯೇ ಸಾಸಿವೆ ಗಿಡ ಬೆಳೆಯುತ್ತದೆ. ರೈತರು ಒಂದು ವರ್ಷಕ್ಕೆ ಬೇಕಾಗುವಷ್ಟು 5 ಸೇರು, 10 ಸೇರು, 25

ಸೇರು ಸಾಸಿವೆ ಸಂಗ್ರಹಿಸಿದರೆ ಅದೇ ಹೆಚ್ಚು. ನೇಪಾಳದ ಪ್ರವಾಸದುದ್ದಕ್ಕೂ ಉತ್ತರ ಪ್ರದೇಶ, ಅಲಹಾಬಾದ್, ವಾರಣಾಸಿ, ಸಾರನಾಥ್ ಇಲ್ಲೆಲ್ಲಾ ಸಾಸಿವೆ ಹೊಲದ್ದೇ ಒಂದು ವಿಶೇಷ. ಎಕರೆಗಟ್ಟಲೆ ಸಾಸಿವೆ ಹೊಲಗಳು, ಬೆಳೆದು ನಿಂತು ಹಳದಿ ಹೂ ಬಿಟ್ಟು ಪರಿಮಳ ಸೂಸುತ್ತಿದ್ದವು. ಈ ಭಾಗಗಳಲ್ಲಿ ಸಾಸಿವೆಯನ್ನು ಒಂದು ಪ್ರಮುಖ ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಾರೆ. ಸಾಸಿವೆ ಎಣ್ಣೆಯನ್ನು ಇಲ್ಲಿ ಅಡಿಗೆಗೆ, ತಿಂಡಿಗಳಿಗೆ ಯಥೇಚ್ಛವಾಗಿ ಬಳಸುತ್ತಾರೆ. ನೇಪಾಳದಲ್ಲೂ ಇದೇ ಪದ್ಧತಿ. ಇದೆಲ್ಲಾ ಪ್ರಾದೇಶಿಕ ವ್ಯತ್ಯಾಸಗಳು. ಕರಾವಳಿ ಭಾಗಗಳಲ್ಲಿ ತೆಂಗಿನ ಎಣ್ಣೆಯನ್ನು ಅಡಿಗೆಗೆ ಬಳಸಿದಂತೆ ಇಲ್ಲಿ ಸಾಸಿವೆ ಎಣ್ಣೆಯನ್ನು ಸಾಮಾನ್ಯವಾಗಿ ಬಳಸುತ್ತಾರೆ. ಹಾಗಾಗಿಯೇ ನೇಪಾಳದಲ್ಲಿ ಮುಂಗಾರು, ಹಿಂಗಾರು ಎರಡೂ ಸಂದರ್ಭಗಳಲ್ಲಿ ಸಾಸಿವೆಯನ್ನು ಪ್ರಧಾನ ಬೆಳೆಯಾಗಿಯೇ ಬೆಳೆಯುತ್ತಾರೆ. ವ್ಯವಸಾಯಕ್ಕೆ ಎತ್ತುಗಳನ್ನು, ಕೋಣವನ್ನು ಬಳಸುತ್ತಾರೆ. ಹೊಲ ಉಳುತ್ತಿದ್ದ ನಾಲ್ಕಾರು ರೈತರು ನೇಗಿಲಿಗೆ ಕೋಣವನ್ನು ಕಟ್ಟಿದ್ದು ನಾನು ಗಮನಿಸಿದೆ.

ನನ್ನ ಕುತೂಹಲ ಕೆರಳಿಸಿದ ಒಂದು ದೃಶ್ಯ ಭಕ್ತಾಪುರ-ನಗರಕೋಟ್ ನಡುವಿನ ಒಂದು ಕಣಿವೆ ಅಂಚಿನ ತಿರುವಿನಲ್ಲಿ. ರಸ್ತೆಯ ತಿರುವು ಕಣಿವೆ ಏರುವ ಪ್ರದೇಶ, ಅಲ್ಲೇ ಇಕ್ಕಟ್ಟಾದ ರಸ್ತೆ ಮಾಡಿದ್ದಾರೆ. ಅದರ ಬಲಬದಿಗೆ ಒಂದಿಷ್ಟು ದಿಬ್ಬ ಆ ದಿಬ್ಬವನ್ನೇ ಕಡಿದು ಅಲ್ಲೊಂದೆರಡು ಮೂರು ಮಡಿ ಗದ್ದೆ, ಅದರ ತುದಿಗೆ ಪುಟ್ಟ ಮನೆ. ಮನೆ ರಸ್ತೆಬದಿಗೆ ಆತುಕೊಂಡಿದೆ. ಕೆಂಪು ನಾಡಹೆಂಚು ಹೊದಿಸಿದ ಮನೆ. ಮನೆಯ ಮುಂದೆ ಸೋರೆಗಿಡ ಕಾಯಿ ತುಂಬಿ ನೇತಾಡುತ್ತಿತ್ತು. ಹೊಲದಲ್ಲಿ ಇಬ್ಬರು ಹೆಣ್ಣುಮಕ್ಕಳು ತಾನೇ ಎತ್ತುಗಳಾಗಿ ನೇಗಿಲು ಎಳೆಯುತ್ತಿದ್ದರು. ಸ್ವಲ್ಪ ದಪ್ಪ ಕಾಯದ ಹೆಂಗಸು ನೇಗಿಲ ಮೇಟಿ ಹಿಡಿದಿದ್ದಳು. ನನ್ನ ಕುತೂಹಲ ಮತ್ತೂ ಕೆರಳಿ ಅತ್ತ ಕಡೆಯೇ ನೋಡುತ್ತಿದ್ದೆ. ತಿರುವು, ಎತ್ತರ ಏರಲಾರದ ಭಾರ ಬಸ್ಸು ಮೇಲಕ್ಕೆ ಏರುತ್ತಿತ್ತು. ಹಾಗಾಗಿ ವೇಗ ನಿಧಾನ. ಹೌದು, ಹೆಂಗಸರೇ ಎತ್ತುಗಳಾಗಿ ವ್ಯವಸಾಯ ಮಾಡುತ್ತಿದ್ದರು. ಚಿಕ್ಕ ಮಡಿಯ ಕಾರಣವೋ, ಅಸಹಾಯಕತೆಯೋ ತಿಳಿಯಲಿಲ್ಲ. ಅಂತೂ ನೇಪಾಳ ಸ್ತ್ರೀಯರನ್ನು ಎಲ್ಲ ಕೆಲಸಗಳಲ್ಲೂ ತೊಡಗಿಸಿಕೊಂಡಿದೆ. ರಸ್ತೆ ಬದಿಯ ತರಕಾರಿಯಿಂದ, ಕ್ಲಬ್ ಬಾರ್‌ಗಳ ತನಕ. ಇನ್ನು ವ್ಯವಸಾಯ ಸಾಮಾನ್ಯ. ನಮ್ಮ ಊರಿನಲ್ಲೂ ಕೆಲವರು ಹರಳು, ಮೆಣಸಿನ ಮಡಿಗಳಿಗೆ ನೇಗಿಲನ್ನು ತಾನೇ ಎಳೆದು ಸಾಲು ಮಾಡಿ, ಆ ಸಾಲುಗಳಿಗೆ ಬೀಜ ಹಾಕುತ್ತಿದ್ದುದನ್ನು ನನ್ನ ಬಾಲ್ಯದ ದಿನಗಳಲ್ಲಿ ಕಾಣುತ್ತಿದ್ದೆ. ಕೆಲವು ಹೆಂಗಸರು ಹೊಲವನ್ನು ಗಂಡಸರ ಮಾದರಿಯಲ್ಲಿಯೇ ಉಳುತ್ತಿದ್ದರು. ಅದು ಎತ್ತು ಅಥವಾ ಹಸುಗಳನ್ನು ಕಟ್ಟಿಕೊಂಡು. ಆಗ ನನಗೆ ಕುತೂಹಲವಾಗಲಿ, ಈ ಹೆಂಗಸರು ಏತಕ್ಕೆ ಹೊಲ

ಉಳುತ್ತಾರೆಂಬ ತಿಳುವಳಿಕೆ, ಪ್ರಶ್ನೆ ಮೂಡುತ್ತಿರಲಿಲ್ಲ. ಈಗ ನಮ್ಮ ಅಪ್ಪಟ ಅವಿದ್ಯಾವಂತ, ನೆಲ ಸಂಸ್ಕೃತಿಯ ಊರು ಅಲ್ಲಿನ ವ್ಯವಸಾಯ ಪದ್ಧತಿ, ಗಾಡಿ, ಎತ್ತು, ಗೊಬ್ಬರ ಹೇರುವುದು, ಚೆಲ್ಲುವುದು, ಉಳುವುದು ಒಂದು ಉಕ್ಕೆ, ಎರಡು ಉಕ್ಕೆ, ಮುಂಗಾರು ರೇವತಿ, ಕೃತ್ತಿಕೆ, ಆರಿದ್ರೆ, ಹಸ್ತಾ, ಚಿತ್ತೆ ಮುಂತಾದ ಮಳೆಯ ಹೆಸರು ಹಿಡಿದು ಬೀಜ ಬಿತ್ತುವ, ಅರಗುವ, ಪೈರು ಹಾಕುವ, ರೈತಾಪಿ ಕೆಲಸ ಆರಂಭಿಸುತ್ತಿದ್ದ, ಮದುವೆ, ದೇವರ ಕಾರ್ಯ ಮಾಡುತ್ತಿದ್ದ ಸಂದರ್ಭ. ಈಗ ಅವ್ಯಾವುವೂ ಕಾಣುವುದಿಲ್ಲ. ಮಾತೆತ್ತಿದರೆ ಟ್ರ್ಯಾಕ್ಟರ್, ಮಿಷನ್ ಎನ್ನುತ್ತಾರೆ. ಹಸು, ಎತ್ತು, ಎಮ್ಮೆಗಳನ್ನು ಸಾಕುವ, ಹುಲ್ಲು-ನೀರು ಒದಗಿಸುವ ಗೋಜಿಗೇ ಹೋಗುವುದಿಲ್ಲ. ಸಮೃದ್ಧವಾಗಿ ಹಾಲು, ಮಜ್ಜಿಗೆ, ಬೆಣ್ಣೆ ದೊರೆಯುತ್ತಿದ್ದ ನಮ್ಮ ಹಳ್ಳಿ ಮನೆಗಳಲ್ಲೂ ಇಂದು ಪ್ಯಾಕೆಟ್ ಹಾಲಿನ ಹಾದಿ ಹಿಡಿದಿರುವುದು ನಮ್ಮ ರೈತಾಪಿ ಕಸುಬು ಮರೆತಿರುವ, ಮರೆಸುತ್ತಿರುವ ಆತಂಕದ ದಿನಗಳನ್ನು ಕಾಣುತ್ತಿದ್ದೇವೆ. ನೇಪಾಳದ ಮೂವರು ಹೆಂಗಸರು ತಮ್ಮ ಪಾಡಿಗೆ ತಾವು ಹೊಲ ಉಳುತ್ತಿರುವ ಚಿತ್ರದ ಹಿಂದೆ ಕಳೆದು ಹೋಗುತ್ತಿರುವ ನಮ್ಮ ಒಟ್ಟು ಕುಟುಂಬ, ಬೇಸಾಯದ ಆ ದಿನಗಳು ತಟಕ್ಕನೆ ನೆನಪಾದವು.

ನಗರ್ ಕೋಟ್ ಸಮುದ್ರ ಮಟ್ಟಕ್ಕಿಂತ 2200 ಮೀ. ಎತ್ತರ ಪ್ರದೇಶ. ಮೌಂಟ್ ಎವರೆಸ್ಟ್, ಗಣೇಶ್ ಹಿಮಾಲ್, ಗೌರಿಶಂಕರ ಮೊದಲಾದ ಹಿಮಾಲಯದ ಹಲವಾರು ಶಿಖರಗಳನ್ನು ಹತ್ತಿರದಿಂದ ವೀಕ್ಷಿಸಬಹುದಾದ ಸ್ಥಳ. ಒಂದಲ್ಲ ಎರಡಲ್ಲ ಎಣಿಸಲಸದಳವಾದ ಕಣಿವೆ, ಪ್ರಪಾತಗಳ ಪ್ರದೇಶ. ಸಂಪೂರ್ಣ ಮೋಡ ಮುತ್ತಿರುವ ನೆಲ. ಇಲ್ಲಿನ ತುದಿಯಲ್ಲಿ ಒಂದು ಹೆಲಿಪ್ಯಾಡ್ ಇದೆ. ಹೆಲಿಕ್ಯಾಪ್ಟರ್ ಬರುತ್ತವೆ, ಹೋಗುತ್ತವೆ. ಹೆಲಿಪ್ಯಾಡಿನ ಬಲ ತುದಿ ಸಾವಿರಾರು ಅಡಿಗಳ ಪ್ರಪಾತ. ಆ ನೀರು ಅಥವಾ ಕರಗಿದ ಹಿಮವೇ ನೀರಾಗಿ ಕೋಶಿಯೋ ನದಿಯಾಗಿ ಹರಿಯುತ್ತದೆ.

ನಗರ್ ಕೋಟ್‌ನಲ್ಲಿ ಅಲ್ಲೊಂದು ಇಲ್ಲೊಂದು ಮನೆಗಳಿವೆ. ಅವೆಲ್ಲ ವ್ಯಾಪಾರದ ಮನೆಗಳೇ. ಕೆಲವು ಚಿಲ್ಲರೆ ಅಂಗಡಿ. ಹಲವು ಹೋಟೆಲ್, ಬಾರ್, ರೆಸ್ಟೋರೆಂಟ್ ಕಣಿವೆ ಮೇಲೆ ಸಮಾನವಾಗಿ ಬಸ್ ಓಡುತ್ತವೆ. ರಸ್ತೆ ಕೆಟ್ಟದಾಗಿದ್ದರೂ ಚಾಲಕರು ಜಾಣರು. ಜಾಗರೂಕತೆಯಿಂದ ವಾಹನ ನಡೆಸುತ್ತಾರೆ. ದುಬಾರಿ ಬೆಲೆಯ ರೆಸ್ಟೋರೆಂಟ್‌ಗಳಿವೆ. ಇಲ್ಲಿಂದ ಹಿಮಾಲಯ ಟ್ರೆಕ್ಕಿಂಗ್ ಹೋಗುವವರೂ, ವಿದೇಶೀ ಪ್ರವಾಸಿಗರು ಅಧಿಕ ಸಂಖ್ಯೆಯಲ್ಲಿ ಇರುತ್ತಾರೆ. ನಗರ್‌ಕೋಟ್‌ನಲ್ಲಿ ನಾವು ಅಂದುಕೊಂಡಂತೆ ಮೋಡ ವೀಕ್ಷಣೆಯ sunset ಅಷ್ಟಾಗಿ ಕಾಣಲಿಲ್ಲ. ಮಬ್ಬು ಬೆಳಕಿನ ಮೋಡದ ಒಳಗೂ ಮೇಘರಾಜರುಗಳ ಚಮತ್ಕಾರಿಕ ಅದ್ಭುತದಾಟಗಳನ್ನು ನಾವೆಲ್ಲರೂ

ವೀಕ್ಷಿಸಿದೆವು. ಓಡುವ ಮೋಡ ಕಳಚಿಕೊಂಡು ಬೀಳುತ್ತಿರುವ ದೃಶ್ಯ. ಸೈನ್ಯ, ಯುದ್ಧ, ಒಂಟಿತನ ವಿರಹ, ರಕ್ತ, ಮಾಂಸ ನಮ್ಮ ಕಲ್ಪನೆ, ಕನಸಿಗೆ ಭಾವನಾತ್ಮಕ ವಿಸ್ತೀರ್ಣಕ್ಕೆ ಎಲ್ಲೆಯಿಲ್ಲ ಎಂಬಂತಹ ಸುಂದರ ವಾತಾವರಣವನ್ನು ಮೋಡರಾಶಿ ನಿರ್ಮಿಸಿಬಿಡುತ್ತದೆ. ಕಾಳಿದಾಸನ 'ಮೇಘದೂತ' ಕಾವ್ಯವನ್ನು ದ.ರಾ ಬೇಂದ್ರೆ ಕನ್ನಡೀಕರಿಸಿದ್ದಾರೆ. ಆ ಪಠ್ಯವನ್ನು ನಾನು ಓದಿದ್ದೇನೆ. ಅದರಲ್ಲಿ ಪ್ರಕಟವಾಗುವ ಈ ಎಲ್ಲ ಚಿತ್ತಾರ, ಚಮತ್ಕಾರ, ರಮ್ಯ ನೋಟಗಳು ನಗರ್‌ಕೋಟ್‌ನಲ್ಲಿ ಸಾದೃಶ ರೂಪ ತಾಳಿದ್ದು ನನ್ನಲ್ಲಿ ಮರೆಯಲಾರದ ನೆನಪುಗಳು. ಯಕ್ಷನು ತನ್ನ ಪೂರ್ವಜನ್ಮದ ಕರ್ಮಫಲದಿಂದಾಗಿ ತನ್ನ ನಾಯಕನಾದ ಕುಬೇರನ ಅವಕೃಪೆಗೆ ಕಾರಣನಾಗಿ ರಾಜ್ಯತ್ಯಾಗ ಮಾಡಲೇಬೇಕಾಗುತ್ತದೆ. ಆಗ ಆ ಯಕ್ಷನು ತನ್ನ ಯಕ್ಷಲೋಕವನ್ನು ಬಿಟ್ಟು ಭರತಖಂಡದ ದಕ್ಷಿಣ ಭಾಗದ ರಾಮಗಿರಿ ಆಶ್ರಮದಲ್ಲಿ ವಾಸಿಸುತ್ತಾನೆ. ಹೀಗಿದ್ದರೂ ತನ್ನ ಪ್ರಿಯ ಮಡದಿ ಅಲಕಾವತಿಯನ್ನು ಬಿಟ್ಟು ಬಂದ ವಿರಹ ತಾಪ, ಆಕೆಯ ಅತಿಶಯವಾದ ಸೌಂದರ್ಯವನ್ನು ನೆನೆದು ದುಃಖಿಸುತ್ತಾನೆ. ಕೊನೆಗೆ ತನ್ನ ವಿರಹದ, ಸಂಕಟದ ಕಥೆಯನ್ನು ಮೇಘದ ಮೂಲಕ ಸಂದೇಶವಾಗಿ ಕಳುಹಿಸುತ್ತಾನೆ. ಈ ಸಂದರ್ಭದಲ್ಲಿ ಯಕ್ಷನು ಮೇಘನಿಗೆ ಅಲಕಾವತಿಯು ಇರುವ ಸ್ಥಳ, ಹೋಗಬೇಕಾದ ದಾರಿಗಳೆಲ್ಲವನ್ನೂ ಸವಿವರವಾಗಿಯೇ ತಿಳಿಸುತ್ತಾನೆ. ರಾಮಗಿರಿಯಿಂದ ಹೊರಟು ಆಮ್ರಕೂಟ, ರೇವಾ ನದಿ, ಉಜ್ಜನಿ, ಆವಂತಿ, ದೇವಗಿರಿ, ಗಂಭೀರ ನದಿ, ಚರ್ವಣ್ಣ ತೀರ, ಕುರುಕ್ಷೇತ್ರ, ಗಂಗಾ ನದಿಗಳನ್ನು ದಾಟಿಕೊಂಡು, ಹಿಮಾಲಯ ಪರ್ವತ ತಲುಪುವಂತೆಯೂ ಸಲಹೆ ಕೊಡುತ್ತಾನೆ. ಮುಂದುವರಿದು ಮೇಘರಾಜ ಹಾದು ಹೋಗುವಾಗ ಹಿಮಾಲಯ ಶಿಖರ ಹೇಗೆ ಕಾಣುತ್ತವೆ. ನೀನು ಹೇಗೆ ಹೋಗಬೇಕು, ದಣಿವನ್ನು ಹೇಗೆ ನಿವಾರಿಸಿಕೊಳ್ಳಬೇಕು, ಆ ಸ್ಥಳಗಳ ವರ್ಣನೆಯನ್ನು ಮಾಡುತ್ತಾನೆ. ಮೇಘವೇ ನೀನು ಹೋಗುವಾಗ ಶಿಖರಗಳು ಆಕಾಶದಲ್ಲಿ ತೂರಿಕೊಂಡು ಪಾದದಲ್ಲಿ ಕಸ್ತೂರಿಯನ್ನು ಇಟ್ಟುಕೊಂಡಿದೆ. ಅಲ್ಲಿ ಮಂಜು ಬೆಟ್ಟವೊಂದು ಕಾಣುತ್ತದೆ. ಅದು ಗಂಗೆಯು ಭೂಮಂಡಲದ ಪಾಪದ ಕೊಳೆಯನ್ನು ತೊಳೆಯುವ ಸಲುವಾಗಿಯೇ ಹೊಳೆಯ ರೂಪದಲ್ಲಿ ಹರಿಯುತ್ತಿದ್ದಾಳೆ. ಅಲ್ಲಿ ಇಳಿದು ನಿನ್ನ ಪ್ರಯಾಣ ಕಾಲದ ಆಯಾಸವನ್ನು ನೀಗಿಸಿಕೋ, ಅಲ್ಲಿಂದ ಮುಂದಿನ ದೃಶ್ಯ ಶಿವನ ನಂದಿ ತನ್ನ ಎರಡೂ ಕೊಂಬುಗಳಿಂದ ಕರಿಯ ಮಣ್ಣಿನ ಮುದ್ದೆಯನ್ನು ಎತ್ತಿ ಹಿಡಿದಂತೆ ಕಾಣುತ್ತದೆ. ಅಲ್ಲಿಂದ ಉತ್ತರ ದಿಕ್ಕಿನೆಡೆಗೆ ಸರಿದರೆ ರಾವಣನು ತಾನು ಶಿವನನ್ನು ಮೆಚ್ಚಿಸಲು ಕೈಲಾಸ ಪರ್ವತ ಎತ್ತುತ್ತಿರುವ ಚಿತ್ರಣವೊಂದು ಕಾಣುತ್ತದೆ. ಮುಂದುವರಿದು ಕವಿ ಈ ಪ್ರಯತ್ನದಲ್ಲಿ ರಾವಣ ಹತನಾದರೂ ಈ ಹಿಂದೆ ರಾವಣ ಕೈಲಾಸ ಪರ್ವತವನ್ನು ಎತ್ತಲು ಬೆರಳೂರಿ, ಸಂದಿ ಮಾಡಿಕೊಂಡ ಭಾಗ ಈಗ ಕನ್ನಡಿಯಾದಂತೆಯೂ ಅದನ್ನು ದೇವತಾ ಸ್ತ್ರೀಯರು

ತಮ್ಮ ಅಲಂಕಾರಕ್ಕೆ ಕನ್ನಡಿ ಮಾಡಿಕೊಂಡಿದ್ದಾರೆಂದು ಅಲ್ಲಿನ ಮುಗಿಲು ಮುಟ್ಟಿರುವ ಶಿಖರಗಳು ಪರಶಿವನ ಆನಂದದ ನಗೆಯ ಉಲ್ಲಾಸವನ್ನು ಒಟ್ಟುಗೂಡಿಸಿ ಇರಿಸಿರುವಂತೆ ತೀಕ್ಷ್ಣವಾಗಿ ಕಾಣುತ್ತವೆ. ಆ ಬೆಟ್ಟಗಳನ್ನು ಹಾದು ಮುಂದೆ ಹೋದರೆ ಮತ್ತೊಂದು ಕರಿಯ ಶಿಖರ, ಅದು ಹೇಗೆ ಕಾಣುತ್ತದೆ ಎಂದರೆ ಕಾಡಿಗೆಯನ್ನು ಎಣ್ಣೆಯಲ್ಲಿ ಕಲೆಸಿ ತಯಾರಿಸಿದ ಕರಿಯ ಬಣ್ಣದಂತೆ ತೋರುತ್ತದೆ. ನೀನು ಆ ಶಿಖರ, ಬೆಟ್ಟದ ಮೇಲೆ ಕುಳಿತುಕೊಂಡು ಕೆಳಗೆ ಇಣುಕಿದರೆ ಕೋರೆಹಲ್ಲಿನ ಗೆರೆಗಳಂತೆ ಬಿಳಿಯ ಬೆಟ್ಟಗಳು ಕಾಣುತ್ತವೆ. ಆಗ ನೀನು ಅಲ್ಲಿ ಹೇಗೆ ಕಾಣುವೆ ಎಂದರೆ ಹೆಗಲಲ್ಲಿ ಕೆಂಪು ಕಂಬಳಿಯನ್ನು ಹೊತ್ತು ತಿರುಗುವ ಬಲರಾಮನಂತೆ ಕಂಡು ಬರುತ್ತೀಯ ಎಂದು ಯಕ್ಷನು ಮೋಡವನ್ನು ವರ್ಣಿಸುತ್ತಾನೆ. ಮುಂದುವರಿದು, ನೀನು ಮುಂದಕ್ಕೆ ಹೋದಂತೆ ಪರ್ವತ ಕಣಿವೆಗಳ ಬದಿಗೆ ತಾವರೆಯ ಕೊಳವೊಂದು ಕಾಣಿಸುತ್ತದೆ. ಅಲ್ಲಿ ಅಡ್ಡಬರುವ ಐರಾವತಕ್ಕೆ ಬಟ್ಟೆಯ ಮುಸುಕನ್ನು ಅಡ್ಡ ಹಿಡಿದು ನಿಲ್ಲು, ಅಲ್ಲಿರುವ ಆ ಶುದ್ಧ ಜಲವನ್ನು ಮನಸಾರೆ ಸೇವಿಸು. ಅಲ್ಲಿನ ಗಿಡ, ಚಿಗುರು, ಕಲ್ಪವೃಕ್ಷ ಇವುಗಳ ಮೇಲೆ ಬೀಸುವ ಗಾಳಿಗೆ ಮೈಯೊಡ್ಡಿ ಸುಖಿಸು ಮುಂತಾಗಿ ವರ್ಣಿಸುತ್ತಾನೆ.

ಈ ಕಲ್ಪನೆಯೊಂದಿಗೆ ನಾನು ನಗರ್‌ಕೋಟ್‌ನ ತುತ್ತತುದಿಯ ಹೆಲಿಪ್ಯಾಡ್‌ನಲ್ಲಿ ನಿಂತು ಮೇಘಗಳನ್ನು ವೀಕ್ಷಿಸಿದೆ. ಇಡೀ ದೃಶ್ಯವೇ ಚೇತೋಹಾರಿಯಾಗಿತ್ತು. ಸಾವಿರಾರು ಕಣಿವೆಗಳು, ಸಾಲು ಸಾಲು ಪರ್ವತಗಳು, ದಟ್ಟಡವಿ ಸವಾಲಿನಂತೆ ಮಡಿಕೆ ಮಡಿಕೆಯಾಗಿ ಎದ್ದು ನಿಂತ ಹಸಿರು, ಬೂದು ಬಣ್ಣದ ಶಿಖರಗಳು, ಇವುಗಳ ನಡುವೆ ಹೊಗೆಯಂತೆ ಎದ್ದು ಬರುವ ಬಿಳಿಯ ಮೋಡಗಳು, ಪರ್ವತಗಳ ಮೇಲೆ ಆತು ಕೂತುಕೊಂಡಿರುವಂತಹ ಮೋಡಗಳು ಅದೆಲ್ಲೋ ಕುಣಿದು ಕುಪ್ಪಳಿಸಿ ಹರಿಯುವ ಜಲಧಾರೆ, ದೂರಕ್ಕೆ ಹಾಲು ಹಳ್ಳದಂತೆ ಕಾಣುತ್ತಿತ್ತು. ಸಂಧ್ಯಾ ಸೂರ್ಯನ ಇಳಿಬಿಸಿಲಿಗೆ ಪ್ರಕೃತಿ ಮೈಯೊಡ್ಡಿ ಹಾಯಾಗಿ ಮಲಗಿತ್ತು. ದೂರದ ಸಮಸ್ತವೂ ಮಂಜಿನ ಬೆಟ್ಟವಾಗಿ ಇಡೀ ಪ್ರದೇಶ ಮುತ್ತು ಜಾರಿದ ಕಣಿವೆಯಾಗಿ ಕಾಣುತ್ತಿತ್ತು. ಈ ಬಗೆಯ ಪ್ರಕೃತಿಯ ಅಸದೃಶ್ಯ ಚೆಲುವನ್ನು ವೀಕ್ಷಿಸುತ್ತಾ ವಿದೇಶೀ ಮುದುಕಿಯರಿಬ್ಬರು ಹೊಗೆಬತ್ತಿ ಸೇದುತ್ತಾ ಉತ್ಸುಕತೆಯಿಂದ ಪ್ರಕೃತಿಯಲ್ಲಿ ಮನಸ್ಸು ನೆಟ್ಟಿದ್ದರು. ನಮ್ಮ ಪ್ರೊ॥ಮೋಹನ್, ಪ್ರೊ॥ ಮಂಜುಳಾ, ಶೈಲಕುಮಾರಿ ಇವರುಗಳು ತದೇಕ ಕಳೆದುಕೊಂಡು ಹರ್ಷದ ಹೊನಲನ್ನು ಹೊರಚೆಲ್ಲುತ್ತಲೇ ಫೋಟೋ ತೆಗೆಯುವ ಕಾರ್ಯ ಮಾಡುತ್ತಲೇ ಇದ್ದರು. ವಾಹನದ ಬಾಗಿಲು ತೆರೆಯುತ್ತಿದ್ದಂತೆ ಮೈ ಕೊರೆಯುವ ಚಳಿ! ಅಸಾಧ್ಯ ಚಳಿ. ಹಾಕಿದ್ದ ಸ್ವೆಟರ್, ಟೋಪಿ, ಯಾವ ಲೆಕ್ಕವನ್ನು ಇಟ್ಟುಕೊಳ್ಳದೆ ಚಳಿರಾಜ ಕೊರೆಯುತ್ತಲೇ ಇದ್ದ. ಹೆಲಿಪ್ಯಾಡಿನ ಹಿಂಬದಿಗೆ ಒಂದು



ಮಟ್ಟಸ್ಥವಾದ ಗುಡ್ಡ, ಬಲಬದಿಗೆ ವಿಲಾಸಿ ರೆಸ್ಟೋರೆಂಟ್ ಗುಡ್ಡದ ಮೇಲೆ ಚಳಿ-ಗಾಳಿಗೆ ಮೈಯೊಡ್ಡಿ ನಿಂತ ಗಂಭೀರವದನ, ಧ್ಯಾನಮಗ್ನ ಬುದ್ಧ. ಅದರ ಗೇಟಿಗಿದ್ದ ಸೋಡಿಯಂ ಲೈಟ್. ಆ ಕಂಬಕ್ಕೆ ನಾನು ಆತುಕೊಂಡಾಗ ಕೊಂಚ ಬೆಚ್ಚನೆಯ ಹಿತವಾಯಿತು. ನನ್ನ ಈ ಸ್ಥಿತಿಗೆ ನಮ್ಮ ಬಳಗದವರು ಹಾಸ್ಯ ಮಾಡಿದ್ದೂ ಉಂಟು. ನನ್ನ ಸ್ಥಿತಿ, ನನ್ನ ಬಾಲ್ಯದ ದಿನಗಳಲ್ಲಿ ಹೊಲದಲ್ಲಿ ಕಟಾವು ಮಾಡಿ, ಅರಿ ಮಾಡಿದ್ದ ರಾಗಿ ತೆನೆಹಿಡಿದ ಕಡ್ಡಿಯು ಕಂತೆ ಕಟ್ಟಲು  ಹಿಮ ಬಿದ್ದು ಮೆತ್ತಗಾಗಿ ತೆನೆ ಉದುರಬಾರದೆಂದು ಬೆಳಗಿನ ಜಾವ ಹೊಲಕ್ಕೆ ಹೋದಾಗ ಮಾಗಿಯ ಚಳಿಗೆ ಗಡಗಡ ನಡುಗುವಂತೆ ಸ್ಥಿತಿ ಆಗುತ್ತಿತ್ತು. ಮಧ್ಯೆ ಮಧ್ಯೆ ಬೆಂಕಿ ಹಾಕಿಕೊಂಡು ಸುತ್ತಲೂ ಕುಳಿತು ಬೆಂಕಿ ಕಾಯಿಸುತ್ತಾ ಹತ್ತಿರ ಶೇಂಗಾ ಹೊಲವಿದ್ದರೆ ಕಡ್ಲೇಕಾಯಿ ಗಿಡ ಕಿತ್ತು, ಕಾಯಿಯನ್ನು ಬೆಂಕಿಗೆ ಹಾಕಿ ಸುಟ್ಟು ತಿನ್ನುತ್ತಿದ್ದ ಆ ದಿನದ ನೆನಪಾಯಿತು.

ನಮ್ಮ ವಾಹನದ ಬಳಿ ಬನ್ನಿ ಬನ್ನಿ ಎಂಬ ಪ್ರೊ॥ ಜೆಪಿ ಅವರ ಕರೆಗೆ ಸದ್ದಿಲ್ಲದೆ ಎರಡೂ ಕೈಗಳನ್ನು ಪ್ಯಾಂಟಿನ ಜೇಬಿನ ಒಳಕ್ಕೆ ಇಳಿಬಿಟ್ಟುಕೊಂಡು, ವಾಹನವೇರಿ ಕುಳಿತವನು ಅತ್ತಿತ್ತ ಅಲುಗಾಡಲಿಲ್ಲ. ಪ್ರೊ॥ ಕೆಸಿಎನ್ ಮೌನವಾಗಿಯೇ ಇದ್ದರು. ಪ್ರೊ॥ ಮಮತ, ಮಂಜುಳ, ಶೈಲಕುಮಾರಿ, ಪ್ರೊ॥ ಜಗದಾಂಬ ಸಂಜೆ ಪಯಣದಲ್ಲಿ ಕನ್ನಡ ಗೀತೆಗಳ ಅಂತ್ಯಾಕ್ಷರಿ ಹಾಡುತ್ತಾ ಹೋದರು. ಮಧ್ಯೆಮಧ್ಯೆ ಪ್ರೊ॥ ಪೂರ್ಣಾದೇವಿ, ಪ್ರೊ॥ ಮೋಹನ್, ದಕ್ಷಿಣಾಮೂರ್ತಿ ಸಾಥ್ ನೀಡುತ್ತಿದ್ದರು. ಜೆಪಿ ನಿಷ್ಠುರವಾಗಿಯೇ ನ್ಯಾಯಾಧಿಕರಣದ ನಿರ್ವಹಣೆ, ಹಿಮಕಣಿವೆಯ ಕಂದರ ಇಳಿವಿನ ತಿರುವು, ತಗ್ಗು ದಿಣ್ಣೆಗಳ ತಳ್ಳಾಟದಲ್ಲಿ ಬಸ್ ನಡೆಸುತ್ತಿದ್ದ ವಾಹನ ಚಾಲಕ ಥಾಂಗ್ ಮಾತ್ರ ನಿರ್ಲಿಪ್ತವಾಗಿಯೇ ಇದ್ದ! ಅದು ಆತನ ಮಾಮೂಲು ಲಕ್ಷಣ.

೧೬

# ನೇಪಾಳಿ ರುದ್ರಾಕ್ಷಿ ನಾಡೆಲ್ಲಾ ತುಂಬೈತೆ

ನೇಪಾಳದ ನೆಲಕ್ಕೆ ಕಾಲಿರಿಸಿದ ಕೂಡಲೇ ಕಣ್ಣಿಗೆ ರಾಚುವುದು ರುದ್ರಾಕ್ಷಿಗಳ ರಾಶಿರಾಶಿ, ವ್ಯಾಪಾರಿ ಮಳಿಗೆ, ರಸ್ತೆ ಬದಿ, ಪ್ರವಾಸಿಗರ ಬೆನ್ನು ಹತ್ತಿ ಬರುವ ವ್ಯಾಪಾರಿಗಳು ಹೀಗೆ ತರಾವರಿ ರುದ್ರಾಕ್ಷಿ ವ್ಯಾಪಾರ ಮಾಡುತ್ತಾರೆ. ಇದಕ್ಕೆ ಪೂರಕ ಎಂಬಂತೆ ನಮ್ಮ ಪ್ರವಾಸಿಗರೂ ಅಷ್ಟೇ ನೇಪಾಳ ಅಂದ ಕೂಡಲೇ ರುದ್ರಾಕ್ಷಿಯ ನೆನಪು ಮಾಡುತ್ತಾರೆ. ನೇಪಾಳಕ್ಕೆ ಹೋದ ದಿನದಿಂದ ಅಲ್ಲಿಂದ ಹೊರಡುವ ತನಕ ಅಲ್ಲಿ ಚೆನ್ನಾಗಿದ್ದವು. ರೇಟ್ ಕೊಂಚ ಕಡಿಮೆ. ಇನ್ನೂ ಒಂದು ಸುತ್ತು ನೋಡಬೇಕಾಗಿತ್ತು. ಪಂಚಮುಖ, ಏಕಮುಖ ಸಿಕ್ಕಲಿಲ್ಲ ಅಂತಲೋ, ಅವರಿಗೆ ಕೊಡಬೇಕಿತ್ತು, ಚಿನ್ನದ ಆಭರಣಕ್ಕೆ, ಲೇಪನಕ್ಕೆ, ಕೊರಳಿಗೆ, ಮಠಕ್ಕೆ ಹೀಗೆ ಒಂದಲ್ಲಾ ಒಂದು ಮಾತುಗಳನ್ನು ರುದ್ರಾಕ್ಷಿಯ ಬಗೆಗೇ ಮಾತನಾಡುವುದು ರೂಢಿಯಾಗಿದೆ.

ನೇಪಾಳದಲ್ಲಿ ರುದ್ರಾಕ್ಷಿ ಮರಗಳು ಹೇರಳವಾಗಿವೆ. ಬೆಟ್ಟಸಾಲು, ಪರ್ವತ, ರಸ್ತೆ ಬದಿ, ಕಛೇರಿ, ದೇವಾಲಯಗಳ ಆವರಣ, ಹೊಲಗದ್ದೆಗಳ ಬದುವಿನ ಮೇಲೂ ರುದ್ರಾಕ್ಷಿ ಮರಗಳು ವಿಶಾಲವಾಗಿ ಎತ್ತರಕ್ಕೆ ನಮ್ಮಲ್ಲಿನ ಫಲವತ್ತಾದ ಬೇವಿನ ಮರದ ಸ್ವರೂಪದಲ್ಲಿಯೇ ಬೆಳೆಯುತ್ತವೆ. ಬೇವಿನಕಾಯಿಯ ತರಹದಲ್ಲಿಯೇ ದೊಡ್ಡದಾಗಿ ಅಡಿಕೆ ಕಾಯಿಯ ಮಾದರಿಯಲ್ಲಿ ರುದ್ರಾಕ್ಷಿ ಮರ ಕಾಯಿಗಳನ್ನು ಬಿಡುತ್ತದೆ. ಗೊಂಚಲು ಗೊಂಚಲಾಕೃತಿಯಲ್ಲಿ ಕಾಯಿಗಳನ್ನು ಬಿಡುವ ಈ ಮರದ ಕಾಯಿ ಹಸಿರು ಬಣ್ಣದಿಂದ ಕೂಡಿರುತ್ತವೆ. ಡಿಸೆಂಬರ್-ಜನವರಿ ಮಾಸದೊಳಗೆ ಇದರಿಂದ ಕಾಯಿಗಳನ್ನು ಕಿತ್ತು, ಅವುಗಳ ಮೇಲಿನ ಹಸಿರು ತೊಗಟೆಯನ್ನು ಸುಲಿದರೆ ಒಳಭಾಗ ಬಿಳಿಮಿಶ್ರಿತ ಹಸಿರು ಬಣ್ಣದಿಂದ ಕೂಡಿರುತ್ತದೆ. ಅದು ಒಣಗುತ್ತಾ, ಸ್ವಚ್ಛಗೊಳಿಸಿದಂತೆಲ್ಲಾ ಕಂದು ಬಣ್ಣಕ್ಕೆ ಬರುತ್ತದೆ. ರುದ್ರಾಕ್ಷಿ ಪ್ರಕೃತಿ ಸಹಜ ಬೆಳೆಯಾಗಿದ್ದು ಕಾಯಿಯ ಒಳಭಾಗ ಗೆರೆಗಳಿಂದ ಕೂಡಿರುತ್ತದೆ. ಈ ಗೆರೆಯ ಆಧಾರದ ಮೇಲೆ ರುದ್ರಾಕ್ಷಿಯ ವಿವಿಧ ಮುಖಗಳನ್ನು

ನಿರ್ಧರಿಸುತ್ತಾರೆ. ರುದ್ರಾಕ್ಷಿಯಲ್ಲಿ ಏಕಮುಖಿ, ದ್ವಿಮುಖಿ, ತ್ರಿಮುಖಿ, ಚತುರ್ಥ, ಪಂಚಮುಖಿ ಹೀಗೆ ಕರೆಯುತ್ತಾರೆ. ಮಾತ್ರವಲ್ಲ ಹದಿನಾಲ್ಕು ಮುಖವುಳ್ಳ ರುದ್ರಾಕ್ಷಿಯನ್ನು ಗುರುತಿಸುವ, ಭಕ್ತರಿಗೆ ಅವುಗಳನ್ನು ಒದಗಿಸುವ, ಮಾರುಕಟ್ಟೆಯ ಸರಕನ್ನಾಗಿ ಮಾಡಿಕೊಂಡಿರುವ ವರ್ತಕರು, ದಾನ-ಧರ್ಮ, ದೀಕ್ಷೆ, ಆಭರಣಗಳಿಗೂ ರುದ್ರಾಕ್ಷಿಯನ್ನು ಬಳಸುವುದುಂಟು. ಗುರು ಪರಂಪರೆಯಲ್ಲಿ ರುದ್ರಾಕ್ಷಿ ಮಾಲೆ, ಕಿವಿ ಆಭರಣ, ತಲೆಗೆ ಕಿರೀಟ, ಕೈಗೆ ತೋಳಬಂಧಿ, ಮಣಿಕಟ್ಟು ಈ ಎಲ್ಲವುಗಳಿಗೂ ರುದ್ರಾಕ್ಷಿಯನ್ನು ಬಳಸುವುದು ವಾಡಿಕೆಯಾಗಿದೆ.

ರುದ್ರಾಕ್ಷಿ ಸ್ವಯಂ ಶಿವನಿಂದಲೇ ಸೃಷ್ಟಿಯಾಯಿತು ಎಂಬ ನಂಬಿಕೆಯನ್ನು ಪುರಾಣ ಮೂಲಗಳು ಉಲ್ಲೇಖಿಸುತ್ತವೆ. ಪರಶಿವನು ತ್ರಿಪುರಾಸುರ ಎಂಬ ರಾಕ್ಷಸನೊಂದಿಗೆ ಘೋರ ಯುದ್ಧ ಮಾಡುತ್ತಾನೆ. ಈತನು ದೇವಾನುದೇವತೆಗಳಿಗೂ ಹೆದರದೆ ದುಃಸ್ವಪ್ನವಾಗಿರುತ್ತಾನೆ. ಅಂಥ ಬಲಾಢ್ಯ, ಕ್ರೂರಿ ರಾಕ್ಷಸನನ್ನು ಶಿವನು ಕ್ಷಣಾರ್ಧದಲ್ಲಿ ಸಂಹಾರ ಮಾಡುತ್ತಾನೆ. ಶಿವನ ಈ ಪರಿಯ ಸಾಹಸ, ಅಸಾಧಾರಣ ಕಾರ್ಯವನ್ನು ದೇವಾನುದೇವತೆಗಳು ಹೊಗಳುತ್ತಾರೆ. ಈ ಬಗೆಯ ಯಶೋವಾರ್ತೆಯನ್ನು ಕೇಳಿದ ಪರಶಿವನು ತನ್ನೆರಡೂ ಕಣ್ಣುಗಳಿಂದ ಆನಂದಬಾಷ್ಪವನ್ನು ಸುರಿಸುತ್ತಾನೆ. ಹೀಗೆ ರುದ್ರ ಸುರಿಸಿದ (ಶಿವ) ಅಶ್ರುವೇ ರುದ್ರಾಕ್ಷಿ ಎಂದು ಕರೆದು, ಅವುಗಳ ಉತ್ಪತ್ತಿ ಪವಿತ್ರವಾದ ಮರದ ಫಲದ ರೂಪದಲ್ಲಿಯೇ ಆಗಲಿ ಎಂದು ದೇವಾನುದೇವತೆಗಳು ಹರಸಿದರೆಂಬ ಐತಿಹ್ಯವಿದೆ.

ಈ ಹಿನ್ನೆಲೆಯಿಂದ ರುದ್ರಾಕ್ಷಿ ಮರಗಳು ಸೃಷ್ಟಿಯಾದವು ಎಂದು ರುದ್ರಾಕ್ಷಿಯ ಬಗೆಗೆ ಪೌರಾಣಿಕ ಹಿನ್ನೆಲೆಯನ್ನು ಒದಗಿಸುತ್ತಾರೆ. ರುದ್ರಾಕ್ಷಿ ಹೀಗಾಗಿ ಶುಭ, ಹರ್ಷ, ಆನಂದ ಮಾತ್ರವಲ್ಲದೆ, ರಕ್ತದ ಒತ್ತಡ, ಶೀತಬಾಧೆ, ಉಬ್ಬಸ ಮೊದಲಾದ ರೋಗಗಳ ಹತೋಟಿ ಮತ್ತು ನಿವಾರಣೆಯಲ್ಲಿಯೂ ರುದ್ರಾಕ್ಷಿ ಧಾರಣೆ ಪರಿಣಾಮಕಾರಿ ಎಂದು ವಿವರಿಸುತ್ತಾರೆ. ಮಾತ್ರವಲ್ಲ ಇಲ್ಲಿನ ನಾರಾಯಣ ದತ್ ಹೇಳುವ ಪ್ರಕಾರ ಒಂದೊಂದು ರುದ್ರಾಕ್ಷಿಯಲ್ಲಿಯೂ ಒಂದೊಂದು ದೈವಬಲ, ದೇವರಿದ್ದಾನೆ ಎಂಬುದನ್ನು ವಿವರಿಸುತ್ತಾ ಏಕಮುಖಿ ರುದ್ರಾಕ್ಷಿಯಲ್ಲಿ ಶಿವ, ದ್ವಿಮುಖಿ ರುದ್ರಾಕ್ಷಿಯಲ್ಲಿ ಶಿವೆ, ತ್ರಿಮುಖದಲ್ಲಿ ಅಗ್ನಿದೇವ, ಚತುರ್ಮುಖದಲ್ಲಿ ಬ್ರಹ್ಮ, ಪಂಚಮುಖಿಯಲ್ಲಿ ಶಿವನ ಐದು ಮುಖಗಳ ಅನಾವರಣ (ಶಂಕರ) ಆರು ಮುಖವುಳ್ಳ ರುದ್ರಾಕ್ಷಿಯಲ್ಲಿ ಕಾರ್ತಿಕೇಯ, ಸಪ್ತಮುಖಿ ರುದ್ರಾಕ್ಷಿಯಲ್ಲಿ ಅನಂತನಾಗ, ಅಷ್ಟಮುಖಿಯಲ್ಲಿ ಗಣಪತಿ, ನವಮುಖಿಯಲ್ಲಿ ಭೈರವ, ದಶಮುಖಿಯಲ್ಲಿ ನಾರಾಯಣ, ಏಕಾದಶಮುಖಿ (11)ಯಲ್ಲಿ ರುದ್ರ, ದ್ವಾದಶಮುಖಿ

(12)ಯಲ್ಲಿ ಸೂರ್ಯ, ತ್ರಯೋದಶಮುಖಿ (13) ರುದ್ರಾಕ್ಷಿಯಲ್ಲಿ ಇಂದ್ರ, ಚತುರ್ದಶಮುಖಿ ರುದ್ರಾಕ್ಷಿ (14) ಯಲ್ಲಿ ಹನುಮಂತನ ಸ್ವರೂಪ ಎಂದು ನಂಬುವ, ನಂಬಿಸುವ ಕೆಲಸವನ್ನು ಪೋಖ್ರಾದ ತಾಜ್ ರೆಸ್ಟೋರೆಂಟ್ ಎದುರಿಗಿದ್ದ ನಾರಾಯಣದತ್ ವಿವರಿಸುತ್ತಾ 500 ರೂ.ಗಳಿಂದ 10,000 ರೂ.ಗಳವರೆಗೆ ರುದ್ರಾಕ್ಷಿ ದರಗಳನ್ನು ಹೇಳುತ್ತಾರೆ. ಚಿನ್ನದ ಒಡವೆಯನ್ನು ಇಡುವ ಪುಟ್ಟ ಪುಟ್ಟ ಪೆಟ್ಟಿಗೆಯಲ್ಲಿಟ್ಟು ಮಾರುವ ತಂತ್ರಗಾರಿಕೆಯನ್ನು ನಾರಾಯಣದತ್ ವ್ಯವಸ್ಥಿತವಾಗಿಯೇ ಮಾಡುತ್ತಿದ್ದರು. ಜೊತೆಗೆ ಯಾವ ಮುಖದ ರುದ್ರಾಕ್ಷಿಯ ದಿಕ್ಕು, ಹೆಸರು ಹಾಗೂ ವಯಸ್ಸಿನವರು ಹಾಕಬಹುದು ಎಂದೆಲ್ಲಾ ಹಿಂದಿ, ಇಂಗ್ಲಿಷ್, ತೆಲುಗು, ಅರ್ಧ ಕನ್ನಡದಲ್ಲೂ ಹೇಳುತ್ತಿದ್ದರು. ನಮ್ಮ ಅಡಿಗೆ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದ ನಾರಾಯಣ್ ಆತನ ಮಾತಿಗೆ ಮೌನವಾಗಿಯೇ ಸಾಥ್ ನೀಡುತ್ತಿದ್ದರು. ಇದೇ ಬಗೆಯ ವ್ಯವಹಾರ ಕಠ್ಮಂಡುವಿನ ಪಶುಪತಿನಾಥ ದೇವಾಲಯದ ಮುಂಭಾಗದಲ್ಲೂ ನಡೆಯುತ್ತದೆ. ನೇಪಾಳದ ಹೋಟೆಲ್ ಪ್ಯಾಲೇಸ್‌ನ ಎಡಬದಿಗೆ ರುದ್ರಾಕ್ಷಿ ವ್ಯಾಪಾರಿ ಮಳಿಗೆಯೇ ಇದ್ದು ಕನ್ನಡ, ತಮಿಳು, ತೆಲುಗು ಭಾಷೆಗಳ ಬೋರ್ಡ್ ಹಾಕಿದ್ದಾರೆ. ಇಲ್ಲಿ ರುದ್ರಾಕ್ಷಿಯದ್ದೇ ಭರ್ಜರಿ ವ್ಯಾಪಾರ. ವೈವಿಧ್ಯಮಯ ರುದ್ರಾಕ್ಷಿಯನ್ನು ಇಲ್ಲಿ ನೋಡಬಹುದು. ನಾನು ಗಮನಿಸಿದಂತೆ ನಮ್ಮ ತಂಡದ ಪ್ರೊ|| ಮಮತ, ಪ್ರೊ|| ಮಂಜುಳ, ಪ್ರೊ|| ಪೂರ್ಣಾದೇವಿ, ಡಾ|| ಸದಾಶಿವಯ್ಯ, ಪ್ರೊ|| ದಕ್ಷಿಣಾಮೂರ್ತಿ ಇವರು ರುದ್ರಾಕ್ಷಿ ವ್ಯಾಪಾರವನ್ನು ಭರ್ಜರಿಯಾಗಿಯೇ ಮಾಡಿದರು. ಮಾತ್ರವಲ್ಲ ಕಾಶಿಯ ವಿಶ್ವನಾಥ ದೇವಾಲಯದ ಬದಿ, ಜಂಗಮವಾಡಿ ಮಠದ ರಸ್ತೆಯ ಅಂಗಡಿಗಳಲ್ಲೂ ರುದ್ರಾಕ್ಷಿ ಕೊಂಡರು. ನೇಪಾಳಕ್ಕೆ ಹೋಲಿಸಿದರೆ ಕಾಶಿಯಲ್ಲಿ ರುದ್ರಾಕ್ಷಿ ಅಗ್ಗವೆಂದೂ ತಾವು ಕೊಂಡ ವೈಖರಿಯ ಬಗೆಗೆ ತಾವೇ ಮಾತಾಡಿಕೊಂಡದ್ದೂ ಉಂಟು.

ನೇಪಾಳದಲ್ಲಿ ರುದ್ರಾಕ್ಷಿಯಂತೆ ಸಾಲಿಗ್ರಾಮ ಶಿಲೆಯನ್ನು ಖರೀದಿಸುತ್ತಾರೆ. ಇಲ್ಲಿ ಚಿಕ್ಕ ದೊಡ್ಡ ಭಿನ್ನ ಆಕಾರ, ಪ್ರಕಾರಗಳಲ್ಲಿ ಸಾಲಿಗ್ರಾಮ ಶಿಲೆ ಹೇರಳವಾಗಿ ದೊರೆಯುತ್ತವೆ. ಸಾಲಿಗ್ರಾಮ ಶಿಲೆಯ ಬಗೆಗೂ ಪುರಾಣ ಪ್ರಸಂಗವನ್ನು ಉಲ್ಲೇಖಿಸಿ ಜನರನ್ನು ಆಕರ್ಷಿಸುವುದು ಇಲ್ಲಿನ ವಾಡಿಕೆಯಾಗಿದೆ. ಶ್ರೀಹರಿ ಜಲಂಧರನೊಂದಿಗೆ ಕಲಹ ಮಾಡಿ, ಆತನನ್ನು ಕೊಂದನು. ಆತನ ಮಡದಿ ಮಹಾಪತಿವ್ರತೆಯಾದುದರಿಂದ, ಶಿವಭಕ್ತನಾದ ಜಲಂಧರನಿಗೆ ಸಾವಿಲ್ಲ ಎಂಬುದನ್ನು ತಿಳಿದು ಶ್ರೀಹರಿ, ಮಾರುವೇಷದಲ್ಲಿ ಜಲಂಧರನ ಮಡದಿಯಾದ ವೃಂದಾಳೊಂದಿಗೆ ಕಾಮಕ್ರೀಡೆಯಲ್ಲಿ ತೊಡಗುತ್ತಾನೆ. ವಸ್ತುಸ್ಥಿತಿಯನ್ನು ಅರಿತ ಜಲಂಧರನ ಪತ್ನಿ ವೃಂದಾ ಭೀಕರವಾಗಿ ರೋಧಿಸುವುದಲ್ಲದೆ, ಇಂಥ ನೀಚ ಕೆಲಸ ಮಾಡಿದ ವಿಷ್ಣುವಿಗೆ ಕಲ್ಲಾಗುವಂತೆ ಶಾಪ ಕೊಡುತ್ತಾಳೆ. ತಕ್ಷಣ ಶ್ರೀವಿಷ್ಣು

ಉರಿದು ಕರಿಯ ಕಲ್ಲಾಗುತ್ತಾನೆ. ಮುಂದೆ ಆ ಕರಿಯ ಕಲ್ಲು ಸಾಲಿಗ್ರಾಮ ರೂಪದಲ್ಲಿ ಪೂಜೆಗೆ ಪ್ರಾಪ್ತವಾಗಿದೆ. ಅದು ಶ್ರೀವಿಷ್ಣುವಿನ ರೂಪ ಎಂದು ವ್ಯಾಪಾರಿಗಳು ನಂಬಿಸಿ ವ್ಯಾಪಾರದಲ್ಲಿ ಚುರುಕುತನ ತೋರುತ್ತಾರೆ. ಪಶುಪತಿನಾಥನ ವ್ಯಾಪಾರಿ ಬಜಾರು ಪೋಖ್ರಾದ ಬಿಂದುವಾಸಿನಿಯ ಆವರಣದಲ್ಲಿ ಸಾಲಿಗ್ರಾಮ ಶಿಲೆ ಕೊಂಡರೆ ಶ್ರೇಯಸ್ಕರ ಎಂದು ಭಕ್ತರನ್ನು ಬಲವಾಗಿ ನಂಬಿಸುವುದು ಅವರ ವ್ಯಾಪಾರಿ ಧರ್ಮ ಒಂದಾದರೆ, ಸ್ಥಳ ವೀಕ್ಷಣೆಯ ನೆನಪು, ಪವಿತ್ರತೆಯ ಭಾವುಕ ನೆಲೆ ಈ ಹಿನ್ನೆಲೆಯಿಂದಲೂ ಸಾಲಿಗ್ರಾಮ ರುದ್ರಾಕ್ಷಿ ಕೊಳ್ಳುವುದಕ್ಕೆ ಪ್ರವಾಸಿಗರಂತೂ ಮುಗಿಬೀಳುತ್ತಲೇ ಇರುತ್ತಾರೆ.




೧೭

# ಜನಕ್‌ಪುರದಿಂದ ಸೀತಾಮಡುವಿನತ್ತ

ನೇಪಾಳದ ಜನಕ್‌ಪುರ ಪ್ರವಾಸಿಗರ ಕುತೂಹಲದ ಸ್ಥಳ. ರಾಜಪ್ರಭುತ್ವ, ಟಿಬೆಟಿಯನ್ನರ ಆಕ್ರಮಣ ಮತ್ತು ಮಾವೋವಾದಿಗಳ ಕ್ರಾಂತಿಯ ಹಾದಿಯಲ್ಲಿ ನೇಪಾಳ ವೈವಿಧ್ಯತೆಯಿಂದ ಕಾಣಿಸಿಕೊಂಡರೂ ಹಿಂದುತ್ವವನ್ನು ಉಳಿಸಿಕೊಳ್ಳಲು ಈಗಲೂ ತುಡಿಯುತ್ತಿದೆ. ಇಲ್ಲಿ ಬೌದ್ಧ ಸಂಸ್ಕೃತಿಯೂ ಗಾಢವಾಗಿದೆ. ಆದರೂ ಹಿಂದೂಗಳಿಗೆ ಇದು ಅಪಥ್ಯವಲ್ಲ. ಬುದ್ಧನನ್ನು ವಿಷ್ಣುವಿನ ಅವತಾರ ಎಂದೇ ಇಲ್ಲಿನ ಜನ ನಂಬಿದ್ದಾರೆ, ಗೌರವಿಸುತ್ತಾರೆ. ಇವರಿಗೆ ಶಿವ, ರಾಮ, ಕೃಷ್ಣ, ಹನುಮರಂತೆ ಬುದ್ಧನೂ ಮುಖ್ಯನೇ. ಹಾಗಾಗಿ ಧರ್ಮೀಯ ಕಲಹ ಇಲ್ಲಿ ಅಪರೂಪ. ಆದರೆ ಪ್ರಭುತ್ವದ ಕಲಹ, ನಿರಂಕುಶಮತಿತ್ವದ ಹೋರಾಟ ನಡೆಯುತ್ತಲೇ ಬರುತ್ತಿದೆ.

ಜನಕ್‌ಪುರ ರಾಮಾಯಣದ ಮಹಾರಾಣಿ, ಶ್ರೀರಾಮನ ಮಡದಿ ಸೀತೆಯ ತವರು. ಜನಕ ಮಹಾರಾಜನ ಅರಮನೆ ಇಲ್ಲಿದೆ. ಇದನ್ನು ಮಿಥಿಲೆ ಎಂತಲೂ ಕರೆಯಲಾಗುವುದು. ರಾಮಾಯಣದಲ್ಲಿ ಮೇಲಿಂದ ಮೇಲೆ ಮಿಥಿಲೆಯ ಉಲ್ಲೇಖಗೊಳ್ಳುವುದು ಇದೇ ಸ್ಥಳ. ಜನಕ್‌ಪುರ ತುಂಬಾ ಸುಂದರವಾದ ನಗರ. ಮಿಥಿಲೆ ಎಂದು ಇಲ್ಲಿನ ಪುರೋಹಿತರು ಕರೆಯುತ್ತಾರೆ. ಭಾರತದೊಂದಿಗೆ ಅನನ್ಯ ಗೌರವ ಇರಿಸಿಕೊಂಡಿರುವ ನಗರ. ಪ್ರವಾಸಿಗರು,



ಸೀತೆ ಹುಟ್ಟಿದ ಸ್ಥಳ, ಜನಕ್‌ಪುರದ ಅರಮನೆ

ಭಕ್ತರು ಸದಾ ತುಂಬಿರುತ್ತಾರೆ. ಇಲ್ಲೊಂದು ಸುಂದರ ಶ್ರೀರಾಮ ಮಂದಿರವಿದೆ. ಅರಮನೆಯ ಮಾದರಿಯಲ್ಲಿರುವ ಭಾರತದ ಟೀಕಮ್ ಗಢನ್ ಮಹಾರಾಣಿ ವೃಷಭಾನುದೇವಿಯು ಬಹಳ ಹಿಂದೆಯೇ 9 ಲಕ್ಷ ರೂ. ಖರ್ಚು ಮಾಡಿ, ಇಲ್ಲಿನ ಜಾನಕಿ ಮಂದಿರವನ್ನು ನಿರ್ಮಿಸಿದ್ದಾಳೆ. ಆ ಕಾರಣವಾಗಿಯೇ ಜಾನಕಿಮಂದಿರವನ್ನು ನೌಲಖಾ ಮಂದಿರ ಎಂದು ಕರೆಯುತ್ತಾರೆ. ಅರ್ಚಕರು ಕನ್ನಡದಲ್ಲಿಯೇ ಮಾತನಾಡುತ್ತಾರೆ. ಕೆಲವು ಅಂಗಡಿಯವರು ನಮ್ಮನ್ನು ಮದ್ರಾಸಿಗಳೆಂದು ಕರೆದರೂ ಕರ್ನಾಟಕ, ಕನ್ನಡಿಗರೆಂದು ತಿಳಿದ ಮೇಲೆ ನಮ್ಮೊಂದಿಗೆ ಅತಿ ಸಲೀಸಾಗಿ ವರ್ತಿಸುತ್ತಾ ತಮ್ಮ ವ್ಯಾಪಾರ ಸರಕು ಖರೀದಿಯ ಚುರುಕುತನ ತೋರುತ್ತಿದ್ದರು. ಜಾನಕಿಪುರದ ಬಗೆಗಿನ ಪೌರಾಣಿಕ ಹಿನ್ನೆಲೆಯನ್ನು ಇಲ್ಲಿನ ಅರ್ಚಕರು ವಿವರಿಸಿದ್ದು ಹೀಗೆ:

ಜಾನಕಿಪುರವನ್ನು ಈ ಹಿಂದೆ ಇಕ್ಷ್ವಾಕು ವಂಶದ ನಿಮಿ ಎಂಬ ಹೆಸರಿನ ರಾಜ ಆಳುತ್ತಿದ್ದನು. ನಿಮಿಯು ವಸಿಷ್ಠನ ಶಾಪಕ್ಕೆ ಗುರಿಯಾಗಿ ತೀರಿಕೊಂಡನು. ಆಗ ಮಿಥಿಲಾ ನಗರದಲ್ಲಿ ದಂಗೆ ನಡೆದು ಎಲ್ಲೆಲ್ಲಿಯೂ ತೀವ್ರತರವಾದ ಕ್ಷೋಭೆ ಉಂಟಾಯಿತು. ಜನಗಳ ದುಃಖ ಅತಿಶಯವಾಗಿ ದೇವತೆಗಳನ್ನು ಕುರಿತು ಪ್ರಾರ್ಥನೆ ಮಾಡಿದಾಗ ಹುಟ್ಟಿದವನೇ ಜನಕ ಮಹಾರಾಜ. ಈತನು ಮಹಾ ಪರಾಕ್ರಮಿಯೂ, ದಾನವಂತನೂ,



ಜನಕ್‌ಪುರದ ಸೀತಾಮಂದಿರ

ನೀತಿವಂತನೂ ಆಗಿದ್ದನು. ಪ್ರಜೆಗಳ ಶಾಂತಿಗಾಗಿ, ಪುತ್ರ ಸಂತಾನಕ್ಕಾಗಿ ಜನಕನು ಯಜ್ಞವೊಂದನ್ನು ಆಯೋಜಿಸುತ್ತಾನೆ. ಆ ಯಾಗಭೂಮಿಯನ್ನು ಸ್ವಚ್ಛ ಮಾಡುವ ಸಲುವಾಗಿ ಭೂಮಿಯನ್ನು ಉಳುತ್ತಿರುವಾಗ ಭೂಮಿಯೊಳಗೆ ಪೆಟ್ಟಿಗೆಯೊಂದು ಜನಕ ರಾಜನ ನೇಗಿಲ ಬಾಯಿಗೆ ಸಿಕ್ಕಿಕೊಳ್ಳುತ್ತದೆ. ರಾಜ ಆ ಪೆಟ್ಟಿಗೆಯನ್ನು ಹೊರತೆಗೆದು ನೋಡಲಾಗಿ ಅದರಲ್ಲಿ ಅಪೂರ್ವ ತೇಜಸ್ವಿಯೂ, ತಣ್ಣಗೆ ಕೊರೆಯುತ್ತಿದ್ದ ಹೆಣ್ಣು ಶಿಶುವೊಂದು ಕಾಣುತ್ತದೆ. ಜನಕರಾಜ ಆ ಶಿಶುವನ್ನು ಆರೈಕೆ ಮಾಡಿ ಸೀತೆ ಎಂದು ನಾಮಕರಣ ಮಾಡುತ್ತಾನೆ. ಕೋಮಲವಾಗಿ ಬೆಳೆದು ಯೌವನಸ್ಥೆಯಾದ ಸೀತೆಯನ್ನು ಮದುವೆಯಾಗಲು ಹಲವು ರಾಜಕುಮಾರರು ಸ್ಪರ್ಧೆಗಿಳಿಯುತ್ತಾರೆ. ಆಗ ಜನಕರಾಜ 'ನನ್ನ ಮಗಳಾದ ಸೀತೆಯನ್ನು ವಿವಾಹವಾಗುವವರು ಶಿವಧನಸ್ಸನ್ನು ಎತ್ತಬೇಕೆಂಬ' ಷರತ್ತು ವಿಧಿಸುತ್ತಾನೆ. ಅಯೋಧ್ಯೆಯ ರಾಮ ಈ ಸ್ಪರ್ಧೆಯಲ್ಲಿ ವಿಜಯ ಸಾಧಿಸಿ ಸೀತೆಯೊಂದಿಗೆ ವಿವಾಹ ಮಾಡಿಕೊಳ್ಳುತ್ತಾನೆ. ಸೀತೆಯ ಚರಿತ್ರೆಗೆ ಸಾಕ್ಷಿಯೆಂಬಂತೆ ಸ್ಮಾರಕಗಳು, ಶಿವಧನಸ್ಸು ಎತ್ತಿದ ಸ್ಥಳ, ಸ್ವಯಂವರ ಮಂಟಪ ಎಲ್ಲವನ್ನೂ ಜಾನಕಿಪುರದಲ್ಲಿ ತೋರುತ್ತಾರೆ ಮಾತ್ರವಲ್ಲ ರಾಮಾಯಣದ ಮೂಲಕರ್ತೃ ವಾಲ್ಮೀಕಿಯ ಆಶ್ರಮವನ್ನು ಇಲ್ಲಿಗೆ ಸಮೀಪದಲ್ಲಿಯೇ ಕಾಣಬಹುದು. ಊರೆಲ್ಲ ಕಾಡು, ಬೆಟ್ಟ-ಗುಡ್ಡ, ಆ ಗುಡ್ಡಗಾಡಿನ ಜಾನಕಿಪುರ, ಅದರ ಸನಿಹದಲ್ಲೇ ವಾಲ್ಮೀಕಿ ಆಶ್ರಮ. ಹಾಗಾಗಿ ಭಾರತದೊಂದಿಗೆ ಈ ಸ್ಥಳ ಅಸೀಮ ಭಾವನಾತ್ಮಕತೆಯನ್ನು ಬೆಳೆಸಿಕೊಂಡಿದೆ. ರಾಮ ನಮ್ಮವನು ಎಂಬುದು ಭಾರತೀಯರಿಗೆ, ಸೀತೆ ನಮ್ಮ ಹೆಣ್ಣುಮಗಳು ಎಂಬುದು ನೇಪಾಳೀಯರಿಗೆ. ಈ ಕೊಳು-ಕೊಡುಗೆಯ ನೆಂಟಸ್ತಿಕೆಯ ವಾತಾವರಣ ಮಿಥಿಲಾ ನಗರದಲ್ಲೂ ಎದ್ದು ಕಾಣುತ್ತದೆ. ಅಪ್ಪಟ ಹಿಂದೂ ಪರಿಕಲ್ಪನೆ - ಹಣೆಗೆ ಕೆಂಪು ತಿಲಕ, ರಾಮ ಮಂತ್ರದ ಶಾಲು, ಹೊದಿಕೆಗಳು ಜಾನಕಿಪುರ, ಸೀತೆಯ ಸಾಂಸ್ಕೃತಿಕ ಹಿನ್ನೆಲೆಯನ್ನು ಎತ್ತಿ ತೋರಿಸುತ್ತವೆ.

ವಾರಣಾಸಿಯ ರಾಷ್ಟ್ರೀಯ ವಿಚಾರ ಸಂಕಿರಣದ ನಂತರದ ಮೂರ್ನಾಲ್ಕು ದಿನಗಳನ್ನು ಉತ್ತರ ಪ್ರದೇಶದ ಪ್ರಮುಖ ಸ್ಥಳಗಳ ವೀಕ್ಷಣೆಗೆ ಮೀಸಲಿಡಲಾಗಿತ್ತು. ಆ ಸಂದರ್ಭದಲ್ಲಿ ಅಲಹಾಬಾದ್ ಪರಿಸರ, ಅಲ್ಲಿನ ಗಂಗಾ-ಯಮುನಾ, ಸರಸ್ವತಿ ನದಿಗಳ ಸಂಗಮ ಸ್ಥಳಗಳನ್ನು ನೋಡಿದೆವು. ಇದೊಂದು ಅಪರೂಪದ ಅವಕಾಶ. ಗಂಗಾನದಿ ಪೂರ್ವಾಭಿಮುಖವಾಗಿ ಸಾಂದ್ರವಾಗಿ ಹರಿದು ಬಂದರೆ ಯಮುನಾ ಈಶಾನ್ಯ ಭಾಗದಿಂದ ವಾಯವ್ಯ ದಿಕ್ಕಿಗೆ ಹರಿದು ಗಂಗಾ ನದಿಯನ್ನು ಸೇರುತ್ತದೆ. ಗುಪ್ತಗಾಮಿನಿ ಸರಸ್ವತಿ ನದಿ - ಇವು ಮೂರು ಇಲ್ಲಿ ಸೇರಿ ತ್ರಿವೇಣೀಸಂಗಮ. ಇದೇ ಸ್ಥಳದಲ್ಲಿ 12 ವರ್ಷಕ್ಕೊಮ್ಮೆ

ಕುಂಭಮೇಳ ನಡೆಯುತ್ತದೆ. ಅಲಹಾಬಾದ್ ನಗರವನ್ನು ಎಡದಿಂದ ಬಳಸಿ ನಗರಕ್ಕೆ ಒತ್ತಿಕೊಂಡು ಗಂಗಾ-ಯಮುನಾ, ಸರಸ್ವತಿ ಸಂಗಮವಾಗಿ ಹರಿಯುತ್ತವೆ. ಇದೇ ಸ್ಥಳದಲ್ಲಿ 12 ವರ್ಷಕ್ಕೊಮ್ಮೆ ಕುಂಭಮೇಳ ಜರುಗುತ್ತದೆ. ನಮ್ಮ 13 ಜನರ ತಂಡವನ್ನು ಎರಡು ಭಾಗ ಮಾಡಿ ಗಂಗಾ-ಯಮುನಾ ನದಿಯ ನಾಡ ದೋಣಿಯಲ್ಲಿ ಅರ್ಧ ಕಿ.ಮೀ. ದೂರ ಸಾಗಿಸಿದರು, ಆಚೆಯ ದಡಕ್ಕೂ ಮುಟ್ಟಿಸಿದರು. ನಡುವೆ ಒಂದು ಮರಳು ಮಿಶ್ರಿತ ಜೇಡಿಯ ತೆಳುವಾದ ಕೆಸರು, ಅಲ್ಲಿ ಗಂಗಾರತಿ. ಅಂದರೆ ಗಂಗಾ ಪೂಜೆಯ ಸಾಂಪ್ರದಾಯಿಕ ಆಚರಣೆಯೂ ನಡೆಯುತ್ತದೆ. ಯಜ್ಞನಿರತ ಪುರೋಹಿತರು ಒತ್ತಾಯಪೂರ್ವಕವಾಗಿಯೇ ಪೂಜಾರತಿ ಮಾಡಿಸುತ್ತಾರೆ. ನಮ್ಮ ಜೆಪಿ ತುಸು ಧಾರ್ಮಿಕ ನಿಷ್ಠತೆಯಲ್ಲಿ ಒಲವುಳ್ಳವರು.

ಇವರೊಂದಿಗೆ ಪ್ರೊ|| ಪೂರ್ಣಾದೇವಿ, ಪ್ರೊ||ರುದ್ರಮುನಿ, ಪ್ರೊ||ಮಮತ, ಪ್ರೊ||ಮಂಜುಳ ಭಕ್ತಿಯಿಂದ ಪೂಜೆ ಸಲ್ಲಿಸಿದರು. ಡಾ.ಸದಾಶಿವ ದಂಪತಿಗಳು ಹೂ ತಟ್ಟೆ ಹಿಡಿದು ಮರಳ ದಿಬ್ಬದ ಮೇಲೆ ನಿಂತು ಗಂಗಾ ಮಾತೆಗೆ ಅರ್ಘ್ಯ ಕೊಡುತ್ತಿದ್ದ ರೀತಿ ತುಂಬಾ ಆಕರ್ಷಕವಾಗಿತ್ತು. ಮದುವೆಯಲ್ಲಿ ಅರುಂಧತಿ ನಕ್ಷತ್ರ ತೋರುವ ಒಂದು ಶಾಸ್ತ್ರ, ಧಾರೆಯ ತರುವಾಯ ಚಪ್ಪರದಿಂದ ಹೊರಗೆ ಕರೆತಂದು ಪುರೋಹಿತರು ಈ ಶಾಸ್ತ್ರ ನಡೆಸುತ್ತಾರೆ. ಆ ತನವನ್ನು ಈ ಪ್ರವಾಸದಲ್ಲಿ ದಂಪತಿಗಳ ಗಂಗಾಪೂಜೆಯ ಸಂದರ್ಭದಲ್ಲಿ ಕಾಣಲಾಯಿತು. ಪ್ರೊ||ದಕ್ಷಿಣಾಮೂರ್ತಿ ಹೂ, ಹಣ್ಣು ತಟ್ಟೆಯೊಂದಿಗೆ ಮೋಹನ್ ಅವರ ಛಾಯಾಚಿತ್ರಕ್ಕೆ ದೃಷ್ಟಿ ಹಾಯಿಸುವುದು ಆ ಕ್ಷಣಕ್ಕೆ ರೋಚಕ. ನಾನು, ಪ್ರೊ|| ಕೆಸಿಎನ್ ಮೌನ ವೀಕ್ಷಕರಾಗಿ ಗಂಗಾ ಜಲಧಾರೆಯ ತಣ್ಣನೆಯ ಹರಿವನ್ನು ವೀಕ್ಷಿಸುತ್ತಾ ಯಾತ್ರಾರ್ಥಿಗಳು ಹಾಕುವ ಪುರಿ ಮೊದಲಾದ ಆಹಾರಕ್ಕೆ ಕುಣಿದು ಕುಣಿದು ಬರುತ್ತಿದ್ದ ನೀರ ಹಕ್ಕಿಗಳ ಅಂದದ ಮೆರವಣಿಗೆಗೆ ಮನಸೋತಿದ್ದೆವು. ಡಾ.ರಾಜಕುಮಾರ್ ಅವರ 'ಗಂಗಾ ಯಮುನಾ ಸಂಗಮದಂತೆ' ಹಾಡಿನ ಕಲಾತ್ಮಕ ವಿಶ್ಲೇಷಣೆ ಪ್ರೊ|| ಶೈಲಕುಮಾರಿ, ಪ್ರೊ|| ಪೂರ್ಣಾದೇವಿ, ಜಗದಾಂಬ, ದಸ್ತಗೀರ್ ಭಾವುಕರಾಗಿ ನೆನಪು ಮಾಡಿ ಕೊಳ್ಳುತ್ತಿದ್ದರು. ಅದೇ ಸ್ಥಳ, ಅದೇ ಪರಿಸರ, ಮನಮೋಹಕ ನೋಟ ನಿಜಕ್ಕೂ ಹೆಮ್ಮೆಯ ಸಂಗತಿ. ಒಂದಿಷ್ಟು ಹೊತ್ತು ಗಂಗಾ-ಯಮುನಾ ಸಂಗಮದಲ್ಲಿ ಮಿಂದು ಕುಂಭಮೇಳಕ್ಕೆ ನಡೆಯುತ್ತಿದ್ದ ಸಿದ್ಧತೆಗಳನ್ನು ನೋಡುತ್ತಾ ಅಲ್ಲಿಂದ ಹೊರಬಂದೆವು. ಬದಿಯಲ್ಲಿಯೇ ಇರುವ ಹನುಮ ಮಂದಿರ, ಶಂಕರಮಠ ಇವುಗಳಿಗೆ ಭೇಟಿ ನೀಡಿದೆವು. ಮಲಗಿರುವ ಭಂಗಿಯ ಇಲ್ಲಿನ ಆಂಜನೇಯ ಭಕ್ತರ ಭಾವಪೂರ್ಣ

ನೆಲೆ. ಅಲಹಾಬಾದಿನ ರುಚಿಕರವಾದ ಸೀಬೆಹಣ್ಣು ಗಳನ್ನು ತಿನ್ನುತ್ತಲೇ ಆನಂದಭವನ ಪ್ರವೇಶಿಸಿದೆವು. ಆನಂದಭವನ ಹೋಟೆಲ್ ಅಲ್ಲ. ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರ ಮನೆ. ಅದು ಅಲಹಾಬಾದಿನ ಪ್ರವಾಸಿ ತಾಣಗಳಲ್ಲೊಂದಾಗಿದೆ. ಊರಿನ ಸ್ವಲ್ಪ ಹೊರಭಾಗದಲ್ಲಿ ಕಲ್ಕತ್ತಾ-ದೆಹಲಿ ಮುಖ್ಯ ರಸ್ತೆಗೆ ಹೊಂದಿಕೊಂಡ ಬೃಹತ್ ಮೈದಾನ, ಸುತ್ತಲೂ ಎತ್ತರವಾದ ಕಾಂಪೌಂಡ್. ಒಳಗಡೆ ವಿಶಾಲವಾದ ಮರ-ಗಿಡಗಳ ಆಲಯ. ಎಡಬದಿಗೆ ಭಾರೀ ಗಾತ್ರದ ಸೌಧ. ಇದೇ ಆನಂದ ಭವನ. ಸ್ವಾತಂತ್ರ್ಯ ಹೋರಾಟಗಾರರಾದ ಮೋತಿಲಾಲ್ ನೆಹರೂ ಕಟ್ಟಿಸಿದ ಮನೆ. ನೆಹರೂ-ಕಮಲಾ ಮದುವೆ, ಇಂದಿರಾ ಗಾಂಧಿ ಹುಟ್ಟಿದ ಮನೆ, ಫಿರೋಜ್‌ಗಾಂಧಿ-ಇಂದಿರಾ ಮದುವೆ ನಡೆದದ್ದು ಇದೇ ಮನೆಯಲ್ಲಿ. ಸಂಜಯ್ ಗಾಂಧಿ, ರಾಜೀವ್ ಗಾಂಧಿ ಹುಟ್ಟಿ ಬೆಳೆದ ಮನೆ, ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಆರಂಭಿಕ ಪ್ರಧಾನ ಕಾರ್ಯಾಲಯ. ಇಲ್ಲಿ ಮಹಾತ್ಮ ಗಾಂಧೀಜಿಯವರ ವಿಶ್ರಾಂತಿ ಕೊಠಡಿ, ಮಂಚ, ಅವರು ಬಳಸುತ್ತಿದ್ದ ವಸ್ತ್ರ, ಬರವಣಿಗೆಯ ವಸ್ತುಗಳನ್ನು ಹಾಗೆಯೇ ಸಂರಕ್ಷಿಸಿ ಇಡಲಾಗಿದೆ. ನೆಹರೂ ಅವರ 'ಪ್ರವಾಸಿ ಕಂಡ ಇಂಡಿಯಾ' ಪುಸ್ತಕದ ರಚನೆ, ಅದರ ಹಸ್ತಪ್ರತಿ ಈಗಲೂ ಇಲ್ಲಿದೆ. ಮಗಳು ಪ್ರಿಯದರ್ಶಿನಿಗೆ ಬರೆದ ಪತ್ರಗಳೆಲ್ಲವೂ ಇಲ್ಲಿವೆ. ಇಂದಿರಾಗಾಂಧಿಯವರು ಹಾಕಿಕೊಳ್ಳುತ್ತಿದ್ದ ಲಂಗ, ಮೇಲುಹೊದಿಕೆ, ಬರವಣಿಗೆಗೆ ಬಳಸುತ್ತಿದ್ದ ಮೇಜು, ಪೆನ್ನು, ಬರವಣಿಗೆಯ ಸಾಮಗ್ರಿಗಳನ್ನು ಹಾಗೆಯೇ ಇಡಲಾಗಿದೆ.



**ನೆಹರೂ, ಇಂದಿರಾ ಗಾಂಧಿ ಹುಟ್ಟಿದ ಮನೆ, ಆನಂದ ಭವನ**

ಅಪರೂಪದ ವಸ್ತು ಪ್ರದರ್ಶನ, ಚಿತ್ರಪಟ ಚಾರಿತ್ರಿಕವಾಗಿ ತುಂಬಾ ಅಪರೂಪದ ದೃಶ್ಯ ಗಮನ ಸೆಳೆಯುತ್ತವೆ. ಬದಿಗೆ ಖಗೋಳ ವೀಕ್ಷಣೆಯ ಬೃಹತ್ ಸೌರಮಂಡಲ ಮಂದಿರ. ಆನಂದಭವನ ನೆಹರೂ-ಇಂದಿರಾ ತನಕ್ಕೆ ಮೇರು ನಿದರ್ಶನವಾಗಿದೆ. ನೋಟ ಹೆಮ್ಮೆ ಅಂದೆನ್ನಿಸುತ್ತದೆ.

ಆನಂದಭವನದ ಸೊಬಗನ್ನು ಕಣ್ಣಿಗೆ ತುಂಬಿಕೊಳ್ಳುತ್ತಲೇ ವಾರಣಾಸಿ ರಸ್ತೆ ಹಿಡಿದು ಹೊರಟೆವು. ಇಲ್ಲಿಂದ 50 ಕಿ.ಮೀ. ದೂರ ಪ್ರಯಾಣದಲ್ಲಿ. ರಸ್ತೆಯ ಬಲಬದಿಗೆ ನಾರಿಪಾಳ್ ಎಂಬ ತೋರುಗಂಭ ಗಮನ ಸೆಳೆಯಿತು. ಹಿಂದಿ-ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಬರೆದಿರುವ ಈ ಬೋರ್ಡ್‌ನ ಬದಿಯ ಕಚ್ಚಾರಸ್ತೆಯಲ್ಲಿ 7 ಕಿ.ಮೀ ಸಾಗಿದೆವು. ಗಂಗಾ-ಯಮುನಾ ಮುಖಜ ಭೂಮಿ, ಫಲವತ್ತಾದ ನೆಲ. ಗೋಧಿ, ಭತ್ತ, ಕಬ್ಬು ತೆನೆತೂಗಿ ನಿಂತ ರಮ್ಯ ನೋಟ. ಹೊಂಗೆ. ಹಿಪ್ಪೆ ಸಾಲುಮರ ಈ ಹಾದಿಯ ತುದಿಗೆ ಸೀತಾಮಡಿ. ಸೀತೆ ತನ್ನ ಗಂಡ ಶ್ರೀರಾಮನಿಂದ ಬೇಸರಗೊಂಡು ಪುರುಷ ಪರಂಪರೆಯನ್ನೇ ಹಳಿಯುವಂತೆ ಹುಟ್ಟಬಾರದು, ಹುಟ್ಟಿದರೆ ಇರಲೂ ಬಾರದು ಈ ಧರೆಯ ಮೇಲೆ ಎಂದು ಭೂಮಿಯ ಒಳಗೆ ಸೇರಿಕೊಂಡ ಪುಣ್ಯನೆಲ. ವಿಸ್ಮಯಕರ ಪ್ರದೇಶ. ಊರಿಲ್ಲ ಮನೆಗಳಿಲ್ಲ. ಒಂದಿಷ್ಟು ಪ್ರವಾಸಿಗರನ್ನು ನಂಬಿ ನಿಂತಿರುವ ಹೋಟೆಲ್ ಅಂಗಡಿಗಳು ಮಾತ್ರ, ಆದರೂ ಜನವೋ ಜನ!

ನಾರಿಪಾಳ್ ಎಂಬ ಫಲಕವಿದ್ದರೂ ಕರೆಯುವುದು ಸೀತಾಮಡಿ ಎಂದೇ. ಒಂದು ದೊಡ್ಡ ಸರೋವರ ಮಾದರಿಯ ಕಂದರ. ಆ ಸರೋವರದಲ್ಲಿ ನೀರಿಲ್ಲ. ಸ್ವಲ್ಪ ದೂರ ಸೇತುವೆ ಕಟ್ಟಿದ್ದಾರೆ. ಅದರ ಕೊನೆಯ ತುದಿಗೆ ಸೀತಾಮಂದಿರ. ಗುಂಬದ ಮಾದರಿಯ ವಿಶಾಲವಾದ ಶ್ರೀರಾಮಮಂದಿರ. ಅಮೃತಶಿಲೆಯ ಮೋಹಕ ಶ್ರೀರಾಮನ ಪರಿವಾರ ದೇವತೆಗಳು, ಸೀತಾ ಸ್ವಯಂವರದ ಚಿತ್ರ, ಯಜ್ಞಶಾಲೆಯ ನೋಟ, ಇದರ ಕೆಳ ಅಂತಸ್ತಿನಲ್ಲಿ ಸೀತೆ ಅಗ್ನಿಪ್ರವೇಶ ಮಾಡಿದ ಮತ್ತೊಂದು ದೇವಾಲಯ ಮತ್ತೂ ಕೆಳಗೆ ನೆಲಮಟ್ಟದಿಂದ ಸ್ವಲ್ಪ ಕೆಳಗೆ ಸೀತೆ ಭೂದೇವಿಯನ್ನು ಪ್ರಾರ್ಥಿಸುತ್ತಿರುವುದು, ಭೂಮಿ ಬಾಯಿ ಬಿಟ್ಟಿರುವುದು, ಸೀತೆ ಆ ಭೂಮಿಯ ಬಿರುಕಿನೊಳಗೆ ಪ್ರವೇಶಿಸುತ್ತಿರುವ ಮನಕರಗುವ ಚಿತ್ರ ರೋಚಕವಾಗಿದೆ. ನಾನು ಬಾಲ್ಯದಿಂದಲೂ ಲವಕುಶ, ಯಕ್ಷಗಾನ, ತರುವಾಯ ಸಂಪೂರ್ಣ ರಾಮಾಯಣ, ದಶಕಂಠ ರಾಮಾಯಣ ಪ್ರಸಂಗಗಳನ್ನು ನೋಡಿದ್ದೆ. ಸೀತೆಯನ್ನು ರಾಮ ಕಾಡಿಗೆ ಕಳುಹಿಸಿದ ಸಂದರ್ಭ, ನೆಲದ ಮೇಲೆ ಬಿದ್ದು ರೋಧಿಸುತ್ತಿದ್ದ ಶ್ರೀರಾಮನ ಪಾತ್ರದ ಸಾತೇನಹಳ್ಳಿ (ನಮ್ಮೂರ ಸಮೀಪ) ಸೀಡಜ್ಜಿ



ಸೀತೆ ಭೂಗರ್ಭ ಸೇರಿಕೊಂಡ ಸ್ಥಳ

ಶ್ರೀ ರಂಗಪ್ಪನವರ ವೇಷ, ಹಾವಭಾವ ಕಣ್ಣಿಗೆ ಕಟ್ಟುವಂತಿತ್ತು. ಸೀತೆಯನ್ನು ದಟ್ಟ ಕಾಡಿಗೆ ಕರೆತಂದು 'ಇಲ್ಲಿಗೇತಕ್ಕೆ ಕರೆತಂದಿರುವೆ ಲಕ್ಷ್ಮಣ? ನಾನು ಬಯಸಿದ್ದು ಋಷಿ ಆಶ್ರಮವನ್ನು' ಎಂದಾಗ 'ಅತ್ತಿಗೆ ಅಣ್ಣ ಶ್ರೀರಾಮಚಂದ್ರನ ಆಜ್ಞೆ ಬಿಡುವುದಷ್ಟೇ' ಅಂದಾಗ ತುಂಬು ಗರ್ಭಿಣಿ ಸೀತೆ ನಿಂತ ಸ್ಥಳದಲ್ಲೇ ರಪ್ಪೆಂದು ಕುಸಿದು ಬಿದ್ದಾಗ ಲಕ್ಷ್ಮೀಶ ಕವಿ 'ಬಲಿತ ಕದಳಿ ಮುರಿದಿಳೆಗೆ ಒರಗುವಂತೆ ಬಿದ್ದಳಂಗನೆ ಧರೆಗೆ' ಈ ದೃಶ್ಯವನ್ನು ಹಾಡು, ಕುಣಿತಗಳ ಮೂಲಕ ಸಾದೃಶ್ಯವಾಗಿ ಮಾಡುತ್ತಿದ್ದ ಸಾತೇನಹಳ್ಳಿ ಗ್ರಾಮಪಂಚಾಯ್ತಿ ಛೇರ್‌ಮನ್ ನನ್ನ ಚಿಕ್ಕಪ್ಪ ಬಿ.ಜಿ. ಲಿಂಗಪ್ಪನವರ ಆ ಹಾವ-ಭಾವ ಪೂರ್ಣವಾಗಿ ಕಣ್ಣಿಗೆ ಕಟ್ಟುವಂತಾಯಿತು. ಸೀತೆ ಚಿತೆಯೇರಿದ ಹಾಗೂ ಭೂಗರ್ಭ ಸೇರಿಕೊಂಡ ಸಂದರ್ಭಗಳನ್ನು ತುಂಬಾ ಆಕರ್ಷಕ, ಅದ್ಭುತ ಎನ್ನುವ ಹಾಗೆ ಸೀತಾಮಡು ಸ್ಥಳದಲ್ಲಿ ನಿರ್ಮಿಸಿದ್ದಾರೆ. ಗಿಡ, ಬಿದಿರುಮೆಳೆ, ಬಂಡೆ, ಸಣ್ಣ ಹೊಳೆ, ಮರಳು, ಕಾಡಿನ ವಾತಾವರಣ ಒಂದಕ್ಕೊಂದು ಪೂರಕವಾಗಿದೆ. ಸೀತೆ ಮಡಿದ ಸ್ಥಳದಿಂದ 500 ಮೀ. ದೂರದಲ್ಲಿ ಆಂಜನೇಯನ 43 ಅಡಿಯ ಬೃಹತ್ ಮೂರ್ತಿಯನ್ನು ಪಿಓಪಿ ಹಾಗೂ ಗಾರೆಯಿಂದಲೇ ನಿರ್ಮಿಸಿದ್ದಾರೆ. ಎದುರಿನ ದಿಬ್ಬದ ಮೇಲೆ ರಾಮಾಯಣದ ವಿವಿಧ ಪ್ರಸಂಗದ ಚಿತ್ರಗಳನ್ನು ನಿರ್ಮಿಸಿದ್ದಾರೆ. ಆ ನೋಟವೂ ಚೆನ್ನಾಗಿದೆ.

ನೇಪಾಳ-ಭಾರತ ಭಾವನಾತ್ಮಕ ಸಂಬಂಧ ಬೆಸೆಯುವ ಜಾನಕಿಪುರ-ಸೀತಾಮಡಿ ಇವುಗಳ ನಡುವೆ ರಾಮ-ಸೀತೆಯರ ಕಿಷ್ಕಿಂಧೆ, ನಾಮದ ಚಿಲುಮೆ (ತುಮಕೂರು), ರಾಮನಾಥಪುರ (ಹಾಸನ) ಇವುಗಳ ಐತಿಹ್ಯ, ಸ್ಥಳಪುರಾಣ ಕಣ್ಣ ಮುಂದೆ ಹಾದುಹೋದವು. ಹಿಮಾಲಯದ (ನೇಪಾಳದ) ಆಚೆ ತಪ್ಪಲಿನ ಈ ಸೀತೆಯೆಂಬ ಹಿಮ ಕನ್ಯೆ ಎಷ್ಟೊಂದು ದೂರ ತಿರುಗಾಡಿದ್ದಾಳೆ! ಇದೊಂದು ವಿಸ್ಮಯ ಅಥವಾ ಕಲ್ಪನೆಗೆ ಎಷ್ಟೊಂದು ಕಣ್ಣುಗಳು!

೧೮

# ಸಾಹಸಿ ಶೆರ್ಪಾಗಳು

ನಮ್ಮ ವಾಹನ ಚಾಲಕ ಚಾಂಗ್‌ಚಿಂಗ್. ಈತನು ಶೆರ್ಪಾ ಜನಾಂಗಕ್ಕೆ ಸೇರಿದವನು. ನೇಪಾಳದಲ್ಲಿ ಶೆರ್ಪಾ ಜನಾಂಗ ಬುಡಕಟ್ಟು ಜನಾಂಗವಾಗಿದ್ದು 8000 ಕ್ಕೂ ಮೀರಿದ ಜನಸಂಖ್ಯೆ ಹೊಂದಿದ್ದಾರೆ. ಇವರ ಆಕೃತಿ, ಬಣ್ಣ ಈ ಮೊದಲಾದ ದೈಹಿಕ ಚಹರೆ ಕರ್ನಾಟಕದ ಕಾಡುಕುರುಬರ ಜನಾಂಗಿಕ ಲಕ್ಷಣವನ್ನು ಹೊಂದಿದ್ದಾರೆ. ಮೂಲತಃ ಟಿಬೆಟ್ ಕಡೆಯಿಂದ ಬಂದ ಈ ಜನಾಂಗ ಇಂದಿಗೂ ತಮ್ಮ ವಲಸಿಗತನವನ್ನೇ ಅನುಭವಿಸುತ್ತಿದ್ದಾರೆ. ನೇಪಾಳದ ಶಾಹ ರಾಜವಂಶ 1559-1570 ರ ಈ ಕಾಲಮಾನದಲ್ಲಿ ಟಿಬೆಟ್ ದೇಶದಿಂದ ಬಂದ ಇವರು, ಎವರೆಸ್ಟ್ ಪರ್ವತದ ದಕ್ಷಿಣ ಭಾಗದ ಕಣಿವೆಗಳಲ್ಲಿ ನೆಲೆಸಿದರು. ನಂತರ ನಗರ ಮುಖವಾಗತೊಡಗಿ ನಾಗರಿಕ ಸೋಂಕಿಗೂ ಒಳಗಾಗುತ್ತಿದ್ದಾರೆ. ಬೌದ್ಧ ಧರ್ಮೀಯರಾದ ಇವರು ಪ್ರಕೃತಿ ಆರಾಧಕರು. ಪರ್ವತಗಳನ್ನು ದೇವರು ಎಂದು ನಂಬುತ್ತಾರೆ. ಸೋಲು, ನಂಬು, ಕುಂಬು ಎಂಬ ಹೆಸರಲ್ಲಿ ಪರ್ವತಗಳನ್ನು ಪೂಜಿಸುತ್ತಾರೆ. 1950 ರಲ್ಲಿ ಚೀನಾ ದೇಶವು ಟಿಬೆಟ್ ದೇಶವನ್ನು ಆಕ್ರಮಿಸಿತು. ಇವರಿಂದ ಕುಂಬು ಪರ್ವತ, ಪರ್ವತಾರೋಹಣಕ್ಕೆ ತೆರೆದುಕೊಂಡಿತು. ಭಾರತದ ಬದಿಯಿಂದ ಹಿಮಾಲಯ ಪರ್ವತಾರೋಹಣಕ್ಕೆ ಇದರಿಂದ ಅನುಕೂಲವಾಯಿತು. ಕುಂಬು ಪರ್ವತದ ಕಣಿವೆಗಳಲ್ಲಿ ವಾಸಿಸುತ್ತಿದ್ದ ಶೆರ್ಪಾ ಜನಾಂಗ ತಮ್ಮ ಸಾಹಸ, ಸಹಜ ಪರ್ವತಾರೋಹಣ ಗುಣಗಳಿಂದ ವಿದೇಶೀ ಪರ್ವತಾರೋಹಿಗಳಿಗೆ ಸಹಾಯ ಮಾಡುತ್ತಾ ಬಂದರು. ಮುಂದೆ ಪರ್ವತಾರೋಹಣವು ತಮ್ಮ ಬದುಕಿನ ಬಹುಮುಖ್ಯ ಕಸುಬಾಯಿತು.

ಶೆರ್ಪಾ ಜನಾಂಗ ಮೃದು ಭಾಷಿಗರು. ಕಡಿಮೆ ಮಾತನ್ನಾಡುತ್ತಾರೆ. ಕೊಟ್ಟದ್ದನ್ನು ವಿನಯದಿಂದ ತೆಗೆದುಕೊಳ್ಳುತ್ತಾರೆ. ಹಿಂದೂಗಳಿರಲಿ ಗೂರ್ಖಾ ಜಿಲ್ಲೆಯ ಗೂರ್ಖಾಗಳು ಹಟವಾದಿಗಳಂತೆ ತಮ್ಮ ವ್ಯವಹಾರಕ್ಕೆ ಗಿರಾಕಿಗಳನ್ನು ಕುದುರಿಸುವ, ನಾನಾ ಬಗೆಯ

ವಸೂಲಾತಿ, ದಗಲ್‌ಬಾಜಿಗೆ ಇಳಿಯುವುದನ್ನು ಅರ್ಥವಾಗದ ಭಾಷೆಯಲ್ಲಿ ತಮ್ಮ ಶಾರೀರಿಕ, ಆಂಗಿಕ ಚಲನೆಯಿಂದಲೇ ತೋರ್ಪಡಿಸಿಕೊಳ್ಳುತ್ತಾರೆ. ಆದರೆ ಶೆರ್ಪಾಗಳು ಇದಕ್ಕೆ ಹೊರತಾದವರು ಶೇ.85 ಶೆರ್ಪಾ ಕುಟುಂಬ ಕಠಿಣ ಕೆಲಸದಲ್ಲಿ ತೊಡಗುತ್ತಿದ್ದಾರೆ. ಪರ್ವತಾರೋಹಣ ಇವರ ಪ್ರಮುಖ ಕಾಯಕ ಜೊತೆಗೆ ಕಣಿವೆ ಕೊಳ್ಳದ ಪ್ರವಾಸಾಧಾರಿತ ಸಣ್ಣ ಪುಟ್ಟ ಉಪಕಸುಬುಗಳನ್ನು ಶೆರ್ಪಾ ಜನಾಂಗ ಅವಲಂಭಿಸಿದ್ದಾರೆ. ಆರಂಭದಲ್ಲಿ ಕಂದಮೂಲಾಹಾರ, ಕಾಡ ಉಡುಗೆ ಇವರ ವೇಷಭೂಷಣ, ಉಪ್ಪು ಬೆರೆತ ಚಹಾ, ಬೇಯಿಸಿದ ಆಲೂಗಡ್ಡೆ ಇವರ ಊಟ. ಈಗ ಪರಿಸ್ಥಿತಿ ಬದಲಾಗಿದೆ ಎಂದು ಚಾಂಗ್ ಹೇಳುತ್ತಾನೆ.

ಡ್ರೈವಿಂಗ್, ಜಲಪಾತಗಳಲ್ಲಿ ದೋಣಿ ನಡೆಸುವುದು, ಬೇಟೆ ಇವುಗಳ ಜೊತೆಗೆ ಸಣ್ಣ ಪುಟ್ಟ ವ್ಯಾಪಾರವನ್ನೂ ಕರಗತ ಮಾಡಿಕೊಂಡಿದ್ದಾರೆ. ಆದರೂ ಶೆರ್ಪಾಗಳು ವಿನೋದ ಮನಃಸ್ಥಿತಿಯ ಸಹನಾಶೀಲತೆ, ಸಹಕಾರ ಮನೋಭಾವ, ನಿಷ್ಠೆ, ಕಾಯಕ ಬದ್ಧ ತೆ, ಸಹಿಷ್ಣುತೆಗಳಿಂದ ನೇಪಾಳದಲ್ಲಿ ಶೆರ್ಪಾಗಳು ಪ್ರವಾಸಿಗಳಿಗೆ ಎಲ್ಲಾ ವಿಧದಲ್ಲೂ ಸಹಕಾರ ನೀಡುತ್ತಾರೆ. ಇಂಥ ಎರಡು ಪ್ರಪಂಚಗಳನ್ನೂ ನಾನು ಹತ್ತಿರದಿಂದ ಕಂಡೆನು. ಒಂದು ನಾವು ನೇಪಾಳ ದೇಶದಲ್ಲಿ ಇರುವಷ್ಟು ದಿನ ನಮ್ಮ ವಾಹನ ಚಾಲಕನಾಗಿ ರಾತ್ರಿ-ಹಗಲು ಯಾವ ಸಮಯ ಸಂದರ್ಭದ ಕಟ್ಟುಕಟ್ಟಳೆ ಮೀರಿ ಹಸನ್ಮುಖದಿಂದ ಸಹಕರಿಸಿದ ಚಾಂಗ್‌ಚಿಂಗ್ ಮತ್ತಿಬ್ಬರು ಪೋಖ್ರಾದ ಫೆವಾ ಸರೋವರದಲ್ಲಿನ ನೌಕಾ ವಿಹಾರದ ಸಂದರ್ಭದ ಭೀಮಕಾಯದ ಕಪ್ಪು ಸುಂದರಿ. ಈಕೆಯ ಹೆಸರು ಕೊನೆಗೂ ನಮಗೆ ತಿಳಿಯಲೇ ಇಲ್ಲ. ಗಾಬರಿಯ ನಡುವೆ ಹೆಸರು ಸಂಗ್ರಹತನಕ್ಕೆ ಮರೆವು ಕಾಡಿತ್ತು! ನಮ್ಮ ಫೆವಾ ಸರೋವರದ ತೆಪ್ಪೋತ್ಸವ, ಈಕೆಯಿಂದ ರೋಚಕವಾಯಿತು.

೧೯

# ನೇಪಾಳದ ಚರಿತ್ರೆ - ಆರಂಭ ರೋಚಕ ಅಂತ್ಯ ರಕ್ತಸಿಕ್ತ

ರಾಜ-ಮಹಾರಾಜರುಗಳು, ವೀರ ಯೋಧರ ನಾಡು ನೇಪಾಳ. ವಾಲ್ಮೀಕಿ ಮೊದಲಾದ ಸಾಧು ಸಂತರು ಬೆಳೆದ ನೆಲ. ಅಪೂರ್ವ ಹಿಮಪರ್ವತಗಳು, ದೇವಾಲಯಗಳ ದೇಶ. ಪ್ರಪಂಚದ ಏಕೈಕ ಹಿಂದೂ ರಾಷ್ಟ್ರ ಎಂಬ ಹೆಗ್ಗಳಿಕೆಯಂತೆ ಪ್ರಪಂಚದ ಅತಿ ಎತ್ತರದ ಹಿಮ ಪರ್ವತ, ಎತ್ತರವಾದ ಕಣಿವೆಗಳಲ್ಲಿ ಜನವಸತಿ ಇರುವುದು ನೇಪಾಳ ದೇಶದಲ್ಲಿ ಮಾತ್ರ. ಮಂಜು ತಬ್ಬಿದ ನೆಲದಂತಿರುವ ಈ ದೇಶದ ಇತಿಹಾಸ ಆರಂಭದಲ್ಲಿ ರೋಚಕ, ಅಂತ್ಯ ರಕ್ತಸಿಕ್ತ. ಶಾಹ ರಾಜವಂಶಕ್ಕೆ ಹೆಣ್ಣೊಂದನ್ನು ತರುವುದರ ಬಗೆಗೆ ಉಂಟಾದ ಸಣ್ಣ ಮನಸ್ತಾಪ ಇಡೀ ರಾಜವಂಶದ ಹನ್ನೊಂದು ಜನರನ್ನು ಕ್ಷಣಾರ್ಧದಲ್ಲಿ ಆಹುತಿ ತೆಗೆದುಕೊಂಡ ಘಟನೆ ಮೈ ನಡುಗಿಸುತ್ತದೆ. ಇದು ಹಿಂದೂ ರಾಷ್ಟ್ರವೆಂಬ ನೇಪಾಳದ ದುರಂತ.

ಕ್ರಿ.ಪೂ.900-700 ರಿಂದ ಆರಂಭವಾಗುವ ಇಲ್ಲಿನ ಪ್ರಭುತ್ವದ ನೆಲೆ, ಗೋಪಾಲ ರಾಜವಂಶ ನೇಪಾಳ ನೆಲದ ಮೊದಲ ದೊರೆ. ನಂತರ ಅಭೀರ್ ಕಿರಾತ ರಾಮವಂಶ, ಯಲಂಬರ್, ಸುಮ್ಕೋ, ಅರಸನವರೆಗೆ ಒಂದು ಹಂತವಾದರೆ, ಕ್ರಿ.ಶ.225 ರಿಂದ ಮತ್ತೊಂದು ಹಂತ ಆರಂಭವಾಗುತ್ತದೆ. ಕ್ರಿ.ಶ.225 ರಲ್ಲಿ ಜಯದೇವನಿಂದ ಲಿಚ್ಛವಿ ವಂಶದ ಆಳ್ವಿಕೆ. ಈ ವಂಶದ ಗುಣ ಕಾಮದೇವರಾಜ ಎಂಬುವವನು ಕ್ರಿ.ಶ.723 ರಿಂದ 898 ರವರೆಗೆ ನೇಪಾಳದ ದೊರೆಯಾಗಿದ್ದನು. ಈತನು ಕಠ್ಮಂಡು ನಗರವನ್ನು ಸ್ಥಾಪಿಸಿದನು. ಪಶುಪತಿನಾಥ ದೇವಾಲಯದ ಸ್ಥಾಪನೆಗೆ ಇವನು ಅಸ್ತಿಭಾರ ಹಾಕಿದನು. ಕ್ರಿ.ಶ.899 ರಲ್ಲಿ ನೇಪಾಳದ ದೊರೆಯಾದ ಆನಂದಮಲ್ಲ, ಭಕ್ತಾಪುರ ಸ್ಥಾಪಿಸಿದನು. ನಂತರ ರಾಜ ಯಕ್ಷಮಲ್ಲ, ರಾಜ ರತ್ನಮಲ್ಲ ಇವರು ಭಕ್ತಾಪುರದ ದೊರೆಗಳಾಗಿ ಈ ನಗರವನ್ನು ದೇವಾಲಯಗಳ ಊರನ್ನಾಗಿಸುವುದರ ಜೊತೆಗೆ ಆಕರ್ಷಕ ಕಾಷ್ಠ-ಕುಸುರಿ ಕೆಲಸ, ಜಗತ್ತಿನ ಎತ್ತರದ ಶಿವ ಶಿಲಾಮೂರ್ತಿ, ಮ್ಯೂಸಿಯಂ ಸ್ಥಾಪಿಸಿದನು. ಈ ಮೂಲಕ ಭಕ್ತಪುರವನ್ನು

ಕಲಾಕುಶಲ ಕಲೆಗಳ ನಗರವನ್ನಾಗಿಸಿದನು.

ಕ್ರಿ.ಶ.1559 ರಲ್ಲಿ ಗೋರ್ಖಾದಲ್ಲಿ ಉದಯವಾದ ಶಾಹ ರಾಜವಂಶದ ದ್ರವ್ಯಶಾಹ ಎಂಬುವವನು ಈ ವಂಶದ ಮೊದಲ ದೊರೆ. ಅಲ್ಲಿಂದ 2008 ರವರೆಗೆ ಶಾಹ ರಾಜವಂಶವು ನೇಪಾಳ ದೇಶವನ್ನು ಸಮರ್ಥವಾಗಿ ಆಳ್ವಿಕೆ ಮಾಡಿತು. ಮಾತ್ರವಲ್ಲ 1768 ರಲ್ಲಿ ಗೋರ್ಖಾ ರಾಜ ಪೃಥ್ವಿನಾರಾಯಣಶಾಹ, ಕಠ್ಮಂಡು, ಪಾಟ್ನಾ ಹಾಗೂ ಭಕ್ತಾಪುರಗಳನ್ನು ವಶಪಡಿಸಿಕೊಂಡು ಗೋರ್ಖಾ ಪ್ರದೇಶದಿಂದ ಮಧ್ಯನೇಪಾಳದ ಕಠ್ಮಂಡುವಿಗೆ ರಾಜಧಾನಿಯನ್ನು ಬದಲಾಯಿಸಿದನು. ಇಲ್ಲಿಂದ ಅನುಕ್ರಮವಾಗಿ ಶಾಹ ವಂಶದ ರಾಜರುಗಳು ಈ ಕೆಳಕಂಡಂತೆ ನೇಪಾಳದ ದೊರೆಯಾಗುತ್ತಾ ಬಂದರು. ಪ್ರತಾಪ್ ಸಿಂಗ್ ಶಾಹ (1775-1777), ರಾಣಾ ಬಹದ್ದೂರ್ ಶಾಹ (1785-1791) ಗಿರ್ವನ್ ಯುದ್ಧ ವಿಕ್ರಮ ಶಾಹ (1799-1816) ರಾಜೇಂದ್ರ ವಿಕ್ರಮ್ ಶಾಹ (1816-1847), ಸುರೇಂದ್ರ ವಿಕ್ರಮ್ ಶಾಹ (1847-1881), ತ್ರೈಲೋಕ್ಯ ವಿಕ್ರಮಶಾಹ (1881), ಪೃಥ್ವಿವೀರವಿಕ್ರಮಶಾಹ (1881-1911), ತ್ರಿಭುವನ್ ವೀರವಿಕ್ರಮಶಾಹ (1911-1955), ಬೀರೇಂದ್ರ ವೀರವಿಕ್ರಮ (1972 - ಜೂನ್ 2, 2001), ದೀಪೇಂದ್ರ ವೀರವಿಕ್ರಮ ಶಹ (02.06.2001 ರಿಂದ 04.06.2001 ರ ಮಧ್ಯಾಹ್ನ 3.45 ರ ತನಕ) ಮೂರು ದಿನಗಳ ಕಾಲ ದೊರೆ ಎನಿಸಿಕೊಂಡು ಸತ್ತನು. ಮುಂದೆ ಇವನ ಚಿಕ್ಕಪ್ಪ ಜ್ಞಾನೇಂದ್ರ ವೀರ ವಿಕ್ರಮ ಶಾಹ 2001 ನೇ ಜೂನ್ 4 ರಿಂದ 2008 ರವರೆಗೆ ನೇಪಾಳ ದೇಶವನ್ನು ಆಳ್ವಿಕೆ ಮಾಡಿದನು. ಹೀಗೆ 1723 ರಿಂದ 2008 ರವರೆಗೆ ಒಟ್ಟು 285 ವರ್ಷಗಳ ಕಾಲ ಸತತವಾಗಿ ನೇಪಾಳವನ್ನು ಒಂದೇ ಮನೆತನದವರು ಆಳ್ವಿಕೆ ಮಾಡಿದರು.

ನೇಪಾಳ ಶಾಹವಂಶ ದೊರೆಗಳ ಕಾಲದಲ್ಲಿ ದೇಶದ ಆರ್ಥಿಕ, ಸಾಮಾಜಿಕ, ಧಾರ್ಮಿಕ, ಪ್ರವಾಸೋದ್ಯಮ ಕ್ಷೇತ್ರಕ್ಕೆ ಭದ್ರವಾದ ಬುನಾದಿಯನ್ನು ಹಾಕಿದರು. ನೆರೆಯ ದೇಶಗಳೆಲ್ಲವೂ ಸ್ವಾತಂತ್ರ್ಯದ ಹೆಸರಿನಲ್ಲಿ ಪ್ರಜಾಪ್ರಭುತ್ವ ಸಂಪಾದಿಸಿಕೊಂಡು ಸಂವಿಧಾನಬದ್ಧವಾದ ಚುನಾವಣೆ, ಮತದಾನದ ಮೂಲಕ ಆಯ್ಕೆಯಾಗಿ ಪಕ್ಷಗಳ ಹೆಸರಿನಲ್ಲಿ ಸರ್ಕಾರ ನಡೆಸಿದರೆ ನೇಪಾಳದಲ್ಲಿ ಮಾತ್ರ ರಾಜಪ್ರಭುತ್ವ ಮುಂದುವರಿದುಕೊಂಡೇ ಬಂದಿತ್ತು. ಇದೊಂದು ವಿಸ್ಮಯಕಾರಿಯಾದ ಸನ್ನಿವೇಶ. ಇಂಥ ನೆಲದಲ್ಲಿ ಹೆಣ್ಣಿನ ಕಾರಣದಿಂದ ಇದೇ ನೇಪಾಳದ ಶಾಹ ರಾಜವಂಶ ಒಂದೇ ಒಂದು ರಾತ್ರಿಗೆ ನಾಶವಾದದ್ದು ದುರಂತ. ಈ ರಕ್ತಸಿಕ್ತ ಬದುಕನ್ನು ಹೇಳುವಾಗ ರುದ್ರಾಕ್ಷಿ ಮಹಲ್‌ನ ಗುರುಬಹದ್ದೂರ್ ಗದ್ಗದಿತರಾದರು. ಉಕ್ಕಿಬರುವ ಕಣ್ಣೀರನ್ನು ತಡೆದು ಒಂದೆರಡು ಕಾಗದದ ಚೂರು, ಕೆಲವು ಫೋಟೋಗಳನ್ನು ತೋರಿಸುತ್ತಾ ಅಳತೊಡಗಿದರು.

ಇದು ನೇಪಾಳದ ರಾಜವಂಶದ ಅವನತಿಯ ಕಥೆಯಲ್ಲ, ನಮ್ಮ ವಂಶಿಗರ ನಾಮರ್ದ ವರ್ತನೆಯ ಕಥೆ ಎಂದು ಸಾವರಿಸಿಕೊಂಡು ವಿವರಿಸತೊಡಗಿದರು. ಒಂದೆರಡು ಬಿಸ್ಕತ್ ನೀಡಿದರು. ಮಾತು ಮುಂದುವರಿಯಿತು. ನೇಪಾಳದ ಅತ್ಯಂತ ಸಮರ್ಥ, ವಿವೇಕಶಾಲಿ ರಾಜನೆಂದರೆ ದೊರೆ ಬೀರೇಂದ್ರ ವೀರ ವಿಕ್ರಮಶಾಹ. ಆತನ ಮಡದಿ ರಾಣಿ ಐಶ್ವರ್ಯಾದೇವಿ. ಇವರ ಮಗ ದೀಪೇಂದ್ರಶಹ. ಈತನೂ ಬಿ.ಎಸ್ಸಿ ಪದವೀಧರ. ಬೆಂಗಳೂರು, ದೆಹಲಿ ಇಲ್ಲೆಲ್ಲಾ ಓದಿಕೊಂಡು ಬಂದವನು. ನೇಪಾಳದ ಮಾಜಿ ಮಂತ್ರಿ ಪಶುಪತಿ ಶಮ್ಶೇರ್ ಸಿಂಗ್ ರಾಣಾ ಇವರ ಮಗಳು ದೇವಯಾನಿಯ ಪ್ರೀತಿಯ ಬಂಧನಕ್ಕೆ ಸಿಕ್ಕಿಹಾಕಿಕೊಂಡನು. ಈಕೆ ದೀಪೇಂದ್ರನಿಗಿಂತಲೂ ಮೂರು ವರ್ಷ ದೊಡ್ಡವಳು. ಈಕೆಯೂ ದೆಹಲಿ, ಬೆಂಗಳೂರು, ಡೆಹ್ರಾಡ್ಯೂನ್ ಕಡೆಯೆಲ್ಲಾ ಓದಿಕೊಂಡು ಬಂದವಳು. ಮಧ್ಯ ಪ್ರದೇಶದ ಕಾಂಗ್ರೆಸ್ ಸಂಸದ ಮಾಧವರಾವ್ ಸಿಂಧ್ಯಾ ಅವರ ಅಕ್ಕ ಉಷಾರಾಜೆ ಅವರ ಮಗಳು. ಐಶ್ವರ್ಯಳೊಂದಿಗೆ ದೀಪೇಂದ್ರ ತಿರುಗಾಡುವಾಗ ಮಹಾರಾಣಿ ಐಶ್ವರ್ಯಾದೇವಿ ಆಕ್ಷೇಪಿಸಿದ್ದಳು. ಮಗನಿಗೆ ತಕ್ಕ ಸೊಸೆಯಲ್ಲ ಎಂಬ ತಕರಾರು ತೆಗೆದಿದ್ದಳು. ಆದರೂ ಒಲ್ಲದ ಮನಸ್ಸಿನಿಂದ ಜೂನ್ 1, 2001 ರಂದು ಯುವರಾಜ ದೀಪೇಂದ್ರ ಹಾಗೂ ದೇವಯಾನಿಯರ ಮದುವೆ ನೇಪಾಳದ ಅರಮನೆ ನಾರಾಯಣ ಹಿತ್ತೀ ಅರಮನೆಯಲ್ಲಿ ಅದ್ದೂರಿಯಾಗಿಯೇ ನೆರವೇರಿತು. ಅಂದು ಸಂಜೆ ದೊರೆ ಬೀರೇಂದ್ರರ ತಂದೆಯ ಹೆಸರಿನ ಮಹೇಂದ್ರ ಮಹಲ್‌ನಲ್ಲಿ ಸೇರಿದ್ದ ಬೀಗರ ಔತಣ ಕೂಟದಲ್ಲಿ ದೀಪೇಂದ್ರ ರೈಫಲ್‌ನಿಂದ ಹತ್ತು ಜನರನ್ನು ಕ್ಷಣಮಾತ್ರದಲ್ಲಿ ಕೊಂದು ಹಾಕಿದನು. ಹೀಗೆ ಹತರಾದವರಲ್ಲಿ ನೇಪಾಳದ ಮಹಾರಾಜ ಬೀರೇಂದ್ರ, ಮಹಾರಾಣಿ ಐಶ್ವರ್ಯಾದೇವಿ, ಹಿರಿಯ ರಾಜಮಾತೆ (ಅಜ್ಜಿ) ರಾಜ್ಯಲಕ್ಷ್ಮೀದೇವಿ ಶಾಹ, ರಾಜಕುಮಾರಿ ಶೃತಿ, ಕಿರಿಯ ರಾಜಕುಮಾರ ನೀರಾಜನ್, ದೊರೆ ಬೀರೇಂದ್ರನ ಸೋದರಿಯರಾದ ಶಾರದಾ, ಶಾಂತಿ, ಶಾರದಳ ಪತಿ ಖಡೂಗ್ ಬಹದ್ದೂರ್ ಶಮ್‌ಶೇರ್, ದೊರೆಯ ಇನ್ನೊಬ್ಬ ಮಗ ಧೀರೇಂದ್ರ ಇವರನ್ನು ಮನಬಂದ ರೀತಿಯಲ್ಲಿ ಗುಂಡಿನ ಸುರಿಮಳೆಗರೆದು ಕ್ಷಣಾರ್ಧದಲ್ಲಿ ಕೊಂದು ಹಾಕಿದನು ದೀಪೇಂದ್ರ. ಮದುವೆಯ ಮನೆ ಸ್ಮಶಾನವಾಯಿತು. ಈತನಿಗೂ ಹಿಂದಿ ನಿಂದ ಗುಂಡು ತಗುಲಿ ನಿತ್ರಾಣವಾಗಿದ್ದನು.

ದುರಂತ.. ಇಂಥ ಕೊಲೆಗಡುಕನನ್ನೇ ಕೆಲವು ವಿಚ್ಛಿದ್ರಕಾರಿ ಶಕ್ತಿಗಳು ಸೇರಿ 02.06.2001 ರ ಸಂಜೆ ನೇಪಾಳದ ದೊರೆ ಎಂದು ಘೋಷಿಸಿದರು. ಇದಾದ ಒಂದೂವರೆ ದಿನದಲ್ಲೇ ದೀಪೇಂದ್ರ ಸತ್ತುಹೋದನು ಎಂದು ಬಹದ್ದೂರ್ ತುಸು ಕೋಪತಾಪದಿಂದಲೇ ಹೇಳಿದನು. ಮುಂದೆ ಶಾಹ ವಂಶದ ಬೀರೇಂದ್ರನ ಸಹೋದರ ಜ್ಞಾನೇಂದ್ರನನ್ನು

ನೇಪಾಳದ ದೊರೆಯನ್ನಾಗಿ 04.06.2001 ರಂದು ಘೋಷಿಸಲಾಯಿತು. ಇಲ್ಲಿಂದ ನೇಪಾಳದ ಬದುಕೇ ಬದಲಾಯಿತು. ಅಶಾಂತಿ ನೆಲೆಸಿತು. ದೊರೆ ಜ್ಞಾನೇಂದ್ರ ಎಂಟು ವರ್ಷ ನೇಪಾಳವನ್ನು ಆಳಿದರೂ, ಆತನು ನಿತ್ಯವೂ ಭಯದ ನೆರಳಿನಲ್ಲಿಯೇ ಆಳಿದನು. ಬರುಬರುತ್ತಾ ನೇಪಾಳದಲ್ಲಿ ಮಾವೋವಾದಿಗಳ ಉಪಟಳ ಹೆಚ್ಚಾಯಿತು. ಅಧಿಕಾರದಿಂದ ಕೆಳಗಿಳಿಯುವಂತೆ ಚಳುವಳಿ, ಬೆದರಿಕೆಯ ಕರೆಗಳು ಬಂದವು. ನೇಪಾಳದಲ್ಲಿ ಪ್ರಜಾಸತ್ತೆ ಬರಬೇಕು ಎಂಬುದು ಮಾವೋವಾದಿ ಚಳುವಳಿಯನ್ನು ಹುಟ್ಟುಹಾಕಿದ ಪ್ರಚಂಡ (ಪುಷ್ಪಕಮಲ್ ದಹಲ್) ಕಮ್ಯೂನಿಸ್ಟ್ ಕ್ರಾಂತಿಕಾರಿ ನೇತಾರ. ಮಾಧ್ಯಮಗಳ ಮೂಲಕ ಹೇಳತೊಡಗಿದನು. ದೊರೆ ಜ್ಞಾನೇಂದ್ರ ರಾಜಭವನ್ ನಾರಾಯಣ ಹಿತ್ತೀಪ್ಯಾಲೇಸ್‌ನ್ನು ತ್ಯಜಿಸಬೇಕು. ನಾವು ದೊರೆಗೆ ಗೌರವಯುತವಾಗಿ ಹೊರಹೋಗಲು ರಸ್ತೆ ಒದಗಿಸುತ್ತೇವೆ. ಇತಿಹಾಸದಲ್ಲಿ ರಾಜರ ತಲೆ ಕಡಿಯುವ, ರಾಜಸಿಂಹಾಸನದಿಂದ ಓಡಿಸುವ ಹಲವು ತೆರನ ಘಟನೆಗಳು ನಡೆದಿವೆ. ಜ್ಞಾನೇಂದ್ರ ದೊರೆ ಇದಕ್ಕೆ ಅವಕಾಶ ಕೊಡದೆ ಅಧಿಕಾರದಿಂದ ಕೆಳಗಿಳಿಯಬೇಕು ಎಂದು ಪ್ರಚಂಡ ನೇಪಾಳದ ಎಲ್ಲ ಕಡೆ ಪ್ರಚೋದನಕಾರಿ ಭಾಷಣ ಮಾಡಿದನು. ಇದೊಂದು ಆಂದೋಲನವಾಯಿತು. ಜನತೆಯೂ ಪ್ರಚೋದನೆಗೆ ಒಳಗಾದರು.

2008ರಲ್ಲಿ ಮೊದಲ ಸಾರ್ವತ್ರಿಕ ಚುನಾವಣೆ ನಡೆಯುತ್ತದೆ. ಅದರಲ್ಲಿ ಕಮ್ಯೂನಿಸ್ಟ್ ಪಾರ್ಟಿ ಆಫ್ ನೇಪಾಳ (ಮಾವೋವಾದಿ) ಸ್ಪಷ್ಟ ಬಹುಮತ ಪಡೆಯಿತು. ನೇಪಾಳದ ಅರಸೊತ್ತಿಗೆಯನ್ನು ಕಿತ್ತೊಗೆಯಬೇಕೆಂದು ಸಂಘಟಿತ ಹೋರಾಟ ಮಾಡಿದ ಗಿರಿಜಾಪ್ರಸಾದ್ ಕೊಯಿರಾಲಾ ಪ್ರಚಂಡ ಮತ್ತು ಮಾಧವ ಇವರುಗಳಲ್ಲಿ ಗಿರಿಜಾ ಪ್ರಸಾದ್ ಕೊಯಿರಾಲಾ ನೇಪಾಳದ ಪ್ರಧಾನಿಯಾಗಿ ಆಯ್ಕೆಯಾದರು. ಪ್ರಚಂಡ ಕಮ್ಯೂನಿಸ್ಟ್ ಪಾರ್ಟಿಯ ಅಧ್ಯಕ್ಷರಾದರು. ಪಕ್ಷದ ಮಹಾಪ್ರಧಾನ ಕಾರ್ಯದರ್ಶಿಯಾಗಿ ಮಾಧವ ಆಯ್ಕೆಯಾದರು. ಹೀಗೆ 285 ವರ್ಷಗಳ ಆಳ್ವಿಕೆ ನಡೆಸಿದ ಶಾಹ ರಾಜಮನೆತನ ನೇಪಾಳದ ಸಮಗ್ರ ಅಭಿವೃದ್ಧಿಗೆ ಕಾರಣವಾಯಿತು. ಈ ರಾಜವಂಶದ ಕೊನೆಯ ಕೊಂಡಿ ಜ್ಞಾನೇಂದ್ರಶಾಹ 2008 ರಲ್ಲಿ ತಮ್ಮ ವಂಶವಾಹಿ ಆಳ್ವಿಕೆಯ ತಾಣವಾದ ನಾರಾಯಣ ಹಿತ್ತೀ ಪ್ಯಾಲೇಸ್‌ನ್ನು ತೊರೆದನು. ಈಗ ಈ ಅರಮನೆ ನೇಪಾಳೀ ರಾಯಭಾರಿ ಕಛೇರಿಯನ್ನಾಗಿ ಒಂದು ಭಾಗ ಆಕ್ರಮಿಸಿಕೊಂಡಿದ್ದರೆ ಇನ್ನೊಂದು ಭಾಗ ನೇಪಾಳೀ ಮ್ಯೂಸಿಯಂ ಆಗಿದೆ. ಆದರೂ ನೇಪಾಳಿ ಜನಾಂತರಾಳದಲ್ಲಿ ಶಾಹ ರಾಜನ ವಂಶದ ಬಗೆಗೆ ಮಮಕಾರವಿದೆ, ಅನುಕಂಪವಿದೆ ಎಂಬುದು ಈ ನೆಲದ ಸಾಂಸ್ಕೃತಿಕ, ಸಾಮಾಜಿಕ ಬದುಕು ಮತ್ತು ತಿರುಗಾಟದಲ್ಲಿ ಪ್ರಕಟವಾಗುತ್ತದೆ.

೨೦

# ಹಿನ್ನೋಟ

ನೇಪಾಳ ಭಾರತದ ಸೋದರ ರಾಷ್ಟ್ರ. ಭಾರತದ ಉತ್ತರಾಖಂಡ, ಉತ್ತರಪ್ರದೇಶ, ಬಿಹಾರ್, ಸಿಕ್ಕಮ್ ಮತ್ತು ಪಶ್ಚಿಮಬಂಗಾಳ ಈ ಐದೂ ರಾಜ್ಯಗಳು ನೇಪಾಳದ ಗಡಿ ನೆಲಕ್ಕೆ ಅಂಟಿಕೊಂಡಿವೆ. ಹಾಗಾಗಿ ಭಾರತ-ನೇಪಾಳಗಳು ತಮ್ಮ ತಮ್ಮ ದೇಶಗಳ ಜೊತೆಗೆ ಮಧುರ ಬಾಂಧವ್ಯ ಹೊಂದಿವೆ. ಈ ಎರಡೂ ದೇಶದ ನಿವಾಸಿಗಳೂ ಮುಕ್ತವಾಗಿ ಓಡಾಡಬಹುದಾಗಿದೆ. ಅತಿ ಹೆಚ್ಚು ಕಣಿವೆಗಳನ್ನು (ಪರ್ವತಗಳು) ಹೊಂದಿರುವ ನೇಪಾಳದ ಪ್ರಕೃತಿ ಸೌಂದರ್ಯ ಆಕರ್ಷಕ. ಹಿಮತಬ್ಬಿದ ಈ ರಾಷ್ಟ್ರದಲ್ಲಿ ಬಿಸಿಲು ಬಿದ್ದೊಡನೆ ಹಿಮಗಡ್ಡೆ ಕರಗಿ ನೀರಾಗಿ ತ್ರಿಶೂಲಿ ನದಿ, ಸೇಠಿನದಿ, ಬೇರಿನದಿ, ಕಾಳಿ ಗಂಡಕಿ ನದಿ, ಬೋಟೆ ಕೋಶಿನದಿ, ಮರ್ಶ್ಯಂಗ್ಡಿ ನದಿ, ಕರ್ನಾಲಿ ನದಿ, ಸನ್‌ಕೋಶಿ ನದಿ ಹರಿಯುತ್ತವೆ. ಹೀಗೆ ಸಮೃದ್ಧವಾಗಿ ನೀರಿದ್ದರೂ ಬಳಸಿಕೊಳ್ಳುವ ಸಮತಟ್ಟಾದ ಭೂಪ್ರದೇಶವಿಲ್ಲ. ಆದರೆ ನೇಪಾಳಿಗಳ ಸಾಹಸ ಅನನ್ಯ. ಎತ್ತರದ ಕಣಿವೆಯಲ್ಲೂ ಪುಟ್ಟಪುಟ್ಟ ಜೋಪಡಿ, ತಗಡಿನ ಮನೆ ನಿರ್ಮಾಣ, ಇಳಿಜಾರಿನಲ್ಲೂ ಪುಟ್ಟಪುಟ್ಟ ಗದ್ದೆ, ಹೊಲಗಳ ಮಡಿ ಮಾಡಿಕೊಂಡು ಸಾಸಿವೆ, ಭತ್ತ, ತರಕಾರಿ ಬೆಳೆಯುವ ರೀತಿ, ಕಣಿವೆ ಆಳದ ಮಡುಗಳಲ್ಲಿ ಮೀನು ಹಿಡಿಯುವ ತನ, ಸಾಹಸಿ ನೇಪಾಳಿಗಳ ಹುಟ್ಟುಗುಣವಾಗಿದೆ. ಪ್ರವಾಸೋದ್ಯಮವೇ ದೇಶದ ಜೀವಾಳ. ಶೇ.80 ರಷ್ಟು ಬದುಕು ಪ್ರವಾಸಿಗರನ್ನು ಅವಲಂಬಿಸಿದೆ. ಆದರೆ ಪ್ರವಾಸಿಗರೂ ನೇಪಾಳಿಗರನ್ನು ಹಗುರವಾಗಿ ಕಾಣುತ್ತಾರೆ. ನೇಪಾಳದ ಹಲವು ಕಣಿವೆಗಳು ಪ್ರವಾಸಿಗರಿಂದ ತುಂಬಿದ್ದರೂ ಇವರು ಬಳಸಿ ಬಿಸಾಡುವ ಪ್ಲಾಸ್ಟಿಕ್ ಚೀಲ, ನೀರಿನ ಬಾಟಲ್, ಮದ್ಯದ ಬಾಟಲ್‌ಗಳು ಪ್ರಕೃತಿ ಸೌಂದರ್ಯವನ್ನು ನಾಶಮಾಡುತ್ತಿವೆ. ಪಶುಪತಿನಾಥ ದೇವಾಲಯದ ಬಳಿಯ ಭಾಗಮತಿ ನದಿ, ಆರ್ಯ ಘಾಟ್, ನಾರಾಯಣಘಾಟ್ ಈ ಮೊದಲಾದವು ಪೂರ್ಣ ಕೊಳಕಾಗಿವೆ.

ನೇಪಾಳಿಗರು, ಸಾಹಸಿಗಳು, ಸೌಹಾರ್ದಪ್ರಿಯರು. ಪ್ರತಿ ನೇಪಾಳಿಗನಿಗೂ ಈ ದೇಶದ ಬಗೆಗೆ ಅಚಲವಾದ ಗೌರವ. ಇದರ ದ್ಯೋತಕವಾಗಿ ನೇಪಾಳಿ ಟೋಪಿಯನ್ನು

ಧರಿಸುತ್ತಾನೆ. ಈ ಟೋಪಿ ಕಠ್ಮಂಡುವಿಗೆ ಸಮೀಪದ ಭಕ್ತಾಪುರದಲ್ಲಿ ಸಿದ್ಧವಾಗುತ್ತವೆ. ನೇಪಾಳದಲ್ಲಿ ಭಿಕ್ಷಾಟನೆಯೂ ಇದೆ. ಇದಕ್ಕಿಂತ ಹೆಚ್ಚಾಗಿ ಹಿರಿಯರ ಹೆಸರಲ್ಲಿ ಹೋಮ, ಪಿಂಡ ಪ್ರಧಾನ, ಅರ್ಘ್ಯ ಹೆಚ್ಚಾಗಿದೆ. ಈ ಕಾರ್ಯ ಮಾಡಿಸುವಂತೆ ಯಾತ್ರಾರ್ಥಿಗಳನ್ನು ಒತ್ತಾಯಿಸುವುದೂ ಇರುತ್ತದೆ. ಇದು ಮುಜುಗರದ ಸಂಗತಿ.

ನೇಪಾಳದಲ್ಲಿ ಶಾಲಾ-ಕಾಲೇಜುಗಳು, ನಗರ ಕೇಂದ್ರಗಳಲ್ಲಿ ಹೆಚ್ಚಿವೆ. ಅಲ್ಲಿಗೆ ಗುಡ್ಡಗಾಡಿನಿಂದ ಬಂದು ವಿದ್ಯಾಭ್ಯಾಸ ಮಾಡುವುದು ಕಷ್ಟ ಎಂಬ ಕೊರಗನ್ನು ಮನೋಕಾಮನದ ನಾರಾಯಣ ಶಾಹ ತಮ್ಮ ಅಳಲನ್ನು ತೋಡಿಕೊಂಡರು. ಹಾಗಾಗಿಯೇ ಕಣಿವೆಗಳಲ್ಲಿನ ಗುಡ್ಡಗಾಡು ಜನ ಇಂದಿಗೂ ಅಕ್ಷರ ಕಲಿಕೆಯಿಂದ ಹೊರಗುಳಿದಿದ್ದಾರೆ. ಶ್ರಮದಾಯಕ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ನೇಪಾಳದಲ್ಲಿ ಗೂಡಂಗಡಿ, ಟೀ ಅಂಗಡಿಗಳು ಅಧಿಕ. ಗೂಡಂಗಡಿಗಳು ರಸ್ತೆ ಬದಿಗಳಲ್ಲಿ ಹೆಚ್ಚು. ನೇಪಾಳಿ ರೂ.ಗಳಲ್ಲಿ 10 ರೂ.ಗೆ ಒಂದು ಲೋಟ ಟೀ ದೆರೆಯುತ್ತದೆ. ಅನ್ನ, ತರಕಾರಿ, ಬೇಳೆ ಸಾರು ಇಲ್ಲಿನ ಸಾಮಾನ್ಯ ಆಹಾರ. ಇದು ಸಹ ಗೂಡಂಗಡಿ, ರಸ್ತೆ ಬದಿಗಳಲ್ಲಿ ವ್ಯಾಪಕವಾಗಿ ದೊರೆಯುತ್ತದೆ. 60 ರೂ.ಗೆ ಒಂದು ತಟ್ಟೆ ಅನ್ನ, ಸಾಂಬಾರ್ ದೊರೆಯುತ್ತದೆ. ಟ್ಯಾಕ್ಸಿ ಡ್ರೈವರ್‌ಗಳು, ಕ್ಲೀನರ್‌ಗಳು, ರಸ್ತೆಬದಿ ವ್ಯಾಪಾರಿಗಳು, ಕಾರ್ಮಿಕರು ಇಂತಹ ಅಂಗಡಿಗಳಲ್ಲಿ ಸಲೀಸಾಗಿ ಊಟ ಮಾಡುತ್ತಾರೆ. ಈ ಬಗೆಯ ಹಲವು ದೃಶ್ಯಗಳನ್ನು ಪೋಖ್ರಾ, ಭಕ್ತಾಪುರ, ಕಠ್ಮಂಡುಗಳಲ್ಲಿ ನಾನು ವೀಕ್ಷಿಸಿದೆ. ಇಂತಹ ಕಡೆಯಲ್ಲಿಯೂ ನೇಪಾಳಿಗರು ತಂಬಾಕಿಗೆ ಸುಣ್ಣ ಬೆರೆಸಿಕೊಂಡು ತಿನ್ನುತ್ತಲೇ ಇರುತ್ತಾರೆ. ಇದು ಇಲ್ಲಿನ ಮುಖ್ಯ ಹವ್ಯಾಸವೂ ಆಗಿದೆ. ಕುಡಿತ ಸಾಮಾನ್ಯ. ವೈಭವದ ರೆಸ್ಟೋರೆಂಟ್, ಬಾರ್ ಹಾಗೂ ಗೂಡಂಗಡಿಗಳಲ್ಲಿಯೂ ಮದ್ಯ ಮಾರಾಟವಿದೆ. ಒಣ ಮೀನನ್ನು ಹುರಿದು, ಕಾರ ಹಚ್ಚಿ ಅಂಗಡಿಗಳಲ್ಲೂ ಮಾರಾಟ ಮಾಡುತ್ತಾರೆ. ಮದ್ಯದ ಅಂಗಡಿಗಳಲ್ಲಿ ಸಾಲಾಗಿ ಕರಿದ ಒಣಮೀನನ್ನು ಗೊಂಚಲಾಗಿ ನೇತು ಹಾಕಿಕೊಂಡಿದ್ದಾರೆ. ಇದು ಕಿರಾಣಿ ಅಂಗಡಿ, ತರಕಾರಿ ಅಂಗಡಿಗಳಲ್ಲೂ ಕಾಣಬಹುದು. ನೇಪಾಳದ ಮುಖ್ಯರಸ್ತೆಯಲ್ಲಿರುವ ಪೀಪಲ್ ಹಾಸ್ಪಿಟಲ್ ರಾಷ್ಟ್ರದ ದೊಡ್ಡ ಆಸ್ಪತ್ರೆ. ತುಂಬಾ ಕೊಳಕಾಗಿದೆ. ಸಾಮಾನ್ಯ ಸಮುದಾಯ ಆರೋಗ್ಯ ಕೇಂದ್ರದಂತಿದೆ. ಇದರ ಪಕ್ಕದಲ್ಲೇ ನೇಪಾಳಿ ವಿಶ್ವವಿದ್ಯಾನಿಲಯವೂ ಸಾಧಾರಣ ಕಟ್ಟಡದಲ್ಲಿದೆ. ಬೀರೇಂದ್ರ ಸೇನಾ ಆಸ್ಪತ್ರೆ ಚೆನ್ನಾಗಿದೆ ಎಂದು ಕೇಳಿದೆ, ನೋಡಲು ಸಾಧ್ಯವಾಗಲಿಲ್ಲ.

ಸೇಂಟ್ ಮೇರೀಸ್ ಸ್ಕೂಲ್ ಇಲ್ಲಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿದೆ. ರಾಜಕುಮಾರ, ಕುಮಾರಿಯರ ಶಿಕ್ಷಣವೂ ಇಲ್ಲಿಯೇ ನಡೆಯುತ್ತದೆ. ಪ್ರಪಂಚದ ಎರಡನೇ

ಅತಿ ಹೆಚ್ಚು ನದಿಗಳನ್ನು ಹೊಂದಿರುವ ನೇಪಾಳ, ಅದರ ರಾಜಧಾನಿ ಕಠ್ಮಂಡುವಿನಲ್ಲೇ ನೀರಿಗೆ ಸಮಸ್ಯೆಯಿದೆ. ಪಶುಪತಿನಾಥನ ದೇವಾಲಯದ ಆವರಣ, ಹೊರಾಂಗಣ, ಶವಸಂಸ್ಕಾರದ ಘಾಟ್ ಇಲ್ಲೆಲ್ಲಾ ಶುದ್ಧವಾದ ನೀರಿನ ತೊಂದರೆಯಿದೆ. ಇಲ್ಲಿನ ದೇವಾಲಯಗಳಲ್ಲಿ ಪೂಜೆಯ ವೇಳೆ ಸಿಹಿ ಪೇಡ, ಲಾಡುಗಳನ್ನು ಪ್ರಸಾದವಾಗಿ ಅರ್ಪಿಸುತ್ತಾರೆ. ಎಲ್ಲೆಲ್ಲಿಯೂ ಸಿಹಿಮಯ ಅನ್ನಿಸಿದರೂ, ಇಲ್ಲಿನ ಜನ ಮಾಂಸಕ್ಕೆ ವಿಪರೀತ ಆಸೆಪಡುತ್ತಾರೆ. ಹಾಗೆಯೇ ಸೇವಿಸುತ್ತಾರೆ. ದಸರಾ ಮೊದಲಾದ ಹಬ್ಬಗಳಲ್ಲಿ ಮಾಂಸ ಹಂಚುವುದು, ಮಾಂಸದ ಊಟವನ್ನು ಯಾರು ಹೆಚ್ಚು ಹೆಚ್ಚಾಗಿ ಹಾಕಿಸುತ್ತಾರೋ ಅಂತಹವರು ರಾಜಕೀಯ, ಉದ್ಯೋಗ ಮೊದಲಾದ ಕ್ಷೇತ್ರಗಳಲ್ಲಿ ಯಶಸ್ಸು ಗಳಿಸುತ್ತಾರೆಂಬ ನಂಬಿಕೆ ನೇಪಾಳದಲ್ಲಿ ಸಾಮಾನ್ಯವಾಗಿದೆ.

ವಯಸ್ಸಾದವರೂ ಮಾರುಕಟ್ಟೆ, ವಾಹನ ನಿಲ್ದಾಣ, ದೇವಾಲಯಗಳ ಆವರಣಗಳಲ್ಲಿ ಕೆಲಸದಲ್ಲಿ ತೊಡಗಿರುವುದನ್ನು ಕಾಣಬಹುದು. ಶ್ರಮದಿಂದಲೇ ಬದುಕುವುದು ನೇಪಾಳಿಗರ ಸಹಜ ಗುಣ. ಈ ಕಾರಣದಿಂದಾಗಿಯೇ ನೇಪಾಳದ ಗೂರ್ಖಾ ಜಿಲ್ಲೆಯೊಂದರಲ್ಲೇ ಈ ದೇಶದ ಜನಸಂಖ್ಯೆಯ ಶೇ.16 ರಷ್ಟು ಜನ ಕಾವಲುಗಾರ ಮೊದಲಾದ ಕೆಲಸದಲ್ಲಿ ಈ ದೇಶದ ಹೊರಗೆ ಬಾಂಬೆ, ದೆಹಲಿ, ಕರ್ನಾಟಕ ಮೊದಲಾದ ಕಡೆ ವಲಸಿಗರಾಗಿದ್ದಾರೆಂದು ಗೈಡ್ ಪಾಂಡೆ ವಿವರಿಸಿದರು.

ನೇಪಾಳದಲ್ಲಿ ಬಳಕೆಯಲ್ಲಿರುವ ನೇಪಾಳಿ ರೂಪಾಯಿ ವಿನಿಮಯದಲ್ಲಿದೆ. ಮಾರುಕಟ್ಟೆ, ಆಟೋ, ಹೋಟೆಲ್ ಮೊದಲಾದ ಕಡೆ ಭಾರತದ ನೋಟುಗಳನ್ನು ತೆಗೆದುಕೊಳ್ಳುತ್ತಾರೆ. ನಮ್ಮ ಒಂದು ರೂಪಾಯಿಗೆ ಅಲ್ಲಿನ 160 ಪೈಸೆ ಸಮ. ಸರಿಯಾಗಿ ಚಿಲ್ಲರೆ ವಿನಿಮಯ ಮಾಡಿ ಕೊಳ್ಳದೆ ಆಟೋ, ಕಿರಾಣಿ ಅಂಗಡಿಗಳಲ್ಲಿ ಸತಾಯಿಸುತ್ತಾರೆ. ಇಲ್ಲೆಲ್ಲಾ ಜಾಗ್ರತೆ ವಹಿಸಿ ಮೊದಲೇ ಕರೆನ್ಸಿ ವಿನಿಮಯ ಮಾಡಿಕೊಳ್ಳುವುದನ್ನು ಪ್ರವಾಸಿಗರು ಮರೆಯಬಾರದು. ಶೇಂಗಾ, ಸಾಕ್ಸ್ ಖರೀದಿ ಕಡೆಗಳಲ್ಲಿ ಈ ಬಗೆಯ ಅನುಭವ ನನಗೆ ಚೆನ್ನಾಗಿಯೇ ಆಯಿತು. ಯಾವುದಾದರೂ ಪ್ರವಾಸಿ ವಾಹನ ಬಂತೆಂದರೆ ಗೈಡ್, ಅಂಗಡಿಯವರು, ಅರ್ಚಕರು ಮುತ್ತುತ್ತಾರೆ. ವಸತಿಗೃಹ, ಗೈಡ್, ವಾಹನ ಡ್ರೈವರ್, ಹೋಮ ಮೊದಲಾದ ವಿಷಯಗಳಲ್ಲಿ ಸಹಾಯದ ಮಾತು ಹೇಳುತ್ತಾರೆ. ಇದರಿಂದ ವಂಚನೆಗೆ ಒಳಗಾಗುವ ಸಂದರ್ಭವೂ ಇದೆ. ಸಧ್ಯ ನಮಗೆ ಇಂಥ ಅನುಭವ ನೇರವಾಗಿ ಆಗಲಿಲ್ಲವಾದರೂ ರುದ್ರಾಕ್ಷಿ, ಯಾತ್ರಾಸ್ಥಳ ತೋರುವ ಹಾಗೂ ಗೈಡುಗಳ ಒತ್ತಾಯವಂತೂ ಎಲ್ಲಕಡೆ ಎದುರಾಯಿತು. ನೇಪಾಳಿಗರು ನಮ್ಮನ್ನು ಮದ್ರಾಸಿಗಳೆಂದೇ

ಕರೆಯುತ್ತಿದ್ದರು. ಆಗ ನಾವು ಅಲ್ಲ ಕರ್ನಾಟಕದವರು ಎಂಬ ಕರೆಕ್ಷನ್ ಹಾಕಿದಾಗ ನಗುನಗುತ್ತಲೇ 'ಅಚ್ಛಾ ಕರ್ನಾಟಕ.. ಸಿದ್ಧಗಂಗೆ' ಎಂದು ಡಾ.ಶಿವಕುಮಾರ ಸ್ವಾಮೀಜಿಯವರ ಫೋಟೋಗಳ ಕಾರ್ಡ್‌ಗಳನ್ನು ತೋರುತ್ತಿರುವುದು ಇಲ್ಲಿನ ರುದ್ರಾಕ್ಷಿ ಮಳಿಗೆಗಳಲ್ಲಿ ಹಲವು ಕಡೆ ಕಾಣಲಾಯಿತು.

ಕಣಿವೆ ಹತ್ತುವುದು, ಇಳಿಯುವುದು, ಕಣಿವೆ ತುದಿಯಲ್ಲಿ ಇಳಿಜಾರಿನ ಕೋವೆಗಳಲ್ಲಿ ವಾಸಿಸುವ ನೇಪಾಳಿಗರು ನದಿ, ಸರೋವರಗಳಲ್ಲಿ ಜಲಕ್ರೀಡೆಯಲ್ಲಿ ಚುರುಕು. ಹೆಂಗಸರೂ ಇಂಥ ಸಾಹಸದಲ್ಲಿ ತೊಡಗಿರುವುದು ವಿಶೇಷ. ನೇಪಾಳ ಒಂದರ್ಥದಲ್ಲಿ ಸಾಹಸಿ, ಶ್ರಮಿಕ ಮಹಿಳಾ ದೇಶ ಅನ್ನಿಸಿತು. ನೆರೆಯ ಬಡ ಬಂಧು ನೇಪಾಳ ಪ್ರಕೃತಿ ಸೌಂದರ್ಯ, ಮೋಜು, ವಿಲಾಸಕ್ಕೆ ಪ್ರೇರಕವಾದಂತೆ ನೆಲಮೂಲ ನೇಪಾಳಿಗಳು ವಿಲಾಸಿಗರಿಗೆ ಸೌಕರ್ಯ ಒದಗಿಸುವ ಕಟಿಬದ್ಧ ಕೂಲಿಗಳಾಗಿರುವುದು, ಶ್ರಮದಾಯಕ ಕೆಲಸ ನಿರ್ವಹಣೆ ಮರುಕ ತರುವಂತಹದ್ದು. ಎಲ್ಲೆಲ್ಲಿಯೂ ಬುದ್ಧ ಸ್ತೂಪ, ಮೂರ್ತಿಗಳು, ಶಿವ-ದುರ್ಗಿ ಪೀಠಗಳು, ಬೇಧವಿಲ್ಲ ಬುದ್ಧ - ಶಿವರಲ್ಲಿ. ಪ್ರಾಣಿಬಲಿಗೆ ಇಲ್ಲಿಲ್ಲ ತಡೆ. ಕೋಣ, ಕುರಿ, ಮೇಕೆ, ಕೋಳಿ ರಕ್ತದೋಕುಳಿ ನಿತ್ಯ ನಿರಂತರ ಶಕ್ತಿಪೀಠಗಳಲ್ಲಿ.

ಏಕೈಕ ಹಿಂದೂ ರಾಷ್ಟ್ರ ಎಂಬ ಹೆಸರಿನ ಒಳಗೂ ನೇಪಾಳದಲ್ಲಿ ನಾಥಪಂಥೀಯರ ಪ್ರಭಾವವೇ ಎದ್ದು ಕಾಣುತ್ತದೆ. ಶೈವ ಪಂಥದ ಪಶುಪತಿನಾಥನ ಆರಾಧಕರೂ ಹಣೆಗೆ ಉದ್ದನೆಯ ನಾಮ ಮಾದರಿಯ ತಿಲಕ, ಪಶುಪತಿನಾಥನ ಆಲಯದ ಒಳಗೆ ಭೈರವ ರೂಪದ ದೈತ್ಯಾಕೃತಿಯ ಮೂರ್ತಿ, ಅದರ ಆರಾಧನೆಯ ತರಾವರಿ ಹೊರಗಡೆಯ ಸಾಧು ಸಂತರ ನಡಾವಳಿಯ ನಾಥ ಪಂಥದ ನಂಬಿಕೆ, ನಡಾವಳಿ, ಆಚರಣೆ ಎದ್ದು ಕಾಣುತ್ತದೆ. ಪಶುಪತಿನಾಥ, ಮುಕ್ತಿನಾಥ ಎಂದು ಶಿವ-ಬುದ್ಧರನ್ನೂ ನಾಥ ಸಂಸ್ಕೃತೀಕರಣಗೊಳಿಸಿರುವುದನ್ನು ಕಾಣಬಹುದಾಗಿದೆ ಕಾಶಿಯ ವಿಶ್ವನಾಥ, ಪುರಿಯ ಜಗನ್ನಾಥ, ನೇಪಾಳದ ಪಶುಪತಿನಾಥ, ಕೇದಾರದ ಕೇದಾರನಾಥ ಇವೆಲ್ಲವೂ ನಾಥ ಪಂಥದ ಆಚರಣೆಯ ರೂಪದಲ್ಲಿ ಪ್ರಕಟವಾಗುತ್ತವೆ. ಅವುಗಳ ಹೆಸರಿನ ಸ್ವರೂಪವೇ ಇದಕ್ಕೆ ನಿದರ್ಶನವಾಗಿದೆ.

ಆದರೂ ನೇಪಾಳ ಚೆಂದ, ಇಲ್ಲಿನ ನೆಲ, ಪರ್ವತ ಬಲು ಚೆಂದ. ಬುದ್ಧನು ನಡೆದಾಡಿದ ನೆಲದ ತಿರುಗಾಟ ತುಂಬಾ ಚೆಂದ. ವೀಸಾ, ಪಾಸ್‌ಪೋರ್ಟ್‌ಗೆ ಇಲ್ಲಿಲ್ಲ ಬಂಧ. ಹೋಗಿ ಬರಬಹುದು ನಿಮ್ಮ ನೆರೆಯ ಊರಿಗೆ ಹೋದಂತೆ, ವಿದೇಶೀ ಪ್ರವಾಸಕ್ಕೆ, ಕಣಿವೆ ರಾಷ್ಟ್ರ ನೇಪಾಳಕ್ಕೆ.